ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ಹೇಮಲತಾ ಟಿ.ಕೆ.

ಮಾರ್ಗದರ್ಶಕರು

ಡಾ. ಆನಂದ ಕೋಡಿಂಬಳ

೨೦೦೯

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು - ೫೭೫ ೦೦೧

427

ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಹೇಮಲತಾ ಟಿ.ಕೆ.

ಮಾರ್ಗದರ್ಶಕರು
ಡಾ. ಆನಂದ ಕೋಡಿಂಬಳ

೨೦೦೯

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು - ೫೭೫ ೦೦೧

ಯೋಗ್ಯತಾ ಪತ್ರ

ಹೇಮಲತಾ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ** - ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ಆನಂದ ಕೋಡಿಂಬಳ

ಸಂಶೋಧನ ಮಾರ್ಗದರ್ಶಕರು

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು

ಪ್ರಮಾಣಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ** ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ಆನಂದ ಕೋಡಿಂಬಳ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧ ವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಹೇಮಲತಾ ಟಿ.ಕೆ.

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು

ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ

ಅಧ್ಯಯನದ ವಿವರಗಳು

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ಮತ್ತು ವ್ಯಾಪ್ತಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ಮತ್ತು ವ್ಯಾಪ್ತಿ

೧.೧. ಪ್ರವೇಶ

ಆಧುನಿಕ ಶಿಕ್ಷಣ, ಯಂತ್ರ ಸಂಸ್ಕೃತಿ, ವಸಾಹತುಗಳ ಪ್ರತಿಷ್ಠಾಪನೆಯು ಭಾರತದ ಬಹುತೇಕ ಭಾಗಗಳಲ್ಲಿ ತನ್ನ ಭದ್ರನೆಲೆಯನ್ನು ಕಂಡಿವೆ. ಈ ನೆಲೆಯು ತನ್ನ ಸಂಸ್ಕೃತಿಯನ್ನು ಭಾರತೀಯರ ಮೇಲೆ ಬಲವಂತವಾಗಿ ಹೇರಲು ಮುಂದಾದಾಗ ಸಹಜವಾಗಿಯೇ ಅದಕ್ಕೆ ಪ್ರತಿಭಟನೆಗಳು ಎದುರಾಗಿವೆ. ಹಾಗಾಗಿ ತನ್ನ ಸಂಸ್ಕೃತಿ, ಚರಿತ್ರೆಯನ್ನು ಕಟ್ಟಿಕೊಳ್ಳುವ ಅನಿವಾರ್ಯತೆಗಾಗಿ ಬಹಳಷ್ಟು ಶ್ರಮಿಸಬೇಕಾಗಿದೆ. ಪರಿಣಾಮವಾಗಿ ಸಾಹಿತ್ಯ ಚರಿತ್ರೆಯ ಬೆಳವಣಿಗೆಯಲ್ಲಿ ಆಯಾ ಕಾಲಕ್ಕನುಸಾರವಾಗಿ ತಮ್ಮತನವನ್ನು (ಸ್ವಾತಂತ್ರ್ಯ / ಅಸ್ಮಿತೆ) ಉಳಿಸುವ ಪ್ರಕ್ರಿಯೆಗಳು ಆರಂಭಗೊಂಡವು. 'ಸಮಾಜದ ಪ್ರತಿಬಿಂಬವೇ ಸಾಹಿತ್ಯ' ಆದ್ದರಿಂದ ಮನುಷ್ಯ ಮತ್ತು ಸಮಾಜದ ನಡುವಣ ಸಂಬಂಧವನ್ನು ಭದ್ರಪಡಿಸುವಲ್ಲಿ ಸಾಹಿತ್ಯದ ಪಾತ್ರ ಮಹತ್ತರವಾದುದು. ತನ್ನ ಸುತ್ತಮುತ್ತ ನಡೆಯುವ ಸಂಗತಿಯನ್ನು ವಿವರವಾಗಿ ಒಳಗೊಳ್ಳುವ ಹೊಣೆ ಸಾಹಿತ್ಯಕ್ಕೆ ಇರುವುದರಿಂದ ಸಹಜವಾಗಿಯೇ ಸಮಾಜಕ್ಕೆ ಹೊಂದಿಕೊಳ್ಳುವ ಪ್ರವೃತ್ತಿಯನ್ನು ಸಾಹಿತ್ಯ ವ್ಯಕ್ತಪಡಿಸುತ್ತದೆ.

'ರಾಷ್ಟ್ರ', 'ರಾಷ್ಟ್ರೀಯತೆ' ಎನ್ನುವ ಪರಿಕಲ್ಪನೆ ವಸಾಹತೀಕರಣದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುತ್ತದೆ. ತಮ್ಮ ಅಸ್ತಿತ್ವಕ್ಕೆ ಒಂದು ಬಗೆಯ ಚೌಕಟ್ಟನ್ನು ಒದಗಿಸುವ ಪ್ರಯತ್ನವೇ 'ರಾಷ್ಟ್ರೀಯತೆ'. ಭಿನ್ನ ಸಂಸ್ಕೃತಿಯೊಳಗಿನ ಆಂತರಿಕ, ಬಾಹ್ಯ ಸಂಘರ್ಷಗಳನ್ನು ಹೋಗಲಾಡಿಸಿ ಶಾಂತಿ, ಭ್ರಾತೃತ್ವ, ಸ್ವಾತಂತ್ರ್ಯ, ಔದಾರ್ಯವನ್ನು ಬೆಳೆಸುವಲ್ಲಿ ರಾಷ್ಟ್ರೀಯತೆಯ ಪ್ರಮುಖ ಪಾತ್ರವಹಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಅದು ಸ್ವಯಂಪ್ರೇಮ, ಅನ್ಯವೈರತ್ವವನ್ನು ವೀರಾವೇಶದಿಂದ ಪ್ರಕಟಿಸುತ್ತದೆ. ಬಹುಸಂಸ್ಕೃತಿಯ ಅನುಕರ್ತೃವಾದ ದಕ್ಷಿಣ ಕನ್ನಡ ಜಿಲ್ಲೆ ನೇರವಾಗಿ ಬ್ರಿಟಿಷರ ಅಧಿಪತ್ಯಕ್ಕೆ ಒಳಗಾದ ಪ್ರದೇಶ. ಹೀಗಾಗಿ ತಮ್ಮತನವನ್ನು ಉಳಿಸಲು, ತಮ್ಮನ್ನು ಹಿಡಿತದಲ್ಲಿಟ್ಟುಕೊಂಡಿರುವ ವಸಾಹತುಗಳನ್ನು ಪ್ರಶ್ನಿಸುವ ಮನೋಧರ್ಮ ಇಲ್ಲಿನ ಕವಿತೆಗಳಲ್ಲಿದೆ.

೧.೨. ಉದ್ದೇಶ, ಸ್ವರೂಪ

ದಕ್ಷಿಣ ಕನ್ನಡಕ್ಕೆ ಸಂಬಂಧಿಸಿ; ಗಡಿಪ್ರದೇಶ, ಅನ್ಯಭಾಷೆ, ಸಂಸ್ಕೃತಿಗಳ ದಾಳಿ ಆವರ್ತಿತವಾಗಿ ಆಗುತ್ತಲೇ ಇದ್ದು; ಅದನ್ನೊಳಗೊಂಡೇ ತನ್ನನ್ನು ಅಖಂಡಗೊಳಿಸುವ ಅನಿವಾರ್ಯತೆ ಇಲ್ಲಿನ ಸಾಹಿತ್ಯಕ್ಕೆ ಉಂಟಾಗಿದೆ. ಅದರಲ್ಲೂ 'ಕಾವ್ಯ' 'ಕವಿತೆ' ಎನ್ನುವುದು ಆಂತರಿಕ ಭಾವನೆಗಳ ಹಿಂದೆ ಇರಬಹುದಾದ ಬಾಹ್ಯಪ್ರೇರಣೆಗಳ ಪ್ರಭಾವದ ಪ್ರತಿಬಿಂಬ. ಆದ್ದರಿಂದ ಇಲ್ಲಿನ ಸಂಸ್ಕೃತಿಯು ಆಂತರಿಕ ಮತ್ತು ಬಾಹ್ಯವಲಯಗಳಲ್ಲಿ ತನ್ನತನವನ್ನು ಶೋಧಿಸುವುದಕ್ಕೆ ಹೆಣಗುತ್ತಲೇ ಇದೆ. ಇದಕ್ಕೆ ಕಾರಣವಾದ ಅಂಶಗಳನ್ನು ಗಹನವಾಗಿ ಚರ್ಚಿಸಬೇಕಾಗಿದೆ. ಕಾವ್ಯ, ಕವನಗಳಲ್ಲಿ 'ರಾಷ್ಟ್ರೀಯತೆ'ಯೆನ್ನುವುದು ಭಾಷೆ, ಜನಾಂಗ, ಸಂಸ್ಕೃತಿ, ಚಿಂತನೆಯ ಪ್ರಾದೇಶಿಕ ಮಟ್ಟದಿಂದ ಹಿಡಿದು 'ದೇಶ', 'ರಾಷ್ಟ್ರ' ಎನ್ನುವ ಆಳವಾದ ಚಿಂತನೆಯವರೆಗೆ ವ್ಯಾಪಿಸುತ್ತದೆ. ರಾಷ್ಟ್ರವೆಂಬುದು ಕೇವಲ ಒಂದು ನಿರ್ದಿಷ್ಟ ಗಡಿರೇಖೆಯನ್ನು ಒಳಗೊಂಡಿರುವುದಿಲ್ಲ, ಅದು ಬಹುಸಂಸ್ಕೃತಿಯ ತವರೂರು. ಆದ್ದರಿಂದ ಯಾವೊಂದನ್ನು ತಿರಸ್ಕರಿಸದೆ ಎಲ್ಲವನ್ನೂ ಒಂದು ಗಡಿರೇಖೆಯೊಳಗೆ ಗುರುತಿಸುವುದರ ಮೂಲಕ 'ರಾಷ್ಟ್ರ'ವನ್ನು ಮತ್ತಷ್ಟು ಆಳವಾಗಿ ಗ್ರಹಿಸುವುದು ಸೂಕ್ತ. ಈ ನಿಟ್ಟಿನಲ್ಲಿ ಸಾಮಾಜಿಕ, ರಾಜಕೀಯ, ಭಾಷಿಕ, ಭೌಗೋಳಿಕವಾಗಿ ಗುರುತಿಸುವುದರೊಂದಿಗೆ 'ರಾಷ್ಟ್ರೀಯತೆ'ಯನ್ನು ಸರಳವಾಗಿ ವ್ಯಾಖ್ಯಾನಿಸಬೇಕಾಗಿದೆ. ಆದ್ದರಿಂದ ದಕ್ಷಿಣ ಕನ್ನಡದ ಕವಿತೆಗಳಲ್ಲಿ ವ್ಯಕ್ತಗೊಂಡಿರುವ 'ರಾಷ್ಟ್ರೀಯತೆ'ಯ ವಿಶಿಷ್ಟ ಚಹರೆಗಳನ್ನು ಅಧ್ಯಯನ ಮಾಡಲಾಗುವುದು.

ದಕ್ಷಿಣ ಕನ್ನಡದ ಪ್ರಮುಖರೆಂದು ಭಾವಿಸಲಾಗುವ ಕವಿಗಳ ಕವಿತೆಗಳ ಆಶಯ ಗ್ರಹಿಕೆಯೊಂದಿಗೆ: ಉಳಿದ ಕವಿಗಳ ಕವಿತೆಗಳು ವ್ಯಕ್ತಪಡಿಸುವ ರಾಷ್ಟ್ರೀಯತೆಯ ಮಾದರಿಯನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶ. ಗೋವಿಂದ ಪೈ, ಪಂಜೆ ಮಂಗೇಶರಾಯ, ಕಯ್ಯಾರ ಕಿಂಞ್ಞಣ್ಣ ರೈ, ಸೇಡಿಯಾಪು ಕೃಷ್ಣಭಟ್, ಕಡೆಂಗೋಡ್ಲು ಶಂಕರಭಟ್ಟ, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಶಿವರಾಮ ಕಾರಂತ, ಜಿ.ಆರ್. ಪಾಂಡೇಶ್ವರ, ಗೋಪಾಲಕೃಷ್ಣ ಅಡಿಗ, ಅಮ್ಮೆಂಬಳ ಶಂಕರನಾರಾಯಣ ನಾವಡ, ಬಿ.ಎಂ. ಇದಿನಬ್ಬ, ವೇಣುಗೋಪಾಲ ಕಾಸರಗೋಡು, ಸುಬ್ರಾಯ ಚೊಕ್ಕಾಡಿ, ಶ್ರೀಕೃಷ್ಣ ಚೆನ್ನಂಗೋಡು, ಕುತ್ಯಾಳ ನಾಗಪ್ಪ ಗೌಡ ಮೊದಲಾದ ಕವಿಗಳ ಕವಿತೆಗಳನ್ನು ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯೋತ್ತರ ಎಂಬ ಕಾಲಘಟ್ಟದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ.

ಕನ್ನಡವು ಶಾಸ್ತ್ರೀಯ ಸ್ಥಾನಮಾನ ಸ್ಥಾಪಿಸುವ ಸಲುವಾಗಿ ನಡೆಸಿದ ಹೋರಾಟವು ಒಂದು ರೀತಿಯಲ್ಲಿ, ತನ್ನತನವನ್ನು ಸ್ಥಾಪಿಸುವ ಸ್ವತಂತ್ರತೆ, ಭಿನ್ನತೆ, ಇತಿಹಾಸದ ಗುರುತಿಸುವಿಕೆಯ

'ರಾಷ್ಟ್ರೀಯತೆ'ಯ ದೃಷ್ಟಿಕೋನವೇ ಆಗಿದೆ. ಈ ದೃಷ್ಟಿಯಿಂದ ರಾಷ್ಟ್ರೀಯತೆಯ ಅಧ್ಯಯನದ ಸಂದರ್ಭದಲ್ಲಿ ಸಾಹಿತ್ಯ ಕೃತಿಗಳಲ್ಲಿ ಈ ವರೆಗೆ ಬಳಸಲಾದ ಸಾಹಿತ್ಯಿಕ ವಿಭಾಗಕ್ರಮಗಳನ್ನು (ನವ್ಯ/ನವೋದಯ ಇತ್ಯಾದಿ) ಅನುಸರಿಸದೆ ದಕ್ಷಿಣ ಕನ್ನಡ ಜಿಲ್ಲೆಯ ಕವಿತೆಗಳ ಒಟ್ಟು ಸಂದರ್ಭವನ್ನು ಅನುಲಕ್ಷಿಸಿ, ಮುಖ್ಯ ಅಧ್ಯಾಯಗಳನ್ನು ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ ಎಂಬೀ ಕ್ರಮದಲ್ಲಿ ವಿಂಗಡಿಸಲಾಗಿದೆ. ಆಯಾ ಕವಿಗಳ ಕೃತಿಗಳು (ಕವನಸಂಕಲನ) ಪ್ರಕಟಗೊಂಡ ವರ್ಷದ ಆಧಾರದಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂಬ ವಿಭಾಗಕ್ರಮವನ್ನು ಅನುಸರಿಸಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಗುರುತಿಸಿಕೊಂಡ ಕೆಲವು ಕವಿತೆಗಳನ್ನು ಆಶಯದ ಆಧಾರದಲ್ಲಿ ಸ್ವಾತಂತ್ರ್ಯೋತ್ತರ ವಿಭಾಗಕ್ರಮದಲ್ಲಿ ಗುರುತಿಸಿರುವ ಸಂದರ್ಭಗಳೂ ಇವೆ. ಸಂಶೋಧನಾ ಉದ್ದೇಶಕ್ಕೆ ಯಾವುದೇ ರೀತಿಯ ವ್ಯತ್ಯಯ ಬಾರದಂತೆ ; ಅಧ್ಯಯನಕ್ಕೆ ಮಹತ್ವ ನೀಡಲಾಗಿದೆ.

ರಾಷ್ಟ್ರೀಯತೆಯ ನಿರ್ವಚನ ಹಾಗೂ ಸ್ಪಷ್ಟೀಕರಣಕ್ಕಾಗಿ ದಕ್ಷಿಣ ಕನ್ನಡದ ಆಯ್ದುಕೊಂಡ ಕೆಲವು ಕವಿಗಳ ಕವನಗಳನ್ನು ಸಾಂದರ್ಭಿಕವಾಗಿ ಆಯ್ಕೆ ಮಾಡಲಾಗಿದ್ದು ಉಳಿದ ಕವಿಗಳ ಕವನಗಳೊಂದಿಗೆ ತುಲನೆ ಮಾಡುತ್ತಾ ವಿಷಯ ಬಾಹುಳ್ಯವೆನಿಸುವ ಅಧ್ಯಯನದ ಸಂದರ್ಭದಲ್ಲಿ ವಿಷಯಕ್ಕೆ ಮಹತ್ವವೆನಿಸದ ಕೆಲವು ಕವಿಗಳ ಕವನಗಳನ್ನು ಅಧ್ಯಯನದಿಂದ ಕೈ ಬಿಡಲಾಗಿದೆ.

'ಕವಿತೆ' ಎಂಬ ಸಾಹಿತ್ಯ ಪರಂಪರೆಯನ್ನು ಗ್ರಹಿಕೆಯ ನೆಲೆಯಲ್ಲಿ ಪರಿವರ್ತಿಸುತ್ತಾ; ಅದು ವ್ಯಕ್ತಪಡಿಸುವ ಸಾಮಾಜಿಕ, ರಾಜಕೀಯ ಸಂದರ್ಭಗಳಿಗೆ ಅನುಸಾರವಾಗಿ ಸಮಸ್ಯೆಯ ವಿಶ್ಲೇಷಣೆ ನಡೆಸಿ 'ರಾಷ್ಟ್ರೀಯತೆ'ಯ ವ್ಯಾಖ್ಯಾನವನ್ನು ಇಲ್ಲಿ ನಿರೂಪಿಸಲಾಗಿದೆ. ದಕ್ಷಿಣ ಕನ್ನಡದ ಕವಿತೆಗಳನ್ನು ಕುರಿತ ಈ ಸಂಪ್ರಬಂಧದಲ್ಲಿ 'ರಾಷ್ಟ್ರೀಯತೆ'ಯನ್ನು 'ಸ್ವಾತಂತ್ರ್ಯ' ಎಂಬರ್ಥದಲ್ಲಿ ಸೀಮಿತವಾಗಿ ಗ್ರಹಿಸಿಕೊಂಡು ಯಾವುದೇ ಗೊಂದಲಕ್ಕೆ ಎಡೆಗೊಡದೆ ಪ್ರದೇಶ, ಭಾಷೆ, ಸಂಸ್ಕೃತಿ, ರಾಜಕೀಯ, ಸಮಾಜ, ಧರ್ಮ, ಆರ್ಥಿಕ ವ್ಯವಸ್ಥೆಯ ನೆಲೆಗಳಲ್ಲಿ ಸರಳವಾಗಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಮಾತ್ರವಲ್ಲ, ಈ ಮೇಲೆ ಹೇಳಿದ ಅಂಶಗಳು ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ ಕವಿತೆಗಳ ಸಾಮ್ಯ; ವೈಶಿಷ್ಟ್ಯಗಳ ಕಡೆಗೆ ಬೆಳಕು ಚೆಲ್ಲುವಂತೆ ವಿಶ್ಲೇಷಿಸಲಾಗಿದೆ.

ಅವಲೋಕನ, ವಿಶ್ಲೇಷಣ, ತುಲನಾತ್ಮಕ ವಿಧಾನಗಳ ಅನ್ವಯಿಕೆಯೊಂದಿಗೆ ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಕವಿತೆಯಲ್ಲಿನ ಒಳತೋಟಿಯನ್ನು ಅರ್ಥೈಸಿಕೊಂಡು; ಅದನ್ನು ಬಾಹ್ಯ ಪ್ರಪಂಚಕ್ಕೆ ತಿಳಿಯಪಡಿಸುವ ಪ್ರಕ್ರಿಯೆ ಈ ಸಂಶೋಧನೆಯಲ್ಲಿರುವುದರಿಂದ ಹೊಸತೊಂದು ಚಿಂತನೆಗೆ ಈ ಅಧ್ಯಯನವು ತನ್ನ ದೃಷ್ಟಿಯನ್ನು ಹರಿಸಬಲ್ಲದು ಎಂದು ನಂಬಲಾಗಿದೆ.

೧.೬. ವ್ಯಾಪ್ತಿ

'ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ' ಎಂಬ ಸಂಪ್ರಬಂಧದಲ್ಲಿ ಪ್ರಾದೇಶಿಕ ವ್ಯಾಪ್ತಿಯನ್ನು ವರ್ತಮಾನದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡು 'ಅವಿಭಜಿತ' ಎಂಬ ಏಕಾಕಾರದ ಚೌಕಟ್ಟಿನೊಳಗೆ ನಿರೂಪಿಸಲಾಗಿದೆ. ಪ್ರಸ್ತಾವನೆಯೂ ಸೇರಿದಂತೆ ಒಟ್ಟು ೫ ಅಧ್ಯಾಯಗಳು ಈ ಸಂಪ್ರಬಂಧದಲ್ಲಿವೆ.

'ರಾಷ್ಟ್ರೀಯತೆಯ ಪರಿಕಲ್ಪನೆ' ಎಂಬ ಎರಡನೇ ಅಧ್ಯಾಯದಲ್ಲಿ 'ರಾಷ್ಟ್ರ' ಎಂದರೇನು? ಜಾಗತಿಕಮಟ್ಟದಲ್ಲಿ 'ರಾಷ್ಟ್ರೀಯತೆ' ಎಂಬ ಪದದ ವಿಸ್ತಾರ; 'ಭಾರತ' ರಾಷ್ಟ್ರೀಯತೆ ಪ್ರಕಟಗೊಳ್ಳುವುದರ ಹಿನ್ನಲೆ; ಪ್ರಾದೇಶಿಕತೆ ಹಾಗೂ ರಾಷ್ಟ್ರೀಯತೆಯನ್ನು ಏಕರೂಪೀ ವ್ಯವಸ್ಥೆಯಡಿ ಒಂದಾಗಿಸುವ ಪ್ರಯತ್ನವಿದೆ. ವಸಾಹತು ವಿರೋಧಿ ನೀತಿಯಾಗಿ ರಾಷ್ಟ್ರೀಯತೆಯ ಉಗಮ; ಬ್ರಿಟಿಷ್ ಸತ್ತೆಗೆ ವಿರೋಧವಾಗಿ ಭಾರತ, ಇಂಗ್ಲಿಷ್‌ಗೆ ವಿರೋಧವಾಗಿ ಭಾರತೀಯ ಭಾಷೆಗಳನ್ನು ಕಟ್ಟಿಕೊಡುವ ರಾಷ್ಟ್ರೀಯತೆಯ ಚರ್ಚೆಯನ್ನು ಮಾಡುತ್ತದೆ. 'ಸ್ವಾತಂತ್ರ್ಯ' ಅಸ್ಮಿತೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಭೌಗೋಳಿಕವಾಗಿ ನಾಡನ್ನು ಕಟ್ಟುವ, ಭಾಷಿಕವಾಗಿ ನುಡಿಯನ್ನು ಕಟ್ಟುವ, ರಾಜಕೀಯವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಯಸುವ, ಸಾಮಾಜಿಕವಾಗಿ ಪ್ರಬಲ ವಿರೋಧಿಗಳಾಗಿ ಸಮಾನತೆಯನ್ನು ಬಯಸುವ ದೇಶಪ್ರೇಮಿಗಳಾಗಿ, ಸಾಂಸ್ಕೃತಿಕವಾಗಿ 'ಪರಂಪರೆ', 'ಗತ'ದ ಆಧ್ಯಾತ್ಮ ಕೇಂದ್ರಿತ ಸಂಸ್ಕೃತಿಯನ್ನು ಪ್ರಬಲವಾಗುವಂತೆ ಮಾಡುವ ರಾಷ್ಟ್ರೀಯತೆಯನ್ನು ಅಭಿವ್ಯಕ್ತಿಸುವ ರೀತಿಯನ್ನು ಚರ್ಚಿಸಲಾಗಿದೆ.

'ಸ್ವಾತಂತ್ರ್ಯಪೂರ್ವ ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ' ಎಂಬ ಮೂರನೆಯ ಅಧ್ಯಾಯದಲ್ಲಿ ವಸಾಹತು ಆಡಳಿತವನ್ನು ವಿರೋಧಿಸುವ ಪ್ರಕ್ರಿಯೆಯಾಗಿ ರಾಷ್ಟ್ರೀಯತೆ ವ್ಯಕ್ತಗೊಂಡ ಬಗೆ, ಪ್ರಕೃತಿಯ ಗಿಡ, ಮರ, ನದಿ, ಹೊಲ, ಬಯಲು - ಹೀಗೆ ಹತ್ತು ಹಲವು ಅಂಶಗಳು ನಾಡಾಭಿಮಾನದ ಕುರುಹುಗಳಾಗಿ ಆಂತರ್ಯದಲ್ಲಿ ಒಪ್ಪಿಕೊಳ್ಳುವ, ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವ ಧೋರಣೆಯು ರಾಷ್ಟ್ರೀಯತೆಯ ಒಮ್ಮತದ ಅಭಿಪ್ರಾಯವಾಗುತ್ತದೆ. ಆರಂಭದಲ್ಲಿ ಗುರುತಿಸಿಕೊಂಡ 'ಸ್ವಾತಂತ್ರ್ಯ', 'ಅಸ್ಮಿತೆ', 'ಐಕ್ಯ' ಎಂಬೀ ರಾಷ್ಟ್ರ ಪ್ರತಿನಿಧೀ ಪದಗಳು ಕವನಗಳ ಮೂಲಕ ರಾಷ್ಟ್ರೀಯತೆಯ ಸ್ಪಷ್ಟ ಕುರುಹುಗಳಾಗಿ ಮೂಡಿಬರುವ ಬಗೆಯನ್ನೂ, ಸಮಾಜದ ತಿರಸ್ಕೃತ ಗುಂಪೊಂದನ್ನು ಸ್ವೀಕೃತವಾಗಿಸುವಲ್ಲಿನ ಸಾಮಾಜಿಕ ಕಾಳಜಿಯು ಒಂದು ರೀತಿಯಲ್ಲಿ ಆಂತರಿಕ 'ಸ್ವಾತಂತ್ರ್ಯ'ವನ್ನು ಹಾಗೂ ಬಾಹ್ಯ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ ಪ್ರಕ್ರಿಯೆಯಾಗಿ ಗುರುತಿಸಲಾಗಿದೆ.

ವೇದಮೂಲ ಸಂಸ್ಕೃತಿಯಲ್ಲಿ ಅಡಗಿರುವ 'ಭಾರತೀಯತೆ'ಯನ್ನು ಭಾಷೆ, ವೇಷಭೂಷಣ, ಆಹಾರ, ಸಂಚಿಕೆಗಳ ವೈವಿಧ್ಯಗಳೊಂದಿಗೆ ಚರ್ಚಿಸುತ್ತಾ ಆಧ್ಯಾತ್ಮ ಮೂಲ ಸಂಸ್ಕೃತಿಯ ಜಾನಪ್ರೀಕರಣದೊಂದಿಗೆ ಅಸ್ಮಿತೆಯನ್ನು (Identity) ಗುರುತಿಸುವ ರಾಷ್ಟ್ರ ಸಂಕಥನವನ್ನು; ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮಗಳ ಹೆಸರಿನಲ್ಲಿ ನೆಲೆಗೊಳ್ಳಬೇಕಾದ ಮಾನವೀಯತೆಯ ತತ್ತ್ವವನ್ನು ಪ್ರತಿಪಾದಿಸುವ 'ಸ್ವಾತಂತ್ರ್ಯ' ಗಳಿಸುವ ಉದ್ದೇಶವನ್ನು ಸಾರುವ ಕವಿತೆಗಳ ರಾಷ್ಟ್ರೀಯತೆಯನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಬಾಹ್ಯ ವಲಯದಲ್ಲಿ ಪ್ರತಿಯೊಬ್ಬ ಭಾರತೀಯ ಗಳಿಸಬೇಕಾದ ಸ್ವಾತಂತ್ರ್ಯವನ್ನು ಕವಿಗಳು ತಮ್ಮ ಕವಿತೆಗಳ ಮೂಲಕ ಪ್ರಸ್ತುತ ಪಡಿಸಿರುವ ಬಗೆಯನ್ನು ಚರ್ಚಿಸಲಾಗಿದೆ. ಮುಖ್ಯವಾಗಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಗೋವಿಂದ ಪೈ, ಪಂಜೆಮಂಜೇಶ ರಾಯ, ಕಡೆಂಗೋಡ್ಲು ಶಂಕರಭಟ್ಟ, ಕಯ್ಯಾರ ಕಿಂಞಣ್ಣ ರೈ, ಸೇಡಿಯಾಪು ಕೃಷ್ಣ ಭಟ್ಟ, ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ ಮೊದಲಾದವರ ಕವನಗಳಲ್ಲಿ ವ್ಯಕ್ತವಾಗಿರುವ ರಾಷ್ಟ್ರೀಯತೆಯ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

'ಸ್ವಾತಂತ್ರ್ಯೋತ್ತರ ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆ' ಎಂಬ ನಾಲ್ಕನೇ ಅಧ್ಯಾಯವನ್ನು ಮುಖ್ಯವಾಗಿ ಸ್ವಾತಂತ್ರ್ಯಪೂರ್ವ ಕವಿತೆಗಳ ರಾಷ್ಟ್ರೀಯತೆಯ ಅಧ್ಯಯನದ ಮಾದರಿಯಲ್ಲೇ ಉಪಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ವಸಾಹತುಶಾಹಿ ಆಡಳಿತದ ಕೊನೆಯೊಂದಿಗೆ ದೇಶದಲ್ಲಿ ಆದ ಆಮೂಲಾಗ್ರ ಬದಲಾವಣೆಗಳ ಗುರುತಿಸುವಿಕೆಯೊಂದಿಗೆ ಕಂಡುಕೊಂಡ 'ರಾಷ್ಟ್ರೀಯತೆ'ಯ ಹಿಂದಿರುವ ಉದಾರವಾದೀ ದೃಷ್ಟಿಕೋನವನ್ನು ಇಲ್ಲಿ ಮುಖ್ಯವಾಗಿ ಅಧ್ಯಯನ ಮಾಡಲಾಗಿದೆ. ವಸಾಹತು ರಾಷ್ಟ್ರಗಳಿಂದ ಅಲ್ಲವಾಗಿದ್ದರೂ, ನಾಡು-ನುಡಿ, ಸಂಸ್ಕೃತಿ, ಸಮಾಜ, ಧರ್ಮ, ರಾಜಕೀಯದ ಮೇಲೆ ಆದ ಗಡಿಪ್ರದೇಶಗಳ ದಾಳಿ ಒಂದು ರೀತಿಯಲ್ಲಿ ವಸಾಹತು ಸನ್ನಿವೇಶದಂತಹ ಉಸಿರುಗಟ್ಟಿಸುವ ವಾತಾವರಣವನ್ನು ಸೃಷ್ಟಿಸಿದ್ದು, ಸ್ವಾತಂತ್ರ್ಯೋತ್ತರದಲ್ಲೂ ಅದು ರಾಷ್ಟ್ರದ ಕಾಳಜಿಯಾಗಿ ಮೂಡಿ ಬಂದಿದೆ. ಸ್ವಾತಂತ್ರ್ಯಪೂರ್ವದ ಕವಿತೆಗಳು ಕಂಡುಕೊಂಡ ನಾಡುನುಡಿಯನ್ನು ಸ್ವಾತಂತ್ರ್ಯೋತ್ತರ ಕವಿತೆಗಳು ಅದೇ ಮಾದರಿಯಲ್ಲಿ ಗುರುತಿಸಿಕೊಂಡದ್ದು ವಿಶೇಷ. ಪ್ರಾದೇಶಿಕವಾಗಿ ತಮ್ಮನ್ನು ಪ್ರತ್ಯೇಕವಾಗಿ ಗುರುತಿಸುತ್ತಾ ರಾಷ್ಟ್ರೀಯವಾಗಿ ತಮ್ಮನ್ನು ಒಂದಾಗಿ ಕಾಣುವ 'ರಾಷ್ಟ್ರ' ಚಿಂತನೆಯನ್ನು ದಕ್ಷಿಣ ಕನ್ನಡದ ಕವಿತೆಗಳು ಅಭಿವ್ಯಕ್ತಿಸಿದ ಬಗೆಯನ್ನು ಅಧ್ಯಯನ ಮಾಡಲಾಗಿದೆ.

ಸ್ವಾತಂತ್ರ್ಯೋತ್ತರದಲ್ಲಿ ವಿಭಾಗಿಸಲ್ಪಟ್ಟ ಭಾಷಾವಾರು ಪ್ರಾಂತ್ಯಗಳು ಕನ್ನಡದಲ್ಲಿಯೇ ಭಾವಪೂರ್ಣವಾಗಿರುವ ಕಾಳಜಿಯನ್ನು ವ್ಯಕ್ತಪಡಿಸುತ್ತಾ ಕನ್ನಡಿಗರೊಂದಾಗಬೇಕಾದ

ಪ್ರದೇಶಾಭಿಮಾನವನ್ನು ವ್ಯಕ್ತಪಡಿಸುತ್ತಾ ಅದರಲ್ಲಿಯೇ 'ರಾಷ್ಟ್ರಾಭಿಮಾನ'ವನ್ನು ಅಂತರ್ಲೀನಗೊಳಿಸುವ ಪ್ರಕ್ರಿಯೆಯನ್ನು ಕವನಗಳ ಮೂಲಕ ಚರ್ಚಿಸಲಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನುಭವಿಸಬೇಕಾಗಿ ಬಂದ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸುತ್ತಾ ಆಂತರಿಕ ತಾರತಮ್ಯದಿಂದ ಹೊರಬರಬೇಕಾದ ಮಾನವೀಯ 'ಸ್ವಾತಂತ್ರ್ಯ' ಕುರಿತು 'ರಾಷ್ಟ್ರೀಯತೆ' ಒಳಗೊಳ್ಳುವ ಚರ್ಚೆಯನ್ನು ಈ ಅಧ್ಯಾಯ ಪ್ರತಿನಿಧಿಸುತ್ತದೆ. ಅನ್ಯ ಗಡಿಪ್ರದೇಶಗಳ, ನೆರೆರಾಜ್ಯಗಳ, ರಾಷ್ಟ್ರಗಳ ಆಕ್ರಮಣವು, ದೇಶದಲ್ಲಿ ಉಂಟುಮಾಡಿದ ಹಿಂದಿನ ವಸಾಹತುಶಾಹಿ ಭೀಕರತೆಯನ್ನು ನೆನಪಿಸುವ ಕರಾಳ ದಿನಗಳಂತೆ ಚಿತ್ರಿತವಾಗುವ ಬಗೆ; ಗಾಂಧೀ, ತಿಲಕ್‌ವಾದೀ ರಾಷ್ಟ್ರೀಯತೆಯ ಸ್ವರೂಪ, ಆರ್ಥಿಕ, ರಾಜಕೀಯವಾಗಿ ಸುದೃಢವಾಗಬೇಕಾದ ಸಂದರ್ಭಗಳನ್ನು ಕವಿತೆಗಳು ಅಭಿವ್ಯಕ್ತಿಸುವುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ ವೇಣುಗೋಪಾಲ ಕಾಸರಗೋಡು, ಬಿ.ಎಂ. ಇದಿನಬ್ಬ, ಶ್ರೀಕೃಷ್ಣ ಚೆನ್ನಂಗೋಡು, ಜಿ.ಆರ್. ಪಾಂಡೇಶ್ವರ, ಸುಬ್ರಾಯ ಚೊಕ್ಕಾಡಿ, ಕುತ್ಯಾಳ ನಾಗಪ್ಪ ಗೌಡ - ಇವರ ಕವಿತೆಗಳಲ್ಲಿ ವ್ಯಕ್ತವಾಗುವ ರಾಷ್ಟ್ರೀಯತೆಯ ಸ್ವರೂಪವನ್ನು ಚರ್ಚಿಸಲಾಗಿದೆ.

ಸ್ವಾತಂತ್ರ್ಯಪೂರ್ವ/ಸ್ವಾತಂತ್ರ್ಯೋತ್ತರ ಕವನಗಳನ್ನು ಅಧ್ಯಯನ ಮಾಡಿ ಕಂಡುಕೊಂಡ ಅಂಶಗಳನ್ನು ತುಲನಾತ್ಮಕವಾಗಿ ಗ್ರಹಿಸಿ, ವಿಶ್ಲೇಷಿಸುವುದಕ್ಕೆ ೫ನೇ ಅಧ್ಯಾಯವನ್ನು ಬಳಸಲಾಗಿದೆ. ದಕ್ಷಿಣ ಕನ್ನಡದ ಕವಿತೆಗಳ ಮೂಲಕ ಗುರುತಿಸಬಹುದಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಅಧ್ಯಯನದ ಕ್ರೋಡೀಕರಣದಲ್ಲಿ ಚರ್ಚಿಸಲಾಗಿದೆ.

೧.೪. ಅಧ್ಯಯನದ ಹಾದಿ

ದಕ್ಷಿಣ ಕನ್ನಡದ ಕವಿತೆಗಳನ್ನು ಕುರಿತು ಈವರೆಗೆ ನಡೆದಿರುವ ಅಧ್ಯಯನಗಳಲ್ಲಿ; ಡಾ. ಸಂತೋಷ ಚೊಕ್ಕಾಡಿಯವರ 'ದಕ್ಷಿಣ ಕನ್ನಡದ ಕಾವ್ಯದ ವಿಭಿನ್ನ ನೆಲೆಗಳು' ಎಂಬ ಮಹಾಪ್ರಬಂಧದಲ್ಲಿ 'ರಾಷ್ಟ್ರೀಯತೆ'ಯನ್ನು ಪ್ರತಿನಿಧಿಸುವ ಕವಿತೆಗಳ ಚರ್ಚೆ ಇದೆ. ಗಿರಡ್ಡಿ ಗೋವಿಂದರಾಜು ಅವರು 'ಕನ್ನಡ ನವೋದಯ ಕಾವ್ಯ' - ಮಂಗಳೂರು ಕೇಂದ್ರ ಎನ್ನುವ ಸಂಪಾದಿತ ಕೃತಿಯಲ್ಲಿ ದಕ್ಷಿಣ ಕನ್ನಡದ ಪ್ರಮುಖ ಕವಿಗಳ ಮುಖ್ಯ ಕವನಗಳ ಆಧಾರದಲ್ಲಿ ರಾಷ್ಟ್ರೀಯತೆಯನ್ನು ಪ್ರಸ್ತಾಪಿಸಿದ್ದಾರೆ. ಡಾ. ದಿನೇಶ್ ನಾಯ್ಕ ಅವರು 'ರಾಷ್ಟ್ರೀಯವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ' ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ (ಅಪ್ರಕಟಿತ) ಸೈದ್ಧಾಂತಿಕವಾಗಿ ರಾಷ್ಟ್ರವನ್ನು ಪ್ರಾದೇಶಿಕತೆಗೆ ಕಟ್ಟಲು ಪ್ರಯತ್ನ ಮಾಡಿರುವರಲ್ಲದೆ ಪಂಜೆ

ಮಂಗೇಶರಾಯ, ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಕಡೆಂಗೋಡ್ಲು ಶಂಕರಭಟ್ಟ, ಎಂ.ಎನ್. ಕಾಮತ್ ಮೊದಲಾದ ಕವಿಗಳ ರಾಷ್ಟ್ರೀಯವಾದದ ಚರ್ಚೆಯನ್ನು ನಿರೂಪಿಸಿದ್ದಾರೆ. ಜಿ.ಎಸ್. ಶಿವರುದ್ರಪ್ಪನವರ 'ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ' ಸಂಪಾದಿತ ಕೃತಿಯಲ್ಲಿ ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಂಡ 'ರಾಷ್ಟ್ರೀಯತೆ'ಯನ್ನು ಕುರಿತ ಲೇಖನಗಳಿವೆ. ಡಿ.ಆರ್. ನಾಗರಾಜ್‌ರವರ 'ಶಕ್ತಿಶಾರದೆಯ ಮೇಳ' ಕೃತಿಯು ಆಧುನಿಕ ಕನ್ನಡ ಕಾವ್ಯದಲ್ಲಿ ಸಮಾಜದ ವಿವಿಧ ಆಯಾಮಗಳನ್ನು ವಿಶ್ಲೇಷಿಸುತ್ತಾ ಸಾಂದರ್ಭಿಕವಾಗಿ ರಾಷ್ಟ್ರೀಯತೆಯ ಚರ್ಚೆಯನ್ನು ಮುಂದಿಡುತ್ತದೆ. ಉಲ್ಲೇಖಿಸಿದ ಕೃತಿಗಳು ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಭಿನ್ನಭಿನ್ನವಾಗಿ ಪರಿಕಲ್ಪಿಸುವ ಪ್ರಯತ್ನ ಮಾಡಿವೆಯೇ ಹೊರತು ಸಮಗ್ರ ದೃಷ್ಟಿಕೋನಕ್ಕೆ ಗಮನಹರಿಸಿಲ್ಲ.

೧.೫. ಅಧ್ಯಯನದ ಮಹತ್ವ

ರಾಷ್ಟ್ರೀಯತೆ ಎನ್ನುವುದು ನಾಡುನುಡಿಯ ಕಲ್ಪನೆಯಾಗಿದ್ದು; ಅಂತಿಮವಾಗಿ ಜಾತಿಧರ್ಮಗಳನ್ನು ಮೀರುವ ಕಲ್ಪನೆಯಾಗುವಲ್ಲಿ ತನ್ನ ಪ್ರಾಬಲ್ಯವನ್ನು ಭಿನ್ನವಾಗಿ ವ್ಯಕ್ತಪಡಿಸುವ ಆಶಯವನ್ನು ಚರ್ಚಿಸಲಾಗಿದೆ. ಒಟ್ಟಿನಲ್ಲಿ ರಾಷ್ಟ್ರೀಯತೆಯನ್ನು ವಿಭಿನ್ನ ಆಶಯಗಳ ಕೇಂದ್ರೀಕರಣದೊಂದಿಗೆ ಸಮರೂಪತೆಯನ್ನು ತರುವ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಚರ್ಚಿಸಲಾಗಿದೆ. ದಕ್ಷಿಣ ಕನ್ನಡದ ಕವಿತೆಗಳಲ್ಲಿ ರಾಷ್ಟ್ರೀಯತೆಯ ಕಲ್ಪನೆಯು 'ಸೌಮ್ಯ' ಧೋರಣೆಯನ್ನು ತಳೆಯುತ್ತದೆ ಎಂಬ ವಾದವನ್ನು ಸಂಪೂರ್ಣವಾಗಿ ಅಲ್ಲಗಳೆಯದಿದ್ದರೂ; ಉಗ್ರ ರಾಷ್ಟ್ರೀಯವಾದದ ಪ್ರತಿಕ್ರಿಯೆಯ ಛಾಯೆ ಇಲ್ಲಿನ ಕವನಗಳಲ್ಲಿಯೂ ಇತ್ತು ಎಂಬುದನ್ನು ಈ ಅಧ್ಯಯನದ ಮೂಲಕ ಸಾದರಪಡಿಸಲಾಗಿದೆ.

ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಯಾವುದೇ ಗೊಂದಲವನ್ನುಂಟು ಮಾಡದೆ; ಏಕ ಆಶಯದೊಂದಿಗೆ ಬಹುಸರಳವಾಗಿ ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸಲಾಗಿದೆ. ಈ ಆಧುನಿಕ ಯುಗದ ಬೇರೆ-ಬೇರೆ ಕ್ಷೇತ್ರಗಳಲ್ಲಿ ರಾಷ್ಟ್ರೀಯತೆಯು ಸಂಕುಚಿತಗೊಳ್ಳುತ್ತಾ ವೈಶಾಲ್ಯವನ್ನು ಪಡೆಯುವ ರೀತಿಯ ಕಡೆಗೂ ಈ ಅಧ್ಯಯನವು ಸೂಕ್ಷ್ಮ ವಿವೇಚನೆಯನ್ನು ನಡೆಸುತ್ತದೆ. ಒಟ್ಟಿನಲ್ಲಿ ಸಂಕೀರ್ಣಾತ್ಮಕವಾಗಿ ಬಹುಮುಖವನ್ನು ಚಿತ್ರಿಸುವ ರಾಷ್ಟ್ರೀಯತೆಯನ್ನು, ಸರಳವಾದ ಏಕಮುಖದೊಂದಿಗೆ ವಿಸ್ತಾರಗೊಳಿಸುವ ಪ್ರಯತ್ನ ಇಲ್ಲಿದೆ. ಮಾತ್ರವಲ್ಲ, ತುಲನಾತ್ಮಕ ಅಧ್ಯಯನದ ಮೂಲಕ ಕಂಡುಕೊಳ್ಳಬಹುದಾದ ಸಾಧ್ಯತೆಗಳ ಬಗೆಗೆ ಈ ರೀತಿಯ ಅಧ್ಯಯನವು ಹೆಚ್ಚು ಸಹಕಾರಿಯಾಗಬಲ್ಲುದು ಎಂದು ಆಶಿಸಲಾಗಿದೆ.

ಅಧ್ಯಾಯ - ೨

ರಾಷ್ಟ್ರೀಯತೆಯ ನಿರೂಪಣೆ

ಅಧ್ಯಾಯ - ೨

ರಾಷ್ಟ್ರೀಯತೆಯ ನಿರೂಪಣೆ

೨.೧. ಪ್ರವೇಶ

'ರಾಷ್ಟ್ರ' ಎನ್ನುವುದು ವಿವಿಧ ನೆಲೆಗಳ ಹಿನ್ನೆಲೆಯಲ್ಲಿ ವ್ಯಾಪಕವಾದ ಅರ್ಥ ಪಡೆದುಕೊಂಡ ಪರಿಕಲ್ಪನೆ. ಅಮೂರ್ತಕಲ್ಪನೆ ಮತ್ತು ನಿರ್ದಿಷ್ಟ ಗುರುತುಗಳ ಮೂಲಕ 'ರಾಷ್ಟ್ರ' ಎನ್ನುವ ಗ್ರಹೀತವನ್ನು ನಿರ್ವಚಿಸಲಾಗುತ್ತದೆ. 'ರಾಷ್ಟ್ರ'ವನ್ನು ಕುರಿತ ಚಿಂತನೆಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ರೂಪತಾಳಿವೆ. ನಿರ್ದಿಷ್ಟ ವ್ಯಾಖ್ಯಾನವೊಂದರ ಮೂಲಕ ಅದನ್ನು ನಿರೂಪಿಸುವುದು ಕಷ್ಟ. ಯಾಕೆಂದರೆ ನಮ್ಮ ಚಿಂತನೆಗಳನ್ನು ಮೀರಿ 'ರಾಷ್ಟ್ರ' ಬೆಳೆಯಬಲ್ಲುದು. ತಮ್ಮ ಅಸ್ಮಿತೆಯನ್ನು (Identity) ಕಂಡುಕೊಳ್ಳುವುದಕ್ಕೆ ಬಳಕೆಯಾದ ಪರಿಭಾಷೆಯಾಗಿ 'ರಾಷ್ಟ್ರ'ವು ಗುರುತಿಸಲ್ಪಟ್ಟಿದೆ. ನಮ್ಮ ಪೂರ್ವದ ಚಹರೆಗಳನ್ನು (ಸಂಸ್ಕೃತಿ) ಉಳಿಸುವಲ್ಲಿಂದ ತೊಡಗಿ ಇಂದು ಅದು ಸ್ಥಿತ್ಯಂತರಗೊಂಡಿರುವ, 'ಪಲ್ಲಟ'ಗೊಂಡಿರುವವರೆಗೆ ರಾಷ್ಟ್ರದ ಕಲ್ಪನೆಯ ಹರಹು ವಿಶಾಲವಾಗುತ್ತದೆ. ಪಲ್ಲಟಗೊಂಡಿರುವ, 'ಸ್ಥಿತ್ಯಂತರ'ಗೊಂಡಿರುವ ಎನ್ನುವ ಪದಗಳು 'ಗತ'ದ ಹುಡುಕಾಟವನ್ನು ಮಾಡದೆ ವಸಾಹತುಶಾಹಿ ವರ್ಗವು ಬೆಳೆಸಿದ ಆಧುನಿಕತೆಯ 'ಸ್ವೀಕರಣೆ' ಹಾಗೂ 'ನಿರಾಕರಣೆ'ಯ ತರ್ಕದಲ್ಲಿ ತನ್ನನ್ನು ಕಟ್ಟಿಕೊಳ್ಳುವ ರಾಜಕೀಯಪ್ರೇರಿತ ಕ್ರಿಯೆಯಾಗಿರುತ್ತದೆ. ವಹಾಸತುಶಾಹಿ ಆಕ್ರಮಣದ ಕಾಲದಲ್ಲಿ ಹೊರದೂಡಲ್ಪಟ್ಟ ಸಾಮಾಜಿಕ ವಲಯದಲ್ಲಿ ತಮ್ಮನ್ನು ಕಂಡುಕೊಳ್ಳುವ ದೇಶೀ ಸಂಸ್ಕೃತಿಯ ಹುಡುಕಾಟ ಆರಂಭವಾಗುತ್ತದೆ. ಈ ಹುಡುಕಾಟವೇ 'ಗತ' ಹಾಗೂ 'ವರ್ತಮಾನ'ದ ಬದುಕಿನಲ್ಲಿ ಶ್ರೇಷ್ಠವಾದುದನ್ನು ಆಯ್ದು, ಗಟ್ಟಿಯಾಗಿ ಬೇರೂರುವಂಥ ಪ್ರಕ್ರಿಯೆಯನ್ನುಂಟು ಮಾಡಿ ಸಮಗ್ರ 'ಭಾರತೀಯ ಸಂಸ್ಕೃತಿ' ಎಂಬ ಚಿಂತನೆಯನ್ನು ಹುಟ್ಟುಹಾಕುತ್ತದೆ. ಈ ಬಗೆಯ ಚಿಂತನೆಗಳು ಪ್ರಾದೇಶಿಕ ಆಶೋತ್ತರದ ಸಂದರ್ಭದ ವಿಶಿಷ್ಟತೆಗಳ ನೆಲೆಯಲ್ಲಿ ಚೌಕಟ್ಟನ್ನು ಹಾಕಿಕೊಳ್ಳುವ ಅನಿವಾರ್ಯ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಹಾಗಾಗಿ 'ರಾಷ್ಟ್ರೀಯತೆ'ಯ ಸಮಗ್ರ ನಿರೂಪಣೆ ಎನ್ನುವುದು ಪ್ರಾದೇಶಿಕವಾದ ಸಂಸ್ಕೃತಿಯ ಚಹರೆಗಳ ವಿಶಿಷ್ಟತೆ ಮತ್ತು ಅನನ್ಯತೆಯ ಹಿನ್ನೆಲೆಯಿಂದಲೇ

ಕಟ್ಟಲಾಗುವ ವಾಗ್ವಾದವಾಗುತ್ತದೆ. ಆದರಂತೆ ವಸಾಹತುಶಾಹಿ ಆಳ್ವಿಕೆಯ ವಿರೋಧದ ಜೊತೆಯಲ್ಲಿ ಪ್ರಾದೇಶಿಕ ಭಾಷಾ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯನ್ನು ಸುದೃಢ ಪಡಿಸಿಕೊಂಡಿದೆ. ಇದು ಪ್ರಾದೇಶಿಕ ಭಾಷೆ ಹಾಗೂ ಪ್ರಾಂತ್ಯಗಳ ಹಿನ್ನೆಲೆಯಲ್ಲಿ ಸಂಸ್ಕೃತಿ 'ಶೋಧ'ದ ಪ್ರಕ್ರಿಯೆಗೆ ಚಾಲನೆ ನೀಡಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯೂ ರಾಷ್ಟ್ರೀಯ ಏಕತೆಯ ಹೆಸರಿನಲ್ಲಿ ಏಕ ಸಂಸ್ಕೃತಿಯನ್ನು ಪರಿಭಾಷಿಸುವ ಪ್ರಯತ್ನ ಮಾಡಿತು. "ಆದರೆ ಈ ಏಕ ಸಂಸ್ಕೃತಿಯೆಂಬುದಿಲ್ಲ; ಹಲವಾರು ಪ್ರಾದೇಶಿಕ ಸಂಸ್ಕೃತಿಗಳ ಮೊತ್ತವೇ"[೧] ಎಂಬ ವಾಗ್ವಾದಕ್ಕೆ ದಾರಿ ಮಾಡಿತು.

ಹೀಗೆ "ಅದುವರೆಗೂ ಯಾರ ಗಮನಕ್ಕೂ ಬಾರದ ರಾಮಮಂದಿರ, ಇಡೀ ದೇಶದ ವಿಷಯವಾಗಿ ಸಾಂಸ್ಕೃತಿಕ ಆಂದೋಲನವನ್ನೇ ಸೃಷ್ಟಿಮಾಡಿ; ವಿಶ್ವಹಿಂದೂ ಪರಿಷತ್ತನ್ನು ಸೃಷ್ಟಿಸಿ ಜಾಗತಿಕ ಮಟ್ಟದಲ್ಲಿ ಹಿಂದೂ 'ರಾಷ್ಟ್ರ'ದ ಕಲ್ಪನೆಯನ್ನು ರೂಪಿಸುತ್ತದೆ"[೨] ಎಂಬ ವ್ಯಾಖ್ಯಾನವನ್ನು ನಿರೂಪಿಸುತ್ತಲೇ ಪ್ರತ್ಯೇಕವಾದದ್ದೊಂದು ಒಂದಾಗಿ ಸೇರುತ್ತಲೇ 'ರಾಷ್ಟ್ರೀಯತೆ'ಯನ್ನು ಸಂಕೀರ್ಣಗೊಳಿಸುತ್ತದೆ. ರಾಷ್ಟ್ರ ಧ್ವಜ, ರಾಷ್ಟ್ರೀಯ ಕ್ರೀಡೆ, ರಾಷ್ಟ್ರ ಪಕ್ಷಿ, ರಾಷ್ಟ್ರೀಯ ಮೀನು... ಹೀಗೆ ಹಲವಾರು ಅಂಶಗಳು 'ರಾಷ್ಟ್ರ'ದ ಕುರುಹುಗಳಾಗಿ ಗುರುತಿಸ್ಪಡುತ್ತವೆ. ಇದು 'ಏಕ', ಅಖಂಡ ಎಂದು ಭಾವಿಸುವ 'ರಾಷ್ಟ್ರ'ವನ್ನು ಬೇರೆ ಬೇರೆ ಪರಿಕಲ್ಪನೆಗಳ ಮೂಲಕ ಮತ್ತೆ ಒಂದಾಗಿಸುವ ಪ್ರಯತ್ನವನ್ನು ಮಾಡುತ್ತದೆ. ಪ್ರಸ್ತುತ ಆಂದೋಲನ, ಚಳವಳಿಯ ರೂಪದಲ್ಲಿ 'ರಾಷ್ಟ್ರ'ದ ನಿರೂಪಣೆಯನ್ನು ಮಾಡುತ್ತಲೇ 'ರಾಷ್ಟ್ರೀಯತೆ'ಯೆಂಬುದು ಹಲವಾರು ಗೊಂದಲಗಳಿಗೆ ಎಡೆಮಾಡಿವೆ.

"ರಾಷ್ಟ್ರ ಎಂಬುದು ನಾವು ಸತತವಾಗಿ ಪುನರುತ್ಪಾದಿಸುತ್ತಾ, ನಿರೂಪಿಸುತ್ತಾ ಇರಬೇಕಾದ ಗುರುತಾಗಿದೆ. ಅದೊಂದು ವರ್ತಮಾನದ ಸನ್ನಿವೇಶಕ್ಕೆ ಒಂದು ಸಾಮೂಹಿಕ ಪ್ರತಿಕ್ರಿಯೆಯ ಯುಕ್ತಿಯಾಗಿದೆ. ನಾವು ಒಂದು ಕಾಲಕ್ಕೆ ಕಟ್ಟಿಕೊಂಡ ನಿರೂಪಣೆಗಳಿಂದ ಈಗ ಬಿಡುಗಡೆ ಪಡೆಯುತ್ತಲೇ ಈ ಕಾಲಕ್ಕೆ ಪ್ರಸ್ತುತವಾಗುವಂತೆಯೇ ಅದನ್ನು ನಿರೂಪಿಸಬೇಕಾಗುತ್ತದೆ."[೩]

'ರಾಷ್ಟ್ರ', ರಾಷ್ಟ್ರೀಯತೆ ಕುರಿತು ಈ ವರೆಗೆ ನಡೆದಿರುವ ಚರ್ಚೆಗಳು ರಾಷ್ಟ್ರೀಯತೆಯ ಉಗಮವನ್ನು ವಸಾಹತುಶಾಹಿ ರಾಷ್ಟ್ರಗಳ ಆಕ್ರಮಣದ ಹಿನ್ನೆಲೆಯಾಗಿ ಗುರುತಿಸಿಕೊಳ್ಳುತ್ತವೆ.[೪] ಯುರೋಪಿನಲ್ಲಿ ರಾಷ್ಟ್ರೀಯತೆಯ ಉಗಮವು ಮತೀಯ ಸಂಘರ್ಷಗಳ ಆಧಾರದಲ್ಲಿ ಬೆಳೆಯಿತು. ಅಲ್ಲಿನ ಅರಸೊತ್ತಿಗೆ ಹಾಗೂ ಚರ್ಚ್ ವಿರುದ್ಧದ ವಾಗ್ವಾದದ ಪ್ರಕ್ರಿಯೆಯ ಮೂಲಕ ಅಲ್ಲಿನ ಪ್ರಜಾಪ್ರಭುತ್ವ ನಾಶವಾಗುತ್ತದೆ. ಆ ಮೂಲಕ ಫ್ರಾನ್ಸ್ ಮಹಾಕ್ರಾಂತಿಗೆ ದಾರಿಮಾಡುತ್ತದೆ. ತಮ್ಮ ನಷ್ಟವಾದ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಹಿನ್ನೆಲೆಯಲ್ಲಿ ಅಲ್ಲಿನ 'ರಾಷ್ಟ್ರ', 'ರಾಷ್ಟ್ರೀಯತೆ'

ಪರಿಕಲ್ಪನೆ ಉಗಮಕೊಳ್ಳುತ್ತದೆ. ಈ ಪರಿಕಲ್ಪನೆಯ ಹಿಂದೆ ವ್ಯಕ್ತಿ ಸ್ವಾತಂತ್ರ್ಯದ ಅನಿವಾರ್ಯತೆಯನ್ನು ಗುರುತಿಸಬಹುದು.

ದಕ್ಷಿಣ ಕನ್ನಡದ ಸಂದರ್ಭದಲ್ಲಿ ರಾಷ್ಟ್ರೀಯತೆಯ ಉಗಮವೂ 'ಸ್ವಾತಂತ್ರ್ಯ'ದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದೆ. ಈ 'ಸ್ವಾತಂತ್ರ್ಯ' ಎಂಬುದು ವಸಾಹತುಶಾಹಿಯ ವಿರೋಧದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳದೆ; ಸಮಾಜದ ಆಂತರಿಕ ತಾರತಮ್ಯಗಳ ವಿರೋಧದ ಆಕ್ರೋಶವಾಗಿಯೂ ವ್ಯಕ್ತವಾಗಿದೆ. 'ಸಮಾಜ' ಎಂಬುದು ಏಕರೂಪೀ ಜೀವನಕ್ರಮಗಳ ಕೇಂದ್ರವಾಗಿರದೆ ಬಹುರೂಪೀ ಸಾಂಸ್ಕೃತಿಕ ಸಂದರ್ಭಗಳನ್ನು ಸೃಷ್ಟಿಸುವಂಥದ್ದು. ಭಾಷೆ, ಜಾತಿ, ವರ್ಗ, ಪ್ರದೇಶ, ಜನಾಂಗ ವೈವಿಧ್ಯಗಳಲ್ಲಿ ಅಸಮಾನತೆಯ ಚಹರೆಗಳನ್ನು ಗುರುತಿಸಿದಾಗ ವ್ಯಕ್ತಿ ಸ್ವಾತಂತ್ರ್ಯದ ಹಂಬಲ ತೀವ್ರವಾಗಿರುತ್ತದೆ. ಈ ತೀವ್ರತೆಯೇ ತನ್ನ ನಾಡುನುಡಿಯ ಮೇಲಿಯ ಅಭಿಮಾನ ಸಮಾಜದ ಕುರಿತ ಚಿಂತನೆ (ರಾಜಕೀಯ, ಜಾತ್ಯತೀತ, ದಲಿತೋದ್ಧಾರ), ಸಂಸ್ಕೃತಿಯ ಗತ, ವರ್ತಮಾನಗಳ ಅನುಸಂಧಾನಕ್ಕಾಗಿ ತುಡಿಯುತ್ತದೆ. ಈ ಸಮೂಹಪ್ರಜ್ಞೆಯು ತನ್ನ ಸುತ್ತಲಿನ ಅಸಮಾನತೆಗಳನ್ನು ಕಳಚುವುದರೊಂದಿಗೆ ವಸಾಹತುವಿನ ಹಿಡಿತದಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತದೆ. ಇಂತಹ ರಕ್ಷಣೆಯು ಪ್ರಾದೇಶಿಕವಾಗಿ ತನ್ನನ್ನು ಸಿದ್ಧಗೊಳಿಸುವುದರೊಂದಿಗೆ ರಾಷ್ಟ್ರೀಯವಾಗಿ ಸ್ಥಿರೀಕರಿಸುವ ಉತ್ಸುಕತೆಯನ್ನು ಬಿಂಬಿಸುತ್ತದೆ. ಹೀಗೆ 'ರಾಷ್ಟ್ರ' ಎಂಬುದು ಕಟ್ಟಿಕೊಂಡ ಬಹು ಅಸ್ಮಿತೆಗಳ ನೆಲೆ. ಪ್ರಾದೇಶಿಕವಾಗಿ ದಕ್ಷಿಣ ಕನ್ನಡದ ಒಟ್ಟು ಹಿನ್ನೆಲೆಯಲ್ಲಿ 'ರಾಷ್ಟ್ರ' ಎನ್ನುವ ಸಂರಚನೆಯ ಚಿಂತನೆಯಲ್ಲಿ ಪ್ರಧಾನವಾಗಿ 'ಸ್ವಾತಂತ್ರ್ಯ'ದ ಕಾಳಜಿಯೊಂದಿಗೆ ನಾಡು(ಪ್ರದೇಶ), ನುಡಿ(ಭಾಷೆ), ಸಮಾಜ, ರಾಜಕೀಯ ಆಚಾರ, ವಿಚಾರ ಜೀವನ ಪದ್ಧತಿ ಸಂಸ್ಕೃತಿಯ ಅರಿವು, ಧರ್ಮದ ಜಾಗೃತಿಯ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ನಿರೂಪಣೆ ಮಾಡಲಾಗಿದೆ.

೨.೨ ಪ್ರಾದೇಶಿಕತೆಯ ವಾಗ್ವಾದ

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾ ವಳಯವಿಲೀನ ವಿಶದ ವಿಷಯಂ (ನೃಪತುಂಗ : ಕವಿರಾಜಮಾರ್ಗ)

ಕವಿರಾಜಮಾರ್ಗದ ಈ ಸಾಲುಗಳೇ, ಕನ್ನಡ / ಕರ್ನಾಟಕ ಎಂಬ ಪ್ರಾದೇಶಿಕ ಚೌಕಟ್ಟನ್ನು ರೂಪಿಸುವುದರ ಹಿನ್ನೆಲೆಯ ಭಾರತೀಯತೆಯನ್ನು ಅರ್ಥೈಸಿಕೊಳ್ಳುವುದು ಸರಳ. ಭೂಪ್ರದೇಶ, ಭಾಷೆ,

ಜಾತಿ, ಧಾರ್ಮಿಕ ಸಮುದಾಯ ಇವು ರಾಷ್ಟ್ರವೊಂದರಲ್ಲಿ ಕಂಡುಬರುವ ಮೂಲಭೂತ ಸಂಗತಿಗಳು. ಇವುಗಳಲ್ಲಿ ಯಾವೊಂದನ್ನು ಬಿಟ್ಟೂ ರಾಷ್ಟ್ರವನ್ನು ಕಲ್ಪಿಸುವುದು ಅಸಾಧ್ಯ. ಚರಿತ್ರೆಯ ಅವಲೋಕನ ಮಾಡಿದಾಗ ಕರ್ನಾಟಕದಂತೆಯೇ ಭಾರತವೂ ತನ್ನನ್ನು 'ರಾಷ್ಟ್ರ'ವೆಂಬ ಅಖಂಡತೆಯಲ್ಲಿ ಗುರುತಿಸಿರುವುದನ್ನು ಕಾಣಬಹುದು. ವೇದಪುರಾಣಗಳ ಕಾಲದಲ್ಲೂ ಭಾರತ ಒಂದು 'ರಾಷ್ಟ್ರ'ವಾಗಿತ್ತು - ಹಿಮಾಲಯದಿಂದ - ಹಿಂದೂಮಹಾಸಾಗರದ ವರೆಗಿನ 'ಭರತವರ್ಷ'ದ ಕಲ್ಪನೆಯನ್ನು ವೇದ ಪುರಾಣಗಳು ಚಿತ್ರಿಸುತ್ತವೆ. ಪ್ರಾದೇಶಿಕ ವೈವಿಧ್ಯ, ಜನಾಂಗ, ಜಾತಿ, ಭಾಷೆ, ಧರ್ಮ, ವೇಷಭೂಷಣ, ರಾಜಕೀಯ ಆರ್ಥಿಕ ಭೇದಗಳನ್ನು ಗುರುತಿಸುತ್ತಲೇ ಅದು 'ಭಾರತ' ಎಂಬ 'ಏಕರೂಪೀ' ವ್ಯವಸ್ಥೆಯನ್ನು ಸ್ಥಾಪಿಸುತ್ತದೆ. ಅಂದರೆ ಬಿಡಿಬಿಡಿಯಾದುದರ ಹಿನ್ನೆಲೆಯಲ್ಲಿ 'ಐಕ್ಯ'ವನ್ನು 'ಅಖಂಡತ್ವ'ವನ್ನು ಸ್ಥಾಪಿಸುವ ಪ್ರಯತ್ನವಿದೆ. ಪುರಾಣಗಳು ಪ್ರತಿನಿಧಿಸುವ ರಾಷ್ಟ್ರ ಅಥವಾ ದೇಶದ ಚಿತ್ರಣಕ್ಕಿಂತ ಭಿನ್ನವಾಗಿ ಮತ್ತು ಹೆಚ್ಚು ನಿಖರವಾದ ಚಿತ್ರಣವನ್ನು ವಸಾಹತು ಕಾಲದ ಚರಿತ್ರೆ ನಿರ್ಮಿಸಿಕೊಟ್ಟಿದೆ. ಈ ಮೂಲಕ ಸಿದ್ಧಿತವಾದ ವಸಾಹತುಶಾಹೀ ವ್ಯವಸ್ಥೆಯ ಹಿನ್ನೆಲೆಯಲ್ಲಿ ವಿಸ್ತಾರ ವ್ಯಾಪ್ತಿಯನ್ನು ಪಡೆದ 'ರಾಷ್ಟ್ರೀಯತೆ' ಪ್ರಾದೇಶಿಕತೆಯ ನೆಲೆಯಲ್ಲಿ ತನ್ನನ್ನು ಗುರುತಿಸಿಕೊಂಡಿತು.

"ಕೇರಳ, ಕರ್ನಾಟಕ, ಆಂಧ್ರಾದಿ ಪ್ರದೇಶಗಳೆಲ್ಲ ಭಾರತಿಯ ಅಂಗರೂಪಗಳು; ಅಂಶರೂಪಗಳು ಅಂಗಾಂಗಳ ಕ್ಷೇಮ, ಅಂಗಿಯ ಕ್ಷೇಮದಿಂದ ಅಭಿನ್ನ, ಅಂಗಿಯ ಕ್ಷೇಮದಿಂದಲೇ ಅಂಗಾಂಗಳ ಕ್ಷೇಮವೂ ಸಿದ್ಧವಾಗುತ್ತದೆ. ಯಾವ ಅಂಗವಾಗಲಿ, ಮತ್ತೊಂದು ಅಂಗದೊಡನೆ ಕದನವಾಡಿದರೆ ಅಥವಾ ಸಹಕರಿಸದಿದ್ದರೆ ಇತರ ಅಂಗಾಂಗಳಿಗೆ ಹಾನಿಯನ್ನುಂಟು ಮಾಡುವುದರ ಜೊತೆಗೆ ಅಂಗಿಗೂ ಹಾನಿಯನ್ನುಂಟುಮಾಡಿ ತನ್ನ ಸರ್ವನಾಶಕ್ಕೆ ಕಾರಣವಾಗುತ್ತದೆ"[೫] ಈ ಮಾತುಗಳ ಆಧಾರದಲ್ಲಿ 'ರಾಷ್ಟ್ರೀಯತೆ' ಎಂಬುದು ಪ್ರಾದೇಶಿಕತೆಯನ್ನು ಹೊರತುಪಡಿಸಿ ಇಲ್ಲ; ಪ್ರಾದೇಶಿಕತೆಯನ್ನು ಹೊರತುಪಡಿಸಿ ರಾಷ್ಟ್ರೀಯತೆಗೆ ಅಸ್ತಿತ್ವವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮಾತ್ರವಲ್ಲ; ಪ್ರಾದೇಶಿಕತೆಯು ತನ್ನ ಅಸ್ತಿತ್ವವನ್ನು ಕಳೆದುಕೊಂಡರೆ 'ರಾಷ್ಟ್ರ'ದ ಅಸ್ತಿತ್ವ ಇಲ್ಲವಾದಂತೆ ಎಂಬ ಎಚ್ಚರವನ್ನೂ ಕೊಡುತ್ತದೆ. ಆದ್ದರಿಂದ ಪ್ರತಿಯೊಂದು ರಾಷ್ಟ್ರವು ತನ್ನನ್ನು ಪ್ರಾದೇಶಿಕವಾಗಿ ಗುರುತಿಸಿಕೊಳ್ಳುತ್ತಲೇ 'ರಾಷ್ಟ್ರ'ವಾಗಿ ಕಲ್ಪಿಸುತ್ತದೆ. ಈ ಕಲ್ಪನೆಯ ಹಿಂದೆ ವಿಶಾಲವಾದ ದೃಷ್ಟಿಕೋನವನ್ನು ಅದು ಒಳಗೊಳ್ಳಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಇದಕ್ಕಿಂತ ಭಿನ್ನವಾದ ಚಿಂತನೆಯನ್ನು ಮಾಡಬಹುದು. ಅಮೂರ್ತವಾದ 'ರಾಷ್ಟ್ರ' ಕಲ್ಪನೆಯನ್ನು ಪ್ರಾದೇಶಿಕತೆಯ ಮೂಲಕ ರೂಪಾಂತರಗೊಳಿಸಿ ನೋಡುವ ಪ್ರಕ್ರಿಯೆ ರಾಷ್ಟ್ರೀಯತೆಯ ಹಿಂದಿದೆ. ಉದಾ: ಭಾರತೀಯ

ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ರಚಿಸುವುದು ಮತ್ತು ಅವುಗಳಲ್ಲಿನ ವರ್ಣನೆಗಳಲ್ಲಿ ತಮ್ಮ ಸ್ವಂತಿಕೆಯನ್ನು ಮೆರೆಯುವುದು. ಇತ್ತೀಚಿನ ಚಿಂತನೆಯಲ್ಲಿ ರಾಮಾಯಣ, ಮಹಾಭಾರತಗಳನ್ನು ರಾಷ್ಟ್ರೀಯ ಕಾವ್ಯಗಳು ಎಂದು ಗುರುತಿಸುವುದರ ಕುರಿತೂ ಪ್ರಶ್ನೆಗಳಿವೆ. ಜಾನಪದೀಯ ಹಿನ್ನೆಲೆಯಿಂದ ಗುರುತಿಸಲಾಗುವ ಕಾವ್ಯಗಳೂ ಮಹಾಕಾವ್ಯದ ವ್ಯಾಪ್ತಿಯನ್ನು ಪಡೆದುಕೊಳ್ಳುವಂತಹ ಗುಣಲಕ್ಷಣಗಳನ್ನು ಹೊಂದಿವೆ. ಈ ಜಾನಪದ ಕಾವ್ಯಗಳ ಒಳಚಿಂತನೆ, ವಿವರವಾದ ನಿರೂಪಣೆಗಳೂ ಸಂಸ್ಕೃತಿಯ ಪ್ರತೀಕಗಳಾಗಿ ಅನನ್ಯವೆನಿಸುತ್ತವೆ. ಅವುಗಳನ್ನು ಸಂಗ್ರಹಿಸಿ ಇತರ ಭಾಷೆಗಳಿಗೆ ಅನುವಾದ ಮಾಡುವ ಮೂಲಕವೂ ಆ ಕಾವ್ಯಗಳು ನಿರೂಪಿಸುವ ಸಂಸ್ಕೃತಿಯ ಚಹರೆಗಳನ್ನು ಕಂಡರಿಸಬಹುದಾಗಿದೆ.

ಭಾರತೀಯ 'ರಾಷ್ಟ್ರೀಯತೆ'ಯನ್ನು ೨ ರೂಪಗಳಲ್ಲಿ ಗುರುತಿಸಬಹುದು.

೧. ನದಿ, ಪರ್ವತ, ಸಮುದ್ರ, ಪ್ರಾಕೃತಿಕ ಸೌಂದರ್ಯಗಳನ್ನೊಳಗೊಂಡ ಭೌತಿಕ ರೂಪ.

೨. ಚೇತನಯುಕ್ತವಾದ ಆಧ್ಯಾತ್ಮಿಕ ರೂಪ.

ಎರಡನೆಯ ರೂಪವನ್ನು 'ಸಂಸ್ಕೃತಿ' ಎಂಬರ್ಥದಲ್ಲಿ ವ್ಯಾಖ್ಯಾನಿಸುತ್ತಾ ''ಉಳಿದ ರಾಷ್ಟ್ರಗಳು ಭಾರತವನ್ನು ಗೌರವಿಸಲು ಭಾರತದ ಅಂತಃಸತ್ವವೇ ಕಾರಣ''[೬] ಎಂದು ಅಭಿಪ್ರಾಯಪಡುತ್ತಾರೆ. ಭಾರತದಲ್ಲಿ ವೈವಿಧ್ಯವಾದ ಭೌತಿಕ ಸಂಪತ್ತುಗಳಿರುವಂತೆಯೇ ಆಧ್ಯಾತ್ಮಿಕ, ನೈತಿಕ ಸಂಪತ್ತುಗಳೂ ಇವೆ. ಈ ಸಂಪತ್ತುಗಳು ಪರಸ್ಪರ ಹೊಂದಿಕೊಂಡಾಗ ಮಾತ್ರವೇ ಭಾರತದ ವಿವಿಧತೆಗಳಲ್ಲೂ ವಿವಿಧತೆ ಮಾಯವಾಗಿ 'ಏಕತೆ' ಕಾಣಿಸಿಕೊಳ್ಳಬಹುದು. ಹೀಗೆ ರಾಷ್ಟ್ರೀಯತೆಯು ತನ್ನ ಭೌತಿಕತೆಯನ್ನು ವೈಭವೀಕರಿಸುವ ಚಾರಿತ್ರಿಕ ಗ್ರಹಿಕೆಯಾಗಿಯೂ, ನಂಬಿಕೆ, ನಡವಳಿಕೆ, ಮೌಲ್ಯದಂತಹ ಸಾಂಸ್ಕೃತಿಕ ಅಂಶಗಳ ವೈಭವೀಕರಣಕ್ಕೂ ತನ್ನನ್ನು ಒಗ್ಗಿಸಿಕೊಳ್ಳುತ್ತದೆ. ಇಂತಹ ಸಂಗತಿಗಳನ್ನು ವಿವಿಧ ಸಂವೇದನೆಗಳಲ್ಲೂ ಗುರುತಿಸಬಹುದು.

'ರಾಷ್ಟ್ರೀಯತೆ'ಯನ್ನು ಗುರುತಿಸಿಕೊಳ್ಳುವ ಸಂದರ್ಭದಲ್ಲಿ ತನ್ನ ಪ್ರದೇಶ, ಪರಿಸರದ ಕಾಳಜಿಯೂ ಅದರ ಹಿಂದೆ ವ್ಯಕ್ತವಾಗುತ್ತದೆ. ವಸಾಹತು ಆಕ್ರಮಣದ ವಿರುದ್ಧದ ಹೋರಾಟದ ಫಲವಾಗಿ ತನ್ನ ಸ್ವಾತಂತ್ರ್ಯವನ್ನು ಗಳಿಸಿದಾಗ ಅದು ಕೇವಲ ನೆಲಕ್ಕೆ, ಭೂಭಾಗಕ್ಕೆ ಮಾತ್ರ ಸೀಮಿತವಾಯಿತು. ರಾಷ್ಟ್ರೀಯ 'ಏಕತೆ'ಯಲ್ಲಿ ಜನತೆಯಾಗಲೀ, ಸಂಸ್ಕೃತಿಯಾಗಲೀ, ಒಗ್ಗೂಡದಿದ್ದಾಗ ಪ್ರಾಂತೀಯವಾಗಿ, ಮತೀಯವಾಗಿ, ಭಾಷಿಕವಾಗಿ ಛಿದ್ರಗೊಳ್ಳಬೇಕಾಗಿ ಬಂತು. ಈ ಛಿದ್ರೀಕರಣವು ಮತ್ತೆ ತನ್ನನ್ನು ಒಂದಾಗಿ ಕಾಣುವ ಪ್ರಯತ್ನ ಮಾಡುತ್ತದೆ. ಆದರೆ ಆ ಪ್ರಯತ್ನದಲ್ಲಿ ಅದು ತನಗರಿವಿಲ್ಲದಂತೆಯೇ ಪ್ರತ್ಯೇಕವಾಗಿ ಉಳಿಯುತ್ತದೆ.[೭] ಈ ರೀತಿ 'ರಾಷ್ಟ್ರ'ದ ಮೂಲಕ

ಪ್ರದೇಶವನ್ನೂ, ಪ್ರದೇಶದ ಮೂಲಕ ರಾಷ್ಟ್ರವನ್ನು ಕಾಣುವ ದ್ವಂದ್ವ ರಾಷ್ಟ್ರೀಯತೆಯನ್ನು ಸಮಸ್ಯಾತ್ಮಕವಾಗಿಸುತ್ತದೆ.

ಪ್ರಾದೇಶಿಕ ಬದುಕಿನ ಚಿತ್ರಣದಲ್ಲಿ ತನ್ಮಯವಾಗುವ ಸಂದರ್ಭದಲ್ಲಿ ಪರಿಸರದ ಕುರಿತ ವರ್ಣನೆ, ಕಾಳಜಿಗಳು ಸಹಜವಾಗಿಯೇ ಗೋಚರಿಸುತ್ತವೆ. ತನ್ನ ಸುತ್ತಮುತ್ತಲು ಹರಿಯುವ ನದಿ, ಬೆಟ್ಟಗುಡ್ಡ, ಮರಗಳು, ಸೂರ್ಯೋದಯದ ದೃಶ್ಯ, ಬೆಳದಿಂಗಳು ಎಲ್ಲದರಲ್ಲಿಯೂ 'ತಾನು', 'ತನ್ನದು' ಎನ್ನುವ 'ಸ್ವತಂತ್ರ ಭಾವ'ದ ತಾದಾತ್ಮ್ಯ ಸ್ಥಾಪಿಸಲ್ಪಡುತ್ತದೆ. ಎಲ್ಲಿ ಹೋದರೂ ಪ್ರಾದೇಶಿಕತೆ ವ್ಯಕ್ತಿಯ ಅಂತರ್‌ಮಾನಸದಲ್ಲಿ ನೆಲೆಗೊಳ್ಳುತ್ತದೆ. ಉದಾ : ಬಂಕಿಮ ಚಂದ್ರರ 'ವಂದೇ ಮಾತರಂ' ಗೀತೆಯಲ್ಲಿ ವರ್ಣಿತವಾಗಿರುವ ಪ್ರಾಕೃತಿಕ ಸಮೃದ್ಧಿಯ ವಾಸ್ತವತೆ, ಕುವೆಂಪುರವರ ನಾಡಗೀತೆಯಲ್ಲಿನ ಕರ್ನಾಟಕ ಮಾತೆಯ ವರ್ಣನೆ. 'ಹಿಂದ್ ದೇಶ್‌ಕೀ ನಿವಾಸೀ ಸಬೀ ಜನ್ ಏಕ್ ಹೈ, ರಂಗ್ ರೂಪ್, ವೇಶ್ ಭಾಷಾ ಚಾಹೇ ಅನೇಕ್ ಹೈ' ಎಂಬ ಗೀತೆಯ ಸಾಲುಗಳೇ ಭಾರತದ ಭೌಗೋಳಿಕ ವೈವಿಧ್ಯಗಳಲ್ಲೂ 'ಐಕ್ಯ'ವಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಒಂದು ದೇಶ ಹಲವು ಭಾಷೆ ಕಲ್ಪನೆ ಹೇಗೆ ಸಾಧ್ಯವೋ, ಹಲವು ಭಾಷೆ ಒಂದು ದೇಶದ ಕಲ್ಪನೆ ಸಾಧ್ಯ. ಪ್ರಾದೇಶಿಕತೆಯು ತನ್ನ ನಾಡಿಗೆ ಕೊಡುವಷ್ಟೇ ಪ್ರಾಮುಖ್ಯವನ್ನು ಭಾಷೆಗೂ ಕೊಡುತ್ತದೆ. ವಸಾಹತು ಆಕ್ರಮಣಕ್ಕೆ ವಿರೋಧವಾಗಿ ತನ್ನ ಭಾಷೆ, ಸಂಸ್ಕೃತಿಯನ್ನು ಕಟ್ಟಿಕೊಳ್ಳುವಂತೆಯೇ ಪ್ರಾದೇಶಿಕವಾಗಿ ತನ್ನ ಭಾಷೆಯ ಕುರಿತಾದ ಕಾಳಜಿಯನ್ನು ವಹಿಸುತ್ತದೆ. ವಸಾಹತು ಭಾಷೆಯ ಸಬಲೀಕರಣ, ಪ್ರಾದೇಶಿಕ ಮೇಲಾದಾಗ ತನ್ನ ಸಂಸ್ಕೃತಿ ಶೋಧನೆಯ ಹಿನ್ನೆಲೆಯಲ್ಲಿ ಭಾಷೆಯನ್ನು ಮರುಸ್ಥಾಪಿಸುವ ಪ್ರಯತ್ನವನ್ನು 'ರಾಷ್ಟ್ರೀಯತೆ' ಮಾಡುತ್ತದೆ.

ಪ್ರಾದೇಶಿಕತೆಯ ವಾಗ್ವಾದದ ಸಂದರ್ಭದಲ್ಲಿ ರಾಷ್ಟ್ರೀಯತೆಯ ಹಿಂದೆ ಕಾಣಿಸಿಕೊಳ್ಳುವ ಮತ್ತೊಂದು ಮಹತ್ತರವಾದ ಅಂಶ 'ಸಂಸ್ಕೃತಿಯ ವೈಭವೀಕರಣ'. ಭಾರತೀಯ ಸಂಸ್ಕೃತಿ ಆಧ್ಯಾತ್ಮ ಸನಾತನ ಮೂಲವಾದದ್ದು. ಈ ಆಧ್ಯಾತ್ಮಿಕ ಅಂಶವೇ ಪ್ರಪಂಚದ ಹಲವಾರು ದೇಶಗಳನ್ನು ಪ್ರಭಾವಿತವಾಗಿಸಿದೆ. ಆದರೆ ವಸಾಹತು ಆಕ್ರಮಣದಿಂದ, ಆ ಸಂಸ್ಕೃತಿಯು ನಾಶವಾಗುತ್ತಿದ್ದು ಅದನ್ನು ಉಳಿಸಿ ಪುನರುಜ್ಜೀವನಗೊಳಿಸಬೇಕಾಗಿದೆ ಎಂಬ ವಾದಗಳು ಕೇಳಿ ಬರುತ್ತಲೇ ಸ್ಥಳೀಯ ಸಂಸ್ಕೃತಿ ಚಿಂತನೆ ಹುಟ್ಟುಹಾಕಲ್ಪಟ್ಟವು. ವಸಾಹತು ವಿರೋಧಿಯಾಗಿದ್ದ ಭಾರತೀಯ ಚಿಂತನೆಯಲ್ಲಿ ಗಡಿ, ಭಾಷೆಯ ವಿವಾದಗಳು ಕಾಣಿಸಿಕೊಂಡವು. ಇದು ಪ್ರಾದೇಶಿಕ ಸಂಸ್ಕೃತಿಯ ಹುಡುಕಾಟಕ್ಕೆ ಪ್ರೇರಣೆಯಾಯಿತು.

ಸಂಸ್ಕೃತಿಯ ಹುಡುಕಾಟದೊಂದಿಗೆ ನಾಡನ್ನು ಕಾಣುವ ದೃಷ್ಟಿಕೋನದಲ್ಲಿ ಬದಲಾವಣೆ

ಯಾಯಿತು. ಇಂಥವು ನಾಡುನುಡಿಗೆ ಅನ್ಯಾಯವಾದ ಸಂದರ್ಭದಲ್ಲಿ ಏಕತೆಗೆ ಧಕ್ಕೆ ಉಂಟುಮಾಡುವ ಸಂದರ್ಭಗಳನ್ನು ಪ್ರತಿಭಟಿಸುವುದು, ನಾಡಿನ ಸಂಸ್ಕೃತಿಯ ಕುರಿತ ಅಭಿಮಾನಗಳನ್ನು ಪ್ರಕಟಿಸಿದವು. ನಾಡಭೂಮಿಯನ್ನು (ಭಾರತ) ತಾಯಿ, ಮಾತೃಭೂಮಿ, ಪುಣ್ಯಭೂಮಿ ಎಂಬ ಸ್ತ್ರೀ ಕಲ್ಪನೆಯಿಂದ ಗುರುತಿಸಿ ಗೌರವ ನೀಡುವ ಪ್ರಕ್ರಿಯೆ ಪ್ರಾದೇಶಿಕತೆಯ ಸಂದರ್ಭದಲ್ಲಿ ಭುವನೇಶ್ವರಿ ದೇವಿ ಕನ್ನಡ ಮಾತೆ, ಕನ್ನಡ ತಾಯಿಯಾಗಿ ಅಭಿವ್ಯಕ್ತವಾಯಿತು.

ದೇಶಾಭಿಮಾನ, ಭಾರತೀಯತೆಯ ಕಲ್ಪನೆಯೊಂದಿಗೆ ಹುಟ್ಟಿಕೊಂಡ ಪ್ರಾದೇಶಿಕತೆಯು ರಾಜಕೀಯ ಆಶೋತ್ತರಗಳತ್ತ ತನ್ನ ಒಲವನ್ನು ಪ್ರಕಟಪಡಿಸಿತು. ಇದು ಆರ್ಥಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಾಂಸ್ಕೃತಿಕ ಪುನರುತ್ಥಾನ, ಭಾಷಾ ಬೆಳವಣಿಗೆಗಳಿಗೆ ಪ್ರೋತ್ಸಾಹ ನೀಡಿತು. ಇವುಗಳಿಗೆ ಅಡ್ಡಿಯಾಗುವ ಜಾತಿ, ಭಾಷೆ, ವರ್ಗ ತಾರತಮ್ಯಗಳ ವಿರುದ್ಧ ತನ್ನ ದೃಷ್ಟಿ ಹಾಯಿಸಿತು, ಪರಕೀಯ ಆಳ್ವಿಕೆಯ ವಿರುದ್ಧ ಇಡೀ ದೇಶವನ್ನು ಎಚ್ಚರಿಸುವ ಕೆಲಸ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿಯೇ, ಏಕೀಕರಣದಂತಹ ಒತ್ತಾಸೆಯೂ ಜೊತೆಗೂಡಿದಾಗ ಪ್ರಾದೇಶಿಕ ಹಾಗೂ ಭಾರತೀಯ ಸಂಸ್ಕೃತಿಯ ಅಭಿಮಾನಗಳು ಒಂದಾಗಿ ರಾಷ್ಟ್ರ ನಿರ್ಮಾಣಕ್ಕೆ ಪ್ರೇರಣೆಯಾಯಿತು. ಪರಿಣಾಮವಾಗಿ ದೇಶದ ಸ್ಥಿತಿ, ಪರಂಪರೆಯ ಬಗೆಗಿನ ಹೆಮ್ಮೆ, ಸಾಮಾಜಿಕ ಸುಧಾರಣೆ, ವಸಾಹತು ಆಡಳಿತದಿಂದ ಮುಕ್ತಿ – ಹೀಗೆ ಎಲ್ಲಾ ನೆಲೆಗಳಲ್ಲೂ ರಾಷ್ಟ್ರೀಯ ಪ್ರಜ್ಞೆ ದೃಢವಾಗಿ ಕಾಣಿಸಿಕೊಂಡಿವೆ.

೨.೩. ನುಡಿ – ಭಾಷೆಯ ಕುರಿತ ಪರಿಕಲ್ಪನೆ

ಭಾಷೆಯ ಮೂಲಕ ಪ್ರಕಟಗೊಳ್ಳುವ ಮತ್ತು ಸಂವಹನಗೊಳ್ಳುವ ಚಿಂತನೆಗಳು, ಅಭಿವ್ಯಕ್ತಿಸುವ ವೈಚಾರಿಕ ವಾಗ್ವಾದಗಳಿಗೆ ನಾನಾ ಮುಖಗಳಿದ್ದರೂ, ಅವುಗಳ ಆತ್ಯಂತಿಕ ಗುರಿ ಒಂದೇ ಆಗಿರುವಂತಿದೆ. ತನ್ನ ಅಸ್ಮಿತೆಯ ಮೂಲಕವೇ ಸಮಗ್ರ ಭಾರತದ ಚಹರೆಯನ್ನು ವಿಸ್ತರಿಸುವ ಕೆಲಸವನ್ನು ಮತ್ತು ಪ್ರಕಾರಗೊಳಿಸುವ ಇಂಗಿತವನ್ನು ಅನಾವರಣಗೊಳಿಸುತ್ತಲೇ ಬರುತ್ತವೆ. ಭಿನ್ನ ಭಿನ್ನ ಮನೋಧರ್ಮ ಮತ್ತು ನಿಲುವುಗಳಿಂದ ಪ್ರಭಾವಿತವಾದ ಚಿಂತನ ಕ್ರಮಗಳ ನಡುವೆ ಸಾಮಾನ್ಯವಾಗಿ ಚರ್ಚೆ, ವಾಗ್ವಾದ, ಸಂಘರ್ಷಗಳು ತಲೆದೋರುತ್ತಲೇ ಇರುತ್ತವೆ. ಇದು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿಯೂ 'ಗತ'ದ ಚರಿತ್ರೆಯನ್ನು ಪುನರ್ ವ್ಯಾಖ್ಯಾನ ಮಾಡುತ್ತಲೇ ಇರುತ್ತದೆ. ಈ ಒಡೆಯುವ ಮತ್ತು ಕಟ್ಟುವ ನೆಲೆಯಲ್ಲಿ "ವಿದ್ಯಾವಂತ ವರ್ಗವು ಬಳಸುವ ಭಾಷೆ ಅಧಿಕೃತ ಭಾಷೆಯಾಗಿ ರೂಪುಗೊಂಡಾಗ ಉಳಿದ ಭಾಷೆಗಳು ಸಹಜವಾಗಿಯೇ ಅದನ್ನು ಪ್ರತಿಭಟಿಸುತ್ತವೆ"[೮] ಈ ಪ್ರತಿಭಟನೆ ಪ್ರಾದೇಶಿಕತೆಯ ನೆಲೆಯಲ್ಲಿ ಭಾರತವನ್ನು ಮರುಸ್ಥಾಪಿಸುವ ಪ್ರಯತ್ನ ಮಾಡುತ್ತದೆ.

"ಕನ್ನಡಾಂತರ್ಗತಂ ತುಳುನಾಡು ನನ್ನದಿದು
ಭಾರತಾಂರ್ಗತಂ ಕನ್ನಡದ ಬದುಕು" (ಕಯ್ಯಾರ ಕಿಂಞಣ್ಣ ರೈ)

ಎಂಬುದು ಅಖಂಡ ಭಾರತದ ಕಲ್ಪನೆಯನ್ನು ಕಟ್ಟಿಕೊಡುತ್ತದೆ. ದಕ್ಷಿಣ ಕನ್ನಡದ ಚರಿತ್ರೆಯನ್ನು ಅವಲೋಕಿಸಿದಾಗ ಅದರ ಭೌಗೋಳಿಕ ರಚನೆ ಹಾಗೂ ರಾಜಕೀಯ ಬದಲಾವಣೆಗಳು ಅನ್ಯರ ಆಳ್ವಿಕೆಯ ಅಧೀನದಲ್ಲಿ ಪಲ್ಲಟಗೊಳ್ಳುತ್ತಾ ಬಂದಿವೆ. ಬೇರೆ ಬೇರೆ ರಾಜಾಡಳಿತದ ಕಾಲ ಕೊನೆಗೊಳ್ಳುತ್ತಲೇ ವಸಾಹತುಶಾಹಿಯ ಆಕ್ರಮಣಕ್ಕೂ ಒಳಗಾಯಿತು. ತುಂಡರಸರ ಆಳ್ವಿಕೆ ಇದ್ದರೂ ವಸಾಹತುಗಳ ಹಿಡಿತ ಭದ್ರವಾಗಿತ್ತು. ಇಂಥ ಸಂದರ್ಭಗಳಲ್ಲಿ ವಹಾಸತುಗಳ ಯಜಮಾನಿಕೆಯು ಅವರ ಭಾಷೆಯ ಮೂಲಕ ಹೆಚ್ಚು ಪರಿಣಾಮ ಬೀರತೊಡಗಿತು. ಆಂಗ್ಲ ಭಾಷೆಯ ಯಜಮಾನಿಕೆಯನ್ನು ವಿರೋಧಿಸಲು ಸ್ಥಳೀಯ ಭಾಷೆಗಳು ತಮ್ಮನ್ನು ಅನುಸಂಧಾನದ ಮಾದರಿಯಲ್ಲಿ ಸಿದ್ಧಪಡಿಸಿಕೊಂಡಿತು. ಈ ಉಳಿಸಿಕೊಳ್ಳುವಿಕೆ 'ರಾಷ್ಟ್ರೀಯತೆ' 'ಸ್ವಾತಂತ್ರ್ಯ'ವನ್ನು ಕಾಯ್ದುಕೊಳ್ಳುವ ಅಸ್ತ್ರವಾಗಿ ಬಳಕೆಯಾಯಿತು. "ಭಾಷೆಯೊಂದು ಬಲಿಷ್ಠವಾಗುವುದು ಅದರ ಭಾಷಿಕ ಜನಾಂಗ ರಾಜಕೀಯವಾಗಿ ಬಲವಾದಾಗ"[೯] ಎಂಬ ವ್ಯಾಖ್ಯಾನವು ಭಾಷೆಯೊಂದು ಅಸಮಾನತೆಯನ್ನು ಎದುರಿಸಲು ತನ್ನನ್ನು ಸಿದ್ಧಪಡಿಸಿಕೊಂಡಾಗ ಅದರ ಸಂಸ್ಕೃತಿ/ಸಾಂಸ್ಕೃತಿಕ ಪ್ರತಿಭೆ ಶಕ್ತಿಶಾಲಿಯಾಗುತ್ತದೆ ಎನ್ನುವುದೇ ಭಾಷೆಯನ್ನು ಉಳಿಸುವ 'ಸ್ವಾತಂತ್ರ್ಯ'ದ ಚಿಂತನೆಯಾಗುತ್ತದೆ.

'ಭಾರತ' ಎಂಬ ಅಖಂಡ ಕಲ್ಪನೆ ಬಹು ಹಿಂದೆಯೇ ಇತ್ತು ಎಂಬುದನ್ನು ಸ್ಥಾಪಿಸುವ ಪ್ರಯತ್ನವನ್ನು ಜಿ.ಎಸ್. ಶಿವರುದ್ರಪ್ಪನವರು ಮಾಡುತ್ತಾರೆ. "ರಾಷ್ಟ್ರ ಎಂಬ ಪದ ಅತ್ಯಂತ ಪ್ರಾಚೀನವಾದುದಾದರೂ 'ರಾಷ್ಟ್ರೀಯತೆ'ಯ ಕಲ್ಪನೆ ಆಧುನಿಕವಾದುದು. 'ರಾಷ್ಟ್ರೀಯತೆ' ಎಂಬ ಪದಕ್ಕೆ ನಾವು ಈ ದಿನ ಯಾವ ಪದ ಹಚ್ಚಿ ಮಾತನಾಡುತ್ತೇವೆಯೋ, ಆ ಅರ್ಥ ಬಹುಶಃ ಆ ಪದಕ್ಕೆ ಹಿಂದೆ ಇದ್ದಿರಲಿಲ್ಲವೆಂದು ತೋರುತ್ತದೆ. ಏಕೆಂದರೆ 'ರಾಷ್ಟ್ರೀಯತೆ' ಎಂಬ ಮಾತಿಗೆ ಇಂದು ರಾಜಕೀಯ ಅರ್ಥವ್ಯಾಪ್ತಿ ವಿಶಾಲವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಭಾರತೀಯರಲ್ಲಿದ್ದುದು 'ರಾಜಭಕ್ತಿ'ಯೇ ಹೊರತು 'ರಾಷ್ಟ್ರೀಯತೆ' ಅಲ್ಲ; ಸ್ವಾತಂತ್ರ್ಯ ಸಂಪಾದನೆಯ ಹೋರಾಟ ಆರಂಭವಾದಂದಿನಿಂದ ರಾಜಭಕ್ತಿಯು ರಾಷ್ಟ್ರೀಯತೆಯಾಗಿ ಬದಲಾವಣೆಯಾಯಿತು."[೧೦] ಇದನ್ನು ಸ್ಪಷ್ಟೀಕರಿಸುವುದಕ್ಕಾಗಿ 'ಛಪ್ಪನ್ನ', 'ಆಸೇತು ಹಿಮಾಚಲ' ಎಂಬೀ ಪದಗಳನ್ನು ಉದಾರಣೆಯಾಗಿ ನೀಡಿ ತಮ್ಮ ವಾದವನ್ನು ಮಂಡಿಸುತ್ತಾರೆ. ಆದರೆ ಭಾರತವು 'ಏಕೀಕೃತ' ಕಲ್ಪನೆಯಿಂದಿದ್ದರೂ ಪ್ರಾದೇಶಿಕ, ಭಾಷಿಕ, ರಾಜಕೀಯ, ಸಾಮಾಜಿಕವಾಗಿ, ವಿಂಗಡಣೆಯಾಗಿದ್ದಿತು. ವಸಾಹತುಗಳ ಆಗಮನವು ಭಾರತಕ್ಕೆ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಉತ್ಸುಕತೆಯನ್ನು ತೋರುತ್ತದೆ. "ಭಾಷೆಯ ಮೂಲಕ

ಭಾರತದ ಮೂಲವನ್ನು ಹುಡುಕಿದ ಪಾಶ್ಚಾತ್ಯರು ಸಂಸ್ಕೃತ ಭಾಷೆಯ ವೇದಗಳಲ್ಲಿ ಭಾರತದ ಸಂಸ್ಕೃತಿ ಅಡಗಿದೆ"[೧೧] ಎಂಬ ತರ್ಕವನ್ನು ಮುಂದಿಡುತ್ತಾರೆ. "ವಸಾಹತುವಿನ ಭಾಷೆ, ಶಿಕ್ಷಣದ ಮೂಲಕ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡ ಭಾರತೀಯ ವರ್ಗ ವಸಾಹತುವನ್ನು ವಿರೋಧಿಸುತ್ತಲೇ ತನ್ನನ್ನು ಪುನರ್‌ಸ್ಥಾಪಿಸುವ ಪ್ರಯತ್ನ ಮಾಡಿರುವುದನ್ನು ಚರಿತ್ರೆಗಳು ನಿರೂಪಿಸುತ್ತವೆ."[೧೨]

ಆದರೆ ಈ ರೀತಿಯ ಒಗ್ಗಟ್ಟು ಪ್ರಾದೇಶಿಕ ಭಾಷೆ, ಸಂಸ್ಕೃತಿಗಳನ್ನು ಅಮುಖ್ಯಗೊಳಿಸಿತು. ಕರ್ನಾಟಕ ಏಕೀಕರಣದಂತಹ ಚಳುವಳಿಗೆ ಇದು ತನ್ನನ್ನು ಹೊಂದಿಸಿಕೊಳ್ಳದಿದ್ದಾಗ ಕನ್ನಡ ಭಾಷೆ (ಪ್ರಾದೇಶಿಕ) ತನ್ನ ಚರಿತ್ರೆಯನ್ನು ಕಟ್ಟುವ ಕ್ರಿಯೆಗೆ ತೊಡಗಿತು. ಆಲೂರು ವೆಂಕಟರಾಯರ 'ಕರ್ನಾಟಕದ ಗತವೈಭವ', 'ಕರ್ನಾಟಕತ್ವದ ವಿಕಾಸ' ಕೃತಿಗಳು ಪ್ರಾದೇಶಿಕ ಹಿನ್ನೆಲೆಯಲ್ಲಿ ಭಾರತೀಯತೆಯನ್ನು ನಿರೂಪಿಸುವ ಕೃತಿಗಳಾಗಿ ಗುರುತಿಸಲಾಗಿರುವುದನ್ನು ಇಲ್ಲಿ ನೆನೆಯಬಹುದು. ಹೀಗೆ "ಪ್ರಾದೇಶಿಕ ಎನ್ನುವ ಪ್ರತ್ಯಪ್ರತ್ಯೇಕ ಅಸ್ಮಿತೆಯನ್ನು ನಿರೂಪಿಸುತ್ತಾ 'ಭಾರತೀಯ' ಎನ್ನುವ 'ಏಕರೂಪೀ' ಸಂಸ್ಕೃತಿಯನ್ನು ಸಮರ್ಥಿಸುತ್ತಾ, ವಿದೇಶೀ ಸಂಸ್ಕೃತಿಯ ವಿರೋಧವಾಗಿ, ಸ್ವದೇಶಿಯನ್ನು ಸಮರ್ಥಿಸುವ ರೀತಿಯಲ್ಲಿ ರಾಷ್ಟ್ರೀಯತೆ ವ್ಯಕ್ತವಾಗುತ್ತದೆ.

'ರಾಷ್ಟ್ರೀಯತೆ'ಯನ್ನು ಪರಿಕಲ್ಪಿಸುವುದರ ಹಿನ್ನೆಲೆಯಲ್ಲಿ ಭಾಷಾ ಸಂಸ್ಕೃತಿಯೊಂದು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ. ನಿರಾಕಾರವಾದ ಭಾಷೆಯನ್ನು ಒಂದು ಗುರುತಾಗಿ ಪರಿವರ್ತಿಸಲು ಪ್ರಯತ್ನಿಸುವುದು ಹಾಗೂ ತನ್ನ ಗಡಿಯಾಚೆಗಿನದನ್ನು 'ಅನ್ಯ'ವೆಂದು ಗುರುತಿಸುವುದು. ಹೀಗೆ ವ್ಯಕ್ತಿವಾಚಿಯಾಗಿ ತನ್ನನ್ನು ಗುರುತಿಸಿಕೊಳ್ಳುವುದಲ್ಲದೆ ದೇಶವಾಚಿಯಾಗಿ ತನ್ನನ್ನು ಸ್ಥಾಪಿಸುವ ಪ್ರಯತ್ನವನ್ನು ಭಾಷೆ ಮಾಡುತ್ತದೆ. ಕನ್ನಡಿಗ, ಕರ್ನಾಟಕ ಎಂಬ ವ್ಯಕ್ತಿವಾಚಿ, ದೇಶವಾಚಿಗಳನ್ನು ಇಲ್ಲಿ ಉಲ್ಲೇಖಿಸುವುದರೊಂದಿಗೆ ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಕೇರಳ ಹೀಗೆ ಗಡಿಪ್ರದೇಶದ ಉಳಿದ ಭಾಷೆಗಳಿಗೆ ಅನ್ಯ ಚೌಕಟ್ಟನ್ನು ಗುರುತಿಸುವ ಪ್ರಕ್ರಿಯೆ ಇದೆ."[೧೩]

ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡ 'ರಾಷ್ಟ್ರ' ಕಲ್ಪನೆಯು ಭಾಷೆಯನ್ನು "ತಾಯಿ, ಪಾಲಕಿ, ಮಾತೆ ಎಂಬ ಲಿಂಗವಾಚಿ ಪದವಾಗಿ ಗುರುತಿಸುವ ಬಗೆ ('ಸ್ತ್ರೀ' ಎಂಬ ಪಾರಂಪರಿಕ ಕಲ್ಪನೆ ಮತ್ತು ಗೌರವ)ಯನ್ನು ಕಾಣಬಹುದು."[೧೪] ಪ್ರಾದೇಶಿಕವಾಗಿ ಮಾತೃದೇವತೆ, ನಾಡಮಾತೆ ಎಂದು ಕರೆಯಲ್ಪಡುವ ಆಕೆ ರಾಷ್ಟ್ರದ ಸಂದರ್ಭದಲ್ಲಿ ಭುವನೇಶ್ವರಿ, ರಾಜರಾಜೇಶ್ವರಿಯಾಗಿ ಮೆರೆಯುವುದು ಭಾಷೆಯ ಹೆಸರಿನಲ್ಲಿ ನಡೆಯುವ ಉತ್ಸವ, ಸಂಸ್ಕೃತಿ ಚಿಂತನೆ, ಮೆರವಣಿಗೆ ಇತ್ಯಾದಿಗಳು ಭಾಷೆಯ ಹಿಂದಿನ ದೇಶಾಭಿಮಾನವಾಗಿ ಗುರುತಿಸಲ್ಪಟ್ಟಿವೆ.

"ನಿರ್ವಸಾಹತೀಕರಣದ ಪ್ರಕ್ರಿಯೆ ಆರಂಭಗೊಂಡಾಗ ವಸಾಹತೀಕರಣದ ಹಿಂಸಾ

ಪ್ರಕ್ರಿಯೆಗಳು ದಬ್ಬಾಳಿಕೆ, ಜೀವಹರಣ ಇತ್ಯಾದಿ ಅಂಶಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಪರಕೀಯ ಶಿಕ್ಷಣದ ಮೂಲಕವೇ ಪರಕೀಯ ಸಂಸ್ಕೃತಿ ಶ್ರೇಷ್ಠ ಎಂಬ ಆಂತರ್ಯದ ಅರಿವಿನಿಂದ ರಾಷ್ಟ್ರ, ರಾಷ್ಟ್ರ ಪ್ರಜ್ಞೆ ಆರಂಭಗೊಳ್ಳುತ್ತದೆ.''[೧೫]

ಅಂದರೆ ವಿದೇಶೀ ಶಿಕ್ಷಣದ ಸಹಾಯದಿಂದಲೇ ತಮ್ಮತನವನ್ನು ಅರಿತು ನಿರ್ವಸಾಹತೀಕರಣದತ್ತ ಮುನ್ನುಗ್ಗುವ ರಾಷ್ಟ್ರೀಯತೆಯ ಪ್ರಜ್ಞೆ ಭಾರತೀಯರಲ್ಲಿದೆ. ಈ ಸಮಸ್ಯಾತ್ಮಕ ಚಿಂತನೆಯನ್ನು ಮತ್ತಷ್ಟೂ ಪರಿಶೀಲನೆಗೊಳಪಡಿಸಿದಾಗ, ಪ್ರಾದೇಶಿಕ ಉಪಭಾಷೆಗಳ ನಡುವಿನ ಸಂಘರ್ಷದಲ್ಲಿ 'ಪ್ರಾಂತೀಯ' ಏಕತೆಯನ್ನು ಕಂಡುಕೊಳ್ಳುವ ಪ್ರಕ್ರಿಯೆ ಹೇಗೆ? ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಹೀಗೆ ವಸಾಹತು ಪೂರ್ವದ ಅರಸರ ಆಳ್ವಿಕೆ ಹಾಗೂ ೧೯ನೇ ಶತಮಾನದ ವಸಾಹತು ಆಳ್ವಿಕೆಗೆ ವಿರುದ್ಧವಾಗಿ ಪ್ರದೇಶವೊಂದು ತನ್ನನ್ನು ಭಾಷೆಯ ಮೂಲಕ 'ರಾಷ್ಟ್ರ'ವಾಗಿ ಕಲ್ಪಿಸುವ ಬಗೆ ಹೇಗೆ? ತನ್ನ ಅಸ್ತಿತ್ವವನ್ನೇ ಅಲುಗಾಡುವಂತೆ ಮಾಡಿದ ಆ ಪ್ರಕ್ರಿಯೆಗೆ ತೋರಿಬಂದ ಪ್ರಾದೇಶಿಕ ಪ್ರಕ್ರಿಯೆ ಯಾವ ಬಗೆಯದು? ಎಂಬುದನ್ನು ಚರ್ಚಿಸಿದಾಗ 'ರಾಷ್ಟ್ರೀಯತೆ'ಯ ಹಿಂದಿನ ಕಾಳಜಿ, 'ಸ್ವಾತಂತ್ರ್ಯ'ದ ಕಲ್ಪನೆಯನ್ನು ವಿಸ್ತೃತಗೊಳಿಸುತ್ತದೆ.

ವಸಾಹತೋತ್ತರ ಸಂದರ್ಭದಲ್ಲಿ ರಾಜಕೀಯ ಪರಿಸ್ಥಿತಿಯ ಬದಲಾವಣೆಯಿಂದ ಸಮಾಜವನ್ನು ನೋಡುವ ದೃಷ್ಟಿಕೋನವೂ ಭಿನ್ನವಾಗಿದೆ. ಈವರೆಗೆ ತನ್ನನ್ನು ಶೋಷಿಸುತ್ತಿರುವ ಶಕ್ತಿಗೆ ವಿರೋಧವಾಗಿ 'ಸ್ವಾತಂತ್ರ್ಯ' ವ್ಯಕ್ತಗೊಂಡರೆ, ಪರಿಸ್ಥಿತಿಯ ಬದಲಾವಣೆಯೊಂದಿಗೆ ತನ್ನನ್ನು ಗುರುತಿಸಿಕೊಳ್ಳತೊಡಗಿದೆ. ಆ ಸಂದರ್ಭದಲ್ಲಿ 'ರಾಷ್ಟ್ರ'ಕ್ಕಿಂತ ಭಿನ್ನವಾದ; 'ಸಾಮೂಹಿಕತ್ವ'ಕ್ಕಿಂತ ಭಿನ್ನವಾದ 'ವ್ಯಕ್ತಿಕೇಂದ್ರಿತ' ಶೋಧನೆಯಾಗಿ ರಾಷ್ಟ್ರೀಯತೆ ಪರಿವರ್ತನೆಗೊಳ್ಳುತ್ತದೆ. ಮಾರ್ಕ್ಸ್‌ವಾದೀ ಚಿಂತನೆಯ ಆಧಾರದಲ್ಲಿ ಸಾಮೂಹಿಕ ಚಳುವಳಿಯಾಗಿಯೂ, ವ್ಯಕ್ತಿವಾದೀ ಚಿಂತನೆಯಲ್ಲಿ ಮಾನಸಿಕ ಸಂಘರ್ಷವನ್ನೂ ರಾಷ್ಟ್ರೀಯತೆ ಪ್ರತಿಬಿಂಬಿಸುತ್ತದೆ. ಸಮೂಹ ಮತ್ತು ವ್ಯಕ್ತಿ ಸಂಘರ್ಷಗಳು ಪ್ರಕಟಗೊಳ್ಳುವುದಕ್ಕೆ ಭಾಷೆಯೊಂದು ಪ್ರಬಲ ಮಾಧ್ಯಮವಾಗುತ್ತದೆ. ತಾನು ಕಂಡು ಅನುಭವಿಸಿದ ಗತವೊಂದಿದ್ದು, ಅದನ್ನು ಭಾಷೆಯ ಮೂಲಕ ಮರುಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ಮರುಸ್ಥಾಪನೆಯ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆಯನ್ನು ಸ್ವೀಕರಿಸುವುದರೊಂದಿಗೆ, ತನ್ನ ಉಪಭಾಷೆಗಳನ್ನೂ ತನ್ನಲ್ಲಿ ಗಟ್ಟಿಗೊಳಿಸುವುದಕ್ಕೆ ತನ್ನನ್ನು ಸುದೃಢಗೊಳಿಸುತ್ತದೆ. ಆ ಸಿದ್ಧತೆಯೇ ವ್ಯಕ್ತಿ ಸ್ವಾತಂತ್ರ್ಯವನ್ನು ಗಳಿಸುವ ಹಂಬಲವಾಗುತ್ತದೆ. ವಸಾಹಹತುವಿನ ಭಾಷೆಯನ್ನು ಸ್ವೀಕರಿಸಿ, ಅನುಸಂಧಾನದ ರೀತಿಯಲ್ಲಿ ದೇಶೀ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನ ನಡೆಸಿ ಅದರೊಂದಿಗೆಯೇ ರಾಷ್ಟ್ರವನ್ನು ಕಟ್ಟುವ, ನಾಡು-ನುಡಿಯ ಚಿಂತನೆಯನ್ನು ನಡೆಸುತ್ತದೆ.

೨.೪. ಸಮಾಜ - ಜಾತಿ - ವರ್ಗದ ಕುರಿತ ಚಿಂತನೆ

ನಾಡು-ನುಡಿಯ ಚಿಂತನೆಯೊಂದಿಗೆ 'ರಾಷ್ಟ್ರೀಯತೆ'ಯನ್ನು ಗುರುತಿಸುವುದು ಒಂದು ರೀತಿಯಾದರೆ ಸಮಾಜದಲ್ಲಿರುವ ಜಾತಿ, ವರ್ಗ ಕುರಿತ ಆಲೋಚನೆ ಈ ಪರಿಕಲ್ಪನೆಯನ್ನು ವಿಸ್ತೃತಗೊಳಿಸುತ್ತದೆ. ''ಯಾಕೆಂದರೆ ಅತ್ಯಂತ ದೊಡ್ಡ ರಾಷ್ಟ್ರವೂ ಗಡಿರೇಖೆ, ಜನ ಜನಾಂಗಗಳ ಮಟ್ಟಿಗೆ ಒಂದು ಅಂತಿಮತೆಯ ಕಲ್ಪನೆಯನ್ನು ಹೊಂದಿರುತ್ತದೆ. ಅದು ಒಂದು ಸಮುದಾಯವಾಗಿರುತ್ತದೆ. ಯಾಕೆಂದರೆ ಜಾತಿ, ವರ್ಗ, ಪ್ರದೇಶ, ಜನಾಂಗಗಳ ನಡುವಣ ಅಸಮಾನತೆಯ ನಡುವೆಯೂ ಆಳವಾದ ಸಂಗಾತಿತನವನ್ನು ರಾಷ್ಟ್ರವು ಪ್ರತಿನಿಧಿಸುತ್ತದೆ.''[೧೬] ಸ್ವಾತಂತ್ರ್ಯ, ಏಕತೆಯನ್ನು ಸಾಧಿಸುವುದು ರಾಷ್ಟ್ರೀಯತೆಯ ಒತ್ತಾಸೆಯಾಗಿದ್ದುದರಿಂದ ಸಮಾಜವನ್ನು ಆವರಿಸಿಕೊಂಡಿದ್ದ ಭಾಷೆ, ಪ್ರಾಂತ್ಯ, ಪಂಥ, ಜಾತಿ ಎಂಬೀ ನೂರಾರು ಭೇದಗಳಿಂದ ಮೇಲೆದ್ದು ಬರಬೇಕಾದ ಅನಿವಾರ್ಯವಿತ್ತು. ಈ ಭಿನ್ನತೆಯನ್ನು ಹೋಗಲಾಡಿಸಲು 'ಸಮಸ್ತ' ಭೂಖಂಡವಾಗಿ ಚಿಂತಿಸತೊಡಗಿದರು. ''ಜನಸಮುದಾವೆಂದಾಗ ಅಸ್ಪೃಶ್ಯರೂ, ಪಾನಮತ್ತರೂ, ದುಷ್ಕರ್ಮಿಗಳು, ವೇಶ್ಯೆಯರೂ ಸಹಾ ಸೇರುತ್ತಾರೆ''[೧೭] (ಮಹಾತ್ಮಾ ಗಾಂಧಿ) ''ರಾಷ್ಟ್ರವನ್ನು ಕಟ್ಟುವ ಕಾರ್ಯಕ್ರಮವೆಂದರೆ ಅದರ ಯಾವುದೇ ಭಾಗವು ಅದರ ವ್ಯಾಪ್ತಿಯಿಂದ ಬಿಟ್ಟು ಹೋಗಬಾರದು. ಪ್ರಾಂತ್ಯ, ನಗರ, ಜಾತಿ ಹಾಗೂ ಇನ್ಯಾವುದೇ ರೀತಿ ಯೋಚಿಸದೆ ಸಮಸ್ತ ಭೂಖಂಡವಾಗಿ ಚಿಂತಿಸಬೇಕು''[೧೮] ಎಂಬ ಅಭಿಪ್ರಾಯವು ಸಮಾಜದ ಸ್ಪಷ್ಟ ಕಲ್ಪನೆಯೊಂದಿಗೆ ರಾಷ್ಟ್ರೀಯ 'ಏಕತೆ'ಯನ್ನು ನಿರೂಪಿಸುತ್ತದೆ. ಆದರೆ ಅಸಂಖ್ಯಾತ ಕೋಮುಗಳಾಗಿ ವಿಭಾಗಗೊಂಡ 'ಭಾರತೀಯತೆ'ಯು ಅಖಂಡವಾಗದ ಸ್ಥಿತಿಯಲ್ಲಿದ್ದು ಭೌತಿಕ, ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವಿಭಿನ್ನತೆಗಳು ಅವರನ್ನು ಬೆಸೆಯುವಲ್ಲಿ ಅಡ್ಡಿಯನ್ನುಂಟು ಮಾಡಿದವು. ಈ ಅಡ್ಡಿಯನ್ನು ಹೋಗಲಾಡಿಸಲು ಸಮಾಜವನ್ನು ಆವರಿಸಿಕೊಂಡಿದ್ದ ಪ್ರಾಂತ, ಭಾಷೆ, ಪಂಥ, ಜಾತಿ ಮುಂತಾದ ಭೇದಗಳನ್ನು ಇಲ್ಲವಾಗಿಸಿ ರಾಷ್ಟ್ರೀಯ 'ಐಕ್ಯ' ಸಾಧನೆಯನ್ನು ಮಾಡಲು ಭಾರತದ ಸಂಸ್ಕೃತಿಯು ಪರಂಪರೆ, ಗತದ ಕಡೆಗೆ ದೃಷ್ಟಿ ಹಾಯಿಸಿತು. ಈ ದೃಷ್ಟಿಕೋನದಲ್ಲಿ ''ಭಾರತದ 'ರಾಷ್ಟ್ರೀಯತೆ' ಎನ್ನುವುದು ಪರಂಪರೆಯ ನೆನಪುಗಳ ಪುನರ್ ಸಂಘಟನೆ''[೧೯] ಆದರೆ ಪರಂಪರೆಯ ಜೊತೆಗೆ ಆಧುನಿಕತೆಯನ್ನು ಮೈಗೂಡಿಸಿಕೊಂಡು ಬೆಳೆಯುವುದು ಇತ್ತೀಚಿನ ಪ್ರಕ್ರಿಯೆ ಹಾಗೂ ಅದು ಭಾಷೆ, ಸಂಸ್ಕೃತಿ, ಧರ್ಮಗಳ ಪುನರ್ ಸಂಘಟನೆಯಾಗುತ್ತದೆ.

ರಾಷ್ಟ್ರ, ರಾಷ್ಟ್ರೀಯತೆ ಎನ್ನುವುದು ಪರಂಪರೆಯನ್ನು ಪುನರ್ ಸಂಘಟಿಸುವ ಕೆಲಸವಾದದ್ದರಿಂದ ಗತ, ವರ್ತಮಾನ, ಭವಿಷ್ಯ ಎಂಬೀ ಮೂರು ಅಂಶಗಳ ಆಧಾರದಲ್ಲಿ ಗಮನಿಸಬೇಕಾಗಿದೆ. ಏಕೆಂದರೆ ಗತವು ಉತ್ತಮ ಪರಂಪರೆ ಇತ್ತು ಎನ್ನುವುದನ್ನು ಸ್ಥಿರೀಕರಿಸಿದರೆ, ವರ್ತಮಾನವು ಆ ಪರಂಪರೆ

ನಶಿಸುವುದನ್ನು, ಉಳಿಸುವ; ಭವಿಷ್ಯದಲ್ಲಿ ಮರುಸೃಷ್ಟಿಸುವ ಕೆಲಸವನ್ನು ಮಾಡುತ್ತದೆ. (ಈ ಮರುಸೃಷ್ಟಿಯ ಪ್ರಕ್ರಿಯೆ ಕಾವ್ಯ, ವಿಮರ್ಶೆ, ಕಾದಂಬರಿ ಹೀಗೆ ಯಾವುದೇ ಅಭಿವ್ಯಕ್ತಿ ಪ್ರಕಾರಗಳಲ್ಲಿ ಗುರುತಿಸಬಹುದು.) 'ಮೊದಲಿಗೆ ರಾಷ್ಟ್ರೀಯ ಸಮಾಜದ ಪ್ರಗತಿಯ ಬಗ್ಗೆ ಗಾಢ ಉತ್ಸಾಹವನ್ನು ಆಶಾವಾದವನ್ನು 'ರಾಷ್ಟ್ರೀಯತೆ' ತುಂಬುತ್ತದಾದರೂ ಪರಕೀಯ ಆಳ್ವಿಕೆ ಇರುವಂಥ ದೇಶಗಳಲ್ಲಿ ಅದು ಬೇರೆ ಬಗೆಯ ಕೆಲವು ಸಾಮಾಜಿಕ ಮೌಲ್ಯಗಳನ್ನು ಕಲಿಸಿಕೊಡುತ್ತದೆ. ಪರಕೀಯರ ಆಳ್ವಿಕೆ ಇರುವಂಥ ದೇಶಗಳಲ್ಲಿ ಇಡೀ ನಾಡನ್ನೇ ಒಗ್ಗಟ್ಟಾಗಿಸುವ ಕೆಲಸವನ್ನು ರಾಷ್ಟ್ರೀಯತೆ ಮಾಡುತ್ತದೆ.''[೨೦] ಒಗ್ಗಟ್ಟು ಏಕತೆಯ ಮೂಲಕ ಇಡೀ ನಾಡನ್ನೇ ಸಿದ್ಧಗೊಳಿಸುತ್ತದೆ. ಆದರೆ ಜಾತಿಪದ್ಧತಿ, ಮೂಢನಂಬಿಕೆ, ಲಿಂಗ ತಾರತಮ್ಯ, ಅನಕ್ಷರತೆ, ಕಂದಾಚಾರಗಳು ಈ ರೀತಿಯ ಏಕತೆಯನ್ನು ಛಿದ್ರಗೊಳಿಸುವವು. ಈ ಛಿದ್ರೀಕರಣವನ್ನು ಒಂದಾಗಿಸುವಲ್ಲಿ ವಸಾಹತು ವಿರುದ್ಧದ ಹೋರಾಟ ಪ್ರಕ್ರಿಯೆ ಆರಂಭವಾಯಿತು. ಈ ಹೋರಾಟದ ಫಲವೇ ''ಬಹುಪಾಲು ಜನತೆಯನ್ನು ವ್ಯಾಪಿಸಿರುವ ಮನೋಸ್ಥಿತಿ.''[೨೧] ಹಾಗಾಗಿ ರಾಷ್ಟ್ರೀಯತೆಗೆ ತೊಡಕಾಗಿರುವ ಜಾತಿಪದ್ಧತಿಯಿಂದ ಸಾಮೂಹಿಕ ಛಿದ್ರೀಕರಣ ನಡೆಯುತ್ತಿದ್ದು ಅವುಗಳನ್ನು ಒಗ್ಗೂಡಿಸುವ ಕೆಲಸವನ್ನು ರಾಷ್ಟ್ರೀಯತೆ ಮಾಡುತ್ತದೆ.

ದಕ್ಷಿಣ ಕನ್ನಡದ ಸಂದರ್ಭದಲ್ಲಿ ಜಾತಿ-ವರ್ಗದ ಚಿಂತನೆ, ದಲಿತೋದ್ಧಾರ, ಮಹಿಳಾ ಸಬಲೀಕರಣ, ಶೈಕ್ಷಣಿಕ ಔನ್ನತ್ಯಗಳಂತಹ ವಿಚಾರಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಚಿಂತನೆಯಿರುವುದನ್ನು ಗಮನಿಸಬೇಕು. ಅಂಬೇಡ್ಕರ್ ಅವರು ಗುರುತಿಸಿದ 'ಸಮಾಜ'ವನ್ನು ಕಲ್ಪಿಸಿದಾಗ 'ಸ್ವಾತಂತ್ರ್ಯ'ವು ವ್ಯಕ್ತಿ ಶೋಧನೆಯ ಹಿನ್ನೆಲೆಯಲ್ಲಿ ಸಾಮೂಹಿಕ ಐಕ್ಯ ಸಾಧಿಸಲು ಯತ್ನಿಸಿರುವುದನ್ನು ಕಾಣಬಹುದು. ಚರಿತ್ರೆ ನಿರೂಪಿಸಿರುವ ರಾಷ್ಟ್ರದ 'ಸಮಾಜ' ಕಲ್ಪನೆಯು ಬೇರೆ ಬೇರೆ ನೆಲೆಗಳಲ್ಲಿ ತನ್ನೊಳಗಿನ ಆಂತರಿಕ ವೈರುಧ್ಯಗಳನ್ನು ಶೋಧಿಸಿ ತನ್ನನ್ನು ಮರುಸ್ಥಾಪಿಸುವ ಪ್ರಯತ್ನಕ್ಕೆ ಮುಂದಾಗಿದೆ. ಗಾಂಧೀಜಿ, ತಿಲಕ್, ಸ್ವಾಮೀ ವಿವೇಕಾನಂದ, ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ ಮುಂತಾದವರ ಚಿಂತನೆಗಳು ಸಮೂಜ 'ರಾಷ್ಟ್ರ'ದ ಕಲ್ಪನೆಯನ್ನು ನಿರೂಪಿಸುತ್ತವೆ. 'ಸತ್ಯಾಗ್ರಹಿ'ಯ ಕಲ್ಪನೆಯನ್ನಿಟ್ಟು ವ್ಯಕ್ತಿ ಕೇಂದ್ರಿತ ''ಮನುಷ್ಯ ಮತ್ತು ಸಮಾಜವನ್ನು ಸಂಘರ್ಷಾತ್ಮಕ ಪ್ರತೀಕವಾಗಿ''[೨೨] ಕಾಣುತ್ತಾರೆ. 'ಸ್ವರಾಜ್ಯ'ದ ಕನಸು ನನಸಾಗಬೇಕಾದರೆ ಗುಲಾಮಗಿರಿ ಅಂತ್ಯವಾಗಬೇಕು. ಅಸ್ಪೃಶ್ಯತೆ ನಾಶವಾಗಬೇಕು. ಅಸ್ಪೃಶ್ಯರೊಳಗೂ ಅಸ್ಪೃಶ್ಯತೆಯ ಆಚರಣೆ ಇದೆ ಎಂದು ಹೇಳಿದ ಗಾಂಧೀಜಿಯವರು ಮಾನವನಲ್ಲಿರುವ ಅಪಾವಿತ್ರ್ಯದ ವಿರುದ್ಧ ಹೋರಾಡುವುದೇ ಅಸ್ಪೃಶ್ಯತಾ ನಿವಾರಣೆ. ಇದು ನಿವಾರಣೆಯಾಗುವವರೆಗೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಘರ್ಷಗಳು ನಡೆಯುತ್ತಲೇ ಇರುತ್ತವೆ ಎಂದರು. ಗಾಂಧೀಜಿಯವರ ಅಸ್ಪೃಶ್ಯತಾ

ಆಂದೋಲನವು ದಕ್ಷಿಣ ಕನ್ನಡದಲ್ಲಿ ಹರಿಜನೋದ್ಧಾರದ ನಿಟ್ಟಿನಲ್ಲಿ ಬೆಳೆಯಿತು. ಕುದ್ಮಲ್ ರಂಗರಾಯ, ಕಾರ್ನಾಡ್ ಸದಾಶಿವರಾಯರು, ಹರಿಜನೋದ್ಧಾರ ಕಾರ್ಯಗಳನ್ನೂ,[೨೩] ಕಮಲಾದೇವಿ ಚಟೋಪಾಧ್ಯಾಯ, ಲಕ್ಷ್ಮೀಬಾಯಿ ಪುತ್ತೂರು, ಮೀನಾಕ್ಷಿ ಮಂಗಳೂರು ಮುಂತಾದವರು ಸ್ವಾತಂತ್ರ್ಯ ಹೋರಾಟದ ಭಾಗವಾಗಿ''[೨೪] ನಾನಾ ಕಾರ್ಯಗಳನ್ನು ಮಾಡತೊಡಗಿದರು, ಸವರ್ಣೀಯ ಹಿಂದುಗಳಿಂದಲೇ ನಡೆಯುತ್ತಿದ್ದ ಸಾಮಾಜಿಕ ಅಸಮಾನತೆಯಿಂದ ಹೊರಬರುವಂತೆ ಹರಿಜನರಿಗೆ ಪ್ರೇರಕರಾದರು.[೨೫] ಬಾಲ್ಯವಿವಾಹ, ವಿಧವಾ ಸಮಸ್ಯೆ, ಸ್ತ್ರೀ ಸಮಸ್ಯೆ, ಹರಿಜನರಿಗೆ ಶಿಕ್ಷಣ ಈ ಎಲ್ಲ ಸಮಸ್ಯೆಗಳತ್ತ ಗಮನಹರಿಸಿದರು. ಆದರೆ ''ಗಾಂಧೀಜಿಯವರ ಅಸ್ಪೃಶ್ಯತಾ ಚಳುವಳಿಗೆ ಪೂರ್ವಭಾವಿಯಾಗಿಯೇ ಕುದ್ಮಲ್ ರಂಗರಾಯರ ಹರಿಜನೋದ್ಧಾರ ಕಾರ್ಯ ಆರಂಭ ವಾಗಿತ್ತು.''[೨೬] ಎಂಬುದನ್ನು ದಿನೇಶ್ ನಾಯ್ಕ ಅವರು ಗುರುತಿಸುತ್ತಾರೆ. ಈ ರೀತಿ ಪ್ರಬಲ ವರ್ಗದವರನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಇಲ್ಲಿನ ರಾಷ್ಟ್ರೀಯತೆ ವ್ಯಕ್ತಗೊಳ್ಳುತ್ತದೆ.

''ಆದಿಬ್ರಾಹ್ಮಣನನೇನು? ಮಾದಿಗ ಹೊಲೆಯನೇನು?
ಸೋದರರು ನಾವೊಂದೆ ಧರೆಯ ಸಂತಾನಂ''

(ಹೊಲೆಯನ ಹಂಬಲ : ಎಂ.ಎನ್. ಕಾಮತ್)

ಎಂಬ ಧೋರಣೆಯನ್ನು ವ್ಯಕ್ತಪಡಿಸುತ್ತಾ ಹೊರಹಾಕಲ್ಪಟ್ಟ ಸಾಮಾಜಿಕ ವಲಯದಲ್ಲಿ ತನ್ನನ್ನು ಶೋಧಿಸುವ ರೀತಿಯಲ್ಲಿ ಸ್ವಾತಂತ್ರ್ಯದ ಬಯಕೆಯನ್ನು ಕಾಣಬಹುದು. ಈ ಹಂಬಲಕ್ಕೆ ಪ್ರೇರಣೆಯಾದದ್ದು ವಸಾಹತುಶಾಹಿ ಆಡಳಿತ ಕಾಲದಲ್ಲಿ ಹುಟ್ಟಿಕೊಂಡ ಸಾಮಾಜಿಕ ಸಂಸ್ಥೆಗಳು, ಬ್ರಹ್ಮ ಸಮಾಜದ ಮೂಲಕ ರಾಜಾರಾಮ್ ಮೋಹನ್‌ರಾಯ್ ಪಶ್ಚಿಮದ ಸ್ವಯಂ ತಂತ್ರವಾದಿ''[೨೭] ನೆಲೆಯಲ್ಲಿ ನಿರೂಪಿಸಿದ ವ್ಯಕ್ತಿ ಶೋಧನೆಯ ಅಂಶಗಳು ಸಾಮಾಜಿಕ ಅಸಮಾನತೆಯಿಂದ ಹೊರಬರಲು ಪ್ರೇರಣೆಯಾಯಿತು. ಶತಮಾನಗಳಿಂದ ನೆಲೆಯೂರಿರುವ ಸಾಮಾಜಿಕ ಪಿಡುಗುಗಳಾದ ಸತಿಸಹಗಮನ, ಬಾಲ್ಯವಿವಾಹಗಳ ನಿರಾಕರಣೆಯೊಂದಿಗೆ ಸ್ತ್ರೀಶಿಕ್ಷಣ, ಜಾತಿಪದ್ಧತಿ ವಿರೋಧ ಮೊದಲಾದ ಪ್ರಗತಿಪರ ಅಂಶಗಳು ನೆಲೆಯೂರ ತೊಡಗಿದಾಗ ಸಹಜವಾಗಿ ಅದರ ಕುರುಹುಗಳು ರಾಷ್ಟ್ರೀಯತೆಯ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಂಡಿತು. ರಾಜಾರಾಮ್ ಮೋಹನ್‌ರಾಯರು, ದಯಾನಂದ ಸರಸ್ವತಿ, ವೇದ, ಉಪನಿಷತ್ತುಗಳ ಮೂಲಕ ಭಾರತೀಯ ಸಮಾಜವನ್ನು ಶೋಧಿಸುತ್ತಾ ಭಾರತೀಯ ಸಂಸ್ಕೃತಿಯ ಮಹತ್ವವನ್ನು ಸಾರತೊಡಗಿದರು. ''ದಕ್ಷಿಣ ಕನ್ನಡಕ್ಕೆ ಸೇರಿದ ಮಂಗಳೂರಿನಲ್ಲೂ ಬ್ರಹ್ಮ ಸಮಾಜದ ತಾತ್ತ್ವಿಕತೆಯ ಗಾಳಿ ಬಿರುಸಾಗಿ ರಾಷ್ಟ್ರ ಕಟ್ಟುವ ಆದರ್ಶಕ್ಕೆ ಪ್ರೇರಣೆಯಾಯಿತು.''[೨೮]

ಇಲ್ಲಿನ ರಾಷ್ಟ್ರೀಯತೆ ಕೇವಲ ಸುಧಾರಣಾವಾದೀ ದೃಷ್ಟಿಕೋನದಲ್ಲಿರದೆ ತೀವ್ರಗಾಮಿ ಧೋರಣೆಯಿಂದ ಪ್ರೇರಿತವಾಗಿದೆ. ಕ್ಷಾತ್ರ ತೇಜಸ್ಸಿನ 'ಭಾರತ' ಕಲ್ಪನೆಯನ್ನು ಮಾಡಿದ ತಿಲಕರು ಮನುಷ್ಯ ಮತ್ತು ಸಮಾಜದ ನಡುವೆ ಇರಬಹುದಾದ ಬಿರುಕಿನ ಅಸ್ತಿತ್ವವನ್ನು ಒಪ್ಪದೆ ಅವೆರಡರ ಮುಖಾಮುಖಿಯಾದ ಬೆಳವಣಿಗೆಯನ್ನು ಮನಗಂಡರು. ಹೀಗೆ ಗಾಂಧೀಜಿ, ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿಯವರ, ವ್ಯಕ್ತಿಕೇಂದ್ರಿತ ಸ್ವಾತಂತ್ರ್ಯದ ಹಂಬಲವು ರಾಷ್ಟ್ರೀಯತೆಯ ಸುಧಾರಣಾವಾದೀ ದೃಷ್ಟಿಕೋನವನ್ನು ಬಿಂಬಿಸಿದರೆ; ತಿಲಕರ ರಾಜಕೀಯ ಪ್ರೇರಿತ ತೀವ್ರಗಾಮೀ ದೃಷ್ಟಿಕೋನವು ಸ್ವಾತಂತ್ರ್ಯದ ಮಗದೊಂದು ಅಭಿವ್ಯಕ್ತಿಗೆ ಪ್ರೇರಣೆಯಾಯಿತು. ಪಾರಂಪರಿಕ ಸಮಾಜ ವಿಧಿಸಿದ ವಿಧಿ ನಿಷೇಧಗಳಿಗಿಂತ ಭಿನ್ನವಾದ ರೀತಿಯಲ್ಲಿ ಸುಧಾರಣಾ ನಿಲುವನ್ನು ಕುರಿತ ಚಿಂತನೆಗಳು ರಾಷ್ಟ್ರೀಯವಾದದ ಹಿಂದಿದೆ. ರಾಜಾರಾಮ್ ಮೋಹನ್‌ರಾಯ್ ಮೊದಲಾದವರ ಪ್ರೇರಣೆಯಿಂದ, ಪುರುಷ ವಿರೋಧಿ ಕಲ್ಪನೆಯಾಗದೆ ಪುರುಷಪರ ನಿಲುವನ್ನು ಹೊಂದಿರುವಂತಹುದು. ಸ್ತ್ರೀಯ ಮೇಲಾಗುವ ಅನ್ಯಾಯದ ವಿರುದ್ಧ, ಕೆಟ್ಟ ಸಂಪ್ರದಾಯಗಳ ದನಿಯೆಬ್ಬಿಸುವ, ಶೋಷಣಾತ್ಮಕ ವ್ಯವಸ್ಥೆಯ ವಿರುದ್ಧದ ಹೋರಾಟ, ಸಾಮಾಜಿಕ, ಆರ್ಥಿಕ, ರಾಜಕೀಯ ಶೈಕ್ಷಣಿಕ ನೆಲೆಗಳಲ್ಲಿ ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಸುವ ಪ್ರಯತ್ನ ರಾಷ್ಟ್ರೀಯತೆಯ ಮುಂದುವರಿದ ಪ್ರಕ್ರಿಯೆಯಾಗಿ ಗುರುತಿಸಬಹುದು. ಈ ಪ್ರಕ್ರಿಯೆಯು ಕೇವಲ ಬೌದ್ಧಿಕ ಚಿಂತನಾ ಕ್ರಮವಷ್ಟೇ ಆಗದೆ, ವರ್ತಮಾನದ ಜೀವನಕ್ರಮವನ್ನು ರೂಪಿಸಿದ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲಿಸುವುದೂ ಆಗಿದೆ.

ಒಟ್ಟಿನಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಭೇದವಿಲ್ಲದೆ ಎಲ್ಲರೂ ಒಂದಾಗಿ ಭಾರತೀಯ ಸಂಸ್ಕೃತಿಯನ್ನು ಅಳಿವಿನಿಂದ ರಕ್ಷಿಸಬೇಕೆನ್ನುವ ಕೂಗು ರಾಷ್ಟ್ರೀಯತೆಯ ಹಿಂದಿದೆ. ಇದು ಫಲಕಾರಿಯಾಗಬೇಕಾದರೆ. "ರಾಷ್ಟ್ರೀಯತೆಯು ನಮ್ಮ ಇತಿಹಾಸದಲ್ಲಿಯೂ, ಸಂಸ್ಕೃತಿಯಲ್ಲಿ ಬೇರು ಬಿಟ್ಟದ್ದಾಗಿರಬೇಕು."[೨೯] ಆ ಬೇರಿನ ಸತ್ವವನ್ನು ಹೀರಿ ಮತ್ತೊಂದು ರಾಷ್ಟ್ರೀಯತೆಯೆಂಬ ಹೊಸ ಬೀಜವನ್ನು ಬಿತ್ತಬೇಕು. "ಎಳೆತನದಿಂದಲೇ ನಮ್ಮ ಬಾಲಕ ಬಾಲಕಿಯರ ಮನಸ್ಸುಗಳಲ್ಲಿ ದೇಶಭಾವನೆಯನ್ನು ತುಂಬಬೇಕು. ಪ್ರತಿಯೊಂದು ಸನ್ನಿವೇಶದಲ್ಲಿಯೂ, ಪ್ರತೀ ಹಂತದಲ್ಲೂ ಇದು ನಡೆಯಬೇಕು. ಹಾಗೆ ಆದಲ್ಲಿ ಮಾತ್ರ ಮುಂದೆ ದೇಶಭಕ್ತ ಪ್ರಜೆಗಳಾಗಿ ರೂಪುಗೊಳ್ಳಲು ಬೇಕಾದ ಭದ್ರಬುನಾದಿ ಗುಣಗಳು ಅವರಿಗೆ ಅಭ್ಯಾಸವಾಗುತ್ತದೆ. ನಾವು ಹೀಗೆ ಮಾಡಲಾರೆವಾದಲ್ಲಿ ರಾಷ್ಟ್ರವನ್ನು ಕಟ್ಟಲಾಗುವುದಿಲ್ಲ. ಅಂತಹ ಸ್ವಶಿಕ್ಷಣ ಇಲ್ಲದಿದ್ದಲ್ಲಿ ರಾಷ್ಟ್ರೀಯತೆ, ದೇಶಭಕ್ತಿ ಪುನರ್‌ನಿರ್ಮಾಣ ಮೊದಲಾದುವೆಲ್ಲ ಶಬ್ದಮಾತ್ರವಾಗುತ್ತದೆ."[೩೦]

೨.೫. ರಾಜಕೀಯ ಧ್ರುವೀಕರಣದ ಚಿತ್ರಣ (ಸ್ವಾತಂತ್ರ್ಯದ ಕಾಳಜಿ)

ರಾಷ್ಟ್ರ, ರಾಷ್ಟ್ರೀಯತೆ ಎನ್ನುವ ಕಲ್ಪನೆ ಎಲ್ಲರಲ್ಲಿಯೂ ಸ್ವಾಭಾವಿಕವಾಗಿರುತ್ತದೆ. ಆದರೆ ಅದು ಹೆಚ್ಚು ಪ್ರಕಟಗೊಳಿಸುವುದು ಅದನ್ನು ಪ್ರಶ್ನಿಸುವ ಸಂದರ್ಭಗಳು ಬಂದಾಗ. ನಾಡು, ನುಡಿ, ಸಂಸ್ಕೃತಿ, ಇತಿಹಾಸ, ಆಧ್ಯಾತ್ಮ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಅದರ ಹರಹು ಇದೆ. ಇವುಗಳಲ್ಲಿ ಯಾವೊಂದರ ಅಸ್ತಿತ್ವಕ್ಕೆ ಧಕ್ಕೆಯುಂಟಾದಾಗ ಅದು ಏಕಮುಖವಾಗದೆ, ಸಾಮೂಹಿಕವಾಗಿ ಪ್ರತಿಭಟಿಸುತ್ತವೆ. ಈ ಪ್ರತಿಭಟನೆಯಲ್ಲಿ ತನ್ನ ಅಸ್ತಿತ್ವವನ್ನು, ಸ್ವಾತಂತ್ರ್ಯವನ್ನು ತೆರೆದು ತೋರುವ ಪ್ರಕ್ರಿಯೆಯನ್ನು ಗುರುತಿಸಬಹುದು. ''ಒಂದು ನಿರ್ದಿಷ್ಟ ಘಟ್ಟದಲ್ಲಿ ಪರಕೀಯ ಆಳ್ವಿಕೆಯು ಅವರ ಶಿಕ್ಷಣದ ಮೂಲಕ ಸ್ವಪ್ರಜ್ಞೆಯನ್ನು ಪಡೆದು ತಮ್ಮನ್ನು ಆಳುತ್ತಿರುವ ಜನರ ಸಂಸ್ಕೃತಿ, ತಮ್ಮ ಸಂಸ್ಕೃತಿಗಿಂತ ಶ್ರೇಷ್ಠ ಎಂಬ ಅಂತರ್ಗತ ಅರಿವಿನಿಂದ ಈ ಪ್ರಕ್ರಿಯೆ ಆರಂಭವಾಗುತ್ತದೆ. ತಮ್ಮ ಸಂಸ್ಕೃತಿಯು ಸಂಭ್ರಮದಿಂದ ಮೆರೆದ ಘಟ್ಟವೊಂದಿತ್ತು ಎಂದು ಭೂತಕಾಲದ ಕಡೆಗೆ ಆಸೆಯಿಂದ ನಡೆಯುತ್ತಾರೆ. ವರ್ತಮಾನದ ಘೋರ ಅಪಮಾನವನ್ನು ಮರೆಯಲು ಭೂತದ ಕಡೆಗೆ ಹೋಗುವ ವಿಷಾದಮಯ ಪ್ರಯತ್ನವಿದೆ. ಇದು ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಅತ್ಯಂತ ದೊಡ್ಡ ಹೋರಾಟದ ಸಾಧನವೂ ಹೌದು''[೩೧] ಎಂದು ಹೇಳುತ್ತಲೇ ವಸಾಹತುವು ಶಿಕ್ಷಣದ ಮೂಲಕ ಭಾರತದಂತಹ ದೇಶದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸುವಲ್ಲಿ ಸಫಲವಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.

''ಪ್ರಭುತ್ವ ಮತ್ತು ಸಂಸ್ಕೃತಿಗಳೆರಡೂ ಒಟ್ಟಿಗೆ ಹೋಗಲಾರವು''[೩೨] ಇದು ಜರ್ಮನ್ ದಾರ್ಶನಿಕ ನೀಷೆಯ ವಾದ. ಆತನ ಪ್ರಕಾರ ರಾಜಕೀಯ ಶಕ್ತಿಯು ಪ್ರಬಲವಾಗುತ್ತ ಹೋದಂತೆ, ಸಮಾಜ/ಸಂಸ್ಕೃತಿ ದುರ್ಬಲವಾಗುತ್ತಾ ಹೋಗುತ್ತದೆ. ಆ ದುರ್ಬಲತೆಯು ಅದನ್ನು ಸಾಂಸ್ಕೃತಿಕವಾಗಿ, ಭಾಷಿಕವಾಗಿ, ಧಾರ್ಮಿಕವಾಗಿ ಕುಗ್ಗಿಸುತ್ತದೆ. ಪ್ರಭುತ್ವವು ಬಲಿಷ್ಠವಾಗಿರುವುದ ರಿಂದ ದುರ್ಬಲವಾದ ಸಂಸ್ಕೃತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಈ ಸಂದರ್ಭದಲ್ಲಿ ತನ್ನ ಹುಡುಕಾಟವನ್ನು ಆರಂಭಿಸುತ್ತದೆ. ರಾಜಕೀಯವಾಗಿ ಭದ್ರವಾಗಿರುವ ವಸಾಹತು ಸಾಂಸ್ಕೃತಿಕವಾಗಿ ಹುಟ್ಟಿಸಿದ್ದ ಕೀಳರಿಮೆಯಿಂದ ಹೊರಬರಲು ಮೇಲ್ವರ್ಗಕ್ಕೆ ತನ್ನ ಶಿಕ್ಷಣ ಕ್ರಮವನ್ನು ಅಳವಡಿಸುತ್ತದೆ. ಈ ಹಿನ್ನೆಲೆಯಲ್ಲಿ ಅದು ಜ್ಞಾನವನ್ನು ವರ್ಗಾಯಿಸುವ ಮೂಲಕ ಅಧಿಕಾರವನ್ನೂ ಕೇಂದ್ರೀಕರಣ ಗೊಳಿಸುತ್ತದೆ. ಅಧಿಕಾರ ಕೇಂದ್ರೀಕರಣ, ಆಧುನಿಕ ಶಿಕ್ಷಣವನ್ನು ಪಡೆದವರ ಹಾಗೂ ಅದರಿಂದ ದೂರವಾದವರ ನಡುವೆ ಸಂಘರ್ಷವನ್ನು ಸೃಷ್ಟಿಸುತ್ತದೆ. ಮಾತ್ರವಲ್ಲ ಒಂದು ಕಡೆಯಿಂದ ಪಾಶ್ಚಾತ್ಯ ಸಂಸ್ಕೃತಿಯನ್ನು ಒಪ್ಪಿ ಅದನ್ನು ಸ್ವೀಕರಿಸಲಾಗದ, ಇನ್ನೊಂದೆಡೆ ದೇಸೀಯನ್ನು; ಜೊತೆಯಲ್ಲಿ ತನ್ನತನವನ್ನು ಉಳಿಸಲಾಗದೆ ಪರಕೀಯತನವನ್ನು ಅನುಭವಿಸುತ್ತದೆ. ಇಂತಹ ಸಂದರ್ಭದಲ್ಲಿ ತನ್ನ

ಅಸ್ಮಿತೆ/ಅಸ್ತಿತ್ವವನ್ನು ಗುರುತಿಸಲಾಗದ ಅತಂತ್ರ ಸ್ಥಿತಿಗೆ ಬರುತ್ತದೆ. ಈ ಅತಂತ್ರ ಸ್ಥಿತಿಯು ಆಂತರಿಕವಾಗಿ ತನ್ನನ್ನು ಶೋಧಿಸುತ್ತಾ ಬಾಹ್ಯದ ನಾನಾ ರಂಗಗಳಲ್ಲಿ ಕಾಣಿಸಿಕೊಳ್ಳುತ್ತದೆ.[೩೩] ಒಂದೆಡೆಯಿಂದ ತನ್ನೊಳಗಿನ ಅಸಮಾನತೆಯನ್ನು ಹೋಗಲಾಡಿಸುವ, 'ಸ್ವಾತಂತ್ರ್ಯ'ದ ಹಂಬಲದ ವ್ಯಕ್ತಿಕೇಂದ್ರಿತ ಚಿಂತನೆಯಿದ್ದರೆ; ಇನ್ನೊಂದೆಡೆ ಸ್ವಾತಂತ್ರ್ಯವನ್ನು ಗಳಿಸುವ ಸಾಮೂಹಿಕ ಪ್ರಜ್ಞೆ ಇದೆ.

ಆಧುನಿಕ ಶಿಕ್ಷಣ ಕ್ರಮದಿಂದ ಪಾಶ್ಚಾತ್ಯ ವೈಚಾರಿಕತೆ ಹಾಗೂ ಭಾರತೀಯ ಸಂಸ್ಕೃತಿಗಳ ಸಂಯೋಜನೆಯನ್ನು ತನ್ನೊಳಗೆ ತುಂಬಿಕೊಂಡ ಭಾರತೀಯ ವರ್ಗವು ತನ್ನ ಅತಂತ್ರ ಸ್ಥಿತಿಯಿಂದ ಸಾಮಾಜಿಕ ಅಸ್ಮಿತೆಗಾಗಿ ತಡಕಾಡಿತು. ಹೀಗೆ ಪಾಶ್ಚಾತ್ಯರ ಇಂಗ್ಲಿಷ್ ಶಿಕ್ಷಣದಿಂದಾಗಿ ಆಧುನಿಕತೆಯ ಅಂಗಿಯನ್ನು ಧರಿಸಿಕೊಂಡ ಭಾರತಕ್ಕೆ ಅದನ್ನು ಬಿಚ್ಚಲಾಗದ; ಧರಿಸಲಾಗದ ಸಂಘರ್ಷದ ಸ್ಥಿತಿಯಿಂದಾಗಿ ತನ್ನ ಪರಂಪರೆಯತ್ತ ಕಣ್ಣಾಡಿಸಿದ ಭಾರತದ ಒಂದು ವರ್ಗ ತಾನು ಹುಟ್ಟುಹಾಕಿದ ಪರಂಪರೆಯನ್ನು ಬೆಂಬಲಿಸಿ, ವಸಾಹತುವನ್ನು ವಿರೋಧಿಸಿತು. ಈ ವಿರೋಧ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾಯಿತು. ನೆಹರೂರವರು ಅಭಿಪ್ರಾಯ ಪಡುವಂತೆ ''ರಾಷ್ಟ್ರೀಯ ಪ್ರಜ್ಞೆ ಮತ್ತು ಸ್ವಾತಂತ್ರ್ಯ ಸಂಗ್ರಾಮಗಳು ಸಾಮ್ರಾಜ್ಯವಾದದ ಒಡಹುಟ್ಟು''[೩೪] ಇಲ್ಲಿ ರಾಷ್ಟ್ರೀಯತೆಯ ಹಿಂದೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಅಸ್ತಿತ್ವವನ್ನು ಸ್ಥಾಪಿಸುವ ಪ್ರಯತ್ನಗಳನ್ನು ಗುರುತಿಸಬಹುದು. ಇದು ಅನ್ಯದೇಶೀಯ ಆಕ್ರಮಣದ ಫಲವಾಗಿಯೇ ಭಾರತದ ರಾಷ್ಟ್ರೀಯತೆ ರೂಪುಗೊಂಡಿದೆ ಎಂಬ ಡಿ.ಆರ್. ನಾಗರಾಜರ ವಾದವನ್ನು ಸಮರ್ಥಿಸುತ್ತದೆ.

ಪರಕೀಯರ ಆಡಳಿತವು ಪ್ರಭುತ್ವ ರೀತಿಯಲ್ಲಿ ವ್ಯಕ್ತವಾಗ ತೊಡಗಿದಾಗ ಸಮಾಜ, ಸಂಸ್ಕೃತಿ ದುರ್ಬಲವಾಗಿ, ಆಕ್ರಮಣವನ್ನು ಸಹಿಸಲಾಗದೆ ದಬ್ಬಾಳಿಕೆಯ ವಿರುದ್ಧ ಸೆಟೆದು ನಿಲ್ಲುವ ಪ್ರಯತ್ನಗಳು ಚಳುವಳಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಸಮಾಜದ ಅಧಃಪತನವನ್ನು ಗ್ರಹಿಸಿಕೊಂಡು ಅದರ ಅಂಗವೆಂದೇ ಗುರುತಿಸಲ್ಪಡುವ ಭಾಷೆ, ಪಂಥ, ಜಾತಿ ಮುಂತಾದ ಕೃತಕ ಭೇದಗಳಿಂದ ಮೇಲೆದ್ದು ಬರಬೇಕೆಂಬ ಹಂಬಲದೊಂದಿಗೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹುಟ್ಟು ಹಾಕುವುದಕ್ಕೆ ರಾಷ್ಟ್ರೀಯತೆ ಪ್ರೇರಣೆ ನೀಡುತ್ತದೆ ಆ ಮೂಲಕ ರಾಜಕೀಯ ಆಯಾಮವೊಂದರ ವೈಶಾಲ್ಯದ ಕಡೆಗೆ ತನ್ನ ದೃಷ್ಟಿ ಹರಿಸುತ್ತದೆ.

ಮಾರ್ಕ್ಸ್‌ವಾದೀ ಚಿಂತನೆಗಳ ಕ್ರೋಡೀಕರಣದೊಂದಿಗೆ ರಾಷ್ಟ್ರೀಯತೆಯ ಹಿಂದಿರುವ ರಾಜಕೀಯ ಕೇಂದ್ರೀಕರಣ, ಸ್ವಾತಂತ್ರ್ಯದ ಚಿಂತನೆಯನ್ನು ಇನ್ನಷ್ಟು ಸ್ಪಷ್ಟಗೊಳಿಸಬಹುದು.

೧. ''ರಾಷ್ಟ್ರೀಯವಾದ ಎನ್ನುವುದು ರಾಷ್ಟ್ರದ ನಡತೆ, ಹಕ್ಕು, ಕರ್ತವ್ಯಗಳ ತಾತ್ತ್ವಿಕ ಭೂಮಿಕೆ

೨. ರಾಷ್ಟ್ರದ ಉದ್ದೇಶಿತ ನಿಜವಾದ ಗುರಿಗಳನ್ನು ಸಾಧಿಸುವುದಕ್ಕೆ ಮಾಡುವ ಒಂದು ಬಗೆಯ

ರಾಜಕೀಯ ಚಳವಳಿಯೇ ರಾಷ್ಟ್ರೀಯವಾದ''[೩೫]

''ಧರ್ಮ, ಚಾರಿತ್ರಿಕ ಪುರಾಣ ಕಥಾನಕ ಮತ್ತು ಇನ್ನಿತರ ಸಾಂಸ್ಕೃತಿಕ ಕಟ್ಟುಪಾಡುಗಳಿಂದ ಸಂಯೋಜಿತವಾದ ಸಮುದಾಯವನ್ನು 'ಸಾಂಸ್ಕೃತಿಕ ರಾಷ್ಟ್ರ'ವೆಂದು ಕರೆಯುತ್ತಾರೆ. ರಾಷ್ಟ್ರವನ್ನು ಹಳೆಯ, ಹೊಸ ಎಂಬ ವಿಭಾಗ ಮಾಡಿ, ಹಳೆಯ ರಾಷ್ಟ್ರಗಳು ಆ ರಾಷ್ಟ್ರದ ರಾಷ್ಟ್ರೀಯತೆ ಹೊಂದಿದ್ದ ವ್ಯಕ್ತಿಯಿಂದಲೇ ಆಳ್ವಿಕೆ ನಡೆಯುತ್ತಿತ್ತು. ಹೊಸ ರಾಷ್ಟ್ರಗಳು ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಿಂದ ಬಿಡುಗಡೆ ಪಡೆಯುವ ಹಂಬಲದಲ್ಲಿದ್ದುವು''[೩೬] ಎಂಬ ಮಾರ್ಕ್ಸ್‌ವಾದಿಗಳ ಚಿಂತನೆಯು ರಾಷ್ಟ್ರೀಯತೆಯ ಹಿಂದೆ ರಾಜಕೀಯ ಪ್ರೇರಣೆ ಇರುವುದನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿಯೂ ಕೂಡಾ ೨ ರೀತಿಯಾಗಿ ರಾಷ್ಟ್ರ ಪ್ರೇರಣೆಯುಂಟಾಗುತ್ತದೆ.

೧. ಹಳೆಯ ರಾಷ್ಟ್ರಗಳು ಎಂಬ ಕಲ್ಪನೆಯೊಂದಿಗೆ ಮಾಡುವ ತನ್ನೊಳಗಿನ ಅಸಮಾನತೆಯ ನಿರ್ಮೂಲನೆ, ಸಂಘರ್ಷದ ರೀತಿಯಲ್ಲಿ

೨. ಹೊಸ ರಾಷ್ಟ್ರಗಳ ಚಿಂತನೆಯ ಮೂಲಕ ವಸಾಹತು ವಿರೋಧಿ ಪ್ರಕ್ರಿಯೆ ಚಳುವಳಿಯ ರೂಪದಲ್ಲಿ ಪ್ರಕಟಗೊಳ್ಳುವದು.

ಸ್ವಾತಂತ್ರ್ಯಾಂದೋಲನವು ಬಿರುಸಾಗಿ ಸಾಗುವ ಸಂದರ್ಭದಲ್ಲಿ ವಸಾಹತುವಿನೊಂದಿಗಿನ ಹೋರಾಟದ ವಿರುದ್ಧ ಜಯಗಳಿಸಿ ಒಂದಾಗಬೇಕೆಂದಿದ್ದ ಭಾವನೆಯನ್ನಿಟ್ಟುಕೊಂಡಿದ್ದ ದೇಶಕ್ಕೆ ಒದಗಿದ ಮೊತ್ತಮೊದಲ ಕುತ್ತು ಭಾರತ ಮತ್ತು ಪಾಕಿಸ್ಥಾನ ವಿಭಜನೆ. ತಮ್ಮನ್ನು ಅಖಂಡತ್ವದ ಹಿನ್ನೆಲೆಯಲ್ಲಿ ಗುರುತಿಸಬೇಕೆಂಬ ಭಾರತೀಯ ವರ್ಗವು ಪಡೆದುಕೊಂಡದ್ದು ಭಾರತದ ಭೂಭಾಗ ಮಾತ್ರ. ದೇಶವಿಭಜನೆಯ ದುರಂತಕ್ಕೆ ಒಳಗಾದ ಭಾರತವು ಉಗ್ರ ಕ್ರಾಂತಿಕಾರಿಗಳಿಂದ ಪ್ರೇರಿತವಾಗಿ ತನ್ನ ಅಸ್ತಿತ್ವದ ಹೋರಾಟಕ್ಕಾಗಿ ಇಳಿದುದರ ಫಲವೇ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿ. ''೧೮೫೭ರ ಸ್ವಾತಂತ್ರ್ಯ ಸಂಗ್ರಾಮವೂ ರಾಷ್ಟ್ರೀಯ ಪುನರುಜ್ಜೀವನದ ಒತ್ತಾಸೆಯಲ್ಲಿ ಪ್ರಮುಖ ಪಾತ್ರ ವಹಿಸಿತು.''[೩೭]

ದಕ್ಷಿಣ ಕನ್ನಡದ ರಾಷ್ಟ್ರೀಯತೆಯ ಚಿಂತನೆಯ ಹಿಂದೆ ಪ್ರಭುತ್ವದ ಶೋಷಣೆಗೆ ಸಿಲುಕಿ ಅದರಿಂದ ಬಿಡುಗಡೆ ಹೊಂದುವ ರಾಜಕೀಯ ಪ್ರೇರಿತ ಚಿಂತನೆ ಇದೆ. ಚರಿತ್ರೆಯ ಹಿಂದಿನ ಆಕರೋತ್ತರಗಳನ್ನು ಗಮನಿಸಿದಾಗ ಮದ್ರಾಸು ಪ್ರಾಂತ್ಯಕ್ಕೆ ಸೇರಿದ್ದ ಭಾಗವಾಗಿದ್ದ ದಕ್ಷಿಣ ಕನ್ನಡ ೧೫ನೇ ಶತಮಾನದ ವೇಳೆಯಲ್ಲಿ ಪೋರ್ಚುಗೀಸರ ಅಧೀನದಲ್ಲಿದ್ದು ೧೬೦೦ರ ವೇಳೆಗೆ ಬ್ರಿಟಿಷ್ ವಸಾಹತುವಿನ ಪ್ರಭುತ್ವಕ್ಕೆ ಒಳಪಟ್ಟಿರುವುದನ್ನು ತಿಳಿಯಪಡಿಸುತ್ತವೆ. ವೀರರಾಣಿ ಅಬ್ಬಕ್ಕ, ಟಿಪ್ಪುವಿನಂತಹ ಪರಾಕ್ರಮಿಗಳ ವೀರಗಾಥೆಯೊಂದಿಗೆ; ದೇಶೀ ರಾಜರುಗಳ ಆಂತರಿಕ ವೈಫಲ್ಯಗಳೇ

ಬ್ರಿಟಿಷ್ ವಸಾಹತುವಿನ ಬೇರೂರುವಿಕೆಗೆ ಕಾರಣವಾಗುತ್ತದೆ. ಇದು ಮುದ್ರಣ ಯಂತ್ರ, ಕ್ರೈಸ್ತ ಮಿಶನರಿಗಳ ಸ್ಥಾಪನೆ, ವಿದ್ಯಾಭ್ಯಾಸ ಕ್ಷೇತ್ರದಲ್ಲಿನ ಬದಲಾವಣೆಯ ಮೂಲಕ ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಬದಲಾವಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಈ ರೀತಿಯ ಸಾಮ್ರಾಜ್ಯವಾದೀ ದಬ್ಬಾಳಿಕೆಯು ಭಾರತೀಯ ಸಂಸ್ಕೃತಿ, ಸಮಾಜವನ್ನು ಛಿದ್ರಗೊಳಿಸುತ್ತದೆ. ವಸಾಹತುವಿನೊಂದಿಗೆ ಪಾರತಂತ್ರ್ಯ ವ್ಯವಸ್ಥೆ ರಾಜಕೀಯವಾಗಿ ಮಾತ್ರವಲ್ಲದೆ ಮಾನಸಿಕ ಅಸಮತೋಲನವನ್ನು ಉಂಟುಮಾಡುತ್ತದೆ. ಇಂಥ ಸಂದರ್ಭದಲ್ಲಿ ಸಹಜವಾಗಿಯೇ ವ್ಯಕ್ತಗೊಳ್ಳುವ ಆಕ್ರೋಶ ಪರಕೀಯ ಆಡಳಿತವನ್ನು ವಿರೋಧಿಸುತ್ತದೆ. "ಅದರ ಜೊತೆಗೇ ಈಗಾಗಲೇ ಒಪ್ಪಿಕೊಂಡ ಪಾಶ್ಚಾತ್ಯ ಸಂಸ್ಕೃತಿಯ ಮೌಲ್ಯಗಳ ಬೆಳಕಿನಲ್ಲಿಯೇ ಸ್ವಸಂಸ್ಕೃತಿಯ ಮೌಲ್ಯಗಳನ್ನು ಬೆಲೆಗಟ್ಟುವ ಪುನರುತ್ಥಾನಗೊಳಿಸುವ"[೩೮] ಕೆಲಸ ಆರಂಭಗೊಂಡಿತು. ಅಹಿಂಸಾ, ಸತ್ಯಾಗ್ರಹ ಪ್ರಣೀತವಾದ ಗಾಂಧೀಜಿಯವರ ತತ್ತ್ವಗಳ ಆಧಾರದ ಪ್ರಕ್ರಿಯೆ ಒಂದು ರೀತಿಯಲ್ಲಿ ಸಾಗಿದರೆ, ಜನ್ಮಸಿದ್ಧವಾದ ಸ್ವಾತಂತ್ರ್ಯದ ಹಕ್ಕನ್ನು ಪಡೆಯುವ ತಿಲಕರ ಹೋರಾಟ ಪ್ರಕ್ರಿಯೆ ಇನ್ನೊಂದು ರೀತಿಯದು. ಹೀಗೆ ಪ್ರದೇಶವೊಂದು ತನ್ನ ರಾಜಕೀಯ ಧ್ರುವೀಕರಣ ಹಿನ್ನೆಲೆಯಲ್ಲಿ 'ಸ್ವಾತಂತ್ರ್ಯ' ಕಾಳಜಿಯೊಂದಿಗೆ ವ್ಯಕ್ತಗೊಳಿಸುವ ರಾಷ್ಟ್ರೀಯತೆಯಲ್ಲಿ ಭಾರತೀಯ ಸಂಸ್ಕೃತಿಯ ಅಭಿಮಾನ, ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿಯ ಏಳ್ಗೆ ಸಾಂಸ್ಕೃತಿಕ ಮರುಸೃಷ್ಟಿಯ ಪ್ರಕ್ರಿಯೆ, ಭಾಷಾ ಬೆಳವಣಿಗೆಯಂತಹ ಎಲ್ಲ ಆಶಯಗಳನ್ನೂ ಗುರುತಿಸಬಹುದು. ಈ ನಿಟ್ಟಿನಲ್ಲಿ ತನ್ನನ್ನು ಮರುಸ್ಥಾಪಿಸಲು ತೊಡಕಾಗುವ ಎಲ್ಲ ತಾರತಮ್ಯಗಳ ವಿರುದ್ಧದ ಹೋರಾಟವನ್ನೂ ಗುರುತಿಸಬಹುದು. ಈ ಸಂದರ್ಭದಲ್ಲಿ ಕಳೆದು ಹೋಗುತ್ತಿರುವ ತನ್ನ ಸಂಸ್ಕೃತಿಯ ಚಹರೆಗಳನ್ನು ಉಳಿಸಲು ಪರಂಪರೆ, ಗತದ ಕಡೆಗೆ ದೃಷ್ಟಿ ಹಾಯಿಸಿ, ವಸಾಹತುವಿನ ಬಂಧನದಿಂದ ಮುಕ್ತಿಗೊಳ್ಳಲು ಪ್ರಯತ್ನಿಸುತ್ತದೆ. ಇಂಥ ಸಂದರ್ಭಗಳಲ್ಲಿ ತನ್ನ ಪರಿಸರ ಕಾಳಜಿ, ಸಮಾಜದ ಸುಧಾರಣೆ, ಆಧ್ಯಾತ್ಮ ಧರ್ಮಪರತೆ, ರಾಜಕೀಯ ಸ್ವಾತಂತ್ರ್ಯ, ಸಂಸ್ಕೃತಿಯ ನಿಲುವಿನ ಕಡೆ ತನ್ನ ಆಸಕ್ತಿಯನ್ನು ರಾಷ್ಟ್ರೀಯತೆ ತೆರೆದು ತೋರಿಸುತ್ತದೆ.

ಪೂರ್ವೋಲ್ಲೇಖದಂತೆ ನಮ್ಮ ರಾಷ್ಟ್ರೀಯತೆಯು ಗಾಂಧೀವಾದಿ ರಾಜಕಾರಣ, ತಿಲಕ್‌ವಾದಿ ರಾಜಕಾರಣಗಳೆರಡರ ಚಿಂತನೆಯೊಂದಿಗೆ, ಮಾರ್ಕ್ಸ್‌ವಾದೀ ರಾಜಕೀಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಅಸಮಾನ ವ್ಯವಸ್ಥೆಯ ವಿರುದ್ಧ, ವರ್ಗ ವ್ಯವಸ್ಥೆಯ ವಿರುದ್ಧ ತನ್ನ ಧ್ವನಿ ಮೊಳಗಿಸಿ ಕ್ರೌರ್ಯ, ದಬ್ಬಾಳಿಕೆಯ ವಿರುದ್ಧ ಬಂಡೇಳಬೇಕಾದ ಅಗತ್ಯತೆಯನ್ನು ಪ್ರತಿಪಾದಿಸುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿ ಪ್ರಜ್ಞೆಯು ಸಮೂಹ ಪ್ರಜ್ಞೆಯೊಂದಿಗೆ ಜಾಗೃತವಾಗಿ ದೇಶಭಕ್ತಿಯನ್ನು ಅಭಿವ್ಯಕ್ತಿಸಿತು. ಈ ದೇಶಭಕ್ತಿಯೊಂದಿಗೆ ಸ್ಥಳೀಯವಾಗಿ ಛಿದ್ರಗೊಂಡಿರುವ ತನ್ನನ್ನೂ ಒಂದಾಗಿಸುವ ಹಂಬಲವನ್ನು

ರಾಷ್ಟ್ರವು ವ್ಯಕ್ತಪಡಿಸುತ್ತದೆ. ಭಾರತೀಯ ಸಮಾಜದ ಸಾಮಾಜಿಕ ಅಸಮಾನತೆ, ಆರ್ಥಿಕ ದುರ್ಬಲತೆಯನ್ನು ಅರಿಯುತ್ತಲೇ ಆಧುನಿಕ ಶಿಕ್ಷಣದ ಸಹಾಯದೊಂದಿಗೆ ಐಕ್ಯವನ್ನು ತರುವ ಉದ್ದೇಶದೊಂದಿಗೆ, ಸ್ಥಳೀಯ ಭಾಷೆ, ಸಂಸ್ಕೃತಿ, ಸಮಾಜದ ಅಭಿಮಾನವೂ ಮಹತ್ವವೆನಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ತಾನೂ ಭಾಗಿ ಯಾಗುತ್ತದೆ. ವಸಾಹತುಶಾಹಿ ಭಾಷೆಯು ತನ್ನ ಸಂಸ್ಕೃತಿಯ ಮೇಲೆ, ಭಾಷೆಯ ಮೇಲೆ ನಡೆಸುತ್ತಿರುವ ಆಕ್ರಮಣವನ್ನು ತಡೆಯಲು ತನ್ನನ್ನು ಅದರ ವಿರುದ್ಧ ಸಜ್ಜಾಗಿಸುವ ಪ್ರಯತ್ನ ಮಾಡುತ್ತದೆ. ಇಂಥ ಸಂದರ್ಭದಲ್ಲಿ ಸ್ಥಳೀಯ ಭಾಷೆಯು ತನ್ನ ಗಡಿಯಾಚೆಗಿನ ಅನ್ಯಭಾಷೆಗಳ ಮೇಲೆ, ಜನಸಮೂಹದ ಮೇಲೆ ತನ್ನ ವಿರೋಧವನ್ನು ವ್ಯಕ್ತಪಡಿಸುವುದು. ಉದಾ: ಕನ್ನಡಕ್ಕೆ ಮಲೆಯಾಳ / ತಮಿಳು ಭಾಷೆಯ ವಿರೋಧ.

ಒಟ್ಟಿನಲ್ಲಿ ರಾಷ್ಟ್ರೀಯವಾಗಿ ತನ್ನನ್ನು ಗುರುತಿಸುತ್ತಲೇ ಸ್ಥಳೀಯ, ಪ್ರಾಂತೀಯವಾಗಿ ತನ್ನನ್ನು ಸುಭದ್ರಪಡಿಸಲು ಅದರ ಸಂಸ್ಕೃತಿ ಶೋಧದೊಂದಿಗೆ ಭಾರತೀಯತೆಯನ್ನು ಭದ್ರಪಡಿಸಲು ರಾಷ್ಟ್ರೀಯತೆ ಶ್ರಮಿಸುತ್ತದೆ.

೨.೬. ಸಂಸ್ಕೃತಿಯ ಪೋಷಕ ನಿಲುವು

ರಾಷ್ಟ್ರೀಯತೆಯ ಹಿಂದೆ ಸಂಸ್ಕೃತಿಯ ವೈಭವೀಕರಣವಿದೆ ಎನ್ನುವುದು ಅಧ್ಯಯನಗಳ ಮೂಲಕ ವಿವರವಾಗಿ ಕಂಡುಕೊಂಡ ವಿಚಾರ. ಸಂಸ್ಕೃತಿಯು ಚಲನಶೀಲವಾದುದು, ಹರಿಯುವ ನೀರಿದ್ದಂತೆ. ರೂಪಾಂತರಗೊಳ್ಳುತ್ತಲೇ ಮರುಸೃಷ್ಟಿಸುವ ಪ್ರಕ್ರಿಯೆಯನ್ನು ಸಂಸ್ಕೃತಿಯು ಮಾಡುತ್ತದೆ. ಈ ಮರುಸೃಷ್ಟಿಯಾಗಬೇಕಾದರೆ ತಾನು ಅನುಭವಿಸಿದ, ಕಳೆದ ಕಾಲವನ್ನು ನೆನಪಿಸುವ ವರ್ತಮಾನದ ಚಿಂತನೆ ಅದರಲ್ಲಿರಬೇಕಾಗಿದೆ. ರಾಷ್ಟ್ರವೊಂದನ್ನು ಗುರುತಿಸುವುದೇ ಅದರ ಸಂಸ್ಕೃತಿಯ ಹಿನ್ನೆಲೆಯಲ್ಲಿ ''ಸಂಸ್ಕೃತಿಯೆಂದರೆ ಒಂದು ಸಮುದಾಯದ ಸಮಗ್ರ ಜೀವ ವಿಧಾನ''[೩೯] ಆದ್ದರಿಂದ ಸಮುದಾಯವೊಂದು ಬಾಳಿದ, ಬಾಳುತ್ತಿರುವ, ಬಾಳಬಹುದಾದ ವಿಶಾಲ ಭೂಮಿಕೆಯನ್ನು ಸಂಸ್ಕೃತಿ ಚಿಂತನೆಯು ಹಿಡಿದಿಡುತ್ತದೆ. ವಿಶ್ವಸೃಷ್ಟಿಯಾದಂದಿನಿಂದ ಇಂದಿನವರೆಗೆ ಮಾನವಕುಲದ ಆಲೋಚನೆ, ನಂಬಿಕೆ, ನಡವಳಿಗಳ ಸಮ್ಮಿಶ್ರ ಸಂಗಮವೇ ಸಂಸ್ಕೃತಿ ಎನ್ನುವುದಕ್ಕೆ ವಿಸ್ತಾರ ಅರ್ಥವನ್ನು ಕೊಡುತ್ತದೆ. ಇದು ಎರಡು ರೀತಿಯಾಗಿ ರಾಷ್ಟ್ರೀಯತೆಯ ಹಿಂದಿನ ಪ್ರೇರಕ ಶಕ್ತಿಯಾಗುತ್ತದೆ.

೧. ಇತಿಹಾಸದ ವೈಭವೀಕರಣ

೨. ಆಧ್ಯಾತ್ಮಿಕ ಚಿಂತನೆ

ಜರ್ಮನ್ ದಾರ್ಶನಿಕ ನೀಷೆಯ ವಾದದ ಆಧಾರದಲ್ಲಿ ಸಂಸ್ಕೃತಿಯ ಪೋಷಕ ನಿಲುವು

ರಾಷ್ಟ್ರೀಯತೆಗೆ ಹೇಗೆ ಪ್ರೇರಕವಾಗಿದೆ ಎಂಬುದನ್ನು ಚರ್ಚಿಸಬಹುದು. ಪ್ರಭುತ್ವ ಹಾಗೂ ಸಂಸ್ಕೃತಿಗಳೆರಡೂ ಜತೆಯಲ್ಲಿ ಹೋಗಲಾರದು ಎನ್ನುವ ನೀಷೆಯ ಮಾತುಗಳೇ ಸಂಸ್ಕೃತಿ ಚಿಂತನೆಗೆ ಅಡ್ಡಿ ಮತ್ತು ಆ ಅಡ್ಡಿಯ ಮೂಲಕವೇ ತನ್ನನ್ನು ಮರುಸ್ಥಾಪಿಸುವ ರಾಷ್ಟ್ರದ ಪ್ರಯತ್ನ ಸಂಸ್ಕೃತಿ ಪುನರುಜ್ಜೀವನಕ್ಕೆ ದಾರಿ ಮಾಡಿಕೊಡುತ್ತದೆ. ಆತನ ಪ್ರಕಾರ ಸಾಂಸ್ಕೃತಿಕ ಪ್ರತಿಭೆ ಮೊಂಡಾಗುವುದಕ್ಕೆ ಭಾಷಿಕ ಕುಲಗಳ ರಾಜಕೀಯ ಶಕ್ತಿ ಪ್ರಮುಖ ಕಾರಣ. ಹಾಗಾಗಿ ಭಾಷೆಯ ಅಧಿಕಾರ ಸ್ಥಾಪನೆಯಲ್ಲಿ ತನ್ನನ್ನು ಹಿಂಬಾಲಿಸುವ ಸಂಸ್ಕೃತಿಯನ್ನು ಅದು ಕಡೆಗಣಿಸುತ್ತದೆ. ಈ ಕಡೆಗಣಿಸುವಿಕೆ ಸಹಜವಾಗಿ ತನ್ನ ಸ್ವಾತಂತ್ರ್ಯಕ್ಕೆ ಬಿದ್ದ ಪೆಟ್ಟು ಎಂಬುದನ್ನು ತಿಳಿದು ಸಂಸ್ಕೃತಿಯು ತನ್ನ ಶೋಧನೆ (ಹುಡುಕಾಟ)ವನ್ನು ಆರಂಭಿಸುತ್ತದೆ. ಆ ಮೂಲಕ ಸಾಂಸ್ಕೃತಿಕವಾಗಿ ತನ್ನನ್ನು ಮರುಸ್ಥಾಪಿಸುವ ಪ್ರಯತ್ನ ಮಾಡುತ್ತದೆ. ವಸಾಹತುವು ಅನ್ಯ ದೇಶವಾದ ಭಾರತದಲ್ಲಿ ತಮ್ಮನ್ನು ಸ್ಥಾಪಿಸುವುದಕ್ಕಾಗಿ ಕಂಡ ಸುಲಭೋಪಾಯ ವಿದ್ಯಾವಂತ ವರ್ಗವೊಂದರ ಸೃಷ್ಟಿ. ಆ ಸೃಷ್ಟಿಗಾಗಿ ಇಂಗ್ಲಿಷ್ ಶಿಕ್ಷಣ ಕ್ರಮವನ್ನು ಅಳವಡಿಸಿ, ಆಯಾದೇಶದ ಜನರನ್ನೇ ಮಾಧ್ಯಮಿಕರನ್ನಾಗಿ ಮಾಡಿ, ಸುಲಭವಾಗಿ ತಮ್ಮ ಭಾಷೆಯನ್ನು ಅಲ್ಲಿಗೆ ವರ್ಗಾಯಿಸಿ ಸ್ಥಿರೀಕರಿಸಿದ, ವಸಾಹತು ಆಡಳಿತದಿಂದಾಗಿ ಭಾರತೀಯ ಆಲೋಚನಾ ಕ್ರಮವು ಬದಲಾಯಿತು. ತಮ್ಮ ಅಧಿಕಾರವನ್ನು ಭದ್ರಪಡಿಸುವುದಕ್ಕೆ ದೇಶೀ ಸಂಘರ್ಷವನ್ನು ತರುವುದು ಅವರಿಗೆ ಅನಿವಾರ್ಯವಾಯಿತು. ಇಂತಹ ಸಂದರ್ಭದಲ್ಲಿ ಇಂಗ್ಲಿಷ್ ಶಿಕ್ಷಣವು ಭಾರತೀಯರೊಳಗಿನ ವರ್ಗ ಸಂಘರ್ಷಕ್ಕೆ ಕಾರಣವಾಗಿ; ಸಂಘರ್ಷವನ್ನು ಅರಿಯುತ್ತಲೇ ವಸಾಹತು ವಿರೋಧವನ್ನು ಪ್ರಕಟಪಡಿಸಿತು ಎಂಬುದು ಈಗಾಗಲೇ ತಿಳಿದಿರುವ ವಿಚಾರ. ಆದರೆ ಭಾರತವು ತನ್ನ ಪ್ರಾಚೀನ ನಾಗರಿಕತೆಯನ್ನು ಮರಳಿ ಪಡೆಯಬೇಕಾದರೆ ವಸಾಹತು ಸ್ಥಿತಿ ಅತೀಅಗತ್ಯ ಎಂದು ಮನಗಂಡು ಬೇರೆ ಬೇರೆ ಕ್ಷೇತ್ರಗಳಲ್ಲಿ ಅದರ ಪರಿವರ್ತನೆ ಮಾಡಿತು. ಮಾತ್ರವಲ್ಲ ಭಾರತದ ಸಂಸ್ಕೃತಿಯನ್ನು ತಿಳಿಯಪಡಿಸುವ ಚಾರಿತ್ರಿಕ ಅಧ್ಯಯನಕ್ಕೆ ಗಮನಹರಿಸಿತು. ಇದಕ್ಕೆ ಮುಖ್ಯ ಕಾರಣ ಭಾರತದ ಪ್ರಾಚೀನ ಸಂಸ್ಕೃತಿಯಿಂದ ಅವರು ಆಕರ್ಷಿತರಾದದ್ದು. ಆದರೆ ಈ ಆಕರ್ಷಣೆ ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಿದ್ದಿತು. ಭಾರತದ ಸಂದರ್ಭದಲ್ಲಿ ಅದು ಸಂಪೂರ್ಣವಾಗಿ ಅನ್ಯ ಸಂಸ್ಕೃತಿಗೆ ಮಾರುಹೋಗಿದ್ದು, ತನ್ನ ಸ್ಥಳೀಯ ಅಸ್ತಿತ್ವವನ್ನು ಭದ್ರಗೊಳಿಸಿ ಚರಿತ್ರೆಯನ್ನು ಪುನರ್‌ರಚಿಸಲು ಅನುಸಂಧಾನದ ರೀತಿಯಲ್ಲಿ ವರ್ತಮಾನವನ್ನು ಸುಭದ್ರಗೊಳಿಸುತ್ತದೆ. ವಸಾಹತುಶಾಹಿಯು ಕಟ್ಟಿಕೊಟ್ಟ ಚರಿತ್ರೆಗಿಂತ ಭಿನ್ನವಾಗಿ ತನ್ನ ಚರಿತ್ರೆಯನ್ನು ಕಟ್ಟಿಕೊಳ್ಳುತ್ತದೆ. ಇಡೀ ವಿಶ್ವವ್ಯವಸ್ಥೆಯನ್ನು ಉಳಿಸಲು ತನ್ನ ಸಂಸ್ಕೃತಿಯಿಂದ ಮಾತ್ರ ಸಾಧ್ಯ ಎಂಬುದನ್ನು ಮನಗಂಡು ತನ್ನ ಸಂಸ್ಕೃತಿಯ ವೈಭವ ವನ್ನು ವರ್ಣಿಸುತ್ತದೆ. ‘‘ಸಂಸ್ಕೃತಿಯು ಮುಖ್ಯಾರ್ಥದಲ್ಲಿ ಆಧ್ಯಾತ್ಮಿಕ ಹಾಗೂ ವ್ಯಕ್ತಿಪರವಾದುದು.

ಆಯಾ ಕಾಲ ದೇಶಗಳನ್ನನುಸರಿಸಿ ಅದು ವ್ಯತ್ಯಾಸಗೊಳ್ಳುತ್ತದೆ. ಚೈತನ್ಯ, ಜ್ಞಾನ, ಕ್ರಿಯಾಶಕ್ತಿಗಳ ಬೆಳವಣಿಗೆಯನ್ನು ಸಂಸ್ಕೃತಿಯಲ್ಲಿ ಗುರುತಿಸಬಹುದು. ಆದರೆ ನಾಗರಿಕಾವಸ್ಥೆಯಲ್ಲಿ ಬೆಳವಣಿಗೆಯು ನಿಂತು ಜಡಭಾವ ಕಂಡುಬರುವುದು. ಇವೆರಡರಲ್ಲೂ ಬೆಳವಣಿಗೆಯನ್ನು ಕಾಣಲು, ಆರ್ಥಿಕ, ರಾಜಕೀಯ ವ್ಯವಸ್ಥೆಗಳು ಏರ್ಪಟ್ಟು ಸಮಾಜಕ್ಕೆ ಬೇಕಾದಂತೆ ವ್ಯಕ್ತಿ ಸ್ವಾತಂತ್ರ್ಯ ಲಭ್ಯವಾಗಬೇಕು. ಆದರೆ ಭೌತಿಕ ವಿಷಯಗಳಲ್ಲಿ ಮನುಷ್ಯನಿಗೆ ಸಂಪೂರ್ಣ ಸ್ವಾತಂತ್ರ್ಯವಿಲ್ಲ ಆತ್ಮವು ತನ್ನ ಸಂಸ್ಕಾರದಲ್ಲಿ ಆ ಸ್ವಾತಂತ್ರ್ಯವನ್ನು ಪಡೆಯುತ್ತದೆ. ಇದುವೇ ಸಂಸ್ಕೃತಿಯ ವೈಶಿಷ್ಟ್ಯ''[೪೮]. ಪ್ರತೀ ತಲೆಮಾರು ಕೂಡಾ ತನ್ನದನ್ನು ಕೂಡಿಸಿ ರೂಪಾಂತರ ಮಾಡುತ್ತಾ ಹೋಗುವುದರಿಂದ ಸಂಸ್ಕೃತಿಯನ್ನು ಕೆಡದಂತೆ ರಕ್ಷಿಸುವುದು ಸುಲಭವಲ್ಲ. ಆದರೆ ರಾಷ್ಟ್ರೀಯತೆಯು ಸಂಸ್ಕೃತಿಯನ್ನು ಪಾಶ್ಚಾತ್ಯ ಸಂಸ್ಕೃತಿಯ ಯಜಮಾನಿಕೆಗೆ ಉತ್ತರ ಕೊಡುವ ರೀತಿಯ ರಕ್ಷಣಾತ್ಮಕ ಅಂಶವಾಗಿ ಗುರುತಿಸುತ್ತದೆ. ಮಾತ್ರವಲ್ಲ ಪ್ರಾದೇಶಿಕ ಸತ್ವವನ್ನೂ, ಸಂಪ್ರದಾಯದ ವಿಶಿಷ್ಟ ಒಲವುಗಳನ್ನು ಸಾಂಸ್ಕೃತಿಕ ಅನನ್ಯತೆಯ ಹಿನ್ನೆಲೆಯಲ್ಲಿ ನೋಡುತ್ತದೆ. ತನ್ನದೇ ಆದ ಕೆಲವು ಲಕ್ಷಣಗಳನ್ನೂ, ಚರ್ಯೆಗಳನ್ನೂ ಗುರುತಿಸಿ ಆಧುನಿಕತೆಗೆ ಬೇಕಾದ ಸತ್ವಶೀಲದ ದ್ಯೋತಕವಾಗಿ ತನ್ನನ್ನು ಬಿಂಬಿಸುತ್ತದೆ. ಈ ನೆಲೆಯಲ್ಲಿ ಕರ್ನಾಟಕ/ಕನ್ನಡ ಸಂಸ್ಕೃತಿ ಪರಿಕಲ್ಪನೆಗಳಿಗೆ ಅರ್ಥಕೊಟ್ಟ ೪ ಚಾರಿತ್ರಿಕ ಘಟ್ಟಗಳನ್ನು ರಹಮತ್ ತರೀಕೆರೆಯವರು ಹೀಗೆ ಗುರುತಿಸುತ್ತಾರೆ.

''೧. **ವಸಾಹತುಶಾಹಿ ಘಟ್ಟ**

ಸಾಂಸ್ಕೃತಿಕವಾಗಿ ಹುಟ್ಟಿಸಿದ ಕೀಳರಿಮೆಯಿಂದ ಹೊರಬರುವ ಹುಡುಕಾಟ 'ದೇಸೀ ಸಂಸ್ಕೃತಿ' ಎಂಬ ಹೆಸರಿನಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದ ಉಚ್ಚಜಾತಿಯ ಮಧ್ಯಮ ವರ್ಗದವರಿಂದ ಆರಂಭವಾದುದು. ರಾಷ್ಟ್ರೀಯ ವಿಮೋಚನಾ ಹೋರಾಟದ ಸಂದರ್ಭದಲ್ಲಿ ಪ್ರಾಚೀನ ಹಾಗೂ ವರ್ತಮಾನದ ಬದುಕಿನಿಂದ ಅತ್ಯುತ್ತಮವಾದುದನ್ನು ಆರಿಸಿ ನಮ್ಮ ಸಂಸ್ಕೃತಿ, ಪರಂಪರೆ ಎಂಬ ಚಿತ್ರವನ್ನು ರಚಿಸಿಕೊಂಡಿತು. ಈ ವಾಸ್ತವದಲ್ಲಿ ಅದು ಗತದಲ್ಲಿ ಕಳೆದುಕೊಂಡದ್ದರ ಹುಡುಕಾಟವಾಗದೆ; ವಸಾಹತುಶಾಹೀ ಆಧುನಿಕತೆ ನಿರ್ಮಿಸಿದ್ದ ಆಕರ್ಷಣೆ, ವಿಕರ್ಷಣೆಗಳ ಜಗ್ಗಾಟದಲ್ಲಿ ತನ್ನದೆಂಬ ಒಂದು ನಂಬಿಕೆಯ ಜಗತ್ತನ್ನು ಹೊಸದಾಗಿ ಕಟ್ಟಿಕೊಳ್ಳುವ ಪ್ರಜ್ಞಾಪೂರ್ವಕ ಕ್ರಿಯೆ. 'ನಮ್ಮ ಸಂಸ್ಕೃತಿ ಪರಂಪರೆ' ಎಂಬ ಚಿತ್ರಣವನ್ನು ಹಾಕಿಕೊಟ್ಟ ಈ ಘಟ್ಟ ಕರ್ನಾಟಕದಲ್ಲಿ ಗುಣಗ್ರಾಹಿ ಸಂಸ್ಕೃತಿಯ ಹುಡುಕಾಟಕ್ಕೆ ಪ್ರೇರಣೆಯಾಯಿತು. ಮಾತ್ರವಲ್ಲ ಜನಾಂಗದ ಗುಣ ಸ್ಮರಣೆಯಿಂದ ನಮ್ಮ ಜನರು ತಲೆಎತ್ತಿ ನಡೆಯಲು ಸಾಧ್ಯವಾಗಬೇಕು ಎಂಬ ಚಿಂತನೆಗೆ ಪ್ರೇರಣೆ

ನೀಡಿತು.

೨. ಏಕೀಕರಣ ಘಟ್ಟ

ದೇಸೀ ಸಂಸ್ಕೃತಿ ಹಾಗೂ ವಸಾಹತು ವಿರೋಧದೊಂದಿಗೆ ಕರ್ನಾಟಕ ಏಕೀಕರಣ ಚಳುವಳಿಗೆ ಪೂರಕವಾದ ಕರ್ನಾಟಕತ್ವವನ್ನು ಭಾರತ ದ್ವಂದ್ವದ ಜತೆ ಸ್ಥಾಪಿಸುವ ಯತ್ನ. ಭಾರತೀಯರೆಂಬ ಕೇಂದ್ರೀಕೃತ ಚೌಕಟ್ಟಿನಿಂದ ತಪ್ಪಿಸಿಕೊಳ್ಳಲು 'ಕರ್ನಾಟಕ ಸಂಸ್ಕೃತಿ'ಯೆಂಬ ಹೊಸ ವ್ಯಾಖ್ಯಾನವನ್ನು ಕಟ್ಟುವುದಕ್ಕೆ ಮುಂದಾಗಿ, ಕುವೆಂಪುರವರ 'ಭಾರತಮಾತೆಯ ತನುಜಾತೆ'ಯಾದ 'ಕರ್ನಾಟಕ ಮಾತೆ'ಗಿಂತ ಭಿನ್ನವಾದ 'ಕರ್ನಾಟಕಾಂತರ್ಯಾಮಿ'ಯಾದ ಭಾರತಿ ದೇವಿಯ ಚಿಂತನೆ ಆರಂಭಗೊಂಡಿತು. 'ಕರ್ನಾಟಕತ್ವ'ವು ಒಂದು ತತ್ತ್ವ. ಈ ತತ್ತ್ವವು ವಿಶ್ವ ಅಥವಾ ಭಾರತೀಯ ಕೇಂದ್ರದ ಜೊತೆ ಸಂಬಂಧ ಸ್ಥಾಪಿಸಿಕೊಳ್ಳುತ್ತಲೆ ತನ್ನ ಪ್ರತ್ಯೇಕ ವಿಶಿಷ್ಟತೆಯನ್ನು ಸ್ಥಾಪಿಸಿಕೊಳ್ಳಬೇಕು ಎಂಬ ಚಿಂತನೆಗಳು ಹೆಚ್ಚು ನಿಖರವಾಗಿ ಕರ್ನಾಟಕತ್ವದ ಮೂಲಕ ಭಾರತೀಯತೆಯನ್ನು ಸ್ಥಾಪಿಸುವ ಪ್ರಯತ್ನಗಳು ಪ್ರಬಲವಾದವು.

೩. ಸ್ವತಂತ್ರ ಕರ್ನಾಟಕದ ಘಟ್ಟ

ಪ್ರಾದೇಶಿಕ ಭಾಷೆ ಹಾಗೂ ಪ್ರಾಂತ್ಯಗಳ ಹೆಸರಿನಲ್ಲಿ ಸಂಸ್ಕೃತಿ ಶೋಧ ಆರಂಭವಾಯಿತು. ತಮ್ಮ ವೈಭವದ ಗತವನ್ನು ನೆನೆಯುತ್ತಾ ವರ್ತಮಾನದ ಎದುರಾಳಿಗಳನ್ನು ಮುಖಾಮುಖಿ ಮಾಡುವ ಪ್ರಯತ್ನ ಉದಾ : ಕನ್ನಡವು ತಮಿಳು/ತಮಿಳರನ್ನು, ಮಲೆಯಾಳ/ಮಲೆಯಾಳಿಗಳನ್ನು ತನ್ನ ಎದುರಾಳಿಯಾಗಿ ಗುರುತಿಸುವುದು. ರಾಷ್ಟ್ರೀಯತೆಯು ೧೯೪೭ರ ಹಿಂದೆ ವಸಾಹತು ವಿರೋಧಿಯಾಗಿದ್ದರೆ ; ಅನಂತರದಲ್ಲಿ ಭಾರತದೊಳಗಿನ ಕೆಲವು ಧಾರ್ಮಿಕ ಸಮುದಾಯಗಳ ವಿರುದ್ಧ ಪ್ರಾಂತೀಯ ಭಾಷೆ, ಸಂಸ್ಕೃತಿಗಳು ತಲೆಯೆತ್ತುತ್ತಿದ್ದ ಹಕ್ಕಿನ ಪ್ರಶ್ನೆಯನ್ನು ದಮನಿಸಲು ಬಳಕೆಯಾಗ ತೊಡಗಿತು. ರಾಷ್ಟ್ರೀಯ ಏಕತೆಗಳ ಹೆಸರಿನಲ್ಲಿ ಒಂದು ಭಾಷೆ, ಒಂದು ಸಂಸ್ಕೃತಿಯನ್ನು ಹೇರುವಂತೆ ಕಾಣತೊಡಗಿದಾಗ ಪ್ರಾದೇಶಿಕ ಭಾಷೆ, ಪ್ರಾಂತ್ಯಗಳ ಹೆಸರಿನಲ್ಲಿ ಸಂಸ್ಕೃತಿ ಹುಡುಕಾಟ ಆರಂಭಗೊಂಡಿತು. ಭಾಷೆ ಸಂಸ್ಕೃತಿಗೆ ಆಗುತ್ತಿರುವ ಅನ್ಯ ಭಾಷೆ, ಸಂಸ್ಕೃತಿಗಳ ಹೊಡೆತವನ್ನು ತಡೆಯುವ ಮೂಲಭೂತವಾದಿ ನೆಲೆಯಲ್ಲಿ ಕನ್ನಡ/ಕರ್ನಾಟಕ ಸಂಸ್ಕೃತಿಯನ್ನು ಕಟ್ಟಿಕೊಳ್ಳುವ ಯತ್ನಗಳು ಆರಂಭಗೊಂಡವು.

೪. ದಲಿತ ಹಿಂದುಳಿದ ಜಾತಿಗಳ ಘಟ್ಟ

ಕರ್ನಾಟಕದ ದುಡಿಯುವ ವರ್ಗದವರ ವಿಮೋಚನೆಯ ಹಿತಾಸಕ್ತಿಯಿಂದ ಕರ್ನಾಟಕ ಸಂಸ್ಕೃತಿಯ ಚಿತ್ರೀಕರಣ, ಕರ್ನಾಟಕ ಸಂಸ್ಕೃತಿಯನ್ನು ರಾಷ್ಟ್ರೀಯತೆಯ ಭಾಗವನ್ನಾಗಿ ವ್ಯಾಖ್ಯಾನಿಸುವ ಪ್ರಯತ್ನ, ಪ್ರಾದೇಶಿಕ ಸಂಸ್ಕೃತಿಯ ಮೂಲಕ ಭಾರತೀಯ ಸಂಸ್ಕೃತಿಯ ರೂಪೀಕರಣಗೊಳಿಸುವ ಯತ್ನಗಳು ಆರಂಭಗೊಂಡವು. ನಾನಾ ಚಳುವಳಿ, ಸಂಘಟನೆಗಳು ಹುಟ್ಟಿಕೊಂಡು ಕರ್ನಾಟಕವನ್ನು ಸ್ವತಂತ್ರ ರಾಷ್ಟ್ರೀಯತೆಯ ಭಾಗವಾಗಿ ವ್ಯಾಖ್ಯಾನಿಸಲು ಪ್ರೇರಿಸಿದವು. ಅನೇಕ ಪ್ರಾದೇಶಿಕ ಸಂಸ್ಕೃತಿಗಳ ಮೊತ್ತವೇ ಭಾರತೀಯ ಸಂಸ್ಕೃತಿ ಎನ್ನುವ ವಾದಗಳು ಚಾಲ್ತಿಗೆ ಬಂದವು.''[೪೧]

ಈ ನಾಲ್ಕು ಅಂಶಗಳನ್ನು ಕ್ರೋಢೀಕರಿಸಿದಾಗ ರಾಷ್ಟ್ರದ ಹಿಂದೆ ಉಗಮಗೊಳ್ಳುವ ಸಂಸ್ಕೃತಿ ಮತ್ತು ಅದು ತನ್ನನ್ನು ಗುರುತಿಸಿಕೊಳ್ಳುವ ಬಗೆ, ಗತದ/ಪರಂಪರೆಯ ಅಂಶಗಳನ್ನು ಮೈಗೂಡಿಸಿ ಭವಿಷ್ಯದಲ್ಲಿ ಮರುಸೃಷ್ಟಿಗೊಳಿಸುವ ರಾಷ್ಟ್ರದ ನಿಲುವು 'ಸ್ವಾತಂತ್ರ್ಯ'ದ ಆಶೋತ್ತರಗಳನ್ನು ಒಳಗೊಂಡಿವೆ. ಮಾತ್ರವಲ್ಲ ತನ್ನ ಚರಿತ್ರೆಯನ್ನು ಸ್ಥಾಪಿಸುವ ಹಂಬಲವನ್ನೂ ವ್ಯಕ್ತಪಡಿಸುತ್ತದೆ.

ಜಾಗತೀಕರಣದ ಪ್ರಕ್ರಿಯೆಯಿಂದ ಭಾರತೀಯ ಸಂಸ್ಕೃತಿ ನಾಶವಾಗುತ್ತಿದೆ. ವಿಜ್ಞಾನ, ತಂತ್ರಜ್ಞಾನಗಳೇ ಈ ನಾಶಕ್ಕೆ ಕಾರಣ ಎಂಬ ಕೂಗು ಕೇಳಿಬರುತ್ತಿದೆ. ಇದರಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದರೆ ಆಧ್ಯಾತ್ಮದಿಂದ ಮಾತ್ರ ಸಾಧ್ಯ. ವಿಜ್ಞಾನದ ಸರ್ವಜ್ಞತ್ವದಿಂದಲೇ ಭಾರತೀಯ ಸಂಸ್ಕೃತಿಯ ವಿವಿಧ ರೂಪಗಳಾದ ವೈದಿಕ ಮತಸಂದೇಶ, ಆರ್ಥಿಕ ಸ್ಥಿತಿ, ಸಾಹಿತ್ಯ ವಿಜ್ಞಾನ, ಕಲೆಗಳಿಗೆ ಬೆಲೆಕಟ್ಟಲು ಸಾಧ್ಯ ಎಂಬುದನ್ನು ಮನಗಂಡಾಗ ಮಾತ್ರವೇ ಸರ್ವತೋಮುಖವೂ, ವಿಕಾಸಮಾನವೂ ಆದ ಸಂಸ್ಕೃತಿಯ ಉಳಿವು ಸಾಧ್ಯ ಎಂಬ ಚಿಂತನೆ ಹುಟ್ಟಿಕೊಂಡಿತು. ಇದು ಸಂಸ್ಕೃತಿಯನ್ನು ಆಧ್ಯಾತ್ಮಿಕ ನಿಲುವಿನಲ್ಲಿ ನೋಡಿತು. ರಾಷ್ಟ್ರೀಯತೆ ಎನ್ನುವುದು ಒಂದು ಮನೋಸ್ಥಿತಿ. ಆ ಮನೋಸ್ಥಿತಿಗೆ ತಕ್ಕುದಾದ ಜ್ಞಾನವನ್ನು ತುಂಬಿ ರಾಷ್ಟ್ರ ಭಾವನೆಯನ್ನು ಮೂಡಿಸಲು ಸಾಧ್ಯ. ಪರಂಪರೆ, ಗತದಲ್ಲಿ ಇದ್ದದ್ದು ಶ್ರೇಷ್ಠ ಅದು ಇಂದು ನಾಶವಾಗುತ್ತಿದೆ. ವಿನಾಶದ ಅಂಚಿನಿಂದ ಅದನ್ನು ಮೇಲೆತ್ತಬೇಕಾದರೆ ಸಂಸ್ಕೃತಿಯನ್ನು ಕುರಿತ ಚಿಂತನೆ ಅಂತರ್ಗತವಾಗಿರಬೇಕು. ಆದ್ದರಿಂದ ''ಹಿಂದುವು ತನ್ನ ಧರ್ಮ ಪರಂಪರೆಗಳ ಸಂಸ್ಕಾರದಿಂದಾಗಿ ಭಾರತವನ್ನು ಸ್ವಾಭಾವಿಕವಾಗಿ ಏಕ ಸಾರ್ವಭೌಮತೆಯ ಅಡಿಯಲ್ಲಿ ಬರುವ ರಾಜಕೀಯ ಘಟಕ ಮಾತ್ರವಾಗಿ ಗುರುತಿಸದೆ, ಅದೊಂದು ಹೊರರೂಪ ದೇಗುಲ, ಮಾತ್ರವಲ್ಲ ಅವನ ಆಧ್ಯಾತ್ಮ ಸಂಸ್ಕೃತಿಗಳ ಆರಾಧ್ಯ ಮಾತೃದೇವತೆ. ಭಾರತ ಮತ್ತು ಹಿಂದೂಧರ್ಮ ಇವುಗಳು ದೇಹ ಮತ್ತು ಆತ್ಮದಂತೆ ಅಭಿನ್ನವಾಗಿ ಎರಕ ಹೊಯ್ದ ಸೃಷ್ಟಿ ಎಂದು ತಿಳಿಯಬೇಕು. ರಾಷ್ಟ್ರೀಯತೆಯನ್ನು ವ್ಯಾಖ್ಯಾನಿಸಿ ಪರೀಕ್ಷಿಸಿ ಸಿದ್ಧಪಡಿಸಿ ತೋರಿಸುವುದು ಕಷ್ಟದ ಕೆಲಸ ಎಂಬ ಮಾತು

ನಿಜ. ಆದರೆ ಆರ್ಯನು ಮಾತ್ರ ತಾನು ಮತ್ತು ತನ್ನ ತಾಯಿನಾಡುಗಳ ಸಂಬಂಧದಲ್ಲಿ ಅದರ ಸ್ವರೂಪವನ್ನು ನಿಶ್ಚಿತಪಡಿಸಿದ್ದಾನೆ. ಭಾರತ ಅವನಿಗೆ ಸಂಸ್ಕೃತಿಯ ಪ್ರತೀಕ. ಅದರಲ್ಲಿ ಅವನು ತನ್ನ ಅಂತರಾತ್ಮವನ್ನೇ ತುಂಬಿದ್ದಾನೆ. ಅಂತರಮಾನಸದಲ್ಲಿ ಅದು ತನ್ನದೇ ವಿಸ್ತೃತರೂಪ''[೪೨]ವನ್ನು ಪಡೆದಿದೆ. ಇದು ವಿವೇಕಾನಂದ, ಅರವಿಂದ, ರಮಣ ಮಹರ್ಷಿ, ರಾಮಕೃಷ್ಣ ಪರಮಹಂಸರಂತಹ ಆಧ್ಯಾತ್ಮ ಪುರುಷರಿಂದ ಪ್ರಭಾವಿಸಲ್ಪಟ್ಟಿತು.

ಈ ರೀತಿ ಸಾಂಸ್ಕೃತಿಕ ಪರಿಸರ ಹುಟ್ಟುಹಾಕಿದ ವಿಶಿಷ್ಟ ಮನೋಧರ್ಮದ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಚಿಂತನೆಯನ್ನು ಮಾಡಿದಾಗ ಭಾರತವನ್ನು 'ಹಿಂದೂ' ನೆಲೆಯಲ್ಲಿ ಗುರುತಿಸಿ ಆಧ್ಯಾತ್ಮ ಕೇಂದ್ರಿತ ಸಂಸ್ಕೃತಿ ಚಿಂತನೆಗೆ ಮಹತ್ವ ನೀಡಿರುವುದನ್ನು ಗಮನಿಸಬಹುದು. ಮಾತ್ರವಲ್ಲ ''ಪಶ್ಚಿಮ ದೇಶಗಳಿಗಿಂತ ಭಿನ್ನವಾದ ಮೂಲಭೂತ ವ್ಯತ್ಯಾಸ ಭಾರತದಲ್ಲಿ ಇದೆಯೆಂದೂ, ಆಧ್ಯಾತ್ಮಿಕವಾಗಿ ಭಾರತದ ಪಶ್ಚಿಮದಿಂದ ಕಲಿಯಬೇಕಾಗಿರುವುದು ಏನೂ ಇಲ್ಲ. ಆದ್ದರಿಂದ ಪಾಶ್ಚಾತ್ಯ ಸಂಸ್ಕೃತಿಯ ಉನ್ನತ ಭೌತಿಕ ಪ್ರಗತಿಯ ಗುಣಗಳೊಂದಿಗೆ ಭಾರತದ ಆಧ್ಯಾತ್ಮಿಕ ಹಿರಿಮೆಯನ್ನು ಮೇಳೈಸುವುದರಲ್ಲಿಯೇ ನಿಜವಾದ ಪ್ರಗತಿ, ಆಧುನಿಕತೆಗಳಿವೆ''[೪೩] ಎಂಬುದನ್ನು ತೆಲುಗು ಕಾದಂಬರಿಗಳ ಆಧಾರದಲ್ಲಿ ಸ್ಪಷ್ಟಪಡಿಸುತ್ತಾರೆ.

ವಸಾಹತು ಪೂರ್ವದಲ್ಲಿ ವಸಾಹತು ವಿರೋಧದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಂಸ್ಕೃತಿಯ ಕುರಿತಾದ ನಿಲುವುಗಳು ವಸಾಹತೋತ್ತರ ಕಾಲದಲ್ಲಿ ಆಂತರಿಕ ಅಸಮಾನತೆಗಳ / ಸ್ಥಳೀಯ ಹಾಗೂ ಕಿರುಗುಂಪುಗಳ ಅಸ್ಮಿತೆಯ ರಾಜಕಾರಣವಾಗಿ ಗುರುತಿಸಲ್ಪಡುತ್ತದೆ. ಈ ರೀತಿಯ ಗುರುತಿಸುವಿಕೆಯ ಸಂದರ್ಭದಲ್ಲಿ ಪ್ರಾದೇಶಿಕ ಸತ್ವದೊಂದಿಗೆ ಹೊಸ ಸಾಧ್ಯತೆಗಳನ್ನು ಕಸಿಮಾಡುವ ಆರೋಗ್ಯಕರ ವಾತಾವರಣವನ್ನು ಸೃಷ್ಟಿಸುತ್ತದೆ. ಪರಂಪರೆ, ಗತದ ಶೋಧನೆಯನ್ನು ವರ್ತಮಾನದಲ್ಲಿ ನವೀಕರಿಸಿ, ಭವಿಷ್ಯದಲ್ಲಿ ಮರುಸೃಷ್ಟಿಸುವ ಕೆಲಸಮಾಡುತ್ತದೆ. ಈ ಮರುಸೃಷ್ಟಿಯ ಅತೀ ಮಹತ್ತರ ಅಂಶವೆಂದರೆ ಪರಂಪರೆಯನ್ನು ಬಿಟ್ಟಿರಲಾಗದ ಅಥವಾ ಬಿಡದ ಸಾಮರಸ್ಯ ಸ್ಥಿತಿ. ಇದನ್ನೇ ಕನ್ನಡದ ಪ್ರಸಿದ್ಧ ಕವಿ ಡಿ.ವಿ.ಜಿ.ಯವರು ಹೀಗೆ ಗುರುತಿಸುತ್ತಾರೆ.

ಹೊಸ ಚಿಗುರು ಹಳೆಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆಸತ್ತ್ವದೊಡಗೂಡೆ ಧರ್ಮ
ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜೀವನಕೆ – ಮಂಕುತಿಮ್ಮ

(ಡಿ.ವಿ. ಗುಂಡಪ್ಪ : ಮಂಕುತಿಮ್ಮನ ಕಗ್ಗ)

ಈ ತಾತ್ತ್ವಿಕ ಚಿಂತನೆಯು ಕೂಡಾ ರಾಷ್ಟ್ರೀಯತೆಯ ಹಿಂದಿನ ವೇದಮೂಲ / ಆಧ್ಯಾತ್ಮಿಕ ಸಂಸ್ಕೃತಿಗೆ ಅತ್ಯಮೂಲ್ಯ ಮನ್ನಣೆಯನ್ನು ಕೊಡುತ್ತದೆ. ಹೀಗೆ ಭಾರತ ರಾಷ್ಟ್ರದ ಕಲ್ಪನೆಯ ಭೌತಿಕ ರೂಪದ ಹಿಂದೆ ಅಂತರಾತ್ಮ ಚೈತನ್ಯವೂ ಅಡಗಿದೆ.

೨.೭. ಧರ್ಮದ ಕಾಳಜಿ

ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ನಾಡು, ನುಡಿ, ಸಮಾಜ, ರಾಜಕೀಯ, ಸಂಸ್ಕೃತಿಯ ಚಿಂತನೆಗಳಿರುವಂತೆಯೇ ಧರ್ಮದ ಚಿಂತನೆಯೂ ಮುಖ್ಯವಾದುದು. ನಾಡಿನ ಚರಿತ್ರೆ ಕಟ್ಟುವ ಸಂದರ್ಭದಲ್ಲಿ ನಿರ್ಲಕ್ಷಿತ ಜನಸಮುದಾಯಗಳ ಪ್ರತಿಷ್ಠಿತ ಸಮುದಾಯಗಳ ವೈಭವೀಕರಣ ನಿರಂತರವಾಗಿ ಸಾಗಿದೆ. ಈ ವೈಭವೀಕರಣವು ನಿರ್ದಿಷ್ಟ ಧರ್ಮಗಳ ಹೆಸರಿನಲ್ಲಿ ತಮ್ಮನ್ನು ಪ್ರತ್ಯೇಕಿಸುವ ಪ್ರಯತ್ನವನ್ನು ಮಾಡುತ್ತದೆ. ಪ್ರಾದೇಶಿಕವಾಗಿ, ಭಾಷಿಕವಾಗಿ ಒಂದೇ ಎಂದು ಗುರುತಿಸಲ್ಪಟ್ಟಿರುವಲ್ಲಿದ್ದರೂ ಧಾರ್ಮಿಕವಾಗಿ ಭಿನ್ನರು ಎಂಬ ಕಾಳಜಿಯು ಅವರಲ್ಲಿರುತ್ತದೆ. ಇಂಥ ಸಂದರ್ಭವು ಪರಸ್ಪರ ಗುರುತಿಸುವಿಕೆಯ ನೆಲೆಯಲ್ಲಿ ಕೋಮುವಾದೀ ಸ್ವರೂಪವನ್ನು ತಾಳುತ್ತದೆ. ಇಂಥ ಅಸಮಾನತೆಯು ಸಮಾಜ/ರಾಷ್ಟ್ರದ ಸಾಮಾಜಿಕ ಸ್ಥಿತಿಗತಿಯ ಮೇಲೆ ಪ್ರಭಾವ ಬೀರುತ್ತದೆ. ಇದು ಒಂದು ರೀತಿಯಲ್ಲಿ ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ಪ್ರಕ್ರಿಯೆಗೆ ಸಾಗುತ್ತದೆ. ಇಂಥ ಪ್ರಕ್ರಿಯೆಯು ಧಾರ್ಮಿಕವಾಗಿ ತನ್ನನ್ನು ಬಲಾಢ್ಯ ಎಂದು ಸ್ಥಾಪಿಸುವುದಕ್ಕೆ ಉತ್ಸುಕವಾಗುತ್ತದೆ. ತನ್ನ ಚರಿತ್ರೆಯನ್ನು ಪುನರ್‌ಸ್ಥಾಪಿಸುವ ಸಂದರ್ಭದಲ್ಲಿ ಯಾವುದೇ ಒಂದು ಧರ್ಮವನ್ನು ಮೇಲ್‌ದರ್ಜೆಗೆ ಕೊಂಡೊಯ್ದು ಅದನ್ನು ವೈಭವೀಕರಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾರತದ ರಾಷ್ಟ್ರೀಯತೆಯು ಹಿಂದೂ ಸನಾತನ ಧರ್ಮ ಎಂಬ ನೆಲೆಯಲ್ಲಿ ತನ್ನನ್ನು ರೂಪಿಸಿಕೊಳ್ಳುತ್ತದೆ.

ವಸಾಹತು ಅಧೀನದಲ್ಲಿ ಸಿಲುಕಿದ ಭಾರತವು ಕ್ರಾಂತಿಕಾರಿಗಳ ಪರಿಶುದ್ಧ ದೇಶಭಕ್ತಿಯ ಜ್ವಾಲೆಯೊಂದಿಗೆ ಧರ್ಮಸಂಬಂಧೀ ವಿಚಾರಗಳನ್ನು ಮರೆತು ಸಮಾನ ರಾಷ್ಟ್ರೀಯ ಭಾವನೆಯನ್ನು ಉಂಟುಮಾಡುವ ಉತ್ತಮ ಉದಾಹರಣೆಯಾಗುತ್ತದೆ. ‘‘ಹಿಂದೂ - ಮುಸ್ಲಿಂ ಐಕ್ಯ ಭಾರತದ ರಾಷ್ಟ್ರೀಯತೆಯ ಅತೀಮುಖ್ಯ ಪ್ರೇರಕ ಶಕ್ತಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಈ ಎರಡೂ ಧರ್ಮಗಳು ಭಾರತದ ಒಳಿತಿನ ಸಲುವಾಗಿ ಒಗ್ಗೂಡಿ ಕೆಲಸ ಮಾಡಬೇಕೆಂಬುದು ತಿಲಕರ ಧೋರಣೆಯಾಗಿದ್ದಿತು. ಭಾವೈಕ್ಯ ಸಾಧನೆಗಾಗಿ ಬೇರೆ ಬೇರೆ ಕಾರ್ಯಗಳನ್ನು ಅವರು ಕೈಗೊಂಡರು.’’[೪೪] ಆದರೆ ಈ ಒಮ್ಮತವು ತಮ್ಮ ವಸಾಹತು ಸ್ಥಾಪನೆಗೆ ಅಡ್ಡಿ ಎಂಬುದನ್ನು ಮನಗಂಡ ಬ್ರಿಟಿಷರು ಹಿಂದೂ-ಮುಸ್ಲಿಂ ವಿರೋಧಿತ್ವಕ್ಕೆ ಎಡೆ ಮಾಡಿದರು.

ಸ್ವಾತಂತ್ರ್ಯಾಂದೋಲನದ ದೃಷ್ಟಿಯಿಂದ ತಾವೆಲ್ಲಾ ಭಾರತೀಯರು ಎಂಬ ಚಿಂತನೆ ಮೂಡಿದ್ದರಿಂದ ಬ್ರಿಟಿಷ್ ವಿರೋಧಿ ನೀತಿಗಳೂ ಅವರಿಗೆ ಅನಿವಾರ್ಯವಾದುವು. ಇಂತಹ ಸಂದರ್ಭದಲ್ಲಿ ಬ್ರಿಟಿಷ್ ವಿರುದ್ಧವಾಗಿ ಏಳತೊಡಗಿದ್ದ ರಾಷ್ಟ್ರೀಯ ಧ್ವನಿ ಹಾಗೂ ವಿವೇಕದ ಸ್ವರಗಳು ಹೆಚ್ಚು ಸ್ಫುಟವಾಗತೊಡಗಿತು. ವಸಾಹತುಶಾಹೀ ಆಕ್ರಮಣವು ಒಂದೆಡೆಯಿಂದ ಅಖಂಡ ಭಾರತವನ್ನು ಒಡೆಯುವ ಪ್ರಯತ್ನ ನಡೆಸಿದರೆ ಧರ್ಮಭೇದವಿಲ್ಲದೆ ತಮ್ಮನ್ನು ರಕ್ಷಿಸಿಕೊಳ್ಳಲು ಒಂದಾಗಬೇಕೆಂಬ ಕೂಗು ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿತ್ತು. ಭಾರತಕ್ಕೆ ಚರಿತ್ರೆಯನ್ನು ನಿರ್ಮಿಸ ಹೊರಟ ಮಿಶನರಿಗಳು ತಮ್ಮ ಬರಹಗಳಲ್ಲಿ ಧರ್ಮವನ್ನು ಕುರಿತ ಚರ್ಚೆಯನ್ನು ಮಾಡುತ್ತಾರೆ. ''ಹಿಂದೂ ಜನರ ಸ್ವಭಾವವನ್ನು ಹೇಳುತ್ತಾ ವಿಶ್ವಾಸಘಾತುಕ, ಹೆಣ್ಣಿಗ, ಕೊಳಕ, ಕ್ರಿಯಾಹೀನ''[೪೫] ಎಂಬೀ ಪರಿಭಾಷೆಗಳನ್ನು ಬಳಸಿ ಭಾರತದ ಸಾಮಾಜಿಕ ಪದ್ಧತಿಗಳನ್ನು ಬೊಟ್ಟುಮಾಡಿ ತೋರಿಸುತ್ತಾರೆ. ಕ್ರೈಸ್ತ ಧರ್ಮ ಹಾಗೂ ಮುಸ್ಲಿಂ ಧರ್ಮವು ಏಕರೀತಿಯ ಜೀವನಾದರ್ಶದಲ್ಲಿ ನಂಬಿಕೆಯುಳ್ಳದ್ದು ಎಂದು ಹೇಳುತ್ತಾ ಭಾರತವನ್ನು ಒಡೆದು ಆಳುವ ನೀತಿಯಲ್ಲಿ ನೋಡ ತೊಡಗಿದರು. ಇಂತಹ ಸಂದರ್ಭದಲ್ಲಿ ಭಾರತವನ್ನು ಹಿಂದೂ ಎನ್ನುವ ಧಾರ್ಮಿಕ ಪರಿಭಾಷೆಯಡಿ ಗುರುತಿಸದೆ ಹಿಂದೂ ಎನ್ನುವ ಪ್ರದೇಶವಾಚಿಯಾಗಿ ಕಲ್ಪಿಸಲಾಗಿದೆ. ''ಹಿಂದೂಗಳಾಗಲಿ, ಮುಸಲ್ಮಾನರಾಗಲಿ ನಾವೆಲ್ಲರೂ ಈ ನೆಲದಲ್ಲಿ ಹುಟ್ಟಿದವರು. ನಮ್ಮ ಜೀವನದ ಪೋಷಣೆ, ಸಮೃದ್ಧಿಗೆ ಸಮಾನವಾದ ಆಧಾರ, ಈ ಭೂಮಿ ನಮಗಿಲ್ಲಿ ಸಮಾನ ಹಕ್ಕು ಹಾಗೂ ಬಾಧ್ಯತೆಗಳಿವೆ. ಹಿಂದೂಸ್ಥಾನದ ಈ ಎರಡೂ ಗುಂಪಿನ ಮಕ್ಕಳೂ 'ಹಿಂದೂ ರಾಷ್ಟ್ರ'ವೆಂಬ ಒಂದೇ ಸಮಾನ ಹೆಸರಿನಲ್ಲಿ ಒಂದುಗೂಡಿ ಜೀವಿಸಲು ಇದೇ ನಿಜವಾದ ಆಧಾರ. ಹಿಂದು ಎಂಬ ಪದವನ್ನು ಹಿಂದು ಮತೀಯರಿಗೆ ಮಾತ್ರ ಸೀಮಿತಗೊಳಿಸಲಾಗದು. ಮುಸಲ್ಮಾನರಾಗಲಿ, ಕ್ರೈಸ್ತರಾಗಲಿ ಎಲ್ಲರೂ ಹಿಂದುಗಳೇ''[೪೬] ಎಂದು ಸರ್‌ಸೈಯದ್ ಅಹಮದರು ಲಾಹೋರಿನ ಭಾಷಣದಲ್ಲಿ ಹೇಳಿರುವುದನ್ನು ಶ್ರೇಷಾದ್ರಿಯವರು ಗುರುತಿಸುತ್ತಾರೆ.

ಹೀಗೆ ಹಿಂದೂ ಎಂಬ ಪರಿಭಾಷೆಯು ತನ್ನನ್ನು ವಿಸ್ತೃತಗೊಳಿಸುತ್ತಾ ರಾಷ್ಟ್ರೀಯತೆಯನ್ನು ಸಂಕೀರ್ಣಗೊಳಿಸುತ್ತಾ ಹೋಗುತ್ತದೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಭಾರತ ಮತ್ತು ಪಾಕಿಸ್ಥಾನ ವಿಭಜನೆಯಾದುದನ್ನು ಕುರಿತು ಹೇಳುತ್ತಾ, ಈ ವಿಭಜನೆಯು ರಾಷ್ಟ್ರ ನಿರ್ಮಾಣಕ್ಕೆ ಎಸಗಿದ ದ್ರೋಹ. ''ದ್ವಿರಾಷ್ಟ್ರವೆನ್ನುವುದು ಒಂದು ಮಿಥ್ಯ ಕಲ್ಪನೆ, ದೇವರಿಂದ ಒಂದಾಗಿ ರಚಿತವಾದುದನ್ನು ಮನುಷ್ಯ ತುಂಡರಿಸಲಾರ, ಅದೊಂದು ಘೋರ ಮಿಥ್ಯೆ, ಇದು ಅಸಂಖ್ಯ ಹಿಂದೂ ಮುಸ್ಲಿಂಮರನ್ನು, ಅವರ ಪ್ರಯತ್ನಗಳನ್ನು ವಿಫಲಗೊಳಿಸಿದಂತೆ''[೪೭]. ಆದ್ದರಿಂದ ಧರ್ಮಭೇದವಿಲ್ಲದ ಏಕೈಕ ರಾಷ್ಟ್ರವಾಗಬೇಕು ಎನ್ನುವುದೇ ರಾಷ್ಟ್ರೀಯತೆಯ ಒತ್ತಾಸೆಯಾಗಿದ್ದಿತು.

ರಾಷ್ಟ್ರೀಯತೆಯ ಹಿಂದಿನ ಕಾಳಜಿಯಾಗಿ ಗುರುತಿಸ್ಪಡುವ ಧರ್ಮ ಶ್ರದ್ಧೆಯು ಭಿನ್ನ ಆಯಾಮಗಳನ್ನು ತೆರೆದು ತೋರುತ್ತವೆ. ವ್ಯಕ್ತಿಯ ಆಂತರಿಕವಾದ ನೈತಿಕತೆ, ನಿಲುವುಗಳಿಗೆ ಅದು ಮಹತ್ವವನ್ನು ಕೊಡುತ್ತದೆ. ಧರ್ಮದ ಹೆಸರಿನಲ್ಲಿ ಪ್ರಬಲವಾಗತೊಡಗಿದ ರಾಷ್ಟ್ರೀಯತೆಯನ್ನೇ ಅದು ವಿರೋಧಿಸುತ್ತದೆ. ಏಕೆಂದರೆ ಭಾರತದಂತಹ ಬಹುಭಾಷಿಕ, ಬಹುಧರ್ಮೀಯ ದೇಶಗಳ ಆಲೋಚನೆ ವಿಭಿನ್ನವಾದದ್ದಾಗಿರುತ್ತದೆ. ಆ ಭಿನ್ನತೆಯಲ್ಲೂ ಕೂಡಿ ಬಾಳುವ ಮನಸ್ಥಿತಿ ಇದ್ದಾಗ ಯಾವೊಂದರ ಒಡೆಯುವಿಕೆಯೂ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವುದಕ್ಕೆ ಇರುವ ಅಸ್ತ್ರವಾಗಬಹುದು. ಆದರೆ ವಾಸ್ತವಿಕವಾಗಿ ಧರ್ಮದೊಳಗಿನ ಆಂತರಿಕ ಘರ್ಷಣೆಯೇ ತನ್ನ ಎದುರಾಳಿಯನ್ನು ತೆರೆದು ತೋರಿಸುತ್ತದೆ. ಧರ್ಮದ ವೈಭವೀಕರಣ ಅಲ್ಲಿದ್ದ ನಿರ್ಲಕ್ಷಿತ ಸಮುದಾಯಗಳನ್ನು ಕಡೆಗಣಿಸಿದಾಗ ಆ ನಿರ್ಲಕ್ಷಿತ ಗುಂಪು ತನ್ನೊಳಗಿನ ವೈಶಿಷ್ಟ್ಯವನ್ನು ಪ್ರಕಟಪಡಿಸುವುದಕ್ಕೆ ಮುಂದಾಗುವುದು; ಹಾಗು ವಸಾಹತು ಆಳ್ವಿಕೆಯ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಚರ್ಚೆಯು ಹಿಂದೂತ್ವವನ್ನು ವೈಭವೀಕರಿಸುವ ನೆಲೆಯಲ್ಲಿ ರಾಷ್ಟ್ರೀಯತೆ ನಿರೂಪಿಸಲ್ಪಟ್ಟಿರುವುದನ್ನು ಮುಖ್ಯವಾಗಿ ಗುರುತಿಸಬಹುದು. ಇದಕ್ಕೆ ಪ್ರಮುಖ ಕಾರಣ ಧರ್ಮಶ್ರದ್ಧೆ ಕಡೆ ಒಲವಿರುವ ಭಾರತದ ಆಧ್ಯಾತ್ಮಿಕ ಅಂತರಂಗ.

ವಸಾಹತು ಶಿಕ್ಷಣವನ್ನು ಸ್ವೀಕರಿಸಿಕೊಂಡ ಆಧುನಿಕ ಭಾರತೀಯರಾದ ರಾಜಾರಾಮ್ ಮೋಹನ್‌ರಾಯ, ದಯಾನಂದ ಸರಸ್ವತಿ ಮೊದಲಾದ ಸುಧಾರಣಾವಾದಿಗಳ ಧಾರ್ಮಿಕ ಸುಧಾರಣೆಗಳು ಧಾರ್ಮಿಕ ಅಸಮಾನತೆಯನ್ನು ಮೀರಿ ಬರಬೇಕಾದ ರಾಷ್ಟ್ರೀಯತೆಯ ಅಗತ್ಯವನ್ನು ಪ್ರತಿಪಾದಿಸುತ್ತವೆ. ಬ್ರಾಹ್ಮಣ, ಪುರೋಹಿತಶಾಹಿ ವರ್ಗದವರು ವರ್ತಮಾನದ ಭಾರತದಲ್ಲಿ ಕಂಡ ಅಸಮಾನತೆಗಳು, ಸಾಂಸ್ಕೃತಿಕ ಪುನರುತ್ಥಾನಕ್ಕೆ ದಾರಿಮಾಡುತ್ತವೆ. ಪ್ರಜಾಪ್ರಭುತ್ವ, ಒಕ್ಕೂಟದ ಹಿನ್ನೆಲೆಯಲ್ಲಿ ತನ್ನನ್ನು ರೂಪಿಸಿಕೊಳ್ಳಲು ಯತ್ನಿಸುವ ರಾಷ್ಟ್ರೀಯತೆಯು ಧರ್ಮದ ಕಾಳಜಿಯೊಂದಿಗೆ ಪ್ರಾದೇಶಿಕವಾಗಿ, ನೆಲೆಗೊಳ್ಳುವಂತೆ, ಭಾರತೀಯವಾಗಿಯೂ ಸುಭದ್ರವಾಗುತ್ತದೆ.

ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಇತ್ತೀಚಿನ ಪ್ರವೃತ್ತಿಗಳು ಭಾರತೀಯತೆಯಲ್ಲಿ ಕೋಮುವಾದೀ ರಾಷ್ಟ್ರೀಯತೆಯ ಒಳಪ್ರವೇಶಕ್ಕೆ ನಾಂದಿಯಾಗುತ್ತದೆ. ಏಕೆಂದರೆ ಭಾಷೆ, ಪ್ರದೇಶ, ಜಾತಿ - ಧರ್ಮ ಇವು ಮೂಲಭೂತವಾದೀ ಆಯಾಮದಲ್ಲಿ ಹುಟ್ಟಿಕೊಳ್ಳುವಂತಹುದು. ಇದನ್ನು ಹಿಂದೂ - ಮುಸ್ಲಿಂ - ಕ್ರೈಸ್ತ ಎಂಬ ಸಾಮುದಾಯಿಕವಾಗಿ ಗುರುತಿಸದೆ ಪ್ರಾದೇಶಿಕವಾಗಿ ಬಳಸುವ ಅನಿವಾರ್ಯತೆಯನ್ನು ಮನಗಂಡಿರುವುದು ವಿಶೇಷ. ಆದ್ದರಿಂದ ಭಾರತೀಯತೆಯನ್ನು ಈ ಹಿಂದೆ ಚರ್ಚಿಸಿದ ಭಾಷೆ, ಪ್ರಾದೇಶಿಕತೆ, ಧರ್ಮ ಇವುಗಳಿಗೆ ಸಂಬಂಧಿಸಿದಂತೆ, ಗುರುತಿಸದೆ ಭಾಷಾತೀತ, ಧರ್ಮಾತೀತವಾಗಿ, ಪ್ರದೇಶಾತೀತವಾಗಿ ಗುರುತಿಸುವ ಅನಿವಾರ್ಯತೆ ಉಂಟಾಗಿದೆ. ಅದು ಈ ಎಲ್ಲವನ್ನೂ ಒಳಗೊಂಡ ಕರ್ತವ್ಯ, ಕಾಳಜಿ, ಮಾನವಧರ್ಮ ಎಂಬರ್ಥದಲ್ಲಿ ವಿಸ್ತೃತಗೊಂಡಿದೆ.

ಕೊನೆ ಟಿಪ್ಪಣಿಗಳು

೧. ರಹಮತ್ ತರೀಕೆರೆ; 'ಕನ್ನಡ ಸಂಶೋಧನೆಯ ತಾತ್ತ್ವಿಕ ವಿಚಾರ', ಪುಟ - ೩೭

೨. ದಿನೇಶ್ ನಾಯ್ಕ; ರಾಷ್ಟ್ರೀಯ ವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ (ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ), ಪುಟ - ೩

೩. ರಾಜಾರಾಮ ಹೆಗಡೆ; 'ಗತ-ಕಥನ', ಪುಟ - ೬೨

೪. ರಾಷ್ಟ್ರೀಯತೆಗೆ ಸಂಬಂಧಿಸಿ ಈ ಕೆಳಗಿನ ವಿದ್ವಾಂಸರು ತಮ್ಮ ಕೃತಿಗಳಲ್ಲಿ ಚರ್ಚಿಸುತ್ತಾರೆ.

- ನಾಗರಾಜ್ ಡಿ.ಆರ್ - ಶಕ್ತಿಶಾರದೆಯ ಮೇಳ
- ದಿನೇಶ್ ನಾಯ್ಕ - ರಾಷ್ಟ್ರೀಯ ವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ
- ಚಂದ್ರಶೇಖರ್ ಎಸ್; ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ (ಅನುವಾದ : ನಾಗಣ್ಣ)
- ಶೇಷಾದ್ರಿ ಹೊ.ವೆ; ದೇಶ ವಿಭಜನೆಯ ದುರಂತ ಕಥೆ (ಅನುವಾದ : ಕಾ.ಶ್ರೀ ನಾಗರಾಜ)
- ಸಂತೋಷ ಚೊಕ್ಕಾಡಿ; ದಕ್ಷಿಣ ಕನ್ನಡದ ಕಾವ್ಯದ ವಿಭಿನ್ನ ನೆಲೆಗಳು

೫. ಜವರೇ ಗೌಡ; 'ಕನ್ನಡ ಚಿಂತನೆ' (ಉದ್ಧೃತ) ಪುಟ ೧೦೯

೬. ಫತ್ತೇಸಿಂಗ್; 'ಭಾರತದ ರಾಷ್ಟ್ರೀಯತೆ' ನರಸಿಂಹ ಮೂರ್ತಿ ಎಂ.ಎಸ್. (ಸಂಗ್ರಹ), ಪುಟ ೧೨

೭. ರವೀಂದ್ರನಾಥ ಠಾಗೂರರ 'ಜನಗಣಮನ' ರಾಷ್ಟ್ರಗೀತೆಯು ಭಾರತವನ್ನು ಪ್ರಾದೇಶಿಕತೆಯ ಮೂಲಕ ಗ್ರಹಿಸಿರುವುದು ಹಾಗೂ ಕನ್ನಡದ ರಾಷ್ಟ್ರೀಯತೆ ಬಿಂಬಿಸುವ ಕವಿತೆಗಳಲ್ಲಿ ಅದರ ಪ್ರಭಾವ ಆಗಿರುವುದನ್ನು ಕಾಣಬಹುದು. (ಕುವೆಂಪುರವರ ನಾಡಗೀತೆ)

೮. ಶಿವರಾಮ ಪಡಿಕ್ಕಲ್; 'ನಾಡುನುಡಿಯ ರೂಪಕ', ಪುಟ - ೪೪೩

೯. ನಾಗರಾಜ್ ಡಿ.ಆರ್; 'ಸಂಸ್ಕೃತಿ ಕಥನ', ಪುಟ - ೭೦-೭೧

೧೦. ಶಿವರುದ್ರಪ್ಪ ಜಿ.ಎಸ್; 'ಸಮಗ್ರ ಗದ್ಯ', ಪುಟ ೯೦-೯೩

೧೧. ದಿನೇಶ್ ನಾಯ್ಕ; 'ರಾಷ್ಟ್ರೀಯವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ', ಪುಟ ೫೪

೧೨. ಭಾರತೀಯ ಭಾಷೆಗಳನ್ನು ಅಧ್ಯಯನ ಮಾಡಿದ ಪಾಶ್ಚಾತ್ಯ ವಿದ್ವಾಂಸರಾದ ಕಾಲ್ಡ್‌ವೆಲ್, ಮ್ಯಾಕ್ಸ್ ಮುಲ್ಲರ್, ಕಿಟೆಲ್ ಮೊದಲಾದವರನ್ನು ಇಲ್ಲಿ ನೆನೆಯಬಹುದು.

೧೩. ಈ ರೀತಿ ಗಡಿಯನ್ನು ಗುರುತಿಸುವುದರೊಂದಿಗೆ ಅದನ್ನು ಸಾಮುದಾಯಿಕ ಆಸ್ತಿ ಎಂಬಂತೆ ಇಂಚಿಂಚನ್ನು ರಕ್ಷಿಸುವುದು ಕರ್ತವ್ಯ ಎಂಬ ವಾದವೂ ಇದೆ.

೧೪. ಕೀರ್ತಿನಾಥ ಕುರ್ತಕೋಟಿ 'ಕನ್ನಡ ಕಾವ್ಯದಲ್ಲಿ ರಾಷ್ಟ್ರೀಯತೆಯ ಕಾಳಜಿಗಳು ಮತ್ತು ಅಭಿವ್ಯಕ್ತಿ' (ಲೇಖನ); ಶಿವರುದ್ರಪ್ಪ ಜಿ.ಎಸ್; ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಪುಟ ೧೨

೧೫. ನಾಗರಾಜ್ ಡಿ.ಆರ್. 'ಶಕ್ತಿಶಾರದೆಯ ಮೇಳ', ಪುಟ ೨೬೧

೧೬. ಶಿವರಾಮ ಪಡಿಕ್ಕಲ್; 'ನಾಡುನುಡಿಯ ರೂಪಕ', ಪುಟ ೪೨-೪೪ (ಉದ್ಧೃತ ; ಬೆನೆಡಿಕ್ಟ್ ಆ್ಯಂಡರ್ ಸನ್)

೧೭. ಸುವರ್ಣ ಮಹೋತ್ಸವ ಸಂಚಿಕೆ; ಕರ್ನಾಟಕ ಸ್ವಾತಂತ್ರ್ಯ ಯೋಧರು ಹಾಗೂ ಉತ್ತರಾಧಿಕಾರಿಗಳ ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸಂಚಿಕೆ, ಪುಟ ೨೭

೧೮. ಪೂರ್ವೋಕ್ತ, ಪುಟ ೨೭

೧೯. ದಿನೇಶ್ ನಾಯ್ಕ; ಪೂರ್ವೋಕ್ತ, ಪುಟ ೫೯

೨೦. ನಾಗರಾಜ್ ಡಿ.ಆರ್; ಶಕ್ತಿಶಾರದೆಯ ಮೇಳ, ಪುಟ ೨೬೫

೨೧. ರಾಷ್ಟ್ರೀಯತೆ ಎಂಬುದು ಒಂದು ಪಂಥವಲ್ಲ; ನಂಬಿಕೆ ಮಾತ್ರವಲ್ಲ; ನಮ್ಮ ಮಟ್ಟಿಗೆ ರಾಷ್ಟ್ರೀಯತೆ ಎಂದರೆ ಸನಾತನ ಧರ್ಮವೇ ಎಂದು ಹೇಳುವ ಮಹರ್ಷಿ ಅರವಿಂದರ ಮಾತುಗಳು ಇಲ್ಲಿ ಉಲ್ಲೇಖಾರ್ಹ. (ಉಧೃತ: ನವರತ್ನ ಎಸ್. ರಾಜಾರಾಂ; ಇತಿಹಾಸ, ಸಂಸ್ಕೃತಿ, ರಾಷ್ಟ್ರೀಯತೆ, ಪುಟ ೧೭೮)

೨೨. ನಾಗರಾಜ್ ಡಿ.ಆರ್. ಶಕ್ತಿಶಾರದೆಯ ಮೇಳ, ಪುಟ ೨೬೯

೨೩.. ಜನಸಮುದಾಯವೊದರಲ್ಲಿ ಎಲ್ಲರೊಂದಿಗೆ ಕೂಡಿ ಬಾಳಲಾಗದ ಅಸ್ಪೃಶ್ಯವರ್ಗವನ್ನು ಕಾರ್ನಾಡ್ ಸದಾಶಿವರಾಯರು ಹರಿಜನ ಎನ್ನುವ ಪರಿಭಾಷೆಯಿಂದ ಗುರುತಿಸಿದ್ದಾರೆ.

೨೪. ಬಿ.ವಿ. ಕಕ್ಕಿಲ್ಲಾಯ (ಸಂ), ಸ್ವಾತಂತ್ರ್ಯದ ಸ್ವರ್ಣಹೆಜ್ಜೆ ದಕ್ಷಿಣ ಕನ್ನಡ, ಪುಟ - ೩೦.

೨೫. ಕಾರ್ನಾಡ್ ಸದಾಶಿವರಾಯರ ಹರಿಜನೋದ್ಧಾರದ ಕಾರ್ಯಗಳ ವಿವರಣೆಗಾಗಿ ನೋಡಿ

ವರದರಾಜ ಪೈ; ದಕ್ಷಿಣ ಭಾರತದ ಮಹಾತ್ಯಾಗಿ; ಕಾರ್ನಾಡ್ ಸದಾಶಿವರಾಯರು

೨೬. ರಾಷ್ಟ್ರೀಯವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ, ಪುಟ - ೧೨೬

೨೭. ಸ್ವಯಂತಂತ್ರವಾದವು ವ್ಯಕ್ತಿ ಮತ್ತು ಸಮಾಜವನ್ನು ಪ್ರತ್ಯೇಕಿಸಿ ವ್ಯಕ್ತಿಯನ್ನು ಸ್ವತಂತ್ರ ಎಂದು ತಿಳಿಯುತ್ತದೆ. ಕೌಟುಂಬಿಕ, ಸಾಮಾಜಿಕ, ಸಂಬಂಧಗಳಿಂದ ಆತನನ್ನು ಪ್ರತ್ಯೇಕಿಸಿ ಸ್ವಪ್ರಜ್ಞೆ ಯಿಂದ ಆತ ಸ್ವಯಂಪೂರ್ಣತೆಯನ್ನು ಸಾಧಿಸುತ್ತಾನೆ ಎಂದು ಹೇಳುತ್ತದೆ. (ನೋಡಿ: ದಿನೇಶ್ ನಾಯ್ಕ; ರಾಷ್ಟ್ರೀಯವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ, ಪುಟ ೧೪-೩೧

೨೮. ೧೮೭೦ರಲ್ಲಿ ಉಳ್ಳಾಲ ರಘುನಾಥಯ್ಯ ಅವರ ನೇತೃತ್ವದಲ್ಲಿ ಬ್ರಹ್ಮಸಮಾಜ ಎಂಬ ಹೆಸರಿನಲ್ಲಿ ಮಂಗಳೂರಿನಲ್ಲಿ ರಾಜಾರಾಮ್ ಮೋಹನ್‌ರಾಯರ ಬ್ರಹ್ಮಸಮಾಜ ಪುನರ್‌ರೂಪ ಪಡೆಯಿತು ಎಂಬುದನ್ನು ದಿನೇಶ್ ನಾಯ್ಕ ಅವರು ಗುರುತಿಸುತ್ತಾರೆ. (ಪೂರ್ವೋಕ್ತ), ಪುಟ ೧೨೬

೨೯. ನವರತ್ನ ಎಸ್. ರಾಜಾರಾಂ; ಇತಿಹಾಸ, ಸಂಸ್ಕೃತಿ, ರಾಷ್ಟ್ರೀಯತೆ, ಪುಟ ೧೭೫

೩೦. ಅದೇ ” ” , ಪುಟ ೧೭೫

೩೧. ನಾಗರಾಜ್ ಡಿ.ಆರ್; ಶಕ್ತಿಶಾರದೆಯ ಮೇಳ, ಪುಟ ೨೬೦-೨೬೧

೩೨. ನಾಗರಾಜ್ ಡಿ.ಆರ್; ಸಂಸ್ಕೃತಿ ಕಥನ, ಪುಟ ೭೧

೩೩. ಹೆಚ್ಚಿನ ವಿವರಗಳಿಗಾಗಿ ನೋಡಿ: ಶಿವರಾಮ ಪಡಿಕ್ಕಲ್, ನಾಡುನುಡಿಯ ರೂಪಕ, ಪುಟ ೩೮

೩೪. ಬಿ.ವಿ. ಕಕ್ಕಿಲ್ಲಾಯ, ಜಾಗತಿಕ ಇತಿಹಾಸದ ಇಣುಕು ನೋಟಗಳು (ಲೇಖನ) ಪೊಲಿ ಕೆನರಾ ೨೦೦, ಪುಟ ೨೬೪

೩೫. ದಿನೇಶ್ ನಾಯ್ಕ; ಪೂರ್ವೋಕ್ತ (ಉಧೃತ : ವ್ಯಾಟ್ಸನ್), ಪುಟ ೩೨-೩೪

೩೬. ದಿನೇಶ್ ನಾಯ್ಕ; ಅದೇ ” ” , ಪುಟ ೩೨-೩೪

೩೭. ಹೊ.ವೆ. ಶೇಷಾದ್ರಿ; ದೇಶ ವಿಭಜನೆಯ ದುರಂತ ಕಥೆ (ಅನುವಾದ : ಕಾ.ಶ್ರೀ. ನಾಗರಾಜ), ಪುಟ ೨

೩೮. ಗಿರಡ್ಡಿ ಗೋವಿಂದ ರಾಜ; ಸ್ವಾತಂತ್ರ್ಯೋತ್ತರ ಕನ್ನಡ ಕಾವ್ಯದಲ್ಲಿ ರಾಜಕೀಯ ಪ್ರಜ್ಞೆಯ ಸ್ವರೂಪ (ಲೇಖನ) ಶಿವರುದ್ರಪ್ಪ ಜಿ.ಎಸ್; ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಪುಟ ೭೧

೩೯. ರಹಮತ್ ತರೀಕೆರೆ ; ಕನ್ನಡ ಸಂಶೋಧನೆಯ ತಾತ್ತ್ವಿಕ ವಿಚಾರ, ಪುಟ ೬

೬೮. ಶ್ರೀಕಂಠ ಶಾಸ್ತ್ರೀ, ಎಸ್; ಭಾರತೀಯ ಸಂಸ್ಕೃತಿ, ಪುಟ - ೧

೬೯. ರಹಮತ್ ತರೀಕೆರೆ ; ಪೂರ್ವೋಕ್ತ, ಪುಟ ३೧-३೭

೬೨. ಹೊ.ವೆ. ಶೇಷಾದ್ರಿ; ಪೂರ್ವೋಕ್ತ (ಉಧೃತ : ರಾಧಾ ಕುಮುದ ಮುಖರ್ಜಿ ಫಂಡಮೆಂಟಲ್ ಯೂನಿಟಿ ಓಫ್ ಇಂಡಿಯಾ), ಪುಟ - ೪

೬३. ಶಿವರಾಮ ಪಡಿಕ್ಕಲ್; ನಾಡುನುಡಿಯ ರೂಪಕ, ಪುಟ - ३೭

೬೪. ಹೆಚ್ಚಿನ ವಿವರಣೆಗಾಗಿ ನೋಡಿ ಹೊ.ವೆ. ಶೇಷಾದ್ರಿ, ಪೂರ್ವೋಕ್ತ, ಪುಟ - ೪೫

೬೫. ದಿನೇಶ್ ನಾಯ್ಕ; ಪೂರ್ವೋಕ್ತ (ಉದ್ಧೃತ ಜೇಮ್ಸ್‌ಮಿಲ್), ಪುಟ - ೨೪

೬೬. ಹೊ.ವೆ. ಶೇಷಾದ್ರಿ; ಪೂರ್ವೋಕ್ತ, ಪುಟ - ೨೪

೬೭. ಅದೇ ” ” ಪುಟ - ೬

ಅಧ್ಯಾಯ - ೩

ಸ್ವಾತಂತ್ರ್ಯಪೂರ್ವ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ

ಅಧ್ಯಾಯ - ೩

ಸ್ವಾತಂತ್ರ್ಯಪೂರ್ವ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ

೩.೧ ಪ್ರವೇಶ

ಕರ್ನಾಟಕದಲ್ಲಿ ರಾಷ್ಟ್ರೀಯತೆ ಚಿಗುರಲು ವಸಾಹತುಶಾಹಿ ಆಡಳಿತ ಹಾಗೂ ಪಾಶ್ಚಾತ್ಯ ಶಿಕ್ಷಣವೇ ಮುಖ್ಯ ಕಾರಣ. ಆಲೂರು, ಗಳಗನಾಥ, ಶಾಂತಕವಿ, ವಾಸುದೇವಾಚಾರ್ಯ, ಸುಬೋಧರಾಮರಾಯ ಮೊದಲಾದವರು ಆರಂಭಿಕ ಹಂತದ ರಾಷ್ಟ್ರೀಯ ಭಾವನೆಗಳನ್ನು ಬಿತ್ತಿದರು. ದಕ್ಷಿಣ ಕನ್ನಡವಂತೂ ಅಸಂಖ್ಯಾತ ಕೋಮುಗಳಾಗಿ ಯಾವುದೇ ಒಂದು ಜಾತಿಯನ್ನು ಒಟ್ಟುಗೂಡಿಸಿದರೆ ಅಖಂಡವಾಗದ ಸ್ಥಿತಿಗೆ ಒಳಗಾಗಿತ್ತು. ಭಾಷಿಕ, ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವಿಭಿನ್ನತೆಗಳು ಅವರನ್ನು ಬೆಸೆಯುವಲ್ಲಿ ಅಡ್ಡಿಯನ್ನುಂಟು ಮಾಡಿದವು. ತಾವು ಕಣ್ಣಾರೆ ಅನುಭವಿಸಿದ ಘಟನೆಗಳನ್ನು ತಮ್ಮ ಅಭಿವ್ಯಕ್ತಿಯ ಮೂಲಕ ಹಿಡಿದಿಡಲು ಪ್ರಯತ್ನಿಸಿದ ಸಮಾಜದ ಒಂದು ವರ್ಗವು ರಾಷ್ಟ್ರದ ಹೆಸರಿನಲ್ಲಿ ಜನತೆಯನ್ನು ಒಂದಾಗಿಸುವ ಪ್ರಯತ್ನ ಮಾಡಿದರು. ರಾಷ್ಟ್ರಾಭಿಮಾನದ ಮೂಲಕ ಜನತೆಯನ್ನು ಬಡಿದೆಬ್ಬಿಸಲು ಪ್ರಭುತ್ವವನ್ನು ಮೀರಿ ನಿಲ್ಲುವ ಕಾವ್ಯವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿದರು. ಏಕೆಂದರೆ ಹೃದ್ಯ ಗುಣವುಳ್ಳ, ಕಾವ್ಯವು ಮನಸ್ಸಿನಲ್ಲಿ ನೇರವಾಗಿ ನೆಲೆ ನಿಲ್ಲುವಂತಹುದು. ಪ್ರಭುತ್ವದಿಂದಾಗಿ ಭಾಷೆಯು ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿರಬೇಕಾದ ಸಂದರ್ಭದಲ್ಲಿ ವಿಶೇಷ ಏಕಕಾಲದಲ್ಲಿ ಅದು ಪ್ರಭುತ್ವವನ್ನು ನಿರಾಕರಿಸುತ್ತಾ ತನ್ನ ನಾಡು-ನುಡಿ, ಸಮಾಜ, ರಾಜಕೀಯ, ಸಂಸ್ಕೃತಿ, ಧರ್ಮದ ಕುರಿತ ಕಾಳಜಿಯನ್ನು ಅಭಿವ್ಯಕ್ತಿಸುತ್ತದೆ. ಇಂತಹ ಸಂದರ್ಭದಲ್ಲಿ ಪ್ರಾದೇಶಿಕತೆಯ ಮೂಲಕ ಅಖಂಡ ಭಾರತವನ್ನು ನೋಡುವ ಪ್ರಯತ್ನವನ್ನು ಇಲ್ಲಿನ ಕವಿಗಳು ಮಾಡುತ್ತಾರೆ. ಆದ್ದರಿಂದ ಸ್ವಾತಂತ್ರ್ಯ ಪೂರ್ವದ ಕವಿತೆಗಳ ಚರ್ಚೆಯಲ್ಲಿ ಚರ್ಚಿಸಲಾದ ಅಂಶಗಳಿರುವ ಪಂಜೆ ಮಂಗೇಶರಾಯ, ಗೋವಿಂದ ಪೈ, ಕಡೆಂಗೋಡ್ಲು ಶಂಕರಭಟ್ಟ, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಶಿವರಾಮ ಕಾರಂತ, ಸೇಡಿಯಾಪು ಕೃಷ್ಣ ಭಟ್ಟ ಮೊದಲಾದವರನ್ನು ಮುಖ್ಯವಾಗಿ ಗಮನಿಸುತ್ತಾ ಸಂದರ್ಭೋಚಿತ ಉಳಿದ ಕವಿತೆಗಳ ಚರ್ಚೆಯೊಂದಿಗೆ ರಾಷ್ಟ್ರೀಯತೆಯ ಆಶಯವನ್ನು ಚರ್ಚಿಸಲಾಗುವುದು.

೩.೨ ನಾಡು ಕುರಿತ ಚಿಂತನೆ

ವಸಾಹತು ಆಡಳಿತವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿಯ ಭಾಷೆಯ ಮೂಲಕ ಅಭಿವ್ಯಕ್ತಿ ಪಡೆದುದಕ್ಕೆ ದಕ್ಷಿಣ ಕನ್ನಡದ ಕವಿತೆಗಳು ಸಾಕ್ಷಿಯಾಗುತ್ತವೆ. ಆಧುನಿಕ ಶಿಕ್ಷಣದ ಮೂಲಕವೇ ತಮ್ಮ ಮೇಲಾಗುತ್ತಿರುವ ದೌರ್ಜನ್ಯವು ನಾಡಪ್ರೇಮ, ದೇಶಾಭಿಮಾನವಾಗಿ ಅವರನ್ನು ಬಡಿದೆಚ್ಚರಿಸಿದ ಸಂದರ್ಭದಲ್ಲಿ ಹುಟ್ಟಿಕೊಂಡ ಕವನಗಳಲ್ಲಿ ನಾಡಿನ ಕುರಿತ ಕಾಳಜಿ, ಅಭಿಮಾನ, ಉದ್ಗಾರಗಳು ಸಹಜವಾಗಿಯೇ ಕಾಣಿಸಿಕೊಂಡವು. ಪ್ರಾದೇಶಿಕ ಚಿಂತನೆಯ ಹಿನ್ನೆಲೆಯಲ್ಲಿ ದೇಶವನ್ನು ಒಂದಾಗಿ ಕಾಣುವ ಚಿಂತನೆಯನ್ನು ಇದು ಹುಟ್ಟುಹಾಕಿತು. ತನ್ನ ಸುತ್ತುಮುತ್ತಲಿನ ವೈವಿಧ್ಯಗಳ ಬಹುರೂಪೀ ವ್ಯವಸ್ಥೆಯಲ್ಲಿ ತನ್ನನ್ನು ಒಂದುಗೂಡಿಸುವ ಪ್ರಯತ್ನವನ್ನು ಇಲ್ಲಿನ ಕವಿತೆಗಳು ಮಾಡಿದವು. ದೇಶಾಭಿಮಾನವು ರೋಷಾವೇಶದ ದಾರಿಯನ್ನು ಹಿಡಿಯದೆ ಮುಗ್ಧವಾಗಿ, ಆಂತರ್ಯದಲ್ಲಿ ಒಪ್ಪಿಕೊಳ್ಳುವ ಅಭಿಮಾನವಾಗಿ ಇಲ್ಲಿನ ಕವಿತೆಗಳನ್ನು ಕಾಣಬಹುದು. ಇದು ಆಯಾ ಪ್ರದೇಶಗಳ ಮೂಲಕ ತಮ್ಮನ್ನು ಗುರುತಿಸುವ ರಾಷ್ಟ್ರೀಯತೆಯ ಕಲ್ಪನೆಯನ್ನು ಹುಟ್ಟುಹಾಕಿತು. ಪ್ರಾಕೃತಿಕ ವರ್ಣನೆ, ಸ್ಥಳೀಯ ಸಂಸ್ಕೃತಿ, ಚರಿತ್ರೆ, ನುಡಿ, ಕುರಿತು ಅಭಿಮಾನವುಕ್ಕಿಸುವ ಸಂದರ್ಭಗಳು ಇಲ್ಲಿನ ಕವಿತೆಗಳಲ್ಲಿ ಕಾಣಿಸಿಕೊಂಡವು.

ಪಡುವಣ ತೀರದ

ಕನ್ನಡ ನಾಡಿನ

ಕಾರ್ಗಾಲದ ವೈಭವವೇನು?[೧] - ಕವಿತೆಯ ಮೂಲಕ ಕಣ್ಣಿಗೆ ಕಟ್ಟುವಂತೆ ಕಾರ್ಗಾಲದ ವೈಭವವನ್ನು ಚಿತ್ರಿಸುವ ಕವಿಗೆ, ಪಡುವಣಬೆಟ್ಟದ ಬುಡದಲ್ಲಿ ಹುಟ್ಟುವ ನೇತ್ರಾವತಿಯೂ[೨] ಅಷ್ಟೇ ಮುಖ್ಯವಾಗುತ್ತದೆ. ಧೀರಮೂರ್ತಿಯಂತೆ ತಲೆಯೆತ್ತಿ ನಿಂತ 'ಪೊಸಡಿಗುಂಪೆ'[೩] ಕಣ್ಣಿಗೆ ತಂಪನ್ನು ನೀಡುವ, ಹಿರಿಮೆಯನ್ನು ಸಾರುವ ರಸಿಕನ ನಿಸರ್ಗದತ್ತ ಭೋಜನವಾಗುತ್ತದೆ. ಈ ಪ್ರಾದೇಶಿಕ ವರ್ಣನೆಗಳೆಲ್ಲವೂ ತಮ್ಮ ಸ್ಥಳೀಯ ವೈವಿಧ್ಯದ ಗೈಮೆಯಾದರೆ ಇವೆಲ್ಲವನ್ನೂ ಒಳಗೊಂಡು ನದಿ, ಪಶು, ಪಕ್ಷಿ, ಪುಷ್ಪ ಸಮೂಹಗಳೆಲ್ಲವೂ 'ಭಾರತವೆಂಬ ಅಖಂಡತೆಯ ಚಿತ್ರಿಸುವ ಕುರುಹುಗಳೆಂಬಂತೆ ಕವಿತೆಗಳು ಚಿತ್ರಿಸುತ್ತವೆ. ಆರಂಭದಲ್ಲಿ ಸಹಜವರ್ಣನೆಗಳಾಗಿ ಮೂಡಿಬರುವ ಕವಿತೆಗಳು, ಆಂತರ್ಯದ ಸಾಕ್ಷಾತ್ಕಾರವೆಂಬಂತೆಯೂ ಕಾಣಿಸಿಕೊಳ್ಳುತ್ತವೆ. ಪರಕೀಯ ಭಾಷೆ, ಸಂಸ್ಕೃತಿಯೊಂದರ ಹೇರಿಕೆಯು ಸ್ವಭಾಷೆ, ಸ್ವದೇಶದ ಮೇಲೆ ಮೂಡಿದ ಅಭಿಮಾನವಾಗಿ ತನ್ನ ಪ್ರಾದೇಶಿಕತೆಯನ್ನು ಗುರುತಿಸುತ್ತಲೇ ರಾಷ್ಟ್ರೀಯತೆಯನ್ನು ಅಂತರ್ಲೀನಗೊಳಿಸಿದ ಬಗೆ ಇದು.

ತರುಲತೆಗಳ ಹೂದೋಟದ ಮಾತೆ । ಸುರಸ್ಥಾನಕೆ ಯೋಗ್ಯದ ಮಾತೆ
ಶುಕಪಿಕ ಕೋಕಿಲ ಆಶ್ರಿತ ಮಾತೆ । ಸುಖವನು ಬೀರುವ ಸಂತಸಮಾತೆ
ಸಕಲ ಪಕ್ಷಿ ಸಮೂಹದ ಮಾತೆ । ಸಕರು ಸುಖ ಸಂಜೀವಿನಿ ಮಾತೆ ।[೪]

ಹಸಿರು ಹೊಲ ಬಯಲಲ್ಲಿ; ಗೊನೆಹಣ್ಣ ತೋಟದಲಿ
ಕಲಕಲನಿನಾದದಿಂ ನದಿ ಹರಿಯುವಲ್ಲಿ
ಗಿಡಮರ ತುಂಬಿ ಚೆಲುಚೆಲ್ಲಿದೂರಿನಲಿ[೫]

– ತಾನು ಬೆಳೆದೆನೆನ್ನುವ ಕವಿಯ ಅಂತರಂಗವು ಇಂತಹ ನಾಡಿನಲ್ಲಿ ಹುಟ್ಟಿದ್ದಕ್ಕಾಗಿ ಧನ್ಯತೆಯನ್ನು ಸೂಚಿಸುತ್ತದೆ.

ಮೇಲ್ನೋಟಕ್ಕೆ ಪ್ರಾಕೃತಿಕ ವೈಶಿಷ್ಟ್ಯಗಳನ್ನು ಹೇಳುವ ಇಲ್ಲಿನ ಕವಿತೆಗಳು ಕನ್ನಡತನದ ಅಂಗವಾಗಿಯೇ ಭಾರತೀಯತೆಯನ್ನು ಪ್ರಕಟಿಸುತ್ತವೆ. ಇಲ್ಲಿನ ಸಸ್ಯ ಸಮೃದ್ಧ ಭೂಮಿ, ಹಿಮಗಿರಿ, ಪಶು, ಪಕ್ಷಿಗಳನ್ನು ನೆನಪಿಸುವ ಕವಿಗಳಿಗೆ ಆದಿಕವಿ ಪಂಪನಲ್ಲಿರುವಂತಹ ದೇಶಾಭಿಮಾನ ಉಕ್ಕುತ್ತದೆ. ''ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್'' ಎಂದು ಹೇಳುವ ಪಂಪ ಕವಿಯ ನಾಡಾಭಿಮಾನ ದಕ್ಷಿಣ ಕನ್ನಡದ ಕವಿತೆಗಳ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತವೆ. ಪಂಜೆ ಮಂಗೇಶರಾಯರ 'ಸತ್ಯಸೀಮೆಗೆ ನಡೆಸೆನ್ನ ತಾಯಿ', ಗೋವಿಂದ ಪೈಯವರ 'ಭಾರತಾಂಬೆಯ ಮಹಿಮೆ', 'ಹಿಂದೂಸ್ಥಾನ್ ಹಮಾರ' ಕವನಗಳಲ್ಲಿ ಇದೇ ರೀತಿಯ ಆಶಯಗಳಿರುವುದನ್ನು ಗುರುತಿಸಬಹುದು.[೬] ರಾಷ್ಟ್ರವನ್ನು 'ಸ್ತ್ರೀ'ಯಾಗಿ ಪರಿಕಲ್ಪಿಸಿ ಆಕೆಗೆ ಗೌರವವನ್ನು ನೀಡುವುದು, ದೇಶದ ಏಕತೆಯ ಬಗೆಗಿನ ಕಾಳಜಿ, ಭಾರತಮಾತೆಯ ಮಡಿಲಲ್ಲಿ ಹುಟ್ಟಿ ಬೆಳೆದ ಧನ್ಯತಾಭಾವ, ಮಾತೃಭೂಮಿಯ ಬಗೆಗಿನ ಅಭಿಮಾನವು ಉತ್ಕಟ ರಾಷ್ಟ್ರಾಭಿಮಾನದ ಅರ್ಪಣಾ ಮನೋಭಾವದ ರೀತಿಯಲ್ಲಿ ವ್ಯಕ್ತವಾಗುತ್ತದೆ. ಭಾರತದಂತಹ ದೇಶದಲ್ಲಿ ಹುಟ್ಟಿದ ತಾನು ಅದರ ಋಣವನ್ನು ತೀರಿಸಬೇಕಾದ ಕರ್ತವ್ಯವನ್ನು ಜ್ಞಾಪಿಸಿ ಅದನ್ನು ಯಾವ ವಿಧದಲ್ಲಿ ನೀಡಬೇಕೆಂಬ ಪ್ರಶ್ನೆಯೊಂದಿಗೆ ಭಾರತಮಾತೆಯಲ್ಲಿ ನಿವೇದನೆ ಮಾಡುವ ಪರಿ ಇಲ್ಲಿನ ಕವಿತೆಗಳಲ್ಲಿವೆ.

ಆವ ವಿಧದಲಿ ಕನ್ನಡದ ಮಾತೆ ನಿನ್ನಡಿಯ

ಸೇವೆಗೆನ್ನೀ ತನುವ ಮುಡಿಪಾಗಿ ಕೊಡಲಿ?[೭] – ಎಂದು ಆರಂಭವಾಗುವ ಕವನದ ಸಾಲುಗಳು 'ಜನನೀ ನಿನಗಾಗಿ ತನ್ನೆಲ್ಲವನು ಬಲಿಗೊಡಲು ಅನುವಾಗಿರುವನಿದೋ ನಿನ್ನ ನಲ್ಗುವರ..... ಮನಕೆ ಮೆಚ್ಚೆಂತಾದುದಂತಾಣತಿಯನಿತ್ತು ಕೊನೆಗೆ ನೋಡೌ ನನ್ನ ಸಾಹಸದ ಪರಿಯ' ಎಂಬ ಅಂತ್ಯದೊಂದಿಗೆ

ರಾಷ್ಟ್ರಕ್ಕಾಗಿ ಸದಾ ತಾನು ಏನು ಮಾಡಲು ಸಿದ್ಧ ಎಂಬ ಪ್ರಮಾಣವನ್ನು ಮಾಡುತ್ತವೆ. ಕಯ್ಯಾರ ಕಿಂಞಣ್ಣ ರೈಯವರ 'ತುಮುಲ', ಗೋವಿಂದ ಪೈಯವರ 'ಶ್ರೀ ಮಾತೃಭೂಮೀಶ್ವರಾಷ್ಟಕ', ಜಿ.ಆರ್. ಪಾಂಡೇಶ್ವರ ಅವರ 'ಕನ್ನಡಕುಲ' ಕವನಗಳೂ ಕೂಡಾ ಇದೇ ಆಶಯವನ್ನು ವ್ಯಕ್ತಪಡಿಸುತ್ತವೆ.

ನಾಡಾಭಿಮಾನವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ತಮಗಿದ್ದ ಭವ್ಯಸಂಸ್ಕೃತಿಯೊಂದನ್ನು ತೆರೆದಿಡುವ ದಕ್ಷಿಣ ಕನ್ನಡದ ಕವಿತೆಗಳು, ವಸಾಹತುಶಾಹಿಯ ಆಕ್ರಮಣದ ಹೊಡೆತದಿಂದ ಅವನತಿಯತ್ತ ಹೋಗುತ್ತಿರುವ ತಮ್ಮ ಸಂಸ್ಕೃತಿಯನ್ನು ಪುನರ್‌ನಿರ್ಮಾಣ ಮಾಡಲು ರಾಷ್ಟ್ರಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದವು. ಇತಿಹಾಸದ ವೈಭವೀಕರಣದೊಂದಿಗೆ ಅಂತರ್ಗತವಾದ ಈ ಸಂಸ್ಕೃತಿ ಚಿಂತನೆಯು ವಸ್ತು ಸ್ಥಿತಿಯನ್ನು ಮರೆಯಿಸಿ ತಾತ್ತ್ವಿಕ ಚಿಂತನೆಯತ್ತ ಕೊಂಡೊಯ್ಯಲು ಬಹಳಷ್ಟು ಶ್ರಮವಹಿಸಿತು.

೩.೩. ನುಡಿ/ಭಾಷೆಯ ಕುರಿತ ನಿಲುವು

ಭಾಷೆ, ಧರ್ಮ, ಮತ, ಸಂಸ್ಕೃತಿ, ಪ್ರಾಕೃತಿಕ ಲಕ್ಷಣಗಳಲ್ಲಿ ಏಕರೂಪತೆಯನ್ನು ಗುರುತಿಸಲು ಸಾಧ್ಯವಿಲ್ಲ. ಆದರೆ, ಆ ಭಿನ್ನತೆಯಲ್ಲೂ ಅಂತರಾಳದಲ್ಲಿ ವ್ಯಕ್ತವಾಗುವ ಅಂಶವೊಂದಿದೆ. ಅದುವೇ ರಾಷ್ಟ್ರೀಯತೆ. ಈ ಮೇಲಿನವುಗಳಲ್ಲಿ ಯಾವೊಂದರ ಅಸ್ತಿತ್ವವು ವ್ಯಕ್ತವಾಗುವಲ್ಲಿ ರಾಷ್ಟ್ರೀಯತೆಯ ಬೇರುಗಳು ಹುದುಗಿರುತ್ತವೆ. ಅನ್ಯಭಾಷೆಯೊಂದು 'ಸ್ವ'ಭಾಷೆಯ ಮೇಲೆ ತನ್ನ ಹಿಡಿತವನ್ನು ಸಾಧಿಸಿದಾಗ ರಾಷ್ಟ್ರೀಯತೆಯು ಸಹಜವಾಗಿಯೇ ವ್ಯಕ್ತವಾಗುತ್ತದೆ. ರಾಷ್ಟ್ರೀಯತೆಯು ಆ ಮೂಲಕ ತನ್ನ ಪರಂಪರೆಯ ತುಣುಕುಗಳನ್ನು ವೈಭವೀಕರಿಸುತ್ತಾ; ತನ್ನ ಭಾಷೆಯ, ನಾಡಿನ ಮೇಲಿನ ಅಭಿಮಾನವನ್ನು ಅಭಿವ್ಯಕ್ತಿಸುವುದರೊಂದಿಗೆ ತನ್ನತನವನ್ನು ಮೆರೆಯುತ್ತದೆ. ಸ್ವಾತಂತ್ರ್ಯಪೂರ್ವ ದಕ್ಷಿಣಕನ್ನಡದ ಕವಿತೆಗಳಲ್ಲಿ ಈ ಪ್ರಕ್ರಿಯೆಯು ಪ್ರಾದೇಶಿಕತೆಯೊಂದಿಗಿನ ರಾಷ್ಟ್ರಾಭಿಮಾನದ ದ್ಯೋತಕಗಳಾಗಿ ಮೂಡಿಬರುತ್ತವೆ. ತನ್ನ ಭಾಷೆಯ ಹೆಸರಿನಲ್ಲಿ ತಾಯ್ನಾಡಿನ ಮೇಲೆ ಪ್ರಕಟಗೊಳಿಸುವ ಪ್ರೀತಿ, ಕಾಳಜಿಗಳು ಬಹಳ ಮುಖ್ಯವಾಗುತ್ತವೆ.

ತಾಯೆ ಬಾರ ಮೊಗವ ತೋರ, ಕನ್ನಡಿಗರ ಮಾತೆಯೆ
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೇ
ನಮ್ಮ ತಪ್ಪನೆನಿತೂ ತಾಳ್ವೆ,
ಅಕ್ಕರೆಯಿಂದೆಮ್ಮ ನಾಳ್ವೆ,
ನೀನೆ ಕಣಾ ನಮ್ಮ ಬಾಳ್ವೆ!

– ನಾಡಾಭಿಮಾನವನ್ನು ಅಭಿವ್ಯಕ್ತಿಸುವಲ್ಲಿ ಭಾರತ ಮಾತೆಯನ್ನು 'ಜೀವನ ನಳಿನಿ' ಎಂದು ಕವಿತೆಗಳು ಒಂದೆಡೆ ಹೇಳಿದರೆ; ಇಲ್ಲಿ ಕನ್ನಡ ಮಾತೆಯು ಕೂಡಾ ಅವರಿಗೆ ಜನ್ಮದಾತೆಯೇ. ತನು, ಮನ, ಧನದಲ್ಲಿಯೂ ಕನ್ನಡವೇ ತಮ್ಮ ನೆಲೆ ಎಂಬಂತೆ ಕವಿತೆಗಳು ತಾಯಿಯ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸುತ್ತದೆ. ತಾಯಿಗಾಗಿ (ಕನ್ನಡಮಾತೇ ಭಾರತಮಾತೆ) ತಾನು ಮಾಡಬೇಕಾದ ಕರ್ತವ್ಯವನ್ನು ಕುರಿತು ,

ಆವ ಕಾಣ್ಕೆಯ ಕೊಡುವೆ ಕನ್ನಡದ ಮಾತೆ! ನಿನ
ಗಾವ ಕಾಣ್ಕೆಯ ಕೊಡುವೆ ಮಮಜನ್ಮದಾತೆ[೧೦]
ಹಿಡಿದೆಳೆದು ತಂದು ಸುಗ್ಗಿಯ ಚಿಗುರನ್ನೆಲ್ಲ ನಿ
ನ್ನಡಿಯ ನೆಡೆಬಿಡದೆ ಭಕ್ತಿಯೊಳಗರ್ಚಿಪೆನೇ?
ಸಡಗರದೊಳೆನ್ನ ಜೀವನದ ಕುಸುಮವನೊಂದೆ
ಹಿಡಿಯೊಳಡಗಿಸಿ ಪಾದಪೂಜೆಗರ್ಪಿಪೆನೇ?[೧೧]

ನುಡಿಯ ಹೆಸರಿನಲ್ಲಿ ನಾಡೊಂದನ್ನು ಕಟ್ಟುವ; ಪ್ರಾದೇಶಿಕತೆಯ ಮೂಲಕ ರಾಷ್ಟ್ರಾಭಿಮಾನವನ್ನು ವ್ಯಕ್ತಪಡಿಸುವ ಬಗೆ ಇದು. ಇಲ್ಲಿ ನಾಡಿಗಾಗಿ ತನ್ನನ್ನೇ ಸಮರ್ಪಿಸುವ ಅರ್ಪಣಾಭಾವವಿದೆ. ಮಾತೃಭೂಮಿಯನ್ನು ಕುರಿತು, 'ಕನ್ನಡಾಂತರ್ಗತವಾದ ತುಳುನಾಡು' ಎಂದು ಹೇಳುತ್ತಾ ''ರಾಷ್ಟ್ರೀಯತೆ, ಪ್ರಾದೇಶಿಕತೆಗಳು ಪರಸ್ಪರ ವಿರೋಧಿ ಮೌಲ್ಯಗಳಲ್ಲ ಎಂಬ ಖಚಿತತೆಯನ್ನು ಪ್ರಕಟಿಸುತ್ತದೆ. ಭಾರತದ ಪ್ರಾದೇಶಿಕ ಭಾಷೆ ಅದು ಯಾವುದೇ ಇರಲಿ ಕನ್ನಡ, ತಮಿಳು, ಮಲೆಯಾಳ, ತುಳು – ಇವುಗಳಿಗೆ ವ್ಯಕ್ತಿ ಕೊಡಬೇಕಾದ ಗೌರವ, ಬೆಲೆ ಬಹಳ ಮುಖ್ಯವಾದುದು.

ಕನ್ನಡದ ಋಣವುಂಟು – ನಾಂ ಮರೆಯಬಲ್ಲೆನೆ?
ಆವ ಕಾಣ್ಕೆಯ ಕೊಟ್ಟು ತೀರಿಸುವೆನೋ?
ದಿನದಿನಂ ನಿಮಿಷ ನಿಮಿಷಂ ನೆನೆಯುತಿಹೆನಿದನೆ
ಸೇವೆ ಕಲಿಸುವೆ ದೇವಿ ಸಾಲದೇನೊ?[೧೨]

'ರಾಷ್ಟ್ರೀಯತೆ'ಯನ್ನು ಬಿಂಬಿಸುವ ಸಂದರ್ಭದಲ್ಲಿ, ಕೇವಲ ಕನ್ನಡ ಮಾತ್ರವಲ್ಲ; ಉಳಿದ ಪ್ರಾದೇಶಿಕ ಭಾಷೆಗಳನ್ನು ಪ್ರೀತಿಸುವ ಮನಃಸ್ಥಿತಿ ದಕ್ಷಿಣ ಕನ್ನಡದ ಕವಿತೆಗಳಲ್ಲಿ ರೂಪು ಪಡೆದಿವೆ. ಗಡಿಪ್ರದೇಶದ ಅನ್ಯ ಭಾಷೆಗಳನ್ನು ಪ್ರೀತಿಸುವುದರೊಂದಿಗೆ ಸ್ವಭಾಷೆಯ ಹಿರಿಮೆಯನ್ನು ಸಾರುವ ಸಂದರ್ಭವೂ ಕೆಲವು ಕವನಗಳಲ್ಲಿ ಬಂದಿವೆ.

ಸಕ್ಕದದ ಸಕ್ಕರೆಗೆ ಕನ್ನಡದ ಕತ್ತುರಿಯು
ಸೇರಿದರೆ - ಸವಿಯದನು ಕೇಳಬೇಕೆ?
ವಾಲ್ಮೀಕಿ ಜತೆಯಲ್ಲಿ ಪಂಪನಾ ಕಲಿತಲ್ಲಿ
ಆಗುವಮಿತಾನಂದ ಹೇಳಬೇಕೆ?[೧೩]

- ಹಾಗಾಗಿ ಯಾವುದೇ ಭಾಷೆಯೊಂದಿಗಿದ್ದರೂ ಕನ್ನಡವು ಪರಿಮಳವನ್ನು ಬೀರುವ ಕಸ್ತೂರಿ; ಗಡಿಪ್ರದೇಶದ ಇತರ ಭಾಷೆಗಳನ್ನು ಒಂದೇ ಭಾರತದಡಿಯಲ್ಲಿ ಗುರುತಿಸುವ ಉದಾರವಾದೀ ದೃಷ್ಟಿಕೋನ ಇಲ್ಲಿನ ಕವಿತೆಗಳಲ್ಲಿವೆ. ಆದ್ದರಿಂದ ಪ್ರತಿಯೊಬ್ಬರೂ (ಪ್ರತಿಯೊಂದು ಭಾಷೆಗಳೂ), ಭಾರತಮಾತೆಯ ಕಂದಮ್ಮಗಳು.

ಮಲೆಯಾಳಿಗಳೆನಿತೊ ಮಿತ್ರರೆನಗಿಹರಿಂದು
ಕೇರಳದ ಕೂಡೆ ನಾ ಕಾದುವೆನೆ ಹೇಗೆ?
ಒಂದೆ ಕನ್ನಡ ನಾಡು, ಒಂದೇ ಕೇರಳ ನಾಡು
ಒಂದೆ ಭಾರತಮಾತೆ ಕಂದರಾವ್ ಕಡೆಗೆ[೧೪]

- ಎಂದು ಹೇಳುವ ಕವನವು ಭಾಷೆ / ನುಡಿಯ ಮೂಲಕ ಸ್ವಾತಂತ್ರ್ಯಗಳಿಸಬೇಕಾದ ಅನಿವಾರ್ಯತೆಯನ್ನು ಪ್ರಕಟಿಸುತ್ತದೆ. ಭಾಷಾಭಿಮಾನವನ್ನು ವ್ಯಕ್ತಪಡಿಸುವ ಉತ್ಸುಕತೆಯನ್ನು ತೋರುವ ಸಂದರ್ಭದಲ್ಲಿ ತನ್ನ ಸುತ್ತಲಿನ ಸಮಾಜದತ್ತ ತನ್ನ ದೃಷ್ಟಿಯನ್ನು ಹರಿಸಿ, ನಿರ್ವಹಿಸಬೇಕಾದ 'ಕಾಳಜಿ'ಯನ್ನು ಸದಾ ದಿಟ್ಟಗಣ್ಣಿನಿಂದ ನೋಡುತ್ತಿರುತ್ತದೆ. ಈ ಸಂದರ್ಭದಲ್ಲಿ ಕನ್ನಡದ ಪೆಂಪನ್ನು ಪಸರಿಸಿದ ಕನಕದಾಸ, ಬಸವಣ್ಣ ಮುಂತಾದವರ ಸ್ಮರಣೆಯನ್ನು 'ಕಾಗಿನೆಲೆಯಲ್ಲಿ ಕುಹೂ', 'ಮಲೆಯ ಗಜರಾಜ ಮನೆಗೆ ಬಂದಿತು'[೧೫] ಕವನಗಳು ಆತ್ಮಸಂತೃಪ್ತಿಯೊಂದಿಗೆ ಪ್ರಕಟಪಡಿಸುತ್ತವೆ.

ವಸಾಹತುವನ್ನು ವಿರೋಧಿಸುವ ರಾಷ್ಟ್ರೀಯ ಶಿಕ್ಷಣ ಪ್ರಜ್ಞೆಯನ್ನು ಜನರಲ್ಲಿ ಮೂಡಿಸುವ ಸಲುವಾಗಿ ಮಾತೃಭಾಷೆಯ ಮಹತ್ವವನ್ನು ಸಾರುವ ಪ್ರಯತ್ನವನ್ನು 'ರಾಷ್ಟ್ರೀಯ ಶಿಕ್ಷಣದ ಸಪ್ತಾಹದ ಕರೆ'[೧೬] ಕವನವು ಮಾಡುತ್ತದೆ.

ತನ್ನ ತಾಯ್ನುಡಿಯಿಂದ ದುಡಿದ ಬಿಜ್ಜೆ
ಹೆರರ ನಾಲಗೆಯೆಂಜಲೆನ್ನಗಂ ಸವಿಯೊ?
ತನ್ನ ಮುಂಗತಿ ತೋರೆ ತನ್ನ ಹಿರಿಯರ ಹೆಜ್ಜೆ।
ಹೆರರ ಬೆಳಕೊಳೆ ಕಾಂಬ ತನ್ನವರ ಕವಿಯೊ?
ಅವರವರ ನುಡಿಗಳಿಂದವರವರ ಜಾಣೆ

ಕೆಯನೆಚ್ಚರಿಸುವ ನುಡಿಗಳ ತಾಯೆ ವಾಣಿ ।
ನಿರವಶೇಷ ಜ್ಞಾನದರ್ಜನವನೆಮ್ಮ
ನುಡಿಯಿನೆಮಗಿತ್ತು ಭಾರತವ ಸಲಹಮ್ಮ[೧೭]

ಸ್ವ ಭಾಷೆಯ ಕಲಿಕೆಯ ಆನಂದ, ಅದರಲ್ಲಿನ ದೋಷಗಳ ಪ್ರಸ್ತಾಪ, ಗಡಿಪ್ರದೇಶಗಳ ಭಾಷೆಯ ಮೇಲಿನ ಪ್ರೀತಿ ಕನ್ನಡಕ್ಕಾಗಿ ತನ್ನನ್ನು ಅರ್ಪಿಸುವ ಆತ್ಮಸಮರ್ಪಣೆ - ಎಲ್ಲವೂ ಆಂತರಿಕವಾಗಿ 'ರಾಷ್ಟ್ರೀಯತೆ'ಯನ್ನು ಸೃಷ್ಟಿಸುತ್ತಾ ಬಾಹ್ಯವಾಗಿ ವಸಾಹತು ವಿರೋಧಿಯಾಗಿ ತನ್ನನ್ನು ಕಟ್ಟಿಕೊಳ್ಳುವ 'ರಾಷ್ಟ್ರೀಯತೆ'ಯ ಪ್ರಕ್ರಿಯೆಯಾಗುತ್ತದೆ. ಸ್ವಾತಂತ್ರ್ಯ ಪೂರ್ವದ ದಕ್ಷಿಣ ಕನ್ನಡದ ಕವಿತೆಗಳ ಭಾಷಾಭಿಮಾನದ ಸಂದರ್ಭದಲ್ಲಿ ಕಾಣುವ, ಸ್ವಾತಂತ್ರ್ಯವನ್ನು ಗಳಿಸುವ ಹಂಬಲವು ಉಳಿದ ಪ್ರಾದೇಶಿಕ ಭಾಷೆಗಳೊಂದಿಗೆ ಸಹಕರಿಸಬೇಕಾದ ಅನಿವಾರ್ಯತೆಯನ್ನು ಪ್ರಕಟಿಸುತ್ತವೆ. ವಸಾಹತು ವಿರೋಧದ ಸಂದರ್ಭದಲ್ಲಿ ಅದನ್ನು ವಿರೋಧಿಸುವ ಕೆಚ್ಚೆದೆ ಕನ್ನಡಿಗರಲ್ಲಿರಲಿ. ಆದರೆ ರಾಷ್ಟ್ರದ ಒಳಿತಿಗಾಗಿ ವಿವೇಕದಿಂದ ಇರಬೇಕಾದ ಪ್ರಜ್ಞೆಯನ್ನೂ ಒಳಗೊಂಡಿರಲಿ ಎಂಬ ಭಾವವನ್ನು ಕವಿತೆಗಳು ಪ್ರಕಟಿಸುತ್ತವೆ.

೩.೪. ಸಮಾಜದ ಕುರಿತ ಆಶಯ

'ರಾಷ್ಟ್ರೀಯತೆ'ಯಲ್ಲಿ ಮುಖ್ಯವಾಗಿ ೨ ರೀತಿಯ ಪ್ರತಿಭಟನೆಯಾಗಿರುವುದನ್ನು ಈ ಹಿಂದೆಯೇ ಗುರುತಿಸಲಾಗಿದೆ.

೧. ಆಂತರಿಕ ವೈರುಧ್ಯಗಳಿಗೆ ಪ್ರತಿಕ್ರಿಯೆ

೨. ಪರದೇಶೀ ಆಳ್ವಿಕೆಗೆ ವಿರೋಧ

ಆಂತರಿಕ ವೈರುಧ್ಯಗಳಿಗೆ ಪ್ರತಿಕ್ರಿಯೆ ಎನ್ನುವುದು ಸಮಾಜದೊಳಗಿರುವ ಬೇರೆ ಬೇರೆ ತಾರತಮ್ಯಗಳ ವಿರುದ್ಧದ ಪ್ರತಿಭಟನೆ ಸುತ್ತಮುತ್ತಲಿನ ಸಮಾಜದಲ್ಲಿ ತಾನು ಅನುಭವಿಸಿದ ಘಟನೆಗಳಿಗೆ ಕವಿಹೃದಯ ಸ್ಪಂದಿಸಿದಾಗ ಅದು ಸಾಮಾಜಿಕ ಪ್ರಜ್ಞೆ ಎಂಬಂತೆ ಕಾವ್ಯದಲ್ಲಿ ಮೂಡಿಬರುತ್ತದೆ. 'ಸಮಾಜದ ಪ್ರತಿಬಿಂಬವೇ ಸಾಹಿತ್ಯ', ಸಮಾಜ ಬದಲಾದಂತೆ ಸಾಹಿತ್ಯವೂ ಬದಲಾಗುತ್ತದೆ. ಸುತ್ತಲಿನ ಸಮಾಜದಲ್ಲಿ ಕಂಡುಬರುವ ಅಂಶಗಳೇ ಕವಿಗೇ ವಸ್ತುವಾಗುವುದರಿಂದ ಆಯಾಕಾಲಕ್ಕೆ ತಕ್ಕಂತಹ ಸಾಮಾಜಿಕ ಪ್ರಜ್ಞೆ ಕಾವ್ಯದಲ್ಲಿ ಪ್ರತಿಫಲನಗೊಳ್ಳುತ್ತದೆ. ಸಮಾಜವನ್ನು ಒಂದಾಗಿ ಕಾಣಬೇಕಿದ್ದರೆ ಅಲ್ಲಿದ್ದ ತಾರತಮ್ಯ, ಸಂಘರ್ಷಗಳು ಮಾಯವಾಗಬೇಕು. ಪರಕೀಯ ಆಳ್ವಿಕೆಯ ಸಂದರ್ಭದಲ್ಲಿ ತಮ್ಮಲ್ಲಿ ಕಂಡುಕೊಂಡ ಸಾಮಾಜಿಕ ವೈಷಮ್ಯಗಳು ದಕ್ಷಿಣ ಕನ್ನಡದ ಕವಿಗಳ

ರಾಷ್ಟ್ರೀಯ ಭಾವನೆಗೆ ಪ್ರೇರಣೆಯಿತ್ತವು. ಜಾತಿ, ಮತ, ವರ್ಗ, ಲಿಂಗ ಭೇದವಾದ ಸಮಾಜವನ್ನು ತಿರಸ್ಕರಿಸಿ ಏಕತೆ, ಸಮಾನತೆಯಂತಹ ಹಲವಾರು ಅಂಶಗಳಿಗೆ ಕವಿಗಳು ಮಹತ್ವವನ್ನು ನೀಡಿದರು. ಆ ಮೂಲಕ ಪರಕೀಯರ ವಿರುದ್ಧ ಪ್ರತಿಭಟನೆಯನ್ನು ಘೋಷಿಸಿದರು. ಹೀಗಾಗಿ ದಕ್ಷಿಣದ ಕನ್ನಡದ ಸಂದರ್ಭದಲ್ಲಿ ಕಾಣಿಸಿಕೊಂಡ ಕವಿತೆಗಳು ಹೆಚ್ಚು ಕಡಿಮೆ ಒಂದೇ ರೀತಿಯ ಆಶಯವನ್ನು ವ್ಯಕ್ತಪಡಿಸಿದುವು. ಇಲ್ಲಿನ ಬಹುತೇಕ ಕವಿಗಳು ಬ್ರಾಹ್ಮಣರಾದುದರಿಂದ ಭಾವನಾತ್ಮಕ ನೆಲೆಯಲ್ಲಿ ಸಾಮಾಜಿಕ ಕಳಕಳಿ ಕವಿತೆಗಳಲ್ಲಿ ಮೂಡಿಬಂದಿಲ್ಲವೆಂಬ ವಾದವಿದೆ.[೧೮] ಹೊಲೆಯ, ಕೊಡಗ, ಹರಿಜನ ಮುಂತಾದ ಹಿಂದುಳಿದ ವರ್ಗಗಳೆಂದು ಗುರುತಿಸಲ್ಪಟ್ಟ ಜನಸಮುದಾಯಕ್ಕೆ ಸಂಬಂಧಿಸಿದ ಕವಿತೆಗಳಲ್ಲಿ, ಉಗ್ರವಾದ ಪ್ರತಿಭಟನೆ ಇಲ್ಲದಿದ್ದರೂ, ಹಿಂದೂ ಧರ್ಮದೊಡನೆ ಅವರನ್ನೂ ಸೇರಿಸಬೇಕೆಂಬ ಸಾಮಾಜಿಕ ಕಳಕಳಿ ಇರುವುದನ್ನು ಗಮನಿಸಬಹುದು. ಈ ರೀತಿ ಅತೀ ಸೂಕ್ಷ್ಮ ಸಂವೇದನೆಯನ್ನು ಇಲ್ಲಿ ಕವಿತೆಗಳಲ್ಲಿ ಗುರುತಿಸಬಹುದು.

ನಮ್ಮ ನೇತಕೆ ದೂರದೂರ ನಿಲಿಸುವಿರಿ?
ನಿಮ್ಮಂತೆ ನಾವು ಹಿಂದುಗಳು ಭಾವಿಸಿರಿ
ಸರ್ವಮಾನವರಂತೆ ಮಾನವರು ಹರಿಜನರು
ಸರ್ವಾಂಗದೊಳಗೆ ಭಾರತ ರಕ್ತಮಯ
ಸರ್ವೇಶನಿದಿರಲಿ ಸರ್ವರಂತಿರುವರು
ಸರ್ವವಿಧದಲಿ ಹಿಂದುಗಳು ನಮ್ಮವರು''[೧೯]

– ಎಂದು ಹೇಳುವ ಕವಿತೆ, ಹರಿಜನರು ಕೂಡಾ ಪಂಚಭೂತಾದಿಗಳಿಂದ ಕೂಡಿರುವ ಈ ಭೂಮಿಯಲ್ಲಿ ಎಲ್ಲರಂತೆಯೂ, ಪಂಚೇಂದ್ರಿಯಗಳ ಸಹಾಯದಿಂದ ಮಹತ್ವವನ್ನು ಪಡೆದವರು. ಹುಟ್ಟಿನಿಂದ ಯಾರೂ ಚಂಡಾಲರಲ್ಲ; ಅವರು ಮಾಡುವ ಕಾಯಕವೇ ಅವರ ಚಂಡಾಲತ್ವವನ್ನು ನಿರ್ಧರಿಸುತ್ತದೆ ಎಂಬ ಆಶಯದೊಂದಿಗೆ ಸಮಾಜದಲ್ಲಿ ತಿರಸ್ಕೃತವಾಗಿರುವ ಗುಂಪೊಂದನ್ನು ತನ್ಮೂಲಕ ಸಮಾನವಾಗಿಸುವ ಪ್ರಯತ್ನ ಇಲ್ಲಿದೆ. 'ಹೊಲೆಯ ಹೊರಗಿಹನೆ?, ಊರೊಳಗಿಲ್ಲವೆ? ಹಲರು' ಎಂಬ ಪ್ರಶ್ನೆಯನ್ನೆತ್ತುವ ಕವಿತೆ ಸಮಾಜದ ಒಳಗಿನ ಆಂತರಿಕ ವೈರುಧ್ಯಗಳಿಗೆ, ಶೋಷಣೆಗೆ ಹಿಡಿದ ಕನ್ನಡಿಯಾಗುತ್ತದೆ. ಇದೇ ಆಶಯವನ್ನು ವ್ಯಕ್ತಪಡಿಸುವ 'ಅಸ್ಪೃಶ್ಯತಾ ಕಲಂಕ'[೨೦] ಕವನದಲ್ಲಿ "ಸ್ವೇಚ್ಛೆಯಿಂ ವರ್ತಿಪನು ವಿಪ್ರನಾದೊಡೆಯೇನು ನಿಚ್ಚಲದ ಹೊಲೆಯಗಿಂ ಕಡೆಯೆನಿಸನೇ!" ಎಂಬ ಧೋರಣೆಯನ್ನು ಕಾಣಬಹುದು. 'ಅಡಿಯಿಂದ ತುಳಿಯದಿರಿ ಹೊಲೆಯನೆನುತಲಿ ನೀವು' ಎಂದು ಅಂತ್ಯವಾಗುವ ಸಾಲುಗಳು ಆ ಕಾಲದಲ್ಲಿ ಹೊಲೆಯನಿಗೆ ಇದ್ದ ಸ್ಥಾನಮಾನ ಹಾಗೂ ಅದನ್ನು

ಹೋಗಲಾಡಿಸಿದಾಗ ಮಾತ್ರ ರಾಷ್ಟ್ರದ ಏಳಿಗೆ ಸಾಧ್ಯ ಎಂಬ ಧ್ವನಿ ಇದೆ. ವಿಮರ್ಶಕರು ಈಗಾಗಲೇ ಚರ್ಚಿಸಿದ 'ಹೊಲೆಯನು ಯಾರು?'[೨೧] ಕವಿತೆಯನ್ನು ಇಲ್ಲಿ ಸಂದರ್ಭೋಚಿತವಾಗಿ ಗುರುತಿಸಬಹುದು.

ಪಂಜೆ ಮಂಗೇಶರಾಯರ 'ಹೊಲೆಯನ ಹಾಡು', ಗೋಪಾಲಕೃಷ್ಣ ಅಡಿಗರ 'ನಾವೆಲ್ಲರೂ ಒಂದೇ ಜಾತಿ' ಕವನಗಳಲ್ಲಿ ಕೂಡಾ ರಾಷ್ಟ್ರೀಯತೆಯ ಹಿಂದಿನ ಸಾಮಾಜಿಕ ಪ್ರಜ್ಞೆ ಭಿನ್ನವಾಗುತ್ತದೆ. ಈ ಮೊದಲು ಚರ್ಚಿಸಿದ ಕವನಗಳಲ್ಲಿ ಅಸ್ಪೃಶ್ಯತಾ ನಿವಾರಣೆ ನಿವೇದನೆಯ ರೂಪದಲ್ಲಿ ಕಾಣಿಸಿಕೊಂಡರೆ; ಸ್ವರಾಜ್ಯವನ್ನು ಗಳಿಸಲು ಜಾತಿ ಸಮಸ್ಯೆಯನ್ನು ನಿವಾರಿಸಬೇಕು, ಇಲ್ಲವಾದಲ್ಲಿ ಆ ಸ್ವಾತಂತ್ರ್ಯವನ್ನು ಸ್ವತಃ ತಾವೇ ಗಳಿಸುವೆವು ಎಂಬ ಎಚ್ಚರಿಕೆಯನ್ನು ನೀಡುತ್ತದೆ.

ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲ
ನಾವು ಮನುಜರು;
ನರರ ನಡುವಿನಡ್ಡ ಗೋಡೆಗಳನು ಕುಟ್ಟಿ ಕೆಡಹುವೆವು
ನಾವು ವಿಲಯ ರುದ್ರರು[೨೨]

ನೋಡು ಸ್ವರಾಜ್ಯಕ್ಕೆ ನಾವೂರುಗೋಲು
ನೀಡಣ್ಣ! ದಮ್ಮಯ್ಯ! ಕೊಡು ಸರಿ ಪಾಲು
ಬೇಡಿದಾಗಲೆ ಬಿಟ್ಟು ಕೊಡುವುದೇ ಮೇಲು
ಬೇಡ ನಾಂ ಸೆಳೆದುಕೊಂಬೆವು ನಮ್ಮ ಪಾಲು[೨೩]

– ಈ ಸಾಲುಗಳಲ್ಲೆಲ್ಲಾ ಸಾಮಾಜಿಕ ಪ್ರಜ್ಞೆಯು ರಾಷ್ಟ್ರೀಯತೆಯ ಹಿಂದಿನ ಸ್ವಾತಂತ್ರ್ಯಗಳಿಕೆಯ ಬೇಡಿಕೆಯಾಗಿ ಹೊರಹೊಮ್ಮುತ್ತದೆ.

ಸಮಾಜವು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಗಳಲ್ಲಿ ಒಂದು ಬಡತನ. ಬಡವರು ಆರ್ಥಿಕವಾಗಿ ಸಬಲರಾಗುವವರೆಗೆ ಸಮಾನತೆಯೆಂಬುದು ಕನಸಿನ ಗಂಟಾಗುತ್ತದೆ. ಹಾಗಾಗಿ ಅವರ ಜೀವನದ ಸಮಸ್ಯೆ, ನೋವನ್ನು ಅಭಿವ್ಯಕ್ತಿಸುವ ಸಾಮಾಜಿಕ ಪ್ರಜ್ಞೆ ಕವನಗಳಲ್ಲಿವೆ. ಈ ದೇಶದಲ್ಲಿದ್ದ ಸಂಪತ್ತನ್ನು ಕೊಳ್ಳೆ ಹೊಡೆದು ಪರರಿಂದಾಗಿ ದೇಶ ದಾಸ್ಯಕ್ಕೀಡಾಗಿದ್ದು, ಬಡತನವನ್ನು ಹೋಗಲಾಡಿಸುವಂತೆ 'ಬರಗಾಲ'[೨೪] ಕವನವು ನಿವೇದನೆ ಮಾಡಿಕೊಂಡರೆ, ಗೋಪಾಲಕೃಷ್ಣ ಅಡಿಗರ 'ನೊಂದ ನುಡಿ', 'ಇದು ಮೊದಲು' ಕವನಗಳು ಹಸಿವೆಯನ್ನು ನೀಗಿಸಬೇಕಾದ ಬಡವರ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುತ್ತವೆ. ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನು ನೀಡುತ್ತಾ, ಭಾರತವನ್ನು

ಒಂದುಗೊಳಿಸಬೇಕೆನ್ನುವ ಚಿಂತನೆಯನ್ನು ಹಿಂದಿನ ಉಪ ಅಧ್ಯಾಯಗಳಲ್ಲಿ ಚರ್ಚಿಸಿದಂತೆ; ಗೋವಿಂದ ಪೈಯವರ, 'ರಾಷ್ಟ್ರೀಯ ಶಿಕ್ಷಣದ ಸಪ್ತಾಹದ ಕರೆ' ಕವನ; ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ 'ವಯಸ್ಕ ಶಿಕ್ಷಣ' ಕವಿತೆಗಳು ಎತ್ತಿಹಿಡಿಯುತ್ತವೆ. ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವರಿಗೂ ವಿದ್ಯಾಭ್ಯಾಸವಿದ್ದಾಗ ಲಿಂಗಭೇದ, ಜಾತಿಭೇದ, ಅಜ್ಞಾನಗಳು ಇಲ್ಲವಾಗಿ ಒಂದು ರಾಷ್ಟ್ರವಾಗಿ ರೂಪುಗೊಳ್ಳಬಹುದು. ಸಮಾಜದಲ್ಲಿ ನಡೆಯುತ್ತಿರುವ ಶೋಷಣೆಯನ್ನು ಪ್ರತಿಭಟಿಸಲು ಕರೆನೀಡುವ ಕವಿತೆಗಳು ಏಕತೆಯ ಭಾವನೆಯನ್ನು ಬೆಳೆಸುವ ಪರಿಯನ್ನು ವ್ಯಕ್ತಪಡಿಸುತ್ತವೆ.

ವಿಧಿ ನಿಷೇಧಗಳ ಕಟ್ಟುಕಟ್ಟಳೆಯ
ದೊಡ್ಡಿಯನ್ನು ತೆರೆದು
ಜಾತಿ ನೀತಿಗಳ ಮುಳ್ಳು ಬೇಲಿಯನು
ಸುತ್ತುಮುತ್ತು ಬಿಗಿದು ......
ನೆರೆದರು ಶಾಸ್ತ್ರಕೋವಿದರು[೨೫] ಪಂಡಿತರು

ಎಂದು ಹೇಳುವ ಕವಿತೆ ಸಾಮಾಜಿಕ ವಲಯದಿಂದ ಹೊರಬಂದಾಗ ಮಾತ್ರವೇ ರಾಷ್ಟ್ರದ ಪ್ರಗತಿ ಸಾಧ್ಯ ಎಂದು ಸಾರುತ್ತಾ 'ಒಂದೆ ಕೊರಲಿನಲಿ ಕೂಗಿರಣ್ಣ ಓ ಸುಲಿಗೆಯಾಗ ಸಾಕು' ಎಂಬ ಸಮಾಜದ ಸ್ಪಷ್ಟ ಚಿತ್ರಣವನ್ನು ನಮ್ಮ ಮುಂದಿಡುತ್ತದೆ. ಆದ್ದರಿಂದ ಈ ಸಾಮಾಜಿಕ ವಿಷಮತೆಯನ್ನೆಲ್ಲ ಮೀರಿ ಹೊಸ ಹಾದಿಯನ್ನು ಹಿಡಿಯಬೇಕೆನ್ನುವ ಆಶಾವಾದವನ್ನು ಕವಿತೆಗಳು ವ್ಯಕ್ತಪಡಿಸುತ್ತವೆ. 'ಹೊಲೆಯನು ಯಾರು'[೨೬] ಕವನವು ಮಾನವತಾವಾದಿ, ಉದಾರವಾದಿ ದೃಷ್ಟಿಕೋನದಲ್ಲಿ ಜಾತಿಯ ಕಲ್ಪನೆಯನ್ನು ವ್ಯಕ್ತಪಡಿಸುತ್ತದೆ.

ಹಳೆದಿನಗಳ ಕಟ್ಟಳೆಗಳ
ಕೊಳೆ ಹೆಣಗಳ ದೂಡುವ
ಹೊಸ ದಿನಗಳ ಹೊಸ ಸೊಬಗನು
ಹಸನು ಹಸನು ಮಾಡುವ[೨೭]

– ಎಂದು ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಆಗಬೇಕಾದ ಪರಿವರ್ತನೆ ಮತ್ತು ಆ ಮೂಲಕ ಸ್ವಾತಂತ್ರ್ಯವನ್ನು ಗಳಿಸುವ ಉತ್ಕಟ ರಾಷ್ಟ್ರಾಭಿಮಾನದ ಇಚ್ಛೆಯನ್ನೂ ಕವಿತೆ ಅಭಿವ್ಯಕ್ತಿಸುತ್ತದೆ. ಹೀಗೆ ಸಮಾಜದ ಜಾತಿವ್ಯವಸ್ಥೆ, ಬಡತನ, ಸಾಮಾಜಿಕ ಸನ್ನಿವೇಶ ಶಿಕ್ಷಣದ ಮಹತ್ವಗಳಲ್ಲದೆ, ರಾಜಕೀಯ, ಧರ್ಮ, ಸಂಸ್ಕೃತಿಯಂತಹ ಚಿಂತನೆಗಳಿಗೆ ದಕ್ಷಿಣ ಕನ್ನಡ ಕವಿತೆಗಳು ಸಾಕ್ಷಿಯಾಗಿವೆ. ಸಮಾಜದಲ್ಲಿ

ಏಕರೂಪೀ ವ್ಯವಸ್ಥೆಯೊಂದನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಆದರೆ ಆಂತರಿಕ ಹಾಗೂ ಬಾಹ್ಯ ಕಟ್ಟಳೆಗಳಿಂದ ಹೊರಬರಬೇಕಾದರೆ ಏಕರೂಪೀ ಮನಸ್ಥಿತಿ ಎಲ್ಲರಲ್ಲೂ ಮೂಡಬೇಕು ಎಂಬ ಹಂಬಲವನ್ನು ದಕ್ಷಿಣ ಕನ್ನಡದ ಕವಿತೆಗಳು ಪ್ರಸ್ತುತಪಡಿಸಿವೆ. ಆ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ ಆಗಬೇಕಾದ ಸಮಾನತೆ ಮತ್ತು ಗಳಿಸಬೇಕಾದ 'ಸ್ವಾತಂತ್ರ್ಯ'ದ ಮಹತ್ವವನ್ನು ಕವಿತೆಗಳು ಸಾರುತ್ತವೆ.

೩.೫. ಸಂಸ್ಕೃತಿಯ ಪ್ರತಿನಿಧೀಕರಣ

ಭಾಷೆ, ವೇಷ, ಭೂಷಣ, ಆಹಾರ, ಆಚಾರ, ನಂಬಿಕೆ ಈ ಎಲ್ಲದರಲ್ಲೂ ವಿಭಿನ್ನತೆಯನ್ನು ಹೊಂದಿರುವ ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದು. "ಭಾರತೀಯ ಸಂಸ್ಕೃತಿಯು ಭರತಖಂಡ ದಂತೆಯೇ ಅಖಂಡ ಹಾಗೂ ಅನಾದಿ. ವೇದಋಷಿಗಳಿಂದ ರಾಮಕೃಷ್ಣ, ವಿವೇಕಾನಂದ, ಮಹಾತ್ಮಾಗಾಂಧಿಗಳವರೆಗೂ ಅಖಂಡ. ವಿದೇಶೀ ಸಂಸ್ಕೃತಿಯು ತನ್ನ ಪ್ರಭಾವವನ್ನು ಭಾರತೀಯರ ಮೇಲೆ ಬೀರಿದ್ದರೂ ತನ್ನ ಆಧ್ಯಾತ್ಮಿಕ ದೃಷ್ಟಿಯಿಂದ ಭಾರತ ಅದನ್ನು ಜೀರ್ಣಿಸಿಕೊಂಡಿವೆ. ಭಾರತೀಯ ಸಂಸ್ಕೃತಿಯಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯವಿದೆಯೇ ಹೊರತು ನಿರಂಕುಶಾಧಿಕಾರಕ್ಕೆ ಅವಕಾಶವಿಲ್ಲ. ವಿಶ್ವಸಾಮಾನ್ಯ ಧರ್ಮಗಳೇ ಅಲ್ಲದೆ ವಿಶಿಷ್ಟ ಧರ್ಮಗಳೂ ಸೇರಿರುವುದರಿಂದ ಭಾರತೀಯ ಸಂಸ್ಕೃತಿಯು ಅನಾದಿ ಮತ್ತು ಅನಂತ"[೨೮] ಎಂಬ ಮಾತುಗಳೇ ಭಾರತೀಯ ಸಂಸ್ಕೃತಿಯ ವೈಭವವನ್ನು ತಿಳಿಯಪಡಿಸುತ್ತವೆ. ವಸಾಹತುಶಾಹಿ ಆಡಳಿತ ಹಾಗೂ ಆಧುನಿಕ ಶಿಕ್ಷಣಗಳು ಆಧ್ಯಾತ್ಮ ಮೂಲವಾದ ಈ ಸಂಸ್ಕೃತಿಗೆ ಬೃಹತ್ ಏಟಾದಾಗ ತನ್ನ ವೈಭವವನ್ನು ಕಳೆಯುವ ಪರಿಸ್ಥಿತಿಗೆ ಭಾರತೀಯ ಸಂಸ್ಕೃತಿ ಒಳಗಾಯಿತು. ಇಂತಹ ಸಂದರ್ಭದಲ್ಲಿ ವಸಾಹತು ದಮನಕ್ಕಾಗಿ, ನಿರಂಕುಶಾಡಳಿತದ ವಿರುದ್ಧವಾಗಿ ಹುಟ್ಟಿಕೊಂಡ 'ರಾಷ್ಟ್ರಚಿಂತನೆ'ಯು ಸಂಸ್ಕೃತಿ ಚಿಂತನೆಯನ್ನೂ ಹುಟ್ಟುಹಾಕಿತು.

ಆರ್ಯರೋ ಮೊಗಲರೋ ಕ್ರೈಸ್ತರೋ ತಡೆಯೇನು?
ಎಲ್ಲರೂ ಬರಲೆಂದು ಸ್ವಾಗತಿಸಿದೆ
ಜಾತಿಮತ ಬೇರೆನದೆ ಬಣ್ಣ ನುಡಿ ಬದಲೆನದೆ
ವಿಶ್ವ ಸಂತತಿಯೆಲ್ಲ ನಿನ್ನ ಪುಣ್ಯೋದರದ
ಹಸುಗೂಸುಗಳೆಂದು ಹಾಲುಣಿಸಿದೆ
ಒಂದೆ ತೊಟ್ಟಿಲೊಳಿಟ್ಟು ತೂಗಿ ಶೋಭನವಾಗಿ
ಪ್ರೇಮ ಸಂಗೀತದೊಳೆ ಮಯ್ಮರೆಸಿದೆ[೨೯]

ಇದು ಭಾರತದ ಭವ್ಯ ಸಂಸ್ಕೃತಿ. ಈ ಸಂಸ್ಕೃತಿಯ ಘನತೆ ವಿಶ್ವದಾದ್ಯಂತ ಪ್ರಖ್ಯಾತಿ ಹೊಂದಿತು. ಆದರೆ ಪಾರತಂತ್ರ್ಯದ ಸುಳಿಗೆ ಸಿಲುಕಿದ ಭಾರತದ ಸಂಸ್ಕೃತಿ ಬಿರುಗಾಳಿಗೆ ಸಿಲುಕಿದ ಹಡಗಿನಂತಾಯಿತು. ದಕ್ಷಿಣ ಕನ್ನಡವು ಮದ್ರಾಸು ಪ್ರಾಂತ್ಯದಲ್ಲಿ ಬ್ರಿಟಿಷರ ಅಧೀನವಾಗಿರಬೇಕಾದ ಪರಿಸ್ಥಿತಿಯಾಗಿತ್ತು. ಆಧುನಿಕ ಶಿಕ್ಷಣದ ಮೂಲಕವೇ ವಿದೇಶೀ ಸಂಸ್ಕೃತಿಯನ್ನು ಸ್ವೀಕರಿಸಲಾಗದ, ಸ್ವದೇಶಿಯನ್ನು ಉಳಿಸಲಾಗದ ಸಂದರ್ಭದಲ್ಲಿ ಸಂಸ್ಕೃತಿಯನ್ನು ಉಳಿಸುವ ಚಿಂತನೆಯನ್ನು ಕವಿಗಳು ಮಾಡಿದರು. ಈ ಚಿಂತನೆಯ ಹಿಂದೆ ನಾಡನ್ನು ಒಂದುಗೂಡಿಸುವ ಆಳವಾದ ಕಳಕಳಿ ಇದೆ.

ಲೋಕಾಭಿರಾಮ - ರಾಮನ ರಾಜ್ಯವೆಲ್ಲಿದೆ?
ಭೂಕಾಂತ ಧರ್ಮನಪುರವೆಲ್ಲಿದೆ?
ನಾಕ ವೈಭವವಿಲ್ಲಿ ಮೆರೆದುದು ಕನಸಾಯ್ತೆ?
ಸಾಕು ಸ್ವರಾಜ್ಯ ಸೂರ್ಯೋದಯವಾಗಲಿ[೩೦]

ಗತದಲ್ಲಿ ವೈಭವದಿಂದ ಮೆರೆದ ಸಂಸ್ಕೃತಿ ಎಲ್ಲಿದೆ? ಎಂದು ಪ್ರಶ್ನಿಸುತ್ತಾ ಮುಂದುವರಿಯುವ ಕವಿತೆ ರಾಜವಂಶಗಳಿಂದ ತೊಡಗಿ ಭಾಷೆ, ರಾಜಕೀಯ, ಆರ್ಥಿಕ, ಸಾಮಾಜಿಕ ಸನ್ನಿವೇಶಗಳಲ್ಲಿ ಆದ ಬದಲಾವಣೆಯನ್ನು ಕುರಿತು ಹೇಳುತ್ತಾ ಸ್ವರಾಜ್ಯದ ಉದಯದ ಹಂಬಲವನ್ನು ವ್ಯಕ್ತಪಡಿಸುತ್ತದೆ. ಕವಿತೆಯ ಮೂಲಕ ಅಳಿದುಳಿದ ಸಂಸ್ಕೃತಿ, ಅದರ ಭವ್ಯತೆಯು ಉಜ್ವಲವಾಗಿ ಬೆಳಗಬೇಕು.

ಅಳಿದುಳಿದ ಭವ್ಯತೆಯ ರುದ್ರಶಿಖಿಯುಜ್ವಲಿಸೆ
ಹಾಡುತಿದಿಯೊತ್ತಬೇಕು[೩೧]

ಎಂಬ ಹಂಬಲವು ಕವಿತೆಗಳಲ್ಲಿ ಕಾಣಿಸಿಕೊಂಡು ಇತಿಹಾಸ, ಪುರಾಣಗಳನ್ನು ಆಧುನಿಕತೆಯ ಮೂಲಕ ವೈಭವೀಕರಿಸುವ ಪ್ರಯತ್ನ ಮಾಡಿದವು. ಸಂಸ್ಕೃತಿ ಚಿಂತನೆಯಲ್ಲಿ ಕಾಣಿಸುವ ಬಹುಮುಖ್ಯ ಅಂಶ ಇತಿಹಾಸದ ವೈಭವೀಕರಣದ (ಗತ / ಪರಂಪರೆ) ತಾತ್ವಿಕ ಚಿಂತನೆ. ತಾವು ಕಂಡು ಅನುಭವಿಸಿದ ಉತ್ತಮವಾದ ಸಂಸ್ಕೃತಿಯೊಂದಿತ್ತು. ವಸಾಹತು ಆಕ್ರಮಣಕ್ಕೆ ಸಿಲುಕಿ ಅದೀಗ ನಾಶವಾಗುವ ಅಂಚಿನಲ್ಲಿದೆ. ಅದನ್ನು ಮೇಲೆತ್ತಿ ಉಳಿಸುವ ಪ್ರಯತ್ನ ಮಾಡಬೇಕೆಂಬ ಹಂಬಲವನ್ನು ಇಲ್ಲಿನ ಕವಿತೆಗಳು ವ್ಯಕ್ತಪಡಿಸುತ್ತವೆ.

''ಮೈಸೂರು ಧಾರವಾಡ ಪ್ರದೇಶದ ಕವಿಗಳು ಇತಿಹಾಸವನ್ನು ವೈಭವೀಕರಿಸುವ ಮೂಲಕ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ವ್ಯಕ್ತಪಡಿಸುವ ಪ್ರಯತ್ನ ಮಾಡಿದ್ದಾರೆ.''[೩೨] ದಕ್ಷಿಣ ಕನ್ನಡ ಕವಿತೆಗಳೂ ಕೂಡಾ ತಮ್ಮತನವನ್ನು ಪ್ರಕಟಿಸಲು ಇತಿಹಾಸವನ್ನು ವೈಭವೀಕರಿಸುವ ಮೂಲಕ ಗತವನ್ನು ಶೋಧಿಸಲು ತೊಡಗುತ್ತವೆ. ಪ್ರಾದೇಶಿಕ ನೆಲೆಯಲ್ಲಿ ರಾಷ್ಟ್ರೀಯತೆಯನ್ನು ಬಿಂಬಿಸುವ ಇಲ್ಲಿನ

ಕವನಗಳು ಬಹುತೇಕ ಏಕ ಆಶಯವನ್ನು ಹೊಂದಿವೆ. ಕೆಲವು ಕವಿತೆಗಳು ತೀವ್ರವಾದ ಆಕ್ರೋಶದಿಂದ ಅದನ್ನು ವ್ಯಕ್ತಪಡಿಸಿದರೆ ಇನ್ನು ಕೆಲವು ಮೌನವಾಗಿಯೇ ಪ್ರತಿಭಟಿಸುವುದನ್ನು ಕಾಣಬಹುದು.

ನಮ್ಮ ಹೆಮ್ಮೆಯ ಮಕುಟ ಗಂಡುತನದೇರಾಟ
ನಮ್ಮ ಸಂಸ್ಕೃತಿ ಕಲೆಗಳೊಂದು ಸವಿಯೂಟ
ನಮ್ಮ ಬೆಳ್ಜಸದ ಗುಡಿ, ಸಾಹಸದ ತುತ್ತತುದಿ
ನಮ್ಮ ಸತ್ವದ ಸತ್ವದುರಿ ವಿಜಯನಗರಿ[೩೩]

ಆಕ್ರಮಣಕಾರಿಗಳು ಯಾವುದೇ ದಯೆ ದಾಕ್ಷಿಣ್ಯವಿಲ್ಲದೆ ವಿಜಯನಗರವನ್ನು ನಾಶ ಮಾಡಿದರು. ಸಂಪತ್ತು, ಐಶ್ವರ್ಯಗಳು ಇಲ್ಲವಾಗಿ ಅನ್ಯಭೂತಗಳು ಮೆರೆದಾಡತೊಡಗಿದವೆಂಬ ಆಶಯವನ್ನು 'ವಿಜಯನಗರ ಧ್ವಂಸ'[೩೪] ಕವನ ವ್ಯಕ್ತಪಡಿಸುತ್ತದೆ. 'ವೀರರ ಮಸಣ'[೩೫] ಕವಿತೆಯು ವಿಜಯನಗರ ಸಾಮ್ರಾಜ್ಯದ ಘನತೆಯ ಅವನತಿಯೊಂದಿಗೆ, ಸಾಮ್ರಾಜ್ಯವನ್ನು ಉಳಿಸಲು ತಮ್ಮನ್ನೇ ಬಲಿಕೊಟ್ಟ ವೀರ ಮಸಣವಾಗುತ್ತದೆ.

ನಾಡಿನ ಸಂಸ್ಕೃತಿಯನ್ನು ಬಿಂಬಿಸುವ 'ದೀಪಾವಳಿ'[೩೬], ಕವನವು ಗತದ ನೆನಪುಗಳ ಹಿನ್ನೆಲೆಯಲ್ಲಿ ಭವಿಷ್ಯವನ್ನು ರೂಪಿಸುವ ಪ್ರಯತ್ನ ಮಾಡುತ್ತದೆ. ನಾಡಿನಾದ್ಯಂತ ಬೆಳಕನ್ನು ನೀಡುವ ದೀಪಾವಳಿಯು ಕೇವಲ ಹಬ್ಬವಾಗದೆ ನಾಡನ್ನು ಒಂದುಗೂಡಿಸುವ ಅಭಿಮಾನದ ಜ್ಯೋತಿಯನ್ನು ಬೆಳಗುವ ಕರೆಯಾಗುತ್ತದೆ. ಕೇವಲ 'ಗತ'ದ ಮಹತ್ವವನ್ನು ಹೇಳದೆ; ಆ ಗತದ ಬೆಳಕಿನಲ್ಲಿ ಹರಿದು ಹಸಗೆಟ್ಟ 'ನಾಡನೊಂದುಗೂಡಿಸು' ಎಂಬ ನಿವೇದನೆಯನ್ನು ಮಾಡುತ್ತಾ ನೆರೆನಾಡಿಗರ ಜೊತೆಯಲ್ಲಿ ತಲೆಯೆತ್ತಿ ನಿಂತು ನಾಡಿನ ಕೀರ್ತಿಯನ್ನು ಬೆಳಗಿದರೆ ಅದೇ ಸಾರ್ಥಕ ಎಂಬುದನ್ನು ಕವಿತೆ ನಿರೂಪಿಸುತ್ತದೆ. ಈ ದೃಷ್ಟಿಯಲ್ಲಿ ರಾಷ್ಟ್ರೀಯತೆಯೆಂಬುದು 'ಗತಕಾಲದ ನೆನಪುಗಳ ಪುನರ್ ಸಂಘಟನೆಯೂ ಹೌದು; ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕನ್ನಡಿಯೂ ಹೌದು.'

೩.೬. ಧರ್ಮದ ಕುರಿತ ಕಲ್ಪನೆ

ಬದುಕಿನ ಅನಿವಾರ್ಯತೆಗಾಗಿ ನೀತಿಯಿಂದ ಬದುಕುವುದು ಅವಶ್ಯ. ಅದಕ್ಕೊಂದು ಧರ್ಮಬೇಕು. ಧರ್ಮ ಎಂಬುದು ತನ್ನದೇ ಆದ ನಿಯಮಗಳನ್ನು ರೂಪಿಸಿಕೊಂಡಿರುತ್ತದೆ. ಆದರೆ ಕಾಲಕ್ಕನುಸಾರವಾಗಿ ಅದು ಬದಲಾಗುವ ಸ್ವರೂಪವನ್ನು ಹೊಂದಿದೆ. ವಸಾಹತುಶಾಹಿ ಆಳ್ವಿಕೆಯಿಂದ ಬದುಕುವ ಧರ್ಮದಲ್ಲಿ ಒಡಕುಂಟಾಗಿದ್ದು; ಆ ಒಡಕನ್ನು ಹೋಗಲಾಡಿಸಿ ಒಗ್ಗಟ್ಟನ್ನು ಮೂಡಿಸುವುದು ಅತೀ ಅಗತ್ಯವಾಗಿದ್ದಿತು. ಆದ್ದರಿಂದ ಧರ್ಮದ ಹೆಸರಿನಲ್ಲಿ ಬೇರ್ಪಟ್ಟ

ಭಾರತೀಯತ್ವ ಆ ಹೆಸರಿನಲ್ಲೇ ಒಂದಾಗಬೇಕಾಗಿರುವುದರಿಂದ ಮನುಷ್ಯನ ಬದುಕನ್ನು ಉದಾರಗೊಳಿಸುವುದು ಎಲ್ಲ ಧರ್ಮಗಳ ಹಿಂದಿನ ಕಾಳಜಿಯಾಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಬದುಕಿನ ಅನಿವಾರ್ಯತೆಗಾಗಿ ಸ್ವಾತಂತ್ರ್ಯ, ಬಿಡುಗಡೆ ಬೇಕು; ಅದನ್ನು ಗಳಿಸುವುದೂ ಒಂದು ರೀತಿಯಲ್ಲಿ ಧರ್ಮವೇ ಆಗಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ 'ಸ್ವಾತಂತ್ರ್ಯ'ವನ್ನು ಗಳಿಸುವುದೇ 'ರಾಷ್ಟ್ರೀಯತೆ'ಯ ಹಿಂದಿನ ಕಾಳಜಿಯಾದುದರಿಂದ ರಾಷ್ಟ್ರವನ್ನು ಧರ್ಮಭೇದವಿಲ್ಲದೆ ಕಾಣುವ ಅನಿವಾರ್ಯತೆ ಅಗತ್ಯವೆನಿಸಿತು. ಸಿಂಧೂ ನಾಗರಿಕತೆಯ ಆಧಾರದಲ್ಲಿ ಭಾರತವನ್ನು 'ಹಿಂದೂಸ್ಥಾನ'ವೆಂದು ಕರೆಯಲಾಗುತ್ತಿದ್ದು ಕ್ರಮೇಣ ಹಿಂದೂ ಮತವನ್ನೇ ವೈಭವೀಕರಿಸಿ ಉಳಿದವುಗಳನ್ನು ನಿರಾಕರಿಸುವ ಮನೋಧರ್ಮಕ್ಕೆ ಎಡೆಮಾಡಿತು. ಆದರೆ ಹಿಂದೂ, ಕ್ರೈಸ್ತ, ಬೌದ್ಧ ಮುಸಲ್ಮಾನ ಧರ್ಮಗಳ ಸಂಗಮ ಭೂಮಿಯಾದ ಭಾರತವನ್ನು ಕವಿಗಳು ಮಾನವತೆಯ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಿರುವರಲ್ಲದೆ ಆಧ್ಯಾತ್ಮಿಕ ದೃಷ್ಟಿಕೋನವನ್ನೂ ಮಹತ್ವವಾಗಿರಿಸಿದರು. ಇದು ರಾಷ್ಟ್ರವನ್ನು ಭಿನ್ನ ಆಯಾಮಗಳಲ್ಲಿ ನೋಡುವ ಪ್ರವೃತ್ತಿಗೆ ಪ್ರೇರಣೆ ನೀಡಿತು. ವಿವೇಕಾನಂದ, ರಾಮಕೃಷ್ಣ ಪರಮಹಂಸರಂತಹ ಆಧ್ಯಾತ್ಮ ನಾಯಕರುಗಳ ಚಿಂತನೆಯನ್ನೊಳಗೊಂಡ ಧರ್ಮ ಭೇದವನ್ನು ಮರೆತ ಐಕ್ಯ ಭಾರತೀಯರದು ಎಂಬುದನ್ನು ಕವಿಗಳು ಮನಗಂಡರು.

ಸರ್ವೇಶನೊಡೆತನದ ಜಗವು
ಸರ್ವರ ಸಮಾನ ಮಂದಿರವು
ಸರ್ವಾಧಿಕಾರಿಗಳ ನೀವು
ನಿರ್ವಹಿಸಲೇನು ಕಾರಣವು?[೬.೨]

ವಸಾಹತು ಆಳ್ವಿಕೆಯ ಕಾಲದಲ್ಲಿ ಪರದೇಶಿಗಳಿಂದ ತಮ್ಮನ್ನು ರಕ್ಷಿಸುವ ಸಲುವಾಗಿ ಹುಟ್ಟಿಕೊಂಡ 'ರಾಷ್ಟ್ರ' ಸಂಕಥನವು ಸಮಾಜದಲ್ಲಿನ ವಿರೋಧಗಳನ್ನು ಎದುರಿಸುತ್ತಲೇ ತನ್ನ ಅಸ್ತಿತ್ವಕ್ಕಾಗಿ ಮುನ್ನುಗ್ಗುತ್ತಿದ್ದು ಪ್ರಾದೇಶಿಕವಾಗಿಯೂ, ರಾಷ್ಟ್ರೀಯವಾಗಿಯೂ ತನ್ನನ್ನು ಸುದೃಢಪಡಿಸುವ ದೃಷ್ಟಿಯಿಂದ ಹಿಂದೂ, ಮುಸ್ಲಿಂ 'ಭಾವೈಕ್ಯ' ನಾಡಿನ ಧಾರ್ಮಿಕ ಸಾಮರಸ್ಯಕ್ಕೆ ಪ್ರೇರಣೆಯಾಗುವುದೆಂದು ಆಲೋಚಿಸಿದ ಕವಿಗಳು ಈ ರೀತಿಯ ಆಶಯವನ್ನು ತಮ್ಮ ಕವಿತೆಯಲ್ಲಿ ಅಭಿವ್ಯಕ್ತಿಸಿದರು.

ಸರಿಯೆ ಕಲಹಗಳ ತಂದೊಡ್ಡುವುದು? ನಾವೆಲ್ಲ
ಭರತಮಾತೆಯ ಪುತ್ರರಾದ ಕಾರಣದಿಂದ

ಹರಿವುದೊಂದೇ ರಕ್ತ ನಮ್ಮ ನರನಾಡಿಯಲಿ, ನಾಮಭೇದವು, ಭೇದವೇ?
ಧರಣಿಯಲಿ ಪೊರೆವನಲ್ಲಾ ಎನ್ನುವಿರಿ ನೀವು
ಪರಮಾತ್ಮ ಪೊರೆವನಲ್ಲಾ, ಎನ್ನುವೆವು ನಾವು
ಪರಿಕಲಿಸಲು ನಮ್ಮ ಮತವೊಂದೆ; ನಾಡೊಂದೆ; ಬೀಡೊಂದೆ; ಸರ್ವಸ್ವವೊಂದೆ.[೩೮]

ಕವಿತೆಗಳಲ್ಲಿ ಮಾತ್ರವಲ್ಲದೆ ಆ ಕಾಲದಲ್ಲಿ ರಚನೆಗೊಂಡ ಕಾವ್ಯದಲ್ಲೂ ಧರ್ಮದ ಕಾಳಜಿ ಇರುವುದನ್ನು ಇಲ್ಲಿ ಗುರುತಿಸಬಹುದು. 'ದೇವನೊಬ್ಬ ನಾಮ ಹಲವು' ಎಂಬ ಆಶಯದೊಂದಿಗೆ ಭಾರತೀಯರು 'ಒಂದು' ಎಂಬ ಐಕ್ಯದ ಕಲ್ಪನೆಯನ್ನು ನಮ್ಮ ಮುಂದಿಡುತ್ತದೆ. 'ಧರ್ಮ'ದ ಕಲ್ಪನೆ ಎನ್ನುವುದು ತನ್ನ ನಂಬಿಕೆ, ಆಚಾರ-ವಿಚಾರಗಳನ್ನು ಪ್ರೀತಿಸಿ ಗೌರವಿಸುವಂತೆ, ಅನ್ಯಧರ್ಮವನ್ನೂ ಪ್ರೀತಿಸುವಂತಾಗಬೇಕು. ಆಗ ಮಾತ್ರ ಸಾಮರಸ್ಯದ ಜೀವನ ನೆಲೆಗೊಳ್ಳಲು ಸಾಧ್ಯ. ದೇಶಕ್ಕೆ ಸ್ವಾತಂತ್ರ್ಯ ದೊರೆಯಬೇಕಾದರೆ ಜಾತಿ, ಮತ, ಧರ್ಮ, ಭೇದ ಇಲ್ಲದಾಗಬೇಕು. ಇದುವೇ ಸ್ವಾತಂತ್ರ್ಯ ಗಳಿಕೆಯ ಮೂಲಸಿದ್ಧಿ.

ಕಲಿಸೆಮಗೆ ಸತ್ಯವೊಂದು
ಇಸ್ಲಾಂಮಂತೆಯೆ ಹಿಂದು
ತಾಯ್ಮೊಲೆಗಳಿವೆಂದು
ಮೊಲೆ ಕೊಡುವ ತಾಯೊಂದು[೩೯]

ಭಾರತದಲ್ಲಿ ಸರ್ವಧರ್ಮ, ಸಮನ್ವಯದ, ಸಹಬಾಳ್ವೆಯ, ಮಾನವತೆಯ ಐಕ್ಯದ ಜೀವನ ನಡೆಯಬೇಕಾಗಿದೆ. ಇದನ್ನು ಜನತೆಗೆ ಸಾರಿದ ಗಾಂಧಿಯವರ ತತ್ತ್ವಗಳೂ ಆದರ್ಶಪ್ರಾಯವಾದುದು.

ಗೋವಧೆಯ ನಿಲಿಸಿ, ಮತವಿದ್ವೇಷಗಳ ಬಿಡಿಸಿ,
ಭೂವಲಯ ತನ್ನ ಸುಕುಟುಂಬವೆಂದೆಣಿಸಿ
ಸಾವಧಾನದಿ ಹಿಂದು ಮಹಮದೀಯರು ನಿಂದು
ಕಾವುದೀ ಭರತಮಾತೆಯನೆಂದು ನುಡಿವ ॥ಗಾಂಧಿ॥[೪೦]

ಧರ್ಮಬಾಹಿರ ಪ್ರವೃತ್ತಿಗಳನ್ನು ನಡೆಸದೆ ಧರ್ಮಕ್ಕೆ ಅನುಯೋಜ್ಯವಾದ ಪ್ರವೃತ್ತಿಗಳನ್ನು ಮಾಡುವುದು ಭಾರತದ ಹಿತದೃಷ್ಟಿಯಿಂದ ಉತ್ತಮವಾದುದು. ಗಾಂಧೀಜಿಯವರ ತತ್ತ್ವದ ಆಧಾರದಲ್ಲಿ ದೇಶದಲ್ಲಿ ಸ್ಥಿರೀಕರಣಗೊಳ್ಳಬೇಕಾದ ಧರ್ಮದ ಅಗತ್ಯತೆಯನ್ನು ಕವನವು ಪ್ರತಿಪಾದಿಸುತ್ತದೆ.

ಜೀವನಧರ್ಮವನ್ನು ಎತ್ತಿಹಿಡಿಯುವ; ಅದಕ್ಕೆ ಬೆಲೆಕೊಡುವ ಭಾರತೀಯತ್ವವು ಹಿಂದೂ ಮೂಲದ್ದೆಂದು ಗುರುತಿಸಿಕೊಂಡದ್ದು ಆ ಹಿಂದುತ್ವದಲ್ಲಿ ಒಡಕುಗಳುಂಟಾಗಿ ತಮ್ಮ ಅಸ್ತಿತ್ವಕ್ಕೆ ಧಕ್ಕೆಯುಂಟಾಗುತ್ತಿರುವುದರಿಂದ ಉಳಿದವರಂತೆ ತಾವೂ ಮನುಷ್ಯರಂತೆ ಜೀವಿಸಬೇಕಾದ ಧರ್ಮವನ್ನು ಪ್ರತಿಪಾದಿಸುವ 'ಹಿಂದೂಗಳ ಭಾಗ್ಯವಿನ್ನೆಂದು ನೀ ತೆರೆವೆ?' ಕವಿತೆಯು

ವರುಷ ಹಲನೂರಾಯ್ತು ನಮಗಿಲ್ಲ ನೋಡ
ಸ್ವಾತಂತ್ರ್ಯ ನಮ್ಮ ದುರ್ದೆಶೆಯನೆಂದರಿವೆ?
ಮನುಜರಲ್ಲವೆ? ನಮಗೆ ಮನುಜತನ ಬೇಡಾ?
ಅಕಟ ಹಿಂದೂಗಳ ಭಾಗ್ಯವನೆಂದು ತೆರೆವೆ?[೪೧]

ಮಾನವೀಯತೆಯ ನೆಲೆಯಲ್ಲಿ ಬದುಕಬೇಕಾದ ಅಗತ್ಯತೆಯನ್ನು ಸಾರುತ್ತದೆ. ಈ ವರೆಗೆ ಅನುಭವಿಸಿದ ಪರಾಧೀನತೆಯಿಂದ ಮುಕ್ತಗೊಂಡು ಆದರ್ಶ ಜೀವನವನ್ನು ನಡೆಸಬೇಕಾಗಿದ್ದು; ಆ ಆದರ್ಶದ ಬೆಳವಣಿಗೆಗೆ ಪೋಷಕವಾದ ಸಂಸ್ಕೃತಿ ಭಾರತೀಯತ್ವದಿಂದ ಲಭಿಸಬೇಕು. ಇದು 'ಸ್ವಾತಂತ್ರ್ಯ'ದಿಂದ ಮಾತ್ರ ಸಾಧ್ಯ ಎಂಬುದನ್ನು ರಾಷ್ಟ್ರಾಭಿಮಾನದ ಹಿನ್ನೆಲೆಯಲ್ಲಿ ಕವಿತೆ ಪ್ರಸ್ತುತಪಡಿಸುತ್ತದೆ. ಆಧುನಿಕ ಸಮಾಜದಲ್ಲಿ ಕಾಣಿಸುವ ಕೋಮುವಾದೀ ರಾಷ್ಟ್ರೀಯತೆಯ ಧೋರಣೆಗಿಂತ ಭಿನ್ನವಾದ ರೀತಿಯಲ್ಲಿ ರಾಷ್ಟ್ರೀಯತೆ ವ್ಯಕ್ತವಾಗುವುದನ್ನು ಇಲ್ಲಿ ಗಮನಿಸಬಹುದು. ವಸಾಹತು ವಿರೋಧಕ್ಕೆ ದೇಶ ಒಂದಾಗಬೇಕು. ದೇಶ ಒಂದಾಗಬೇಕಾದರೆ ಪ್ರತಿಯೊಬ್ಬನಲ್ಲೂ ಧರ್ಮ ಸಾಮರಸ್ಯದ ಭಾವನೆ ಬೆಳೆಯಬೇಕು. ಆಗ ಮಾತ್ರ ನಾಡು ಸಮಾನತೆಯ ತಕ್ಕಡಿಯಲ್ಲಿ ತೂಗಿ, ಬಾಹ್ಯ ಹಾಗೂ ಆಂತರಿಕ ಬಂಧನದಿಂದ ಮುಕ್ತಿಗೊಳ್ಳಲು ಸಾಧ್ಯ ಎಂಬುದನ್ನು ಕವಿತೆಗಳು ಅಭಿವ್ಯಕ್ತಿಸುತ್ತವೆ.

೩.೭. ಸ್ವಾತಂತ್ರ್ಯ ಚಳುವಳಿಗೆ ಪ್ರತಿಕ್ರಿಯೆ

ಆಂತರಿಕ ಅಸಮಾನತೆಯಿಂದ ಹೊರಬಂದು 'ವ್ಯಕ್ತಿಸ್ವಾತಂತ್ರ್ಯ'ವನ್ನು ಗಳಿಸಬೇಕೆಂಬ ಹಂಬಲ ಒಂದೆಡೆಯಾದರೆ; ಪರಕೀಯರ ಆಳ್ವಿಕೆಯ ವಿರುದ್ಧ ತನ್ನನ್ನು ಸಾಮೂಹಿಕವಾಗಿ ಸನ್ನದ್ಧಗೊಳಿಸ ಬೇಕೆಂಬ ಹಂಬಲ ರಾಷ್ಟ್ರೀಯತೆಯ ಹಿಂದಿದೆ. ಮೊದಲನೆಯದು ಮಂದವಾದ ಹೋರಾಟವಾದರೆ ಎರಡನೆಯದು, ಪ್ರತಿಭಟನಾತ್ಮಕವಾದದ್ದು. ದೇಶದುದ್ದಕ್ಕೂ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡ ಕವಿಗಳ ಕೆಲವು ಕವಿತೆಗಳಲ್ಲಿ ನಾಡಿಗಾಗಿ ಹೋರಾಡುವಲ್ಲಿ ಪ್ರತಿಭಟನೆ ಇದೆ, ಆವೇಶವಿದೆ. ತಮ್ಮ ಕಾಲದ ಸಾಮಾಜಿಕ ಪ್ರಜ್ಞೆಯುಳ್ಳದಾದ್ದರಿಂದ ಭಾವನಾತ್ಮಕ ರೀತಿಯಲ್ಲಿ ಕವಿಗಳು ಅದಕ್ಕೆ ಸ್ಪಂದಿಸಿದರು.

ಸಮಾಜದ ಛಿದ್ರೀಕರಣಕ್ಕೆ ಮುಖ್ಯ ಕಾರಣ ಜಾತಿಯ ವರ್ಗೀಕರಣ. ಬಹುರೂಪೀ ಜಾತಿವ್ಯವಸ್ಥೆ ಇರುವ ಬೇರೆ ಬೇರೆ ಜಾತಿಗಳು ಸಮಾಜವನ್ನು ಒಗ್ಗೂಡಿಸುವುದಕ್ಕೆ ಅಡ್ಡಿಯಾಗುತ್ತಿದ್ದ ಸಂದರ್ಭಗಳಲ್ಲಿ ತಮ್ಮ ಕವಿತೆಗಳ ಮೂಲಕ ನಾಡಿನ ಒಗ್ಗಟ್ಟಿಗಾಗಿ ಶ್ರಮಿಸಿದರು. ಅನ್ಯರ ಧಾಳಿಯಿಂದ ಬೇಸರಗೊಂಡ ತಮ್ಮತನಕ್ಕಾಗಿ ಸ್ವಾತಂತ್ರ್ಯವನ್ನು ಹಂಬಲಿಸಿದಾಗ 'ಸ್ವಾತಂತ್ರ್ಯ'ದ ಹಕ್ಕಿಯು 'ಪಂಜರದ ಪಕ್ಷಿ'[೪೨]ಯಾದಾಗ

ಅಂದಿನಾ ದಿನವನ್ನು ನೆನೆದರೆಯೆ ನನ್ನೆದೆಯೊ
ಳಿಂದಿಗೂ ದುಃಖಾಗ್ನಿ ಹೊತ್ತಿಡಬಹುದು.
ಸಂದ ನಿದ್ದೆಯೊಳೆ ನಾನಿರುವಾಗ ರಾತ್ರಿಯಲ್ಲಿ
ಬಂದು ಹಿಡಿದನು ಬೇಡ ಕ್ರೂರನಹದು[೪೩]

ಎಂದು ಹೇಳುವ ಕವಿತೆ ವಸಾಹತುವಿನ ಅಡಿಯಾಳಾಗಿ ಜೀವಿಸಬೇಕಾಗಿ ಬಂದುದರ ಕೊರಗನ್ನು ಸ್ಪಷ್ಟವಾಗಿ ಧ್ವನಿಸುತ್ತದೆ. ಆದ್ದರಿಂದ ಈ ಬಂಧನದಿಂದ ಮುಕ್ತಿ ಹೊಂದಿ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಈ ಹೋರಾಟಕ್ಕೆ ಎಲ್ಲರೂ ಒಮ್ಮತದಿಂದಿರಬೇಕು. ಈ ಒಮ್ಮತಕ್ಕೆ ಸ್ವಾತಂತ್ರ್ಯದ ಕಹಳೆ ಜನರನ್ನು ಬಡಿದೆಚ್ಚರಿಸಿತು.

ಸತ್ತು ಹುಟ್ಟಿದ ಜನರೆ ಸುಮ್ಮನೆ ಬರಡಾಯ್ತು
ನಿಮ್ಮ ಜನ್ಮವು ಬನ್ನಿ 'ಹೊಸಜನ್ಮತಾಳಿ'
ಹಿಂದೆಂದು ಕೇಳದಿಹ ಹಿಂದೆಂದು ಕಾಣದಿಹ
ವೀರ ವಿಲಸಿತವಿದನು ನೋಡಿ ಸೊಗಬಾಳಿ[೪೪]

ಎಂಬ ಸ್ಫೂರ್ತಿಯೊಂದಿಗೆ ವೀರಕಹಳೆಯು ಸ್ವಾತಂತ್ರ್ಯಕ್ಕಾಗಿ ಜನರನ್ನು ಸ್ಫೂರ್ತಿಯ ಮಾತುಗಳಿಂದ ಉತ್ಸುಕರನ್ನಾಗಿ ಮಾಡುತ್ತದೆ. ಸ್ವಾತಂತ್ರ್ಯ ಯೋಧರನ್ನು ಹುರಿದುಂಬಿಸಲು, ಧೈರ್ಯದಿಂದ ಮುನ್ನುಗ್ಗಬೇಕೆಂಬ ಕರೆಯನ್ನು ಕೊಡುತ್ತದೆ. 'ಗುರಿ', ಸಾಹಸ[೪೫] ಕವನಗಳು ಇದೇ ಆಶಯವನ್ನು ವ್ಯಕ್ತಪಡಿಸುತ್ತವೆ.

ಗಾಳಿ ಬಂದಡೆ ತಿರುಗುವಾ ಹೇಡಿತನವು
ಗಾಳಿ ಬಂದೊಡನೆ ಶರಣೆಂಬ ಹೆಣ್ತನವು
ಬೇಡ, ಹಿಡಿದೊಳ್ದಾರಿಯೊಳು ಕೊನೆಯವರೆಗೆ
ದೂಡು ಬಾಳ್ವೆಯನು ಪೌರುಷದ ಹೊನಲೊಳಗೆ

(ಗೋಪಾಲಕೃಷ್ಣ ಅಡಿಗ; 'ಗುರಿ', ಕಟ್ಟುವೆವು ನಾವು)

ಸ್ವಾತಂತ್ರ್ಯ ಗಳಿಸಬೇಕಾದರೆ ಸದಾ ಎಚ್ಚರದಿಂದ ಕಾಯಬೇಕು. ಪೌರುಷವಿದ್ದಾಗ ಯಾರಿಂದಲೂ ಏನೂ ಮಾಡಲು ಸಾಧ್ಯವಿಲ್ಲ ಎಂಬ ಕಿವಿಮಾತನ್ನು ನೀಡುವ ಈ ಕವಿತೆಯು ಪಂಜೆಯವರ 'ತೂಕಡಿಕೆಯನು ಕಳೆ'[೪೬] ಕವನವನ್ನು ಹೋಲುತ್ತದೆ. ಪಾರತಂತ್ರ್ಯದ ಬಿಡುಗಡೆಯ ಹಂಬಲ, ಸ್ವತಂತ್ರ ರಾಷ್ಟ್ರದ ಕಲ್ಪನೆ ಕವಿತೆಯ ಮೂಲಕ ಪ್ರತಿಭಟನೆಯ ಹಾದಿಯನ್ನು ಹಿಡಿಯುತ್ತದೆ.

ಕೇಳಿರಿ ಕೆರಳಿರಿ ಕಹಳೆ ಮೊಳಗುತಿದೆ
ಭಾರತ ಬಾರೆಂದಮ್ಮ ಕರೆಯುತಿದೆ
ಕೋಟಿ ಡಿಲ್ಲಿಗಳು ಕೋಟಿ ಬಾಂಧವರು
ಸ್ವಾಗದ ನಿಮಗೆಂದಲ್ಲ ಕರೆಯುವರು[೪೭]

ಆದ್ದರಿಂದ ಬ್ರಾಹ್ಮಣ, ವೈಶ್ಯ, ಶೂದ್ರ, ಮುಸಲ್ಮಾನರೆಲ್ಲಾ ರಾಜನಿಷ್ಠೆಯನ್ನು ಬಿಟ್ಟು ರಾಷ್ಟ್ರ ನಿಷ್ಠೆಯನ್ನು ಮೈಗೂಡಿಸಿಕೊಳ್ಳಬೇಕು, ದಾಸತ್ವವನ್ನು ಬಿಟ್ಟು, ಪರಕೀಯಾಡಳಿತದ ಶೋಷಣೆಯಿಂದ ಮೇಲೆ ಬರಬೇಕಾದ ಕೂಗು ಕವಿತೆಗಳಲ್ಲಿ ವ್ಯಕ್ತವಾಗುತ್ತವೆ.

ರಾಷ್ಟ್ರೀಯಾಂದೋಲನದ ಭಾಗವಾಗಿ ದೇಶದಾದ್ಯಂತ ಪಸರಿಸಿದ ಬೇರೆ ಬೇರೆ ಚಳುವಳಿಗಳ ಉದ್ದೇಶವನ್ನು ವ್ಯಕ್ತಪಡಿಸುತ್ತಾ ಜನರಲ್ಲಿ ಸ್ವಾತಂತ್ರ್ಯ ಗಳಿಕೆಯ ಮನಸ್ಥಿತಿಯನ್ನು ಉಂಟುಮಾಡುವಲ್ಲಿ ಇಲ್ಲಿನ ಕವಿತೆಗಳು ಶ್ರಮಿಸಿದುವು. ಖಾದಿ ವಸ್ತ್ರಧಾರಣೆ, ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಗಳೆಲ್ಲವೂ ಹೊಸರೂಪ, ಹೊಸ ಭಾವಗಳೊಂದಿಗೆ ಕವಿತೆಗಳ ಮೂಲಕ ಜನಮನವನ್ನು ಮುಟ್ಟಿದಾಗ, ಸ್ವಾತಂತ್ರ್ಯ ಗಳಿಸಬೇಕೆಂಬ ಹಂಬಲವು ರಾಷ್ಟ್ರಭಕ್ತಿಯಾಗಿ ರೂಪು ತಾಳಿತು. ಮಾತ್ರವಲ್ಲ ದಿಟ್ಟತನದ ಹೆಜ್ಜೆಯೊಂದಿಗೆ ವಸಾಹತುಗಳನ್ನು ನೇರವಾಗಿ ವಿರೋಧಿಸುವ ಧೈರ್ಯ ದಕ್ಷಿಣ ಕನ್ನಡದ ಕವಿತೆಗಳ ಸಂದರ್ಭದಲ್ಲಿ ಕಾಣಿಸಿಕೊಂಡಿತು.

ಎದ್ದೇಳಿ ಭಾರತೇರೆ । ರಾಷ್ಟ್ರ ಸೇವೆಯೊಳ್
ಬದ್ಧ ಕಂಕಣರಾಗಿ । ಬಿದ್ದಿರುವ ಭಾರತಿ
ಯನುದ್ಧರಿಪ ಯುದ್ಧದೊಳಗಾತ್ಮ ಯಜ್ಞಕ್ಕಾದರೂ ಸಿದ್ಧರಾಗಿ ಪೋಗಿ
ಊರ್ಧ್ವಕೇಶಿಯು ಭಾರತೇಯನಲ್ಲವೆ? ಆವನೋ
ಳಿರ್ದರಕ್ತವು ನಿಮ್ಮೊಳಿಲ್ಲವೆ? ಬಾಂಧವರೆ
ಎದ್ದೇಳಿರೆದ್ದೇಳಿ! ಭಾರತಾಂಬೆಯ ಭರದೊಳ್ಳುದ್ಧರಿಸಿ ವೀರರೆನಿಸಿ[೪೮]

ಎಂದು ಎಚ್ಚರಿಸುತ್ತಾ, ಯಾವುದೇ ದಾಕ್ಷಿಣ್ಯವಿಲ್ಲದೆ ವಸಾಹತುವನ್ನು ಹೊಡೆದೋಡಿಸುವ ಹಂಬಲ, ಗುರಿಯನ್ನಿಟ್ಟುಕೊಂಡು, ಜನತೆ ಎಚ್ಚೆತ್ತು ತಮ್ಮ ಜಡತೆಯನ್ನು ಕಳೆದು ಹೊಸ ಹುರುಪಿನಿಂದ

ಹೋರಾಟಕ್ಕೆ ಸಿದ್ಧರಾಗಬೇಕು ಎಂಬ ಆಶಯವನ್ನು ದಕ್ಷಿಣ ಕನ್ನಡದ ಕವಿತೆಗಳು ಬಿಂಬಿಸುತ್ತವೆ.[೪೯] ವಿದೇಶೀ ವಸ್ತ್ರವನ್ನು ತ್ಯಜಿಸಿ ಸ್ವದೇಶೀ ವಸ್ತ್ರಧಾರಣೆಯ ಮಹತ್ವವನ್ನು ತಿಳಿ ಹೇಳುವುದು 'ಖಾದಿಯ ಹಾಡು'[೫೦] ಕವನವು ರಾಷ್ಟ್ರೀಯತೆಯ ಮಗದೊಂದು ಮುಖವನ್ನು ಅಭಿವ್ಯಕ್ತಿಸುತ್ತದೆ. ಪರಕೀಯವಾದುದೊಂದು ತಮಗ ಬೇಡ; ತಮ್ಮತನವೇ ಶ್ರೇಷ್ಠ ಎಂಬುದನ್ನು ಸ್ಥಿರೀಕರಿಸುತ್ತಲೇ ವಸಾಹತುಗಳಿಗೆ ವಿರೋಧವಾಗಿ ತಮ್ಮನ್ನು ಸಿದ್ಧಗೊಳಿಸುವ ಪ್ರಕ್ರಿಯೆ ಇಲ್ಲಿನ ಕವನಗಳಲ್ಲಿ ಅಭಿವ್ಯಕ್ತಗೊಳ್ಳುತ್ತವೆ.

ಕ್ವಿಟಿಂಡಿಯ ಕ್ವಿಟಿಂಡಿಯ
ಬಿಟ್ಟು ಬಿಡಿಂಡಿಯ
ನೆಟ್ಟಗೆ ನಿನ್ನಿಂಗ್ಲಾಂಡಿಗೆ ನಡೆ ನಡೆ
ಬಿಟ್ಟು ಬಿಡಿಂಡಿಯಾ[೫೧]

ಎಂದು ರಾಜಾರೋಷವಾಗಿ ಹೇಳಿಕೊಳ್ಳುವ ಕವಿತೆಯ ರಾಷ್ಟ್ರ ಪ್ರಜ್ಞೆ ಸ್ವಾತಂತ್ರ್ಯಪ್ರಜ್ಞೆಯ ಹಿನ್ನೆಲೆಯಲ್ಲಿ ಹುಟ್ಟಿರುವುದನ್ನು ಗಮನಿಸಬಹುದು. 'ಭಾರತ ಸ್ವಾತಂತ್ರ್ಯದ ಗಾಯತ್ರಿ'[೫೨], 'ದಿಗಂತದಾಚೆಗೆ'[೫೩] ಕವನಗಳು ವಸಾಹತುಗಳು ತಮ್ಮನ್ನು ಬಿಟ್ಟು ಹೋಗುವುದು ಅನಿವಾರ್ಯವೆಂಬಂತೆ ಚಿತ್ರಿಸುತ್ತವೆ. ಸ್ವಾತಂತ್ರ್ಯಕ್ಕಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಪ್ರಯತ್ನಿಸಿದಾಗ ಮಾತ್ರ, ಗಂಡು-ಹೆಣ್ಣು ಭೇದವಿಲ್ಲದೆ, ಸಮಾನತೆಯನ್ನು ಗಳಿಸುವ ಸ್ವಾತಂತ್ರ್ಯವನ್ನು ಪಡೆಯಬಹುದು ಎಂಬ ಆಶಾಭಾವವನ್ನು ಪ್ರಕಟಿಸುತ್ತವೆ ಮಾತ್ರವಲ್ಲ; ಜಾತಿ-ಮತ-ಭೇದವಿಲ್ಲದೆ ಎಲ್ಲರೂ ಒಂದಾಗಿ ಮುನ್ನುಗ್ಗಿದಾಗ ಸ್ವಾತಂತ್ರ್ಯವನ್ನು ತಮ್ಮದಾಗಿಸಿಕೊಳ್ಳುವ ಎದೆಗಾರಿಕೆಯನ್ನು ಜನರು ಪಡೆದುಕೊಳ್ಳುತ್ತಾರೆ ಎಂಬ ಆಶಯವನ್ನೂ ಕವಿತೆಗಳು ಅಭಿವ್ಯಕ್ತಿಸುತ್ತವೆ.

ಕೊನೆ ಟಿಪ್ಪಣಿಗಳು

೧. ಕಡೆಂಗೋಡ್ಲು ಶಂಕರಭಟ್ಟ; ಕಾರ್ಗಾಲದ ವೈಭವ (ಬಿ.ಎ. ಸನದಿ, ಸವಿತಾ ನಾಗಭೂಷಣ (ಸಂ); ಸುವರ್ಣ ಕಾವ್ಯ, ಪುಟ ೨೪

೨. ಕಯ್ಯಾರ ಕಿಂಞಣ್ಣ ರೈ; 'ನೇತ್ರಾವತಿ' ಶತಮಾನದ ಗಾನ, ಪುಟ ೫೦

೩. ಕಯ್ಯಾರ ಕಿಂಞಣ್ಣ ರೈ, ಪೊಸಡಿಗುಂಪೆ; ಶತಮಾನದ ಗಾನ, ಪುಟ ೫೮

೪. ಶಿವರಾಮ ಕಾರಂತ; ರಾಷ್ಟ್ರ ಗೀತ ಸುಧಾಕರ; ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ಸಂ. ೧, ಪುಟ ೮

೫. ಕಯ್ಯಾರ ಕಿಂಞಣ್ಣ ರೈ; 'ಸ್ವಗತ', ಶತಮಾನದ ಗಾನ, ಪುಟ ೧೮೬

೬. ನೋಡಿ ಅನುಬಂಧ - I (೧,೨,೩)

೭. ಗೋಪಾಲಕೃಷ್ಣ ಅಡಿಗ ಎಂ.; ಕಟ್ಟುವೆವು ನಾವು, ಅಡಿಗ ಕಾವ್ಯ ಪೂರ್ಣ ಸಂಪುಟ, ಪುಟ ೯೨

೮. ನೋಡಿ ಅನುಬಂಧ - I (೪,೫,೬)

೯. ಗೋವಿಂದ ಪೈ; 'ಕನ್ನಡಿಗರ ತಾಯಿ', 'ಗಿಳಿವಿಂಡು'

೧೦. ಕಡೆಂಗೋಡ್ಲು ಶಂಕರಭಟ್ಟ 'ಸಮಗ್ರಕಾವ್ಯ ಸಂಪುಟ', ಪುಟ ೬೯

೧೧. ಅದೇ ” ” ಪುಟ ೬೯

೧೨. ಕಯ್ಯಾರ ಕಿಂಞಣ್ಣ ರೈ 'ಸ್ವಗತ' ಶತಮಾನದ ಗಾನ, ಪುಟ ೧೫೨

೧೩. ಅದೇ ” ” ಪುಟ ೧೫೧

೧೪. ಅದೇ ” ” ಪುಟ ೧೫೨

೧೫. ಅದೇ ” ” ಪುಟ ೯೫-೯೭, ೧೦೩-೧೧೦

೧೬. ಗೋವಿಂದ ಪೈ 'ಗಿಳಿವಿಂಡು', ಪುಟ ೨೮-೨೯

೧೭. ಗೋವಿಂದ ಪೈ ರಾಷ್ಟ್ರೀಯ ಶಿಕ್ಷಣದ ಸಪ್ತಾಹ ಕರೆ, ಗಿಳಿವಿಂಡು, ಪುಟ ೨೯

೧೮. ಸಂತೋಷ ಚೊಕ್ಕಾಡಿ; ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಪುಟ - ೨೫೭

೧೯. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; 'ಹರಿಜನ ಸಂಧಾನ', ಸ್ವರಾಜ್ಯ

ಪುಟ ೧೧

೨೦. ಶಿವರಾಮ ಕಾರಂತ; ಮಾಲಿನೀ ಮಲ್ಯ (ಸಂ) - ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ಸಂಪುಟ - ೧, ಪುಟ ೭

೨೧. ಗೋವಿಂದ ಪೈ; ಅದೇ " ಪುಟ - ೧೨, ೧೩ - ನೋಡಿ ಅನುಬಂಧ - I (೭)

೨೨. ಗೋಪಾಲಕೃಷ್ಣ ಅಡಿಗ; ನಾವೆಲ್ಲರೂ ಒಂದೇ ಜಾತಿ, ಅಡಿಗ ಕಾವ್ಯ ಪೂರ್ಣ ಸಂಪುಟ, ಪುಟ ೬೯

೨೩. ಪಂಜೆಮಂಗೇಶ ರಾಯ; ಹೊಲೆಯನ ಹಾಡು, ಪಂಜೆಯವರ ಕೃತಿಗಳು, ಪುಟ - ೭೫

೨೪. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; ಸ್ವರಾಜ್ಯ, ಪುಟ ೧೦೩-೧೦೪

೨೫. ಗೋಪಾಲಕೃಷ್ಣ ಅಡಿಗ, 'ಸುಲಿಗೆಯೆಂಬ ಯಾಗ' ಅಡಿಗ ಕಾವ್ಯ ಪೂರ್ಣ ಸಂಪುಟ, ಪುಟ ೮೨-೮೪

೨೬. ಬೇಕಲ ರಾಮನಾಯ್ಕ ಬೇಕಲರ ಸಾಹಿತ್ಯ ಸಂಪುಟ, ಪುಟ ೬೦೮-೬೦೫

೨೭. ಕಡೆಂಗೋಡ್ಲು ಶಂಕರಭಟ್ಟ 'ಪಂತ' ಕಡೆಂಗೋಡ್ಲು ಕಾವ್ಯ, ಪುಟ ೧೭೧

೨೮. ಶ್ರೀಕಂಠ ಶಾಸ್ತ್ರೀ; ಭಾರತೀಯ ಸಂಸ್ಕೃತಿ, ಪುಟ ೬

೨೯. ಕಯ್ಯಾರ ಕಿಂಞಣ್ಣ ರೈ; ಶ್ರೀಮುಖ, ಶತಮಾನದ ಗಾನ, ಪುಟ ೧೮೫

೩೦. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; ಸ್ವರಾಜ್ಯ ಗೀತೆ; ಸ್ವರಾಜ್ಯ, ಪುಟ ೭೨

೩೧. ಕಯ್ಯಾರ ಕಿಂಞಣ್ಣ ರೈ; ಹೊಸಹಾಡು: ಶತಮಾನದ ಗಾನ, ಪುಟ ೨೧

೩೨. ಸಂತೋಷ ಚೊಕ್ಕಾಡಿ; ದ. ಕನ್ನಡದ ಕಾವ್ಯದ ವಿಭಿನ್ನ ನೆಲೆಗಳು, ಪುಟ ೨೪೮

೩೩. ಗೋಪಾಲಕೃಷ್ಣ ಅಡಿಗ; ವಿಜಯನಗರದ ನೆನಪು, ಅಡಿಗರ ಕಾವ್ಯ ಪೂರ್ಣ ಸಂಪುಟ, ಪುಟ ೭೪

೩೪. ನೋಡಿ ಅನುಬಂಧ - I (೮)

೩೫. ಕಡೆಂಗೋಡ್ಲು ಶಂಕರಭಟ್ಟ; 'ಪತ್ರಪುಷ್ಪ' ಕಡೆಂಗೋಡ್ಲು ಕಾವ್ಯ, ಪುಟ ೧೯೪

೩೬. ಗೋಪಾಲಕೃಷ್ಣ ಅಡಿಗ; ಸಮಗ್ರ ಕಾವ್ಯ, ಪುಟ ೧೧

೩೭. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; 'ಆರ್ತಾಲಾಪ', ಸ್ವರಾಜ್ಯ, ಪುಟ ೮೩

೩೮. ಕಡೆಂಗೋಡ್ಲು ಶಂಕರಭಟ್ಟ; 'ಗಾಂಧಿ ಸಂದೇಶ', ಕಡೆಂಗೋಡ್ಲು ಶಂಕರಭಟ್ಟ ಸಮಗ್ರಕಾವ್ಯ, ಪುಟ ೩೭

೩೯. ಗೋವಿಂದ ಪೈ, ಭಾರತ ಭಾಗ್ಯವಿಧಾತಾ (ಗಿಳಿವಿಂಡು), ಪುಟ ೨೭

೪೦. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ: 'ಮಹಾತ್ಮರ ಅನಶನವ್ರತ', ಸ್ವರಾಜ್ಯ, ಪುಟ ೩.೩

೪೧. ಗೋವಿಂದ ಪೈ; ಹೃದಯರಂಗ, ಪುಟ ೪೪

೪೨. ಕಯ್ಯಾರ ಕಿಂಞಣ್ಣ ರೈ; 'ಪಂಜರದ ಪಕ್ಷಿ', ಶತಮಾನದ ಗಾನ, ಪುಟ ೧೧೧

೪೩.. ಅದೇ " " ಪುಟ ೧೧೧

೪೪. ಕಡೆಂಗೋಡ್ಲು ಶಂಕರಭಟ್ಟ; 'ಕಹಳೆ' ಕಡೆಂಗೋಡ್ಲು ಕಾವ್ಯ, ಪುಟ ೧೭೨

೪೫. ಗೋಪಾಲಕೃಷ್ಣ ಅಡಿಗ; ಕಟ್ಟುವೆವು ನಾವು, ಅಡಿಗ ಕಾವ್ಯಪೂರ್ಣ ಸಂಪುಟ, ಪುಟ ೮೬ ನೋಡಿ ಅನುಬಂಧ - I (೯)

೪೬. ಪಂಜೆಮಂಗೇಶ ರಾಯ; ಪಂಜೆಯವರ ಕೃತಿಗಳು, ಪುಟ ೭೮-೭೯

೪೭. ಕಯ್ಯಾರ ಕಿಂಞಣ್ಣ ರೈ; 'ದಿಗಂತದಾಚೆಗೆ', ಶತಮಾನದ ಗಾನ, ಪುಟ ೧೧೯

೪೮. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; 'ಆತ್ಮಯಜ್ಞ', ಸ್ವರಾಜ್ಯ, ಪುಟ ೮೩

೪೯. ಇದೇ ಆಶಯವನ್ನು ವ್ಯಕ್ತಪಡಿಸುವ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ 'ಉಪ್ಪಿನ ಕದನ' ಪುಟ ೮೫ ನೋಡಿ ಅನುಬಂಧ- I (೧೦)

೫೦. ಅದೇ " " ಪುಟ ೯೧

೫೧. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; 'ಭಾರತದ ಸಿಂಹನಾದ', ಸ್ವರಾಜ್ಯ, ಪುಟ ೯೧

೫೨. ಗೋವಿಂದ ಪೈ; ಹೃದಯರಂಗ, ಪುಟ ೪೫

೫೩.. ಕಯ್ಯಾರ ಕಿಂಞಣ್ಣ ರೈ; ಶತಮಾನದ ಗಾನ, ಪುಟ ೧೧೯

ಅಧ್ಯಾಯ - ೪

ಸ್ವಾತಂತ್ರ್ಯೋತ್ತರ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ

ಅಧ್ಯಾಯ - ೪

ಸ್ವಾತಂತ್ರ್ಯೋತ್ತರ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ

೪.೧. ಪ್ರವೇಶ

ವಸಾಹತುಶಾಹಿ ಆಡಳಿತ ಕೊನೆಗೊಂಡು; ದೇಶಾಭಿಮಾನ, ತ್ಯಾಗ, ಬಲಿದಾನಗಳ ಗುಂಗಿನಲ್ಲಿ ಮುಳುಗಿದ್ದ ದೇಶವು ಸ್ವಾತಂತ್ರ್ಯಾನಂತರ ವಸಾಹತುಶಾಹಿಗೆ ಮುಖಾಮುಖಿ ಯಾದಾಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನನ್ನು ಗುರುತಿಸಿಕೊಂಡಿತು. ಈ ಗುರುತಿಸಿಕೊಳ್ಳುವಿಕೆ ದಾಸ್ಯ ವಿಮೋಚನೆ, ಭಾಷಾವಾರು ವಿಭಜನೆಗಳಂತಹ ಆಂತರಿಕ ಸಂಘರ್ಷಗಳಿಗೆ ನಾಂದಿಯಾಯಿತು. ದೇಶ ಅನುಭವಿಸಬೇಕಾಗಿ ಬಂದ ಬಹುದೊಡ್ಡ ಸಮಸ್ಯೆ ರಾಜಕೀಯ ಅಸ್ಥಿರತೆ. ಈ ಅಸ್ಥಿರತೆಯನ್ನು ಹೋಗಲಾಡಿಸಿ ಸ್ಥಿರತೆಯನ್ನು ಸ್ಥಾಪಿಸಲು ವಸಹಾತುಶಾಹಿ ಸಂಸ್ಕೃತಿ ಬಿತ್ತಿದ ಸಾಂಸ್ಕೃತಿಕ ಪ್ರೇರಣೆಗಳು ಅಡ್ಡಿಯಾದವು. ತನ್ನ ಕಾಲ ಮೇಲೆ ನಿಂತುಕೊಳ್ಳಬೇಕಾದ ಅನಿವಾರ್ಯತೆ ದೇಶಕ್ಕೆ ಉಂಟಾದಾಗ ವ್ಯಕ್ತಿ ಮೌಲ್ಯಗಳ ಬೆಳವಣಿಗೆ, ಸಾಂಸ್ಕೃತಿಕ ಪುನರುತ್ಥಾನ, ಭಾಷಾ ಬೆಳವಣಿಗೆಗಳಂತಹ ಮಾನವ ಕಲ್ಯಾಣ ಕೇಂದ್ರಿತ ಆಶಯಗಳು ಅದರ ಒಡಲಲ್ಲಿ ತುಂಬಿಕೊಂಡವು. ಈ ಉದಾರವಾದೀ ದೃಷ್ಟಿಕೋನ ನಾಡುನುಡಿಯ ಬಗೆಗಿನ ಕಳಕಳಿ, ಸಂಸ್ಕೃತಿ, ಸಮಾಜ, ಧರ್ಮ, ರಾಜಕೀಯ ಚದುರಿಹೋಗಿದ್ದ ಕರ್ನಾಟಕದ ಸಂದರ್ಭದಲ್ಲಿ, ದಕ್ಷಿಣ ಕನ್ನಡವು ಸುತ್ತಲಿನ ಗಡಿಪ್ರದೇಶಗಳ ದಾಳಿಯಿಂದ ತತ್ತರಿಸಿದಾಗ ಕಾವ್ಯ ಸೃಷ್ಟಿಯ ಪ್ರಕ್ರಿಯೆಯಲ್ಲಿ ತನ್ನ ಸಂಕಟ, ಅವಮಾನ, ನೋವನ್ನು ವ್ಯಕ್ತಪಡಿಸಿದೆ. ತನ್ನ ಕಣ್ಮುಂದೆ, ನಡೆದ, ನಡೆಯುತ್ತಿರುವ ಬದಲಾವಣೆಗಳನ್ನು ಗ್ರಹಿಸುತ್ತಲೇ ತಿರಸ್ಕೃತರೊಂದಿಗೆ ಸ್ಪಂದಿಸುವ ಮನೋಭಾವ ದಕ್ಷಿಣ ಕನ್ನಡದ ಕವಿತೆಗಳಲ್ಲಿವೆ. ಆದ್ದರಿಂದ ನಾಡು-ನುಡಿ, ಸಂಸ್ಕೃತಿ ಸಮಾಜಗಳ ಕುರಿತ ದಕ್ಷಿಣ ಕನ್ನಡದ ಕವಿತೆಗಳ ಚಿಂತನೆಯನ್ನು ಗುರುತಿಸಿ ಅಧ್ಯಯನ ಮಾಡಲಾಗುವುದು.

೪.೨ ನಾಡಿನ ಕಾಳಜಿ

ನಾಡುನುಡಿಗೆ ಸಂಬಂಧಿಸಿ ರಾಷ್ಟ್ರೀಯತೆ ವ್ಯಕ್ತಗೊಳ್ಳುವಾಗ ಭಿನ್ನ ಸ್ವರೂಪದಲ್ಲಿ ವ್ಯಕ್ತವಾಗುತ್ತದೆ ಎಂಬುದನ್ನು ಸಂತೋಷ ಚೊಕ್ಕಾಡಿಯವರು[೧] ಈ ರೀತಿ ಗುರುತಿಸುತ್ತಾರೆ.

೧. ದೇಶದ ನೆಲೆಯಲ್ಲಿ

೨. ಪ್ರಾದೇಶಿಕ ನೆಲೆಯಲ್ಲಿ

ದಕ್ಷಿಣ ಕನ್ನಡದ ಕವಿತೆಗಳಲ್ಲಿ 'ಪ್ರಾದೇಶಿಕತೆ'ಯೊಂದಿಗೇ ರಾಷ್ಟ್ರೀಯತೆ ಪ್ರಕಟಗೊಳ್ಳುವುದನ್ನು ಗುರುತಿಸಬಹುದು. ಇಲ್ಲಿನ ಕವಿಗಳಿಗೆ ಭರತಮಾತೆಯ ಮುದ್ದುಗುವರಿ, ನಲ್ಗುವರಿಯೇ ಕನ್ನಡಮಾತೆ. ಆದ್ದರಿಂದ ಭರತಮಾತೆ, ಕನ್ನಡಮಾತೆ ಇಬ್ಬರಲ್ಲೂ ಗೌರವವಿದೆ; ಅಭಿಮಾನವಿದೆ. ಈ ಅಭಿಮಾನವು ಅದರ ವಿಸ್ತಾರ, ಅಲ್ಲಿನ ಭೌಗೋಳಿಕ ವರ್ಣನೆಯಲ್ಲಿ ಸಂತೃಪ್ತಿಯನ್ನು ಕಾಣುವುದಲ್ಲದೆ ಅಂತಹ ನಾಡಿನಲ್ಲಿ ಹುಟ್ಟಿದ್ದಕ್ಕಾಗಿ ಧನ್ಯತೆಯನ್ನು ಸೂಚಿಸುತ್ತದೆ.

ಕನ್ನಡದ ಕುಲವಿಲ್ಲಿ; ಕುಲದ ದೇಗುಲವಿಲ್ಲಿ
ಪ್ರಾಣದೇವನ ಭವ್ಯ ಮೂರ್ತಿ ಪ್ರತಿಷ್ಠೆ
ಭಾರತವೆ ಸಾವಿತ್ರಿ ಕನ್ನಡವೆ ಗಾಯತ್ರಿ
ಇಲ್ಲಿಯೇ ಪೂಜಾಪುರಶ್ಚರ್ಣ ನಿಷ್ಠೆ

– ಹೀಗೆ ಭರತಮಾತೆಯನ್ನೂ ಕನ್ನಡ ಮಾತೆಯನ್ನೂ ಒಂದಾಗಿ ಕಾಣುವ ಕವಿತೆ ಸ್ವಾತಂತ್ರ್ಯ ನಂತರದ ಸ್ಥಿತಿಗತಿಗಳನ್ನು ವರ್ಣಿಸುತ್ತದೆ; ಅಳಿದುಳಿದ ಸಾಮ್ರಾಜ್ಯವನ್ನು ಮತ್ತೆಕಟ್ಟುವ ಹಂಬಲವನ್ನು ವ್ಯಕ್ತಪಡಿಸುತ್ತದೆ.

ಓ ಭರತಭೂಮಿ ವರಪುತ್ರ
ವಂಗವಾಗಲಿ ಕಳಿಂಗವಾಗಲಿ, ತೆಲುಂಗವೋ ಮಹಾರಾಷ್ಟ್ರವೋ
ಗಾಂಗ ಯಾಮುನ ದ್ರವಿಡರ್ಕೈವ ಕರ್ಣಾಟ ನಾಗ ಸೌರಾಷ್ಟ್ರವೋ
ತುಂಗಸಾನುವೊಳ್ ದೇವದಾರುಗಳ್, ಪೊಂಗುತಿರ್ಪ ಹಿಮಶೈಲವೊ
ಸಿಂಧು ವೀಚಿಲಯ ಕೊಲೆವ ಸಿರಿಮುಡಿಯ ತೆಂಗುಗಳ್ ನಿಲ್ವತೀರವೋ
ಇದು ಭರತಭೂಮಿ ಸರ್ವತ್ರ
ಓ ಪುಣ್ಯಭೂಮಿ ವರಪುತ್ರ
ನೀ ಸಕಲಭಾಗ್ಯ ಸತ್ಪಾತ್ರ[೩]

ಕರ್ನಾಟಕವೂ ಸೇರಿದಂತೆ ಇಂದಿನ ಬಂಗಾಳ, ಒರಿಸ್ಸಾ, ನಾಗಾಲ್ಯಾಂಡ್, ಗುಜರಾತ್ ಇವೇ ಮುಂತಾದವು – ಭಾರತದ ಭೌಗೋಳಿಕ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು ಇದರಲ್ಲಿ ಭೇದವನ್ನು ಕಾಣದೆ 'ಭಾರತ'ದ್ದೇ ಎಂಬ ಮನಸ್ಥಿತಿಯನ್ನು ಹೊಂದು ಎಂದು ಹೇಳುವುದು ಕವಿತೆಯ ಉದ್ದೇಶವಾದರೂ ಆ ಮೂಲಕ ಭಾರತದ ಪ್ರಾಕೃತಿಕ ವೈವಿಧ್ಯವನ್ನೂ ಅಭಿಮಾನ ಪೂರ್ವಕವಾಗಿ ಅಭಿವ್ಯಕ್ತಿಸುವುದು ರಾಷ್ಟ್ರಾಭಿಮಾನದ ಕುರುಹು. ಹೀಗೆ ಎಲ್ಲ ಪ್ರದೇಶಗಳನ್ನು ಏಕವಾಗಿ (ಒಂದಾಗಿ)

ಕಾಣುವ ಮನಸ್ಥಿತಿಯು ರಾಷ್ಟ್ರಾಭಿಮಾನವಾಗಿ ವ್ಯಕ್ತಗೊಂಡಿರುವುದು ಇಲ್ಲಿನ ಕವಿತೆಗಳ ವೈಶಿಷ್ಟ್ಯ.

ತೆಂಕಣದ ಮಲಯ ಮಾರುತ ವಿಂಧ್ಯವನು ಹಾದು
ಉತ್ತರದಿ ತೀಡುತಿಹನು
ಗಂಗೆ-ಕಾಳಿಂದಿಯರು, ತುಂಗೆ-ಕಾವೇರಿಯರು
ಕೀರ್ತಿಪರು ಐಕ್ಯವನು
ಭಾರತದ ಮೂಬದಿಯ ಕಡಲುಗಳು ಒಂದಾಗಿ
ಹಾಡುವವು ಐಕ್ಯಗಾನ[೪]

- ಭಾರತದ ಪ್ರಾಕೃತಿಕ ವೈವಿಧ್ಯವನ್ನು ವರ್ಣಿಸುತ್ತಲೇ ರಾಷ್ಟ್ರಾಭಿಮಾನವನ್ನು ವ್ಯಕ್ತಪಡಿಸುವ 'ಬನ್ನಿ ಬನ್ನಿ, ಕೇಳಿ ಕೇಳಿ ಐಕ್ಯದಮರಗಾನ'[೫] ಕವನವನ್ನು ಇಲ್ಲಿ ಸಂದರ್ಭೋಚಿತವಾಗಿ ಸೂಚಿಸಬಹುದು.

'ಭಾರತ'ವೆಂಬ ಏಕ ರಾಷ್ಟ್ರದೊಳಗೆ ಕರ್ನಾಟಕವನ್ನೂ, ನೆರೆಯ ರಾಜ್ಯಗಳನ್ನೂ ಗುರುತಿಸುವ ಕವಿತೆ; ರಾಜಕೀಯ ವೈಷಮ್ಯಗಳಿಲ್ಲದ ರಾಷ್ಟ್ರಾಭಿಮಾನವನ್ನು[೬] ನಮ್ಮ ಮುಂದಿಡುತ್ತದೆ. ಭಾರತಮಾತೆಯನ್ನು ತಮ್ಮ ತಾಯಿಯಾಗಿ ಗುರುತಿಸುವ ಕವಿಗಳಿಗೆ ಕನ್ನಡನಾಡು, ಅದರ ವೈಶಿಷ್ಟ್ಯಗಳೂ ಅಷ್ಟೇ ಮುಖ್ಯವೆನಿಸುತ್ತವೆ. ಹಿಮಗಿರಿಯ ಶ್ರೇಷ್ಠತೆಯು ಭಾರತಮಾತೆಗಿರುವಂತೆ ಸಹ್ಯಾದ್ರಿಯ ಶ್ರೇಷ್ಠತೆಯನ್ನು ಕನ್ನಡಮಾತೆಯಲ್ಲಿ ಕಾಣುವ ಅಭಿಮಾನ, ಪ್ರಾದೇಶಿಕತೆಯ ಮೂಲಕ ರಾಷ್ಟ್ರವನ್ನು ಕಾಣುವ ದಾಖಲೆಯಾಗುತ್ತದೆ.

ಕರೆವಳೆನ್ನನು ಮಾತೆ ಸಹ್ಯಾದ್ರಿ ಸುಖದಾತೆ
ಗಿರಿದರಿ ಜಲವ್ರಾತೆ ಪ್ರಕೃತಿ ಪ್ರಖ್ಯಾತೆ
ಭರಿತ ಸಂಗೀತ ವಿನೋದಾನು ಭೂತೆ
ನಿರತಿಶಯಾನಂದ ರಸಪರಿಪೂತೆ[೭]

- ತನ್ನನ್ನು ಕರೆದ ಬೆಟ್ಟವು ಹಿಮಾಲಯ ಪರ್ವತಕ್ಕಿಂತ ಕಡಿಮೆಯಲ್ಲ; ಗಂಧ, ಕುಸುಮ, ಮಾವು, ಬೇವು, ಸಸ್ಯಕುಲಗಳಿರುವ ಹಿಮಾಲಯದಂತೆ ಏಲಕ್ಕಿ, ಅಡಿಕೆ, ನಿಂಬೆ, ಹಲಸುಗಳಿಂದ ಕೂಡಿರುವ ಸಹ್ಯಾದ್ರಿ ನಿಜಕ್ಕೂ, ಸವಿಜೇನಿನ ಜಲ್ಲೆ. ಹೀಗೆ ಕನ್ನಡ ನಾಡಿನ ಕಣಕಣದಲ್ಲೂ ಚಿಗುರು, ಮಾಂದಳಿರು, ಕೆಂಡಸಂಪಿಗೆ, ಮಲ್ಲಿಗೆ, ಹಕ್ಕಿಗಳು, ನಾನಾ ಜೀವಜಾಲ, ಕಾಮನಬಿಲ್ಲಿನ ಸೌಂದರ್ಯ ಒಂದು ರೀತಿಯ ಚೈತನ್ಯವಾಗಿ ಪರಿಣಮಿಸುತ್ತದೆ. 'ನನ್ನೂರು'[೮] ಕವನದಲ್ಲಿಯೂ ಚಿತ್ರಿತವಾಗುವ ಬೆಟ್ಟಬಯಲುಗಳು ನಿಜಕ್ಕೂ ತನ್ನ ಅಸ್ಮಿತೆಯನ್ನು ತೆರೆದು ತೋರುವ ಪ್ರತಿಷ್ಠಾಪಿಸುವಿಕೆಯಾಗುತ್ತದೆ.

ಮಾತ್ರವಲ್ಲ, ನಿಸರ್ಗದಲ್ಲಿ - ಸ್ವಚ್ಛಂದವಾಗಿ ಹಾರಾಡುವ ಹಕ್ಕಿಯು ಸ್ವಾತಂತ್ರ್ಯದ ಕುರುಹಾಗಿ ಪ್ರಾಕೃತಿಕ ವರ್ಣನೆಯಲ್ಲಿ ಕಾಣಿಸಿಕೊಳ್ಳುತ್ತದ್ ನೆಲದಿಂದಲೇ ನೀರಿನ ಸತ್ವವನ್ನು ಹೀರಿ ಆ ಸುತ್ತಲೂ ಅದರ ಸತ್ವವನ್ನು ಪಸರಿಸುವ 'ಪಾರಿಜಾತ'[೧೦]ವು ತ್ರಿಕಾಲಗಳನ್ನೂ ಬೆಸೆದ ಮುಖಾಮುಖಿಯಾಗಿ ಕಾಣ್ಕೆ-ಕಣ್ಕಟ್ಟುಗಳ ನಡುವಿನ ಪದರವನ್ನು ಹರಿದು ಅದರಾಚೆಗೂ ಸಾಗುವ ಪ್ರಕ್ರಿಯೆಯು, ತನ್ನ ಅಸ್ಮಿತೆಯ ಮೂಲಕ ಸ್ವಾತಂತ್ರ್ಯವನ್ನು ಗಳಿಸುವ ರಾಷ್ಟ್ರೀಯತೆಯ ಹಿಂದಿನ ಕಾಳಜಿಯಾಗುತ್ತದೆ.

ಕನ್ನಡ ನಾಡನ್ನು ಗಡಿ ಆಕ್ರಮಣಗಳಿಂದ ರಕ್ಷಿಸಬೇಕೆಂಬ ಕೂಗು ಕೇಳಿಸುತ್ತಲೇ, ಭಾಷೆಯನ್ನು ಉಳಿಸುವ ಅನಿವಾರ್ಯತೆಯಲ್ಲಿ ನಾಡಾಭಿಮಾನವು ಉತ್ಸುಕತೆಯೊಂದಿಗೆ ಪ್ರಕಟಗೊಳ್ಳುತ್ತದೆ. ನಾಡನ್ನು ರಕ್ಷಿಸಲು ಎಲ್ಲರೂ ಒಂದಾಗಬೇಕೆಂಬ ಅನಿವಾರ್ಯತೆಯನ್ನು ಪ್ರಾದೇಶಿಕ ವರ್ಣನೆ ಯೊಂದಿಗೆ ಕವಿತೆ ಪ್ರಸ್ತುತ ಪಡಿಸುತ್ತದೆ. ಗಡಿ ರಕ್ಷಣೆಯ ಕಾರ್ಯದಲ್ಲಿ ಎಲ್ಲರೂ ಹೆಗಲು ಕೊಡಬೇಕು–

ಓ ಬನ್ನಿ ಜನವೇ, ಕನ್ನಡ ನಾಡ ಗಡಿಮೂಲೆ
ಮೂಲೆಯಿಂದ
ಹಳ್ಳಿ ಪಟ್ಟಣಗಳಿಂದ
ಮೈಸೂರೊ ಮಂಗಳೂರೋ ಧಾರವಾಡವೋ
ರಾಯಚೂರೋ - ಎಂಟು ದಿಕ್ಕಿನಿಂದ
ಮುಳುಗಿದೀ ಕನ್ನಡವನೆತ್ತುವೊಮ್ಮನ ಮಿಣಿಯ
ಬಿಗಿವ, ಎಳೆಯುವ, ಗೆಲುವ ಭಾವದಿಂದ
ಬನ್ನಿರೋ ಬನ್ನಿ, ನನ್ನೆದೆಗೆ ಬನ್ನಿ ॥[೧೧]

ಎಂಬ ಆವೇಶ ಉತ್ಸಾಹಗಳೆಲ್ಲವೂ ಕ್ರಮೇಣ ನಾಮಾಂಕಿತವಾಗಿ ಉಳಿಯುವ ಚಿಂತನೆಯಾಗುತ್ತದೆ. ಕಲೆ, ಸಂಸ್ಕೃತಿಗಳನ್ನು ವೈಭವೀಕರಿಸಿ ಅದರ ಸೌಂದರ್ಯವನ್ನು ನೋಡುವ, ಹೊಗಳುವ ಕ್ಷಣಗಳೆಲ್ಲವೂ ಕೃತಕವಾಗುತ್ತದೆ. ಆಕಾಶದ ನಕ್ಷತ್ರಗಳನ್ನು ನೋಡಿ ಆನಂದಿಸುವ (ಸ್ವಾತಂತ್ರ್ಯ) ಕ್ಷಣಗಳು ಕೇವಲ ಕಟು ವಾಸ್ತವತೆಯಲ್ಲಿ ಮರೆತು ಹೋಗುತ್ತಿದೆ ಎಂಬ ವ್ಯಂಗ್ಯವನ್ನು 'ನವೆಂಬರ್' ಕವನವು ಈ ರೀತಿ ವಿಡಂಬಿಸುತ್ತದೆ.

ನಿಮಗೆ
ನವೆಂಬರ್ ಒಂದು
ಭಾರೀ ಭಾಷಣಗಳಲ್ಲಿ, ಧೀರ ಘೋಷಣೆಗಳಲ್ಲಿ

ಕಾವೇರಿಯಿಂದ ಗೋದಾವರಿವರೆಗಿದ್ದ
ಕನ್ನಾಡು ಕಟ್ಟುವ ದಿನ, ಕನ್ನುಡಿ ಬೆಳೆಸುವ ಕ್ಷಣ
ನನಗೆ
ನವೆಂಬರ್ ಒಂದು
ಅವರಿವರ ಸ್ವಾರ್ಥಕ್ಕೆ, ಕಾಣದ ಪದಾರ್ಥಕ್ಕೆ
ಬಲಿಪಶು ಶುನಶ್ಯೇಫನಾಗಿ ತಬ್ಬಲಿಯಾದ
ನನ್ನ ನೆಲವನ್ನು ನೆನೆಯುವ ದಿನ, ನುಡಿಯನ್ನು ಉಳಿಸುವ ಕ್ಷಣ[೧೨]

- ಎಂಬ ವಿಷಾದ ನೋವು, ನಾಡನ್ನು ಮರಳಿ ಕಟ್ಟಬೇಕಾದ ಪರಿಸ್ಥಿತಿಯ ಕುರಿತು ಚಿಂತನೆ ನಡೆಸುತ್ತಾ ಆಧುನಿಕತೆಯ ಗುಂಗಿನಲ್ಲಿ ನಾಡು ಎದುರಿಸುತ್ತಿರುವ ಸಮಸ್ಯೆಗಳ ಚಿಂತನೆ ನಡೆಸುತ್ತಾ, ಆಳವಾದ ರಾಷ್ಟ್ರಾಭಿಮಾನವನ್ನು ಕವಿತೆ ವ್ಯಕ್ತಪಡಿಸುತ್ತದೆ. ಹೀಗೆ ದಕ್ಷಿಣ ಕನ್ನಡದ ಕವಿತೆಗಳಲ್ಲಿ ನಾಡನ್ನು ಕುರಿತ ಕಾಳಜಿ ಬಹಳ ಸ್ಪಷ್ಟವಾಗಿ ಗೋಚರವಾಗುತ್ತದೆ. 'ಸ್ವಾತಂತ್ರ್ಯ', ಅಸ್ಮಿತೆಯನ್ನು ಗಳಿಸುವುದಕ್ಕಾಗಿ ಹೆಣಗುವ ರೀತಿಯು ವ್ಯಕ್ತಿಕೇಂದ್ರಿತ ಅಭಿವ್ಯಕ್ತಿಯಾಗಿ ಮೂಡಿಬಂದಿದೆ.

೪.೩. ನುಡಿ/ಭಾಷೆಯ ನಿಲುವು

ವಸಾಹತು ಆಡಳಿತದ ಮುಕ್ತಿ ಸ್ವತಂತ್ರ ಭಾರತದ ಭಿನ್ನ ಬದಲಾವಣೆಗಳಿಗೆ ಪ್ರೇರಣೆಯಾಯಿತು. ವಸಾಹತು ಆಡಳಿತ ಕಾಲದಲ್ಲಿ ಅನ್ಯಭಾಷೆ, ಸಂಸ್ಕೃತಿಯೊಂದನ್ನು ಎದುರಿಸಬೇಕಾದ ಸಂದರ್ಭದಲ್ಲಿ ಹುಟ್ಟಿಕೊಂಡ ರಾಷ್ಟ್ರೀಯ ಚಿಂತನೆ; ಸ್ವಾತಂತ್ರ್ಯಾನಂತರ ಸ್ವಭಾಷೆಯನ್ನು ಉಳಿಸಿಕೊಳ್ಳುವ ಪ್ರಯತ್ನದೊಂದಿಗೆ ತನ್ನನ್ನು ಒಂದಾಗಿಸುವ ಹಂಬಲವನ್ನು ವ್ಯಕ್ತಪಡಿಸಿತು. ಭಾಷಾವಾರು ಪ್ರಾಂತ್ಯಗಳ ರಚನೆ ನೆರೆ ರಾಷ್ಟ್ರಗಳೊಂದಿಗೆ ಗಡಿವಿವಾದಗಳಿಗೆ ಪ್ರೇರಣೆಯಾದಾಗ ರಾಷ್ಟ್ರ, ರಾಷ್ಟ್ರ ಭಾಷೆಯ ಹೆಸರಿನಲ್ಲಿ ಒಂದು ರೀತಿಯ ವಿಭಾಗೀಕರಣಕ್ಕೆ ಎಡೆಮಾಡಿತು. ಒಂದು ದೇಶ ಒಂದು ಭಾಷೆಯ ಅಗತ್ಯತೆ ಒತ್ತಡವಾದಾಗ ಅನಿವಾರ್ಯವಾಗಿ ತಮ್ಮನ್ನು ಒಗ್ಗೂಡಿಸುವುದು ಅಗತ್ಯವಾದಾಗ ಭಾಷೆ, ನಾಡಿನ ಹೆಸರಿನಲ್ಲಿ ಚಳುವಳಿಗಳು, ಪ್ರತಿಭಟನೆಗಳು ಆರಂಭವಾದವು. ''ನಾಡು ನುಡಿಯ ಮೂಲಕ ಆತ್ಮೋದ್ಧಾರ ಸಾಧಿಸಬೇಕೆಂಬುದು ರಾಷ್ಟ್ರಕವಿಗಳ ಅಭಿಮತ.''[೧೩] ಹಾಗಾಗಿ ಸಹ್ಯಾದ್ರಿ, ಕಾವೇರಿ, ಹಕ್ಕಿಸಂಕುಲಗಳ ರೂಪದಲ್ಲಿ ಅಖಂಡ ಶಕ್ತಿಯನ್ನೂ ಒಂದಾಗಿಸುವ ಪ್ರಯತ್ನ ಮಾಡುತ್ತಾರೆ. ಅವರ ದೃಷ್ಟಿಯಲ್ಲಿ 'ಕನ್ನಡವೇ ಭಾರತಿ ಭಾರತಿಯೇ ಕನ್ನಡ'[೧೪] ಆದ್ದರಿಂದ

ಮಳೆಯ ಬಿಲ್ಲಿನಲಿ ಹಲವು ಬಣ್ಣಗಳು ನೆರೆದಿಹಂತೆ, ಶ್ರೀ ಭಾರತಿ
ಭಾರತೀಯ ಭಾಷೆಗಳ ಕಾಂತಿಯು ತೋರುತಿಹಳು ನಿಜಮೂರುತಿ
ಕಾಮಧೇನುವಿನ ಕೆಚ್ಚಲೆಲ್ಲ ನಿನಗಾಗಿರಲ್ಕೆ ಮೊಲೆಯೊಂದನೇ
ಬಾಯೊಳಿಟ್ಟು ತಣಿಯುವುದೆ? ನಾಲ್ಮೊಲೆಯ ಹಾಲನುಂಡು ಕುಣಿಕಂದನೆ
ಈ ಸಕಲ ಭಾಷೆ ಸುಪವಿತ್ರ
ಓ ಭರತ ಭೂಮಿ ವರಪುತ್ರ
ನೀ ಮಹಾಭಾಗ್ಯ ಸತ್ಪಾತ್ರ[೧೫]

ಶ್ರೀ ಭಾರತಿಯು ಶೋಭಿಸುತ್ತಾಳೆ. ಅವಳ ಶೋಭೆಯ ಒಂದೊಂದು ಬಣ್ಣಗಳೂ ಒಂದೊಂದರ ಹಿರಿಮೆಯನ್ನು ಸಾರುತ್ತವೆ. ಹಾಗಾಗಿ ಕನ್ನಡವನ್ನು ಹೊಗಳಿದರೆ, ವೈಭವೀಕರಿಸಿದರೆ, ಗೌವರ ಸೂಚಿಸಿದರೆ ಅದು ಭಾರತಿಗೆ ಸಂದಂತೆ ಎಂಬ ನಿಲುವನ್ನು ದಕ್ಷಿಣ ಕನ್ನಡದ ಕವಿತೆಗಳಲ್ಲಿ ಗುರುತಿಸಬಹುದು. ಮಾತ್ರವಲ್ಲ; ಶ್ರೀ ಭಾರತಿಯ ಸರಿಸಾಟಿಯಾಗಿ ಕನ್ನಡ ಮಾತೆಯನ್ನು / ಭಾಷೆಯನ್ನು ಕಟ್ಟುವ ಪ್ರಯತ್ನವಿದೆ. ತಮ್ಮ ಮಾತೆಯು ಆಕೆಯ ಅಸ್ತಿತ್ವವನ್ನು ಪಡೆಯುವಳೆ? ಎಂಬ ಕಳವಳಿ ಕವಿತೆಗಳಲ್ಲಿವೆ.

ಇಂದು ಕೂಡ ಆಗದೆ
ಕನ್ನಡವೊಂದಾಗದೆ?
ಭೇದದ ಹುಳಿ ನೀಗದೇ
ಕಾಯಿಮನ ಮಾಗದೇ
ಒಮ್ಮತದೊಗ್ಗಟ್ಟಿನ ಫಲ
ನಮ್ಮ ಬಾಳ್ಗೆ ಬಾಗದೆ?
ಆಗದೇ ಹೋಗದೆ?
ಕನ್ನಡವೊಂದಾಗದೆ?[೧೬]

ಕನ್ನಡ ಭಾಷೆಗೆ ಆಗುತ್ತಿರುವ ತಿರಸ್ಕಾರ, ಅದರ ರಕ್ಷಣೆ, ಪೋಷಣೆ, ವಿಸ್ತರಣೆಗಾಗಿ ವ್ಯಕ್ತಪಡಿಸುವ ನೋವು ಹಾಗೂ ಏಕೀಕರಣಕ್ಕಾಗಿ ಮಾಡಿದ ಹೋರಾಟ ಫಲಕಾರಿಯಾಗದೆ? ಎಂಬ ಆಶಾವಾದದೊಂದಿಗೆ ಕನ್ನಡಾಭಿಮಾನವನ್ನು ಅಭಿವ್ಯಕ್ತಿಸುತ್ತದೆ. ತನ್ನತನವನ್ನು ಸ್ಥಾಪಿಸಲು, ಅನ್ಯರಾಜ್ಯದ ಭಾಷಾ ಹೇರಿಕೆಯಿಂದ ತಮ್ಮನ್ನು ರಕ್ಷಿಸು ಎಂಬ ಕೂಗು – ಕನ್ನಡಕ್ಕೆ ಸರಿಯಾದ ಸ್ಥಾನಮಾನವನ್ನು ನೀಡಬೇಕೆಂದು ಭಿನ್ನವಿಸುತ್ತದೆ.

ಕನ್ನಡದ ನಾಡು ನುಡಿ ಗೌರವ ಪಡೆದಿಲ್ಲ
ಕನ್ನಡಕೆ ಸರಿಯಾದ ಸ್ಥಾನವಿಲ್ಲ
ಈ ನೂರು ತಪ್ಪುಗಳ ನಮಗೆ ವೇದ್ಯವಗೊಳಿಸಿ
ಜ್ಞಾನಾಂಜನವ ತಮ್ಮ ಕಣ್ಗೆ ತೀಡು
ವರದೆಯಾಗುತ ನಮಗೆ ಅಭಯ ನೀಡು[೧೭]

ಎಂದು ನಿವೇದಿಸಿಕೊಳ್ಳುವ ಕವಿತೆ ಭವ್ಯನಾಡನ್ನು ಪುನರ್‌ನಿರ್ಮಾಣ ಮಾಡುವ ಕೆಚ್ಚನ್ನು ಪ್ರಕಟಿಸುವಂತೆ, ಕರ್ನಾಟಕದಾದ್ಯಂತ ಕನ್ನಡವನ್ನು ಪಸರಿಸುವ ಕಾಯಕವನ್ನು ಮಾಡುತ್ತದೆ. ಭುವನೇಶ್ವರಿಯಾಗಿ ಮೆರೆಯುವ ಸಂದರ್ಭದಲ್ಲಿ, ಅಳಿದುಳಿದ ಸಂಸ್ಕೃತಿಯ ಘನತೆಯೊಂದಿಗೆ ನಾಡನ್ನು ಕಟ್ಟಬೇಕೆನ್ನುವ ಹುರುಪು, ಉತ್ಸಾಹವನ್ನು ತುಂಬುತ್ತದೆ. ನಾಡನ್ನು ಕಟ್ಟುವುದು, ಭಾಷೆಯನ್ನು ಕಟ್ಟುವುದು ಕೇವಲ ಸಾಹಿತಿಗಳ ಕಾಯಕವಲ್ಲ; ನಾಡಿನ ಪ್ರತಿಯೊಬ್ಬರಲ್ಲೂ ಅದು ಮೈಗೂಡಬೇಕು. ಕನ್ನಡವನ್ನು ಉಳಿಸುವ, ಕರ್ನಾಟಕದ ಆಡಳಿತ ಭಾಷೆಯಾಗಿಸುವ ಕೈಂಕರ್ಯ ನಾಡಿನಾಡಿಗಳಲ್ಲೂ ರಕ್ತಗತವಾಗಿರಬೇಕು. ಆದ್ದರಿಂದ

ಅಣ್ಣದಿರೆ ಅಕ್ಕದಿರೆ ತಂಗಿಯರೆ ತಮ್ಮದಿರ
ಬೇಗೆಯನ್ನಾರಿಸಲು ಬೇಗ ಬನ್ನಿ
ಕನ್ನಡದ ಛಲವೊಂದೆ
ನೆಲವೊಂದೆ, ಬಲವೊಂದೆ
ನಾಡನುಳಿಸುವೆವೆಂದೆ
ಓಡಿ ಬನ್ನಿ[೧೮]

ಎಂದು ಹೇಳುತ್ತಾ ಲೋಕಮಾತೆಯೂ, ರಾಜಮಾತೆಯೂ ಆದ 'ಕನ್ನಡ' ಕರ್ನಾಟಕದಲ್ಲಿ ಉನ್ನತಿಯನ್ನು ಪಡೆಯಲಿ, ನಾಡನ್ನು ಆಳಲಿ ಎಂದು ರಾಷ್ಟ್ರಾಭಿಮಾನವನ್ನು ತೋರ್ಪಡಿಸುವಲ್ಲಿ ಆಂತರಿಕವಾಗಿ ತಾವು ಸುದೃಢರಾಗಬೇಕೆಂಬ ಸ್ವಾತಂತ್ರ್ಯದ ಉತ್ಕಟ ಇಚ್ಛೆಯನ್ನು ಕವಿತೆ ಚಿತ್ರಿಸುತ್ತದೆ. 'ಒಂದಾಗುವ ಎಂದೆದ್ದರೆ ತಡೆವ ಬಂಟರೆಲ್ಲಿ? ಕನ್ನಡ ಜನ ಕವಿದೆದ್ದರೆ ನಿಲುವ ಗಂಡರೆಲ್ಲಿ?' ಎಂದು ಪ್ರಶ್ನಿಸುವ "ಹೊಸಗನ್ನಡದ ಹಾಡು"[೧೯] ಕವನವೂ ಪ್ರತಿಭಟನಾತ್ಮಕ ರೀತಿಯಲ್ಲಿ ಇದೇ ಆಶಯವನ್ನು ಪ್ರಸ್ತುತ ಪಡಿಸುತ್ತದೆ.

ಕನ್ನಡ ನಾಡಿನಲ್ಲಿ ಆಗಿ ಹೋದ ಮಹಾನ್ ಕವಿಗಳನ್ನೂ, ಕ್ರಾಂತಿಕಾರಿಗಳನ್ನೂ, ನೆನೆಯುವುದರೊಂದಿಗೆ ಕನ್ನಡ ಭಾಷೆಗೆ ಅವರು ನೀಡಿದ ಕೊಡುಗೆ ಕವಿತೆಗಳಲ್ಲಿ ರಾಷ್ಟ್ರಾಭಿಮಾನ/

ನಾಡಾಭಿಮಾನವಾಗಿ ವ್ಯಕ್ತಗೊಳ್ಳುತ್ತದೆ. ಕನ್ನಡ ಸಾಹಿತ್ಯದಲ್ಲಿ ಭಾಷೆಯ ಮೂಲಕ ಒಂದೊಂದು ಕಾಲಘಟ್ಟದಲ್ಲಿ ಕ್ರಾಂತಿಯನ್ನುಂಟು ಮಾಡಿದ ಕನ್ನಡದ ಕವಿಗಳನ್ನು ಸ್ಮರಿಸುವುದು. ಆ ಮೂಲಕ ಅವರು ಕನ್ನಡ ನಾಡಿಗೆ ಸಲ್ಲಿಸಿದ ಹೊಸತನ, ಕೃತಿಗಳ ವೈಶಿಷ್ಟ್ಯ, ಮತ್ತೆ ಅವೆಲ್ಲವನ್ನೂ ಹೊಸತನದಲ್ಲಿ ಕಂಡುಕೊಳ್ಳುವ ರೀತಿ ರಾಷ್ಟ್ರವನ್ನು ಗುರುತಿಸುವುದರ ಪ್ರಕ್ರಿಯೆಯಾಗಿ ಮೈದಾಳುತ್ತದೆ.

ಕನ್ನಡದ ನಂದನವು ಕಮರಿದಂತಿತ್ತು
ಗದ್ಯ ಸೌರಭವೆಲ್ಲ ಉಡುಗಿ ಮುಗ್ಗಿತ್ತು
ಸಾಹಿತ್ಯ ಮಾಧುರ್ಯ ಮುಗಿದು ಹೋಗಿತ್ತು
ನವ್ಯತೆಯ ಭವ್ಯತೆಯು ಮಾಯವಾಗಿತ್ತು[೨೦]

ಹೊರಗಿನ ಆಕ್ರಮಣಗಳನ್ನೂ, ಒಳಗಿನ ನಿಶಕ್ತಿಯನ್ನೂ ಗುರುತು ಹಿಡಿದ ಈ ಕವಿತೆಯಲ್ಲಿ ಕನ್ನಡದ ಸ್ಥಿತಿಗತಿ ಹೇಗಿತ್ತು ಎನ್ನುವ ವಾಸ್ತವವನ್ನು ತಿಳಿಯಪಡಿಸುವುದರೊಂದಿಗೆ ಮುದ್ದಣನಂತಹ, ಹೊಸಗನ್ನಡದ ಹರಿಕಾರನು, ಬರಡು ಮಣ್ಣಾಗಿ ಮರುಭೂಮಿಯಾಗಿದ್ದ ಕನ್ನಡಕ್ಕೆ ಸಾಹಿತ್ಯ ಸಿಂಚನವನ್ನು ನೀಡಿ ಮುದಗೊಳಿಸಿದನು ಎಂಬ ಆಶಯವಿದೆ. ಸುಮಾರು ೧೨ನೇ ಶತಮಾನದಲ್ಲಿ ಧಾರ್ಮಿಕ ಕ್ರಾಂತಿಯ ಮೂಲಕ ಕನ್ನಡ ಭಾಷೆಯ ಬಳಕೆಗಳಲ್ಲಿ ಹೊಸತನವನ್ನು ಗುರುತಿಸಿದ "ಶ್ರೀ ಮದ್ಬಸವಾರಾಧನಂ"[೨೧], ನಾಡಾಭಿಮಾನದ ದ್ಯೋತಕವೇ ಹೌದು. ಇಂದಿನೀ "ಕನ್ನಡಕ್ಕಾದೆ ನೀ ಪಂಪ, ಸಂಯಮ ಸದೇಹಿಸಿದೊಲೆಸೆದೆಯೈ ಪೆಂಪ"[೨೨], ಎಂದು ಪಂಪನನ್ನು ಕುರಿತು ಹೊಗಳುತ್ತಾ, ರಾಷ್ಟ್ರೀಯತೆಯನ್ನು ವ್ಯಕ್ತಪಡಿಸುವ ಕವಿತೆ ತನ್ನ ನುಡಿಯ ಮೇಲೆ ವ್ಯಕ್ತಪಡಿಸುವ ಕಾಳಜಿಯೂ ಅಪಾರವಾಗುತ್ತದೆ. ಈ ಕಾರಣದಿಂದಲೇ

ಕನ್ನಡವೆಂದರೆ ನನ್ನೆದೆ ನಲಿವುದು
ಕನ್ನಡ ನಡೆನುಡಿ ಮನಕೆ ಮೆಚ್ಚಿಹುದು
ಕನ್ನಡ ಕನ್ನಡ ಕನ್ನಡವೆನುವುದು
ಎನ್ನೆದೆ ತಂತಿಯ ದಿನದಿನ ಮಿಡಿವುದು[೨೩]

ಎಂಬ ಆಳವಾದ ಪ್ರೀತಿ, ಒಲುಮೆ, ಆ ಮೂಲಕ ತಾವು ಅಸ್ಮಿತೆಯನ್ನು ಕಂಡುಕೊಳ್ಳುವ ಭಾಷಾಭಿಮಾನ ರಾಷ್ಟ್ರೀಯತೆಯ ಅಂಗವಾಗಿ ಬಿಂಬಿತವಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತು ವಿರೋಧವಾಗಿ ಮೂಡಿದ ರಾಷ್ಟ್ರೀಯ ಭಾವನೆಯು ಸ್ವಾತಂತ್ರ್ಯೋತ್ತರದಲ್ಲಿ ಭಾಷೆ, ನಾಡಾಭಿಮಾನವಾಗಿ ಅಭಿವ್ಯಕ್ತವಾಗುತ್ತದೆ. ಸ್ವಾತಂತ್ರ್ಯೋತ್ತರದಲ್ಲಿ ಗಡಿ ಸಮಸ್ಯೆ, ಅನ್ಯ ಭಾಷಾ ಪ್ರಭಾವವು ಕನ್ನಡದ ಬೆಳವಣಿಗೆಗೆ ಕುಂದಾಗಿದ್ದು, ಆದರಿಂದ ಕನ್ನಡವನ್ನು ರಕ್ಷಿಸಲು ಪ್ರತಿಯೊಬ್ಬ

ಕನ್ನಡಿಗನು ಶ್ರಮಿಸಬೇಕು. ಈ ಶ್ರಮವು ಭಾಷೆಯ ಜೊತೆಯಲ್ಲಿ ನಾಡನ್ನು ರಕ್ಷಿಸುವ ಆತ್ಮಾಭಿಮಾನದ ಹೆಗ್ಗುರುತುಳಾಗಬೇಕು ಎಂಬ ನಿವೇದನೆ, ಕಳಕಳಿ, ಕವಿತೆಗಳಲ್ಲಿ ಮೂಡಿಬಂದಿವೆ.

೪.೪. ಸಮಾಜದ ಕುರಿತ ಆಶಯ

ಸ್ವಾತಂತ್ರ್ಯಾನಂತರದಲ್ಲಿ ಪರಕೀಯರ ಆಳ್ವಿಕೆಯಿಂದ ಭಾರತ ಬಿಡುಗಡೆ ಹೊಂದಿತೇನೋ ನಿಜ. ಪರದೇಶೀ ಆಳ್ವಿಕೆಯ ಕೊನೆಯೊಂದಿಗೆ ದೇಶದಲ್ಲಿ ಕಾಣಿಸಿಕೊಂಡದ್ದು ಪ್ರಜಾರಾಜಕೀಯ. ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವಕ್ಕೆ ಬಂದರೂ, ಮುಗಿಯದ ಹಲವಾರು ಸಾಮಾಜಿಕ ಸಮಸ್ಯೆಗಳು ಭಾರತದ ಪ್ರಗತಿಗೆ ಅಡ್ಡಿಯನ್ನುಂಟು ಮಾಡುತ್ತಿತ್ತು. ದೇಶದೊಳಗಿನ ರಾಜಕೀಯ ವ್ಯವಸ್ಥೆಯಲ್ಲಿಯೇ ಬಿರುಕುಗಳು ಮೂಡಿರುವುದು. ಸಮಾಜವನ್ನು ಹದಗೆಡಿಸಿತ್ತು. ಶೋಷಣೆ, ಬರಗಾಲ, ಜಾತಿ, ವರ್ಗ ವೈಷಮ್ಯಗಳಂತಹ ಸಾಮಾಜಿಕ ಸಮಸ್ಯೆಗಳು ನಾಡಿನಾದ್ಯಂತ ಆವರಿಸಿದ್ದು, ಪರಿಹರಿಸಲಾರದ ಸಮಸ್ಯೆಗಳಾಗಿ ಕಂಡಾಗ, ಅದರ ಭಿನ್ನ ಮುಖಗಳನ್ನು ಚಿತ್ರಿಸುವ ಕವಿತೆಗಳು ಆ ಮೂಲಕ ರಾಷ್ಟ್ರದ ಮೇಲಿರುವ ಕಾಳಜಿಯನ್ನು ಅಭಿವ್ಯಕ್ತಿಸಿದವು.

ಏನಾಗಿ ಹೋಯಿತು ಇಲ್ಲಿ ನಾವು ಕನಸಿದ ನಮ್ಮ ನಾಡಿನಲ್ಲಿ?
ನಕ್ಷತ್ರ ಖಚಿತ ಕನಸುಗಳನ್ನು ನುಂಗಿ ಬೊಜ್ಜು ಬೆಳೆಸಿಯೂ ಕೂಡಾ
ಮಳೆಕೊಡದ ಬರೀ ಬಿಳಿ ಮೋಡಗಳನ್ನೆ ತುಂಬಿಸಿಕೊಂಡ
ಬಾನಿನ ಕೆಳಗೆ ಹಳದಿಗಟ್ಟಿದ ಪ್ರಕೃತಿ ಎದ್ದ ಧೂಳಿನ ನಡುವೆ
ಹತಾಶ ನೋಟದ ನಾವು – ಒಳ ಹೊರಗೆ
ಎಂಥ ಧಗೆ, ಎಂಥ ಬಗೆ? ಈ ನಡುವೆ ಕೆರಳಿಕೆಗೆ
ವರ್ಷಕ್ಕೊಮ್ಮೆಯೋ, ಎರಡೂ ಸಲ ನುಗ್ಗಿ ಬರುತ್ತಿರುವ
ಅದೇ ಅದೇ ಅರೆ ನನ್ನ ಫಕೀರನ ವ್ಯಥೆ ಹೊತ್ತ ನಗೆ[೨೪]

ಎನ್ನುವ ಕಾಳಜಿ ಕವಿತೆಗಳಲ್ಲಿ ಮೂಡಿ ಬಂದಿರುವುದು ಸಹಜ. ಸ್ವಾತಂತ್ರ್ಯ ದೊರೆತೂ ಅದನ್ನು ಅನುಭವಿಸಲಾಗದ ಅಸಹಾಯಕ ಸ್ಥಿತಿಯಲ್ಲಿ, ಬರಗಾಲದಂತಹ ಪ್ರಾಕೃತಿಕ ವಿಕೋಪಗಳು, ಬಡತನದಂತಹ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ನೆಲದ ಮೇಲೆ ನಿಂತು ಆಕಾಶವನ್ನು ನೋಡಲಾಗದ ಹತಾಶೆ ಕವಿತೆಯೊಳಗೆ ಹುದುಗಿದೆ. ಸ್ವಾತಂತ್ರ್ಯದ ಸಂಭ್ರಮವನ್ನು ಸವಿದು ವರ್ಷಾಚರಣೆ ಮಾಡುತ್ತಿರುವಾಗಲೇ ದೇಶ ಎದುರಿಸುತ್ತಿರುವ 'ಹಸಿವಿನ' ವಿಕಟ ನೃತ್ಯವನ್ನು ಕವಿಗಳು ಕಂಡು

ಹಸಿವೆ ಬೆಂಕಿ

ನಾಡನೆಲ್ಲ ಸುಟ್ಟಿತು

ಬಡಗಿನ ಕಿಡಿ

ಸಿಡಿದು

ನಾಡನೆಲ್ಲ ಮುಟ್ಟಿತು[೨೫]

ಶ್ರೀಮಂತರ ಕೈಗೆ ಅಧಿಕಾರ ದೊರೆತು ಅವರ ದಬ್ಬಾಳಿಕೆಯೇ ಈ ರೀತಿಯ ಸಮಸ್ಯೆಗಳನ್ನು ಸೃಷ್ಟಿಸಿವೆ. ಯಾವುದೇ ಭಯವಿಲ್ಲದೆ ನಾಡಿನ ಶಾಂತಿ, ಸತ್ಯಕ್ಕಾಗಿ ಹೊಸಹಾಡನ್ನು ಕಟ್ಟು ಎಂಬ ಆಶಯವನ್ನು ಕವಿತೆ ವ್ಯಕ್ತಪಡಿಸುತ್ತದೆ. ವಸಾಹತು ಆಳ್ವಿಕೆಗಿಂತ ಭಿನ್ನವಾದ ಸಾಮಾಜಿಕ ಸಮಸ್ಯೆಗಳನ್ನು ವಿಡಂಬನೆಯ ಮೂಲಕ ಕವಿತೆಗಳು ಅಭಿವ್ಯಕ್ತಿಸುತ್ತವೆ. ದೇಶಪ್ರೇಮದ ಹೆಸರಿನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಕೋಮುಗಲಭೆ, ಬೇರೆ ಬೇರೆ ವರ್ಗದ ಸಮಾಜ ಘಾತುಕರ ಸೃಷ್ಟಿಗೆ ಪ್ರೇರಣೆ ನೀಡಿರುವುದನ್ನೂ, ಅನ್ನಕ್ಕಾಗಿ ಕೊಲೆ, ಸುಲಿಗೆ, ವೇಶ್ಯಾವಾಟಿಕೆಯಂತಹ ಸಾಮಾಜಿಕ ಸಮಸ್ಯೆಗಳ ಸೃಷ್ಟಿ ಕವಿತೆಗಳ ಮೂಲಕ ಸಾಮಾಜಿಕ ಕಳಕಳಿಯನ್ನು ಬಿಂಬಿಸಿತು.

ಕೇಳಿಸುವುದಿಲ್ಲವೆ ನಿಮಗೆ ಬೀದಿಯ ಆ ಕಿರಿಚಾಟಗಳು

ಗಲ್ಲಿ ತಿರುವುಗಳ ಕ್ಷೀಣ ಕೂಗುಗಳು?

ರಾಕ್ಷಸ ದುಡಿತದಿಂದ ಹೆಣವಾದ ಕೂಲಿಗಳದ್ದು

ಕೊರತೆಯ ಭಾರದಿಂದ ತೆನೆಯುವ ಎಲುಬು ಗೂಡುಗಳದ್ದು

ಸೋತ ನಡುವನ್ನು ಅವಚಿ ಹಿಡಿದಿರುವ ಮಕ್ಕಳದ್ದು

ಚೂರು ತಿಂಡಿಗೆ ಮೋಟುಬೀಡಿಗೆ ಇರಿತಕೊಳಗಾದ ಯುವಕರದ್ದು

ಬಟ್ಟೆಗೆ ಲಜ್ಜೆಯನ್ನೂ ಹೊಟ್ಟೆಗೆ ಮಾನವನ್ನೂ ಮಾರಿದ ಯುವತಿಯರದ್ದು[೨೬]

'ವಂದೇ ಮಾತರಂ'[೨೭] ಕವಿತೆಯೂ ಕೂಡಾ ಸ್ವಾತಂತ್ರ್ಯಾನಂತರ ದೇಶ ಅನುಭವಿಸಬೇಕಾಗಿ ಬಂದ ಸಾಮಾಜಿಕ ಸಮಸ್ಯೆಗಳತ್ತ ತನ್ನ ದೃಷ್ಟಿಯನ್ನು ಹರಿಸುತ್ತದೆ. ರಾಜಕೀಯ ರಾಜಾರೋಷವಾಗಿ ಮೆರೆಯುತ್ತಿರುವ ಸಂದರ್ಭದಲ್ಲಿ ಸುತ್ತಲಿನ ಸಮಾಜವನ್ನು ಮರೆತಿರುವ ಚಿತ್ರಣವನ್ನು 'ಸೂರ್ಯಗ್ರಹಣ'[೨೮] ಕವನವು ತೆರೆದಿಡುತ್ತದೆ. ಭೂಮಿ, ಸೂರ್ಯರ ಮಧ್ಯೆ ಚಂದ್ರನ ಆಗಮನದ ನೈಸರ್ಗಿಕ ಪ್ರಕ್ರಿಯೆಯೊಂದಿಗೆ ಸೂರ್ಯಗ್ರಹಣವನ್ನು ಚಿತ್ರಿಸುವ ಕವಿತೆ ರಾಜಕೀಯ ನಾಯಕರುಗಳ ಅಶ್ರದ್ಧೆಯನ್ನು ವಿಡಂಬಿಸುತ್ತದೆ. ಸಾಮಾಜಿಕವಾಗಿ ಅಭಿವೃದ್ಧಿ ಸಾಧಿಸದೆ ಹೆಣ್ಣುಮಕ್ಕಳು, ಕೂಲಿಕಾರ್ಮಿಕರು ಪಡುತ್ತಿರುವ ಬವಣೆಯನ್ನು ಹೇಳುತ್ತದೆ.

ಕಾಣುವುದಿಲ್ಲವೆ ನಿಮಗೆ ಒತ್ತೊತ್ತಿಗೆ ಗುಡಿಸಲುಗಳೂ ಗಗನ ಚುಂಬಿಗಳೂ
ಗುಳ್ಳೆಯೆದ್ದಿರುವ ಅಂಗಾಲುಗಳೂ ಸದ್ದಿಲ್ಲದೆ ಸಾಗುವ ಇಂಪಾಲಗಳೂ
ಕೊಳಚೆಗಳೂ ಸಾರ್ವಜನಿಕ ಪಾರ್ಕುಗಳೂ ಅಭಯಾರಣ್ಯಗಳೂ
ಸೇಂದಿಯಂಗಡಿಗಳೂ ಪಂಚನಕ್ಷತ್ರಬಾರುಗಳೂ
ನಿತ್ಯ ಸುಮಂಗಲಿಯರೂ ಸೊಸ್ಯಾಟಿ ಲೇಡಿಗಳೂ[೨೯]

ಒಂದೆಡೆಯಿಂದ ಸಮಾಜ ಅದರ ಸುತ್ತಲೂ ಕಂಡುಬರುವ ವಿಷಮತೆಯನ್ನು ಚಿತ್ರಿಸುವುದರ ಮೂಲಕ ಸಾಮಾಜಿಕ ಕಳವಳಿಯನ್ನು ವ್ಯಕ್ತಪಡಿಸುತ್ತಾ, ಆಧುನಿಕತೆಯ ಭರದಲ್ಲಿ ಬೆಳವಣಿಗೆಯಾಗುತ್ತಿರುವ ಸಾಮಾಜಿಕ ಅಂತಸ್ತುಗಳ ಕಡೆಗೆ ಕವಿತೆ ದೃಷ್ಟಿಸುತ್ತದೆ. ಕೃಷಿ, ಕೈಗಾರಿಕೆ, ಶಿಕ್ಷಣ, ಬಾಹ್ಯಾಕಾಶ ಕ್ಷೇತ್ರಗಳ ಅಭಿವೃದ್ಧಿ ಆಧುನಿಕತೆಯ ಸೋಗಿನಲ್ಲಿ ಶೋಷಣೆ, ಭಯೋತ್ಪಾದನೆಯಂತಹ ಭೀಕರ ಕೃತ್ಯಗಳಿಗೆ ದಾರಿಮಾಡಿವೆ. ಆದ್ದರಿಂದ 'ಮಾಸುತಿವೆ, ಅಳಿಯುತ್ತಲಿವೆ, ಹೊಳೆಯುತ್ತಲಿವೆ ಹೊಸಗುರಿಗಳು'[೩೦]

ಪ್ರಕೃತಿ ಬದಲಿಸದಯ್ಯ ಮಾನವ ಪ್ರಕೃತಿಯೂ ಬದಲಾಗದು
ಅಂತರಂಗದ ರಂಗಕೇರುವ ಕಲ್ಪನೆಗಳೊ ಅಸಂಖ್ಯವು
ತರಹ ತರಹೇವಾರಿ ತುರುಗುವ, ಬೆರೆವ, ಕವಲುವ ವ್ಯಕ್ತಿತ್ವ ಲೋಕ ಅನಂತರವು
ಹಂತಹಂತವ ರಚಿಸಬೇಕಿದೆ ಮೌಲ್ಯ ಶಿಖರವ ಗುರುತಿಸಿ[೩೧]

ಆದ್ದರಿಂದ ಸಮಾಜದಲ್ಲಿರುವ ಎಲ್ಲ ವಿಷಮತೆಗಳೂ ನಾಶವಾಗಬೇಕಾದರೆ ವ್ಯಕ್ತಿತ್ವ ವಿಕಾಸಗೊಳ್ಳಬೇಕು. ಅಂತರಂಗದಲ್ಲಿ ಆ ಬದಲಾವಣೆಯಾಗಬೇಕು. ಆಗ ಮಾತ್ರ ಮಾನವೀಯತೆಗೆ ನಿಜವಾದ ಅರ್ಥ ಪ್ರಾಪ್ತಿಯಾಗಬಹುದು. ಇದುವೇ ಆಂತರಿಕ ತಾರತಮ್ಯಗಳಿಂದ ಹೊರಬರುವ; ಸ್ವಾತಂತ್ರ್ಯವನ್ನು ಗಳಿಸುವ ರಾಷ್ಟ್ರೀಯತೆಯ ಹಿಂದಿನ ಕಾಳಜಿ. ಸ್ವಾತಂತ್ರ್ಯೋತ್ತರದಲ್ಲಿ ಸಮಾಜದ ಪರಿಸ್ಥಿತಿ ಹದಗೆಟ್ಟಿದೆ. ಇದರಿಂದ ಮುಕ್ತಿ ಹೊಂದಿದಾಗ ಮಾತ್ರವೇ ಸಾಮಾಜಿಕ ಅಸಮಾನತೆ ದೂರವಾಗಬಹುದು. ಬಡತನ, ಅನಕ್ಷರತೆ, ನಿರುದ್ಯೋಗಗಳಂತಹ ಸಾಮಾಜಿಕ ಪಿಡುಗುಗಳು ಅಸಮಾತನೆಯನ್ನು ತಂದಿವೆ. ಇದಕ್ಕೆ ಅಸ್ತು ಆಗಬೇಕಾದರೆ ಭ್ರಷ್ಟರ ಕೈಯಿಂದ ದೇಶದ ಆಡಳಿತಕ್ಕೆ ಮುಕ್ತಿ ದೊರೆಯಬೇಕು. ಸ್ವಾತಂತ್ರ್ಯ ಗಳಿಸುವುದರ ಉದ್ದೇಶ ಈಡೇರಿಕೆಯಾಗಿ ರಾಮರಾಜ್ಯದ ಕನಸು ನನಸಾದಾಗ ಈ ಸಮಸ್ಯೆಗಳು ಕೊನೆಯಾಗಬಹುದು ಎಂಬ ನಿರೀಕ್ಷೆಯೊಂದಿಗೆ ನಾಡಿನಲ್ಲಿ ಆಗಬೇಕಾದ ಬದಲಾವಣೆಯೊಂದಿಗೆ ರಾಷ್ಟ್ರಾಭಿವೃದ್ಧಿಯ ಚಿಂತನೆಯನ್ನೂ ಕವಿತೆಗಳು ಮಾಡುತ್ತವೆ.

೪.೫. ಸಂಸ್ಕೃತಿಯ ಪ್ರತಿನಿಧೀಕರಣ

ಸ್ವಾತಂತ್ರ್ಯೋತ್ತರದಲ್ಲಿ ಸಮಾಜದಲ್ಲಿ ಆದ ಬದಲಾವಣೆ ಹಲವಾರು ಸಾಂಸ್ಕೃತಿಕ ಬದಲಾವಣೆಗಳಿಗೆ ಅನುವು ಮಾಡಿತು. ಆದಿಯಿಂದಲೂ ಮುಂದುವರಿದು ಬಂದಿರುವ ರೀತಿ, ನೀತಿಗಳು ಕಟ್ಟಳೆಗಳಿಂದ ಹೊರಬರುವ ಹಂಬಲದೊಂದಿಗೆ ಹೊಸ ಇತಿಹಾಸ ಸೃಷ್ಟಿಸುವ ಹುರುಪು, ಉತ್ಸಾಹ ಕವಿತೆಗಳಲ್ಲಿವೆ. ಈವರೆಗಿನ ಬಂಧನದಿಂದ ಕಳಚಿ, ಮುಕ್ತಗೊಂಡು ಹೊಸತನ್ನು ಹುಡುಕುವ ಪ್ರವೃತ್ತಿ ಕಾವ್ಯದೃಷ್ಟಿಯಿಂದಲೂ, ಜೀವನ ದೃಷ್ಟಿಯಿಂದಲೂ ಎದ್ದು ಕಾಣುತ್ತದೆ.

ಯುಗಯುಗಾಂತರದ ಕತ್ತಲಕೋಶ ಹರಿದೊಗದೆ
ಕಟ್ಟಳೆಯ ಕಟ್ಟುಗ್ಗಳ ಕಳಚಿ ಹೊರಬಂದೆ
ಚರಿತ್ರೆ ಪುಸ್ತಕದ ಮುಚ್ಚಿದ್ದ ಕಿಟಕಿ ಬಾಗಿಲು
ಗಳತೆರೆದೆ ಗೋಪುರದಿಂದ ಕೆಳಗಿಳಿದೆ
ಬಿಗಿದ ಪಾಶಗಳ ಸಡಿಲಿಸಿದೆ ಸ್ವಂತ
ಕಂಥನದ ಜೊತೆ ವಿಶಾಲ ಬಯಲಿಗೆ ಬಂದೆ
ಇನ್ನೀಗ ಕಪ್ಪು ಹಕ್ಕಿಯ ಹಾಡು ಹಾಡಬೇಕು[೩೨]

– ಇಂಥ ಸಂದರ್ಭದಲ್ಲಿ ಹೊಸ ರಾಷ್ಟ್ರ ನಿರ್ಮಾಣಕ್ಕೆ ಜಾತಿ, ಧರ್ಮ, ಮತ, ವರ್ಗ, ಭಕ್ತಿ, ಕರ್ಮ, ಭೇದಗಳಿಲ್ಲದ ವರ್ತಮಾನಕ್ಕಾಗಿ ಕವಿತೆಗಳು ಹಾತೊರೆಯುತ್ತವೆ. ಆಧುನಿಕತೆಯ ಭರದಲ್ಲಿ ಕಲೆ, ಸಂಸ್ಕೃತಿ, ಸಂಪ್ರದಾಯಗಳು ಬದಲಾಗುತ್ತಾ ಇವೆ. ತಾವು ಕಂಡು ಅನುಭವಿಸಿದ, ಆನಂದಿಸಿದ ಬದುಕಿನ ಸುಂದರ ಕ್ಷಣಗಳನ್ನು ಮರೆತು ಜೀವಿಸುವ ಜನತೆಯನ್ನುದ್ದೇಶಿಸಿ,

ಕಣ್ತೆರೆದಾಗ ಬೆಪ್ಪರಾದೆವು ನಾವು
ಎಲ್ಲಿದ್ದೀರಿ ನೀವು? ಎಲ್ಲಿದೆ ಯಕ್ಷಲೋಕದ ಚಿತ್ರ ವೈಚಿತ್ರ್ಯ?
ಆಕಾಶಕೆದ್ದ ಕೆಂದೂಳು, ಕರಕುದೊಂದಿಗಳು, ರಾಳದ ಕಮಟು
ಸುತ್ತಲೂ ಇಬ್ಬನಿಯ ಪರದೆ, ರಂಗಸ್ಥಳವೂ ಬರಿಬಯಲು[೩೩]

ಎಂಬ ಬಯಲಾಟದ ಸಮೀಕರಣದೊಂದಿಗೆ ಕಲೆ ಹಾಗೂ ಅದರೊಂದಿಗೆ ಕಣ್ಮರೆಯಾಗುತ್ತಿರುವ ಸಂಸ್ಕೃತಿಯ ನಾಶವನ್ನು ಸೂಚ್ಯವಾಗಿ ಅಭಿವ್ಯಕ್ತಿಸುತ್ತದೆ. ಜಾಗತೀಕರಣದ ಪ್ರಭಾವ ಸಂಸ್ಕೃತಿಯ ಮೇಲೆ ಮಾಡಿರುವ ದಾಳಿಯಿಂದ ರಕ್ಷಣೆ ಪಡೆಯಬೇಕಾಗಿದ್ದು, ದಿಕ್ಕೆಟ್ಟ ಸ್ಥಿತಿಯಿಂದ ಚೇತರಿಸಲು; ಆ ಸಂಸ್ಕೃತಿಯನ್ನು ಬೆಳಗಲು ಅವಶ್ಯವಾದ ಪೋಷಣೆಯನ್ನು ನೀಡಬೇಕಾಗಿದೆ. ಎಂಬುದನ್ನು 'ಎಣ್ಣೆ ಹೊಯ್ಯಮ್ಮ ದೀಪಕ್ಕೆ' ಕವನವು ಚಿತ್ರಿಸುತ್ತದೆ.

ಎಣ್ಣೆ ಹೊಯ್ಯಮ್ಮ ದೀಪಕ್ಕೆ
ಬತ್ತಿಯೊಣಗುತಿದೆ ಬೆಳಕು ಬಾಡುತ್ತಿದೆ
ಕತ್ತಲೆ ಮುಂದೆ ಮುಂದೊತ್ತುತಿದೆ
ಅತ್ತಲಿಂದಿತ್ತಲು ಕಂಡಿಯೊಳಗೆ ನುಗ್ಗಿ
ಒತ್ತರದಲಿ ಗಾಳಿ ಬೀಸುತ್ತಿದೆ.[೩೪]

"ನಮ್ಮ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಲೋಕದ ಸಂಸ್ಕೃತಿಯ ಸಂಕ್ರಮಣ ಸ್ಥಿತಿಯ ತಲ್ಲಣಗಳನ್ನು ಸುತ್ತಲಿನ ಪ್ರಕೃತಿಯ ಚಿತ್ರಗಳಿಂದಲೇ ಹಿಡಿದಿಡುವ ರೀತಿ ಅದ್ಭುತವಾಗಿದೆ. ಸ್ವಾತಂತ್ರ್ಯೋತ್ತರ ಭಾರತದ ಬದುಕಿನ ಪಲ್ಲಟ, ಹಳತು ಹೊಸತು, ವಸಾಹತುಶಾಹಿ ಪ್ರಭಾವಗಳು ಹಾಗೂ ದೇಶೀಯತೆ, ಹಳೆ ಕಾವ್ಯ ಸಂಪ್ರದಾಯ, ಹೊಸಪ್ರಯೋಗಗಳ ದ್ವಂದ್ವ, ಬದುಕಿನ ಭ್ರಮನಿರಸನ, ಗಾಢ ವಿಷಾದ ತಳಮಳ ನೋವಿನೊಂದಿಗೆ ಎಣ್ಣೆ ತೀರುತ್ತಿರುವ ದೀಪ ಸಂಸ್ಕೃತಿಯ ಪತನದ ಚಿತ್ರಣವನ್ನು ಕಣ್ಣ ಮುಂದಿರಿಸುತ್ತದೆ"[೩೫]

ಆಲವಿದ್ದಲೀಗ, ಹುಲುಸಾಗಿ ಬೆಳೆಯುತ್ತಾವೆ
ಜಾಲಿ, ಕತ್ತಾಳೆ, ಈಚಲು, ಕುರುಚಲು
ಧಗೆಯಲ್ಲಿ ಸುಡುವ
ಕಂಡು ಕೊರಗುತ್ತೇನೆ ಏನೋ ದಿಗಿಲು[೩೬]

ಕ್ಷಣ ಮಾತ್ರದಲ್ಲಿ ಕಣ್ಮರೆಯಾದ ಸಂಸ್ಕೃತಿಯ ಚಿತ್ರಣ, ಒಂದು ಕಾಲಕ್ಕೆ, ಒಂದು ನಾಡಿಗೆ ಪ್ರತೀಕವಾಗಿದ್ದ ಆಚರಣೆಗಳ ಕೊರತೆಗಾಗಿ ವಿಷಾದಿಸುತ್ತಾ "ನಾವೆ ಹುಡುಕುತ್ತೇವೆ ಮೋಕ್ಷದ ದಾರಿ"[೩೭] ಎನ್ನುವ ಅಂತರ್ಮುಖೀ ಬಂಡಾಯವನ್ನು ಅಭಿವ್ಯಕ್ತಿಸುತ್ತದೆ. ಆ ಮೂಲಕ ನಾಡು; ನಾಡಾಭಿಮಾನವನ್ನು ಅಭಿವ್ಯಕ್ತಿಸುತ್ತದೆ.

ತಂತ್ರಜ್ಞಾನ, ವಿಜ್ಞಾನದ ಪ್ರಗತಿ ಮನುಷ್ಯ ಸಂಬಂಧಗಳನ್ನೇ ನಾಶಮಾಡುತ್ತಿವೆ. "ಪ್ರಗತಿಯೊಂದಿಗೇ ಬದುಕು ಬೊಗಸೆ ಮೀರಿ ಹೋಗುತ್ತಿದೆ."[೩೮] ಎಂಬ ನಿರಾಶಾವಾದ ಕವಿತೆಗಳಲ್ಲಿವೆ. ಭಾಷೆ, ಸಂಸ್ಕೃತಿ, ಸೌಹಾರ್ದ, ಭಾವೈಕ್ಯಗಳೆಲ್ಲಾ ಆಧುನಿಕತೆಯ ಹೆಸರಿನಲ್ಲಿ ಛಿದ್ರವಾಗುತ್ತಿವೆ; ಕೃತಕವಾಗುತ್ತಿವೆ. ನಾಡಿನ ಸಂಸ್ಕೃತಿಯು ಅಳಿವಿನಂಚಿನಲ್ಲಿದೆ; ಆಧುನಿಕತೆಯ ಹೊಡೆತವೂ ಒಂದು ರೀತಿಯಲ್ಲಿ ಆಂತರಿಕ ಸಂಬಂಧಗಳ ಶೈಥಿಲ್ಯಕ್ಕೆ ಕಾರಣ.

ಕ್ಷೀರ ಸಾಗರವಿತ್ತು; ಪಾನಪಾತ್ರವ ತುಂಬಿ
ಕಲ್ಪತರು ಶಾಖೆ ನಮ್ಮಂಗಳಕೆ ಬಾಗಿತ್ತು

ವೇದಮಂತ್ರದ ಘೋಷ ರೋಮರೋಮಾಂಚಗಳ
ಮೂದಲಿಸುತ್ತಿತ್ತು ಧರೆ ನಂದನವೆ ಆಗಿತ್ತು
ಪುಣ್ಯಭೂಮಿಯ ಮಣ್ಣೊಳಮೃತ ಫಲ ಬೆಳೆದಿತ್ತು
ಅದರ ಕಣ್ಣೊಳು ವಿಶ್ವದರ್ಶನದ ಬೆಳಕಿತ್ತು
ಇರದುದೋ ಇದ್ದುದೋ ಸವಿನೆನಪಿನೀ ತುತ್ತು?
ಇರುವ ಇಹಸತ್ಯದಲಿ ಕಟ್ಟುವಿರ ಭಾರತವ[೩೯]

– ಇದು ಭಾರತದ ಭವ್ಯ ಪರಂಪರೆ, ಪೌರಾಣಿಕ, ಚಾರಿತ್ರಿಕ ಘಟ್ಟಗಳೆಲ್ಲವೂ ಮುಗಿದು ನವಯುಗಕ್ಕಾಗಿ ಹಾತೊರೆಯುವಾಗ ತನ್ನ ಸಮಾಜದ ಸುತ್ತಮುತ್ತಲಿನ ಅಸಮಾನತೆ ಕವಿತೆಯಲ್ಲಿ ವ್ಯಕ್ತಗೊಂಡಿರುವುದಲ್ಲದೆ; ಅಸಮಾನತೆಯಿಂದ ಛಿದ್ರಗೊಂಡ ಮೇಲು ಕೀಳು-ತಾರತಮ್ಯ, ವರ್ಣಭೇದಗಳೆಲ್ಲವೂ ಗಮನಿಸಲ್ಪಟ್ಟು ಅವುಗಳನ್ನು ತ್ಯಜಿಸಿದ ಸರ್ವಸಮಾನತೆಯ, ಸಹೋದರತೆಯ ಸ್ವಾತಂತ್ರ್ಯ, ಸ್ವಾವಲಂಬನೆ, ಸ್ವಾಭಿಮಾನಗಳ ಸೂರ್ಯೋದಯಕ್ಕಾಗಿ ಕವಿತೆ ಹಂಬಲಿಸುತ್ತದೆ. ಪರಂಪರೆ / ಗತದ ಪ್ರಜ್ಞೆಯನ್ನು ಬಹುಕಾಳಜಿಯಿಂದ ಪರಿಕಿಸುವ ಕವಿತೆ ಪರಂಪರೆಯ ಆ ಪ್ರಜ್ಞೆಯಲ್ಲಿಯೇ ಹೊಸತನ್ನು ಸ್ವೀಕರಿಸುವುದಕ್ಕೆ ತನ್ನನ್ನು ಸಿದ್ಧಗೊಳಿಸುತ್ತದೆ.

ಆಧುನಿಕತೆಗೆ / ಹೊಸತನಕ್ಕೆ ಸಿದ್ಧಗೊಳ್ಳುತ್ತಿರುವಾಗ ತನ್ನ ಪರಂಪರೆಯ ಸತ್ವವನ್ನು ಮೈಗೂಡಿಸಿ ಪರಸಹಿಷ್ಣುವನ್ನು ಎತ್ತಿಹಿಡಿಯುವ ನವಜೀವನ[೪೦] ಕವಿತೆಯು ಹಳತು / ಹೊಸತರ ಸಮನ್ವಯದೊಂದಿಗೆ ಶ್ರಮಜೀವನದ ಮಹತ್ತರ ಸಂಸ್ಕೃತಿಯ ವೈಭವವನ್ನು ಸಾರುವ ಜೀವನ ಪಾಠವನ್ನು ಕಲಿಸಿಕೊಡುತ್ತದೆ. ಆದ್ದರಿಂದ ಪರಂಪರೆಯ ಭದ್ರ ಅಡಿಪಾಯದೊಂದಿಗೆ,

ಆಧುನಿಕ ಭಾರತದ ಅಣುರೇಣು ನಮ್ಮೊಡಲ ಪರಮಾಣು
ನಮ್ಮ ಧಮನಿಯ ನೆತ್ತರೀನೆಲದ ತಿಳಿನೀರು
ಕೋಟಿ ಜೀವಿಗಳುಸಿರ ಗಂಧವಹನೀ ಪವನ
ನಾದ ಮೂರ್ತಿಯ ಭಾವದಂತರಂಗದ ರಂಗ
ವೀ ಗಗನ, ಸವಿತೃವೇ, ಬುದ್ಧಿ ಸಾರಥಿ, ನಮ್ಮ
ಜನ್ಮ ಜನ್ಮಾಂತರದ, ಕರ್ಮ ಕರ್ಮಾಂತರದ
ಬೇರು ತೊಟ್ಟಿಹುದಿಲ್ಲಿ, ಬೇರಿಲ್ಲ ಗತಿಯೆಂದು
ಬೇರಿಲ್ಲ ಮತಿಯೆಂದು ಕಟ್ಟುವಿರ ಭಾರತವ?[೪೧]

– ಎಂಬ ಎಚ್ಚರದ ಧ್ವನಿಯೊಂದಿಗೆ ಭಾರತದ ಆಧ್ಯಾತ್ಮ ಪ್ರೇರಿತ ಸಂಸ್ಕೃತಿಯ ವೈಭವ ಹಾಗೂ

ಆ ವೈಭವವಲ್ಲಿ ಇಂದು ನಿರ್ಮಾಣ ಮಾಡಬೇಕಾದ ಭವ್ಯ ಭಾರತದ ಅಭಿಮಾನದ ಕಲ್ಪನೆಯೂ ಅಡಗಿದೆ. ಸಂಸ್ಕೃತಿಯು ನಿಂತ ನೀರಲ್ಲ; ಅದು ಚಲನಶೀಲವಾದುದು ಎಂಬ ಸತ್ಯವನ್ನು ಅರಿತುಕೊಂಡ ಸ್ವಾತಂತ್ರ್ಯೋತ್ತರ ಕವಿತೆಗಳು ಹಳತು-ಹೊಸತರ ಸಾಮರಸ್ಯದ ರಾಷ್ಟ್ರಾಭಿಮಾನವನ್ನು ಅಭಿವ್ಯಕ್ತಿಸುತ್ತವೆ. 'ಆಗಬೋಟ'[೬೭] ಕವನವು

ಹಲಹಲಗೆಗಳ ಹಿಡಿದು ಮಿಡಿದು ಬಡಿದು ನೋಡುವಗತ್ಯ
ಮತ್ತೆ ಬಂದಿದೆ ಪುರಾತನ ಹಡಗು ವಿದ್ಯೆಗಳನ್ನು ಇಂದಿನ ಪರಿಗೆ
ಜೋಡಿಸುವ ಕೆಲಸ, ಹೊಸಮರ, ಹೊಸಕಬ್ಬಿಣ, ಹೊಸ ತಂತ್ರಯಂತ್ರಗಳ
ಬೆಸೆವಾಧುನಿಕ ಬೋಟಿ, ಹೊಸಲಂಗರು

- ಎಂದು ಹೇಳುವುದರ ಮೂಲಕ ಡಿ.ವಿ.ಜಿ.ಯವರ ಹಳತು-ಹೊಸತರ ಸಹಮಿಲನವನ್ನು ಒಪ್ಪುವ ಯಶಸ್ಸಿನ ಐಕ್ಯ ಜೀವನವನ್ನು ಪ್ರತಿಪಾದಿಸುತ್ತದೆ. ಅಧ್ಯಯನದ ಆರಂಭದ ಭಾಗದಲ್ಲಿ ವಿಶ್ಲೇಷಿಸಿದಂತೆ; ಹೊಸ ಬದಲಾವಣೆಯನ್ನು ಹಳತರ ಸಹಯೋಗದೊಂದಿಗೆ ರೂಢಿಸಿಕೊಳ್ಳುವ ಪರಿಯನ್ನು ಇಲ್ಲಿನ ಕವಿತೆಗಳು ಒಪ್ಪುತ್ತವೆ. ಸಮಾಜದ ಬದಲಾವಣೆಯೊಂದಿಗೆ ಆದ ಸಂಸ್ಕೃತಿಯ ಬದಲಾವಣೆಯನ್ನು ಅದೇ ರೀತಿಯಾಗಿ ಸ್ವೀಕರಿಸದೆ ಪರಂಪರೆಯ ಸತ್ವದೊಂದಿಗೆ ಸ್ವೀಕರಿಸಬೇಕೆನ್ನುವ ಕವಿತೆಗಳು ರಾಷ್ಟ್ರ ನಿರ್ಮಾಣಕ್ಕಾಗಿ ತನ್ನ ಗತಕಾಲದ/ಪರಂಪರೆಯ ಅಂತಃಸತ್ವವನ್ನು ಒಳಗೊಳ್ಳುವ ಪ್ರಯತ್ನ ಮಾಡುತ್ತದೆ. ಇದು ಗೋಪಾಲಕೃಷ್ಣ ಅಡಿಗರು ಆಧುನಿಕ ಕಾವ್ಯವನ್ನು ಕುರಿತು ಹೇಳಿದ 'ಮಣ್ಣಿನ ವಾಸನೆ'ಯ ಸತ್ವವನ್ನು ಮೈಗೂಡಿಸುತ್ತದೆ. ಹೀಗೆ ಹಳೆಯ ನೆನಪುಗಳೊಂದಿಗೆ ಬಂಧನದಿಂದ ಮುಕ್ತಗೊಳ್ಳುವ ಯೋಚನೆಯನ್ನು ಆಧುನಿಕ ಕವಿತೆಗಳು ಮಾಡುತ್ತವೆ.

೪.೬ ಧರ್ಮ ಕುರಿತ ಕಲ್ಪನೆ

'ಮನುಜಮತ ವಿಶ್ವಪಥ' - ಇದು ಕುವೆಂಪುರವರ ಮಾನವ ಧರ್ಮದ, ಸಹಬಾಳ್ವೆಯ ನುಡಿಲಹರಿ. ಧರ್ಮದ ಕುರಿತ ಭಿನ್ನ ಚಿಂತನೆಗಳು ಇಂದು ನಮ್ಮ ಮುಂದಿವೆ. ''ಧರ್ಮ ಎನ್ನುವುದು ಸಮಾಜದ-ಸಮುದಾಯದ ಮಾರ್ಗದರ್ಶಕ. ಆಯಾ ಗುಂಪಿನವರು ಆ ಮಾರ್ಗವನ್ನು ಅನುಸರಿಸುವುದು ತಮ್ಮ ಆದರ್ಶವಾಗಿ ಕಲ್ಪಿಸುತ್ತಾರೆ.''[೬೩] ಎನ್ನುತ್ತಲೇ ಧರ್ಮದ ಗ್ರಹಿಕೆ ಇನ್ನಷ್ಟೂ ವಿಸ್ತೃತಗೊಳ್ಳುತ್ತದೆ. ರಾಷ್ಟ್ರನಿರ್ಮಾಣ ಸಂದರ್ಭದಲ್ಲಿ ದೇಶವನ್ನೇ ಒಟ್ಟಾಗಿಸುವ ಪ್ರಬಲ ಶಕ್ತಿಯಾಗಿ ಧರ್ಮವನ್ನು ಕಲ್ಪಿಸಲಾಗುತ್ತದೆ. ಆದರೆ ಧರ್ಮದ ಹೆಸರಿನಲ್ಲಿ ಸೃಷ್ಟಿಯಾಗುವ ಕೋಮುವಾದ, ಮತಾಂಧತೆಗಳು ರಾಷ್ಟ್ರವನ್ನು ಒಡೆಯುವ ಪ್ರಕ್ರಿಯೆಗೆ ಕಾರಣವಾಗುತ್ತದೆ. ವಸಾಹತು ಆಳ್ವಿಕೆಯ

ಅಂತ್ಯದೊಂದಿಗೆ ಛಿದ್ರಗೊಂಡ ಹಿಂದೂ, ಮುಸ್ಲಿಂ, ಏಕತೆಯು ಭಾರತದ ರಾಜಕೀಯ, ಆರ್ಥಿಕ ಪ್ರಗತಿಯಲ್ಲಿ ಬಹುದೊಡ್ಡ ಹೊಡೆತ. ಈ ಒಡಕುಗಳನ್ನು ಹೋಗಲಾಡಿಸಿ ಒಂದಾಗಿ ಬಾಳಬೇಕೆಂಬ ಸಂದೇಶವನ್ನು ಸ್ವಾತಂತ್ರ್ಯೋತ್ತರ ಕವಿತೆಗಳಲ್ಲಿ ಗುರುತಿಸಬಹುದು.

ಏಕದೇವನ ಮಕ್ಕಳೀ ನಾವು ಸೋದರರು
ಏಕಮನರಾಗಿಹೆವು, ಬಡಿದಾಡಿಕೊಳೆವು
ಜಾತಿಜಾತಿಗಳಲ್ಲಿ ವೈರಾಗ್ನಿಯಿರದಿಹೆವು
ನೀತಿಯೊಂದೇ ಧರ್ಮ, ಸರ್ವಪ್ರೇಮಿಗಳು[೪೪]

– ವಿಶ್ವಮಾನವನಾಗಿ ಬಾಳುವ ಆಶಯವನ್ನು ಹೊಂದಿರುವ ಕವಿತೆ ರಾಷ್ಟ್ರೀಯತೆಯ ಕಾಳಜಿಯಲ್ಲಿ ಏಕತೆಯನ್ನು ಪ್ರೇರೇಪಿಸುತ್ತದೆ. ಜಾತಿ, ಧರ್ಮದ ವೈಷಮ್ಯಗಳಿಲ್ಲದೆ ಒಮ್ಮನಸ್ಸಿನಿಂದ ಕೂಡಿ ಬಾಳುವೆವು ಎಂದು ಹೇಳುತ್ತಲೇ ''ಜ್ಞಾನಸೂರ್ಯನ ಬೆಳಕು ಲೋಕವನು ಬೆಳಗಿಸುವ'' ಪ್ರಕಾಶಮಾನವಾದ ಪರಧರ್ಮ ಸಹಿಷ್ಣುವಾಗಿ ಗುರುತಿಸುವ ಭಾರತದ ಜನತೆಯ ಮನಸ್ಥಿತಿಯನ್ನು ಬಿಂಬಿಸುತ್ತದೆ.

ಸಂಘರ್ಷ, ಹಿಂಸೆ, ಅನೀತಿಯನ್ನು ಬಿಟ್ಟು ಮಾನವೀಯತೆಯಿಂದ ಬದುಕುವುದು ದೇಶೋದ್ಧಾರ ದೃಷ್ಟಿಯಿಂದ ಪ್ರಗತಿಪರ ಪ್ರಕ್ರಿಯೆ. ಆದ್ದರಿಂದ ಪಶುತ್ವವನ್ನು ಹೋಗಲಾಡಿಸಿ ಮಾನವತೆಯಿಂದ ಬದುಕಬೇಕಾಗಿದೆ ಸಾಮರಸ್ಯ, ಹೊಂದಾಣಿಕೆ ಅತೀಅಗತ್ಯ. ಅದಕ್ಕಾಗಿ ಈರ್ಷೆ, ಕಪಟ, ಮೋಸಗಳನ್ನು ತ್ಯಜಿಸಿದ ಮನುಜ ಹೃದಯ; ಸರ್ವೋದ್ಧಾರದ ಧರ್ಮಸೂತ್ರ ದಾರಿದೀಪ.

ವಿಶ್ವ ಜೀವನದಲ್ಲಿ ಬೆರೆದೊಂದುಗೂಡಿ
ಶಾಶ್ವತದ ಸತ್ಯವನು ಸೇವೆಯಲಿ ನೋಡಿ
ಲೋಕಸೇವೆಯ ದೇವ ಸೇವೆಯೆಂದೆನಿಸು
ಸರ್ವರುದ್ಧಾರದಲಿ ಶಾಂತಿಯನ್ನರಸು[೪೫]

ಆ ಮೂಲಕವೇ ವಿಶ್ವಶಾಂತಿಯ ಧಾತಾರನಾಗುವ ಕಲ್ಪನೆ ರಾಷ್ಟ್ರದ ಹಿಂದಿನ ಮಾನವ ಧರ್ಮ. ಆದ್ದರಿಂದ ಕವಿತೆಗಳು ಉದಾರವಾದಿ, ಮಾನವತಾವಾದೀ ನೆಲೆಗಳಲ್ಲಿವೆ. ''ವಸಾಹತುಶಾಹಿ ಆಡಳಿತ ಮುಗಿದಿದ್ದು ದೇಶ ತನ್ನ ಕಾಲ ಮೇಲೆ ನಿಂತುಕೊಳ್ಳಬೇಕಾದ ಪ್ರಸಂಗ ಎದುರಾದದ್ದರಿಂದ ದೇಶದ ಆದರ್ಶವು ಇಳಿದು ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುವಾಗ''[೪೬] ದೇವರು, ಧರ್ಮ, ಮನೋಧರ್ಮಗಳಲ್ಲಿ ಆದ ಪರಿವರ್ತನೆಯನ್ನು ಗುರುತಿಸಬೇಕಾಗುತ್ತದೆ.

ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಗುರುತಿಸಲ್ಪಡುವ ಉದಾರವಾದೀ, ಮಾನವತಾವಾದೀ

ಪರಿಕಲ್ಪನೆಯು ಏಸು, ಕೃಷ್ಣ ಬುದ್ಧನೇ ಮುಂತಾದ ಮಹಾನ್ ಧಾರ್ಮಿಕ ಪುರುಷರ ತತ್ತ್ವಗಳಿಂದ ಪ್ರಭಾವಿತವಾಗಿದ್ದು. ಅದರ ಪ್ರತಿಕ್ರಿಯೆಯನ್ನು ಸ್ವಾತಂತ್ರ್ಯ ಪೂರ್ವದ ಕಾವ್ಯಗಳಲ್ಲಿ ಗುರುತಿಸಬಹುದು. ಬುದ್ಧ, ಏಸು ಎಂಬೀ ಭಿನ್ನ ವ್ಯಕ್ತಿತ್ವಗಳ ಉದಾಹರಣೆಯೊಂದಿಗೆ ವೈಶಾಖಿ, ಗೊಲ್ಗೊಥಾ[೪೭] ಕಾವ್ಯಗಳು ಉದಾರವಾದೀ, ಮಾನವತಾವಾದೀ, ನೆಲೆಗಳಲ್ಲಿ ಧಾರ್ಮಿಕ ಸಹಮಿಲನವನ್ನು ಪ್ರತಿಪಾದಿಸುವ ಉದ್ದೇಶವನ್ನು ಇಟ್ಟುಕೊಂಡಿತ್ತೋ? ಎಂಬುದು ಚರ್ಚಿಸಬೇಕಾದ ವಿಷಯ. ಧಾರ್ಮಿಕ ಪುರುಷರ ಜೀವನವನ್ನೂ, ಅವರ ತತ್ತ್ವಗಳನ್ನೂ ಕಾವ್ಯದ ಮೂಲಕ ಪ್ರತಿಪಾದಿಸಿ ಐಕ್ಯವನ್ನು ತರುವುದು ಒಂದು ರೀತಿಯ ಕಾವ್ಯತಂತ್ರ. ಸ್ವಾತಂತ್ರ್ಯೋತ್ತರ ಕಾವ್ಯ ಕ್ರಿಯೆಯಲ್ಲಿ ಗಾಂಧೀಜಿ, ವಿವೇಕಾನಂದ ಮುಂತಾದವರ ತತ್ತ್ವಗಳೊಂದಿಗೆ, ಸನಾತನ ಧರ್ಮ ಪ್ರತಿಪಾದನೆಯ ಒಂದಾಗುವಿಕೆಯ ಆಶಯವನ್ನು ಗುರುತಿಸಬಹುದು. ಸತ್ಯ, ಅಹಿಂಸೆ, ತ್ಯಾಗ, ಬಲಿದಾನಗಳ ಸಾಕಾರಮೂರ್ತಿಯಾದ ಗಾಂಧೀಜಿಯವರನ್ನು

> ನೀನಿಟ್ಟ ಹೆಜ್ಜೆಯಲಿ ದಂಡದಮನದ ನೋವು
> ಕಣ್ಣೋಟದಾಳದಲಿ ಕುದಿವ ಕರುಣೆಯ ಕಾವು
> ತ್ಯಾಗದಲಿ ಯಾಗ; ನಿಷ್ಕಾಮಕರ್ಮದ ಯೋಗ
> ಜನತಾ ಜನಾರ್ದನನ ಸೇವೆಯಲಿ ಸುಖ-ಭೋಗ
> ನಿನ್ನ ನಡೆಯಲಿ ಗೀತೆ ಹೊಸಜನ್ಮ ತಾಳಿದುದು
> ಭಾರತದ ಸೌಭಾಗ್ಯ ತಲೆಯೆತ್ತಿ ಬಾಳಿದುದು[೪೮]

- ಹೇಳುವಂತೆ, ಮಾರ್ಗದರ್ಶನ, ಸೇವಾ ಮನೋಭಾವನೆ, ಕರ್ತವ್ಯ ನಿಷ್ಠೆಗಳ ಸಮ್ಮಿಲನಕ್ಕೆ ಪ್ರಸಿದ್ಧರಾದ ಗಾಂಧೀಜಿಯವರನ್ನು ಈ ಯುಗದ ಪುಣ್ಯಾವತಾರ[೪೯] ಎಂದು ಹೇಳುವುದು ರಾಷ್ಟ್ರಪಿತನ ಮೇಲಿರುವ ರಾಷ್ಟ್ರಾಭಿಮಾನದ ಉತ್ಕಟ ಇಚ್ಛೆಯಿಂದ. ಭಾರತದಾದ್ಯಂತ ರಾಕ್ಷಸತ್ವ ನೆಲೆಗೊಂಡು ವೈಭವದಿಂದಿರುವಾಗ; ಮಾನವತೆಯನ್ನು ಮೈಗೂಡಿಸಿಕೊಂಡ ಗಾಂಧಿಯನ್ನು ದೇವತೆಗಳ ಸಮೂಹವು ಈ ಭೂಲೋಕಕ್ಕೆ ಕಳುಹಿಸಿಕೊಟ್ಟರೆಂದು ಹೇಳುವ ಕವಿತೆಯು, ತಾ ಸತ್ತು ಭಾರತವ ಬಳಸಿದ ಧನ್ಯಾತ್ಮ ಎಂಬ ಉದ್ಗಾರವನ್ನು ತೆಗೆಯುತ್ತದೆ. ಅಧರ್ಮವನ್ನು ಹೋಗಲಾಡಿಸಿ, ಧರ್ಮ ಸಂಸ್ಥಾಪನೆಗೆ ಕಾರಣರಾದ ಗಾಂಧಿಯು ಈ ಯುಗದ ಪುಣ್ಯಾವತಾರವೇ ಸರಿ. ''ಗಾಂಧೀಜಿಯವರು ಒಬ್ಬ ಅದ್ಭುತ ದಾರ್ಶನಿಕ ಕರ್ಮಯೋಗಿಯಂತೆ ಜನರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದರು''[೫೦] ಎಂಬ ಮಾತುಗಳು ಇದನ್ನು ಸ್ಪಷ್ಟಪಡಿಸುತ್ತವೆ.

ಧರ್ಮ ಶ್ರದ್ಧೆಯನ್ನು ಹೊರತುಪಡಿಸಿ ರಾಷ್ಟ್ರೀಯತೆಯ ಕಲ್ಪನೆ ಕಷ್ಟಸಾಧ್ಯ. ಭಕ್ತಿ ಅಧ್ಯಾತ್ಮ

ಸೇವಾಮನೋಭಾವ ಇವುಗಳೊಂದಿಗೇ ಧಾರ್ಮಿಕ ಶ್ರದ್ಧೆಯೂ ಒಟ್ಟುಗೂಡಿ ಭಾರತೀಯತೆಯನ್ನು ಕಟ್ಟಲು; ಪುನರ್‌ಸ್ಥಾಪಿಸಲು ಪ್ರಯತ್ನಗಳು ನಡೆದಿರುವುದನ್ನು ಮಧ್ಯಕಾಲೀನ ಧಾರ್ಮಿಕ ಚಳುವಳಿಯ ಸಂದರ್ಭದಲ್ಲಿ ಗುರುತಿಸಬಹುದು. ಸರ್ವಧರ್ಮ ಸಮನ್ವಯ, ಸರ್ವೋದಯದ ಪರಿಕಲ್ಪನೆಗಳನ್ನು ಜನಮನದಲ್ಲಿ ಬಿತ್ತಿದ ಸ್ವಾಮೀ ವಿವೇಕಾನಂದ, ಆಚಾರ್ಯವಿನೋಬಾ ಏಕತೆಯನ್ನು ಹಿಡಿದೆತ್ತಿದ ಅಧ್ಯಾತ್ಮ ಪುರುಷರಾಗಿ ಕವಿತೆಗಳಲ್ಲಿ ಚಿತ್ರಿತರಾಗುತ್ತಾರೆ. 'ಆತ್ಮದಲ್ಲಿ ಮೂಡುವ ಸಂಸ್ಕಾರವೇ ದೇವನೊಲಿಯುವ ಪೂಜೆ' ಎಂಬ ಸತ್ಯವನ್ನು ಜಗತ್ತಿಗೆ ಸಾರಿದ ವಿವೇಕಾನಂದರನ್ನು ಕುರಿತು 'ಬ್ರಹ್ಮಾಸ್ಮಿ' ಕವನವು,

ಇಂದಿನಲಿ, ನಾಳೆಯಲಿ ಹೊಳೆವುದೊಂದೆ ಬೆಳಕು,
ತಾರತಮ್ಯದಲಿ
ಎದ್ದೇಳಿ, ನಡೆತನ್ನಿ, ಬದ್ಧಶುದ್ಧಾತ್ಮರಿರ
ಆತ್ಮನೋಲಗಕೆ
ಓಂಕಾರ ಕಲಶಮಂಡಿತ ದೇವಕುಲಕೆ ಸಹ
ಧರ್ಮ ಸಂಗಮಕೆ[೫೧]

- ಎಂಬ ವಿವೇಕಾನಂದರ ವಾಣಿಯ ಮಹತ್ವವನ್ನು ಪ್ರತಿಪಾದಿಸುತ್ತದೆ. ಆ ಮೂಲಕ ಮಾನವತೆಯ ಐಕ್ಯದ ಸಂದೇಶವನ್ನು ಸಾರುವುದು ಕವಿತೆಯ ಉದ್ದೇಶ. ಭಾರತವನ್ನು ಭಗವಂತನಾಗಿ ಕಲ್ಪಿಸುವುದು. ದೀನಮಾನವರ ಸೇವೆಯಲ್ಲಿಯೇ ಆ ಭಗವಂತನ (ದೇಶದ) ಸೇವೆಯನ್ನು ಕಾಣುವುದು. ಸೇವಾ ಭಾವನೆ, ಶ್ರಮದ ಮಹತ್ವ, ನಿಸ್ವಾರ್ಥ, ಎಂಬೀ ಅಂಶಗಳನ್ನು ರಾಷ್ಟ್ರದ ಹಿಂದಿನ ಕಾಳಜಿ ಕರ್ತವ್ಯವೆಂಬಂತೆ ನಿರೂಪಿಸಿರುವುದನ್ನು 'ಪೂಜೆಗೆ ಬನ್ನಿ', 'ವಿನೋಬಾದರ್ಶನ', 'ಅಧ್ಯಾತ್ಮ ಕೇಸರಿ'[೫೨] ಕವಿತೆಗಳಲ್ಲಿಯೂ ಕಾಣಬಹುದು. ಒಟ್ಟಾಗಿ ಕವಿತೆಗಳು ಸಾಮರಸ್ಯದ, ಸಹಬಾಳ್ವೆಯ, ಸಹೋದರತೆಯ ಸಂದೇಶವನ್ನು ಪ್ರತಿಬಿಂಬಿಸುತ್ತಾ ಒಂದಾಗುವಿಕೆಯ ಆಶಯವನ್ನು ವ್ಯಕ್ತಪಡಿಸುತ್ತದೆ. ಈ ಭದ್ರ ತಳಪಾಯದೊಂದಿಗೆ ಬಹುಧರ್ಮೀಯ, ಬಹುಜಾತೀಯತೆಯಲ್ಲೂ ಒಂದಾಗಿ ಬಾಳುವ ಮನಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

ಆರ್ಯರೋ, ಅನಾರ್ಯರೋ ಬಿಳಿಯರೋ ಕರಿಯರೋ
ಪೂರ್ವಪಶ್ಚಿಮದವರೊ, ದಕ್ಷಿಣೋತ್ತರದವರೊ
ಅವರವರಿಗವರವರ ನೆಲೆಯುಂಟು; ಕಲೆಯುಂಟು
ಕೂಡುಕಟ್ಟುಗಳುಂಟು, ಬಿಜ್ಜೆ ಬಲ್ಮೆಗಳುಂಟು[೫೩]

ಸಹಜೀವನದಿ ನಡೆದು, ಸಹಜೀವನದಿ ಹಡೆದು, ಮರೆಯುದಿಹವು ದೇವನಲಿ ಸಹಜೀವನವ ಪಡೆದು[೫೪] ಬಾಳುವ ಆಶೆ, ಹಂಬಲವನ್ನು ವ್ಯಕ್ತಪಡಿಸುತ್ತದೆ. ಸ್ವಾವಲಂಬಿಯಾಗಿ, ಅವರವರ ಜೀವಮಾರ್ಗದಲ್ಲಿ ನಡೆಯುವ ಸ್ವಾಭಿಮಾನವನ್ನು ಇಟ್ಟುಕೊಂಡಂತೆ ಲೋಕವನ್ನೇ ಸೆಳೆಯುವ ಸ್ನೇಹಧರ್ಮದ ಜೋಡಿನಲ್ಲಿ ಒಂದಾಗಿ ಬಾಳುವ, ಲೋಕವನ್ನು ಸ್ಥಾಪಿಸುವ ಶಕ್ತಿಶಾಲಿ ಪದಗಳಾಗಿ ಕವಿತೆ ಮೂರಹೊಮ್ಮುತ್ತದೆ.

ಹಿಂದು ಕ್ರೈಸ್ತ ಮುಸಲ್ಮಾನ
ನಮ್ಮೊಳೊಂದೆ ಸ್ವಾಭಿಮಾನ
ಹೋರಾಡುವ ರಣಕಣದಲಿ
ನಲಿದಾಡುವ ಮನೆತನದಲಿ
ಸರ್ವಸುಖದ ಸಮಾನತೆ
ಸ್ನೇಹಧರ್ಮ ಕೋಮಲತೆ
ಹೊಳೆಯುತಿರಲಿ, ಬೆಳೆಯುತಿರಲಿ[೫೫]

ನಾಡನ್ನು ಒಂದುಗೂಡಿಸಲು, ತನ್ನತನವನ್ನು ಸ್ಥಾಪಿಸಲು ಯತ್ನಿಸುವ ನಾಡಿನ ಕರ್ತವ್ಯವೆಂಬಂತೆ; ಧರ್ಮವು ತನ್ನ ಸ್ಥಿತ್ಯಂತರದೊಂದಿಗೂ ಸರ್ವಧರ್ಮ ಸಮಾನತೆಯನ್ನು ತರುವ ಪರಿಯನ್ನು ಕಾಣುತ್ತೇವೆ. ಅನೇಕತೆಯಲ್ಲಿ ಏಕತೆಯನ್ನು ಕಾಣುವ ರಾಷ್ಟ್ರೀಯತೆಯ ಪರಿ ಇದು.

೪.೭. ಐಕ್ಯತೆಗೆ ಪ್ರತಿಕ್ರಿಯೆ

ಸ್ವಾತಂತ್ರ್ಯ ದೊರೆಯುವವರೆಗೆ ಭಾರತ ಬ್ರಿಟಿಷರ ಅಧಿಪತ್ಯದಲ್ಲಿದ್ದು ಅದರಿಂದ ಬಿಡುಗಡೆ ಪಡೆಯುವ ಸಲುವಾಗಿ ಒಂದಾಗಬೇಕಾದ ಅನಿವಾರ್ಯತೆ ಉಂಟಾಯಿತು. ಈ ಒಂದಾಗುವಿಕೆ ಸ್ವಾತಂತ್ರ್ಯದೊಂದಿಗೇ ಛಿದ್ರೀಕರಣಕ್ಕೆ ದಾರಿಮಾಡಿತು. ದೇಶ ಸ್ವತಂತ್ರವಾದರೂ ಐಕ್ಯವಾಗಿರಬೇಕಾದಲ್ಲಿ ಛಿದ್ರಗೊಂಡು ಬಿಡಿಬಿಡಿಯಾದವು. ಇದು ಅನ್ಯದೇಶದ ಮೂಗು ತೂರಿಸುವಿಕೆಗೆ ಅವಕಾಶ ಮಾಡಿಕೊಟ್ಟಿತು. ಆದ್ದರಿಂದ ಸ್ವಾತಂತ್ರ್ಯೋತ್ತರದ ಕವಿತೆಗಳಲ್ಲಿ ವ್ಯಕ್ತವಾಗುವ ಹೋರಾಟದ ಕೆಚ್ಚದೆ ಬ್ರಿಟಿಷ್ ವಸಾಹತುವಿನ ವಿರುದ್ಧವಲ್ಲ; ನೆರೆಯ ರಾಷ್ಟ್ರಗಳಾದ ಚೀನಾ, ಪಾಕಿಸ್ತಾನದ ವಿರೋಧವಾಗಿ, ಬೆನ್ನ ಹಿಂದೆಯೇ ಚೂರಿ ಹಾಕುವ ಆ ದೇಶಗಳ ದಮನಕಾರೀ ಪ್ರವೃತ್ತಿಯನ್ನು ತಡೆಯುವುದು ರಾಷ್ಟ್ರದ ಹಿತದ ದೃಷ್ಟಿಯಿಂದ ಪ್ರಾಮುಖ್ಯವಾದುದು. ಇದು ಛಿದ್ರವಾಗಿದ್ದ ಭಾರತವನ್ನು ಒಂದಾಗಿ ಕಾಣುವ ಪ್ರಕ್ರಿಯೆಗೆ ಪ್ರೇರಣೆ ನೀಡಿದೆ.

ಒಂದೇ ಒಂದೇ ಭಾರತಂ
ಮಂತ್ರವಿದೊಂದೇ ತಾರಕಂ
ಬಿಡಿಬಿಡಿಯೆಂಬುದು ಮಾರಕಂ
ಇಡಿಯಾಗುವುದೇ ಪೂರಕಂ[೫೬]

ವಸಾಹತು ಆಡಳಿತದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಮೊಳಗಿದ ಐಕ್ಯ ಸಂದೇಶದ ಧ್ವನಿ; ನೆರೆರಾಷ್ಟ್ರಗಳ ಆಕ್ರಮಣದ ಸಂದರ್ಭದಲ್ಲಿ ಹಿಂದಿನ ಛಾಪನ್ನೇ ಬಿತ್ತಿದುವು. ದೇಶ ಸ್ವಾತಂತ್ರ್ಯಗಳಿಸಿದರೂ ಚೀನೀಯರ ಆಕ್ರಮಣ ಪದೇ ಪದೇ ಆಗುತ್ತಿದ್ದುದನ್ನು ಕಂಡು

ಚೀನ ಬಂದಿದೆ ನಮ್ಮ ಭರತಮಾತೆಯ ತಲೆಯ
ಶುಭ್ರ ಹಿಮಗಿರಿ ರತ್ನಮಕುಟವನ್ನು
ತುಡುಕಿ ಹಿಡಿದಿದೆ ನಮ್ಮ ಬಿಸಿರಕ್ತ ಕುದಿಯುತಿದೆ
ಕಡಿವ ಬನ್ನಿರಿ ಅವರ ಹಸ್ತವನ್ನು[೫೭]

– ಎಂಬ ವಿಷಾದದ ಜೊತೆಯಲ್ಲೇ, ಅವರನ್ನು ಎದುರಿಸಬೇಕೆಂಬ ಆಕ್ರೋಶವನ್ನು ಕವಿತೆ ಪ್ರಕಟಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿಗಳೆಂಬ ಭೇದವಿಲ್ಲದೆ ನೂರಾರು ಒಡಕಿನಲ್ಲೂ, ಭೇದವನ್ನು ಕಾಣದೆ ಒಮ್ಮನದಿಂದ ದುಡಿದದ್ದನ್ನು ಸ್ಮರಿಸುವುದರೊಂದಿಗೆ ಹಿಂದಿನ ರೀತಿಯಲ್ಲೇ (ವಸಾಹತು ಆಕ್ರಮಣ ಸಂದರ್ಭ) ತಮ್ಮನ್ನು ಹೋರಾಟಕ್ಕೆ ಸಜ್ಜುಗೊಳಿಸುತ್ತಿದೆ.

ತಲೆಮೆಟ್ಟಿ ಪುಡಿಗಟ್ಟಿ ಮುಂದೆ ಸಾಗೋಣ ನಾವು
ವೈರಿಗಳ ಸದೆಬಡಿದು ಮುನ್ನುಗ್ಗಿ ನಮಗಿಹುದು ಗೆಲವು
ಕುಹಕ ವಂಚನೆಗಳ ನಿರ್ನಾಮ ಮಾಡೋಣ ನಾವು
ಆಕ್ರಮಣ ಅನ್ಯಾಯಗಳ ಅಂತ್ಯಗೊಳಿಸೋಣ ನಾವು[೫೮]

ಎಂಬ ಕೆಚ್ಚದೆ, ಆತ್ಮವಿಶ್ವಾಸ ಪ್ರಕಟಿಸುತ್ತಾ ಮುನ್ನುಗ್ಗಬೇಕಾದ ಅನಿವಾರ್ಯತೆಯನ್ನು ಕವಿತೆ ಅಭಿವ್ಯಕ್ತಿಸುತ್ತದೆ. ನೆರೆಯ ರಾಷ್ಟ್ರಗಳೊಂದಿಗೆ ಸೌಹಾರ್ದ ಭಾವನೆಯಿಂದಿರಬೇಕು. ಆದರೆ ಚೀನಾ, ಪಾಕಿಸ್ತಾನಗಳು ಅವನ್ನೆಲ್ಲಾ ಬದಿಗೊತ್ತಿ ಹಗೆತನವನ್ನು ಸಾಧಿಸಿದುವು. ಆ ದೇಶಗಳ ಕಪಟ, ಅನ್ಯಾಯಕ್ಕೆ ತೆರೆಯಾಗಬೇಕು ಎನ್ನುವ ಕವಿತೆ ಯೋಧರನ್ನೂ, ರೈತರನ್ನೂ ಸಮಾನ ಭಾವನೆಯಿಂದ ಕಾಣುವ ಮನಸ್ಥಿತಿಯುಂಟಾಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ರೈತರ ಶ್ರಮದಾನ, ಯೋಧನ ಬಲಿದಾನವನ್ನು ಸಮಾನತೆಯಿಂದ ಕಾಣಬೇಕೆನ್ನುವ ಆಶಯವು ದೇಶದಲ್ಲಿ; ಜಾತಿ, ಮತ,

ಭೇದಗಳು ತೊಲಗಿ ಐಕ್ಯ ನೆಲೆಯಾಗಬೇಕು. ಆ ಐಕ್ಯದಲ್ಲಿ ನಾಡಿನ ಜನರ ಬಾಳ್ವೆಯು ಸಾಕಾರಗೊಳ್ಳಬೇಕು ಎಂಬ ವಿಶಾಲ ಮನೋಸ್ಥಿತಿಯೂ ಅಡಗಿದೆ. ಇಲ್ಲಿನ ಕವಿಗಳಿಗೆ ರಾಷ್ಟ್ರ (ಭಾರತ)ವು ಜನ್ಮನೀಡಿದ ತಾಯ್ನಾಡೇ ಆಗಿದೆ. ಆದ್ದರಿಂದ ಅನ್ಯರ ಆಕ್ರಮಣದಿಂದ ಆಕೆಯನ್ನು ರಕ್ಷಿಸಲು ಸದಾ ಎಲ್ಲರೂ ಒಮ್ಮನದಿಂದ ಬಾಳಬೇಕು ಎಂದು ಹೇಳುವ ಕವಿತೆಗಳಲ್ಲಿ ಗುರುತಿಸಬಹುದಾದದ್ದು ರಾಷ್ಟ್ರೀಯತೆಯ ಆಶಯವನ್ನೇ.

ತಾಯ್ನಾಡ ನುಡಿಕಾಯೆ, ಗಡಿಕಾಯೆ
ವೀರಯೋಧರು ಒಂದಾಗಿ ಬನ್ನಿ
ತಾಯ್ನಾಡ ಅಭಿಮಾನ ಗೌರವವ ಕಾಯೆ
ವೀರ ತರುಣರು ಎದ್ದೇಳಿ ಬನ್ನಿ[೫೯]

ಎಂಬ ಆತ್ಮವಿಶ್ವಾಸವನ್ನು ತುಂಬುತ್ತದೆ. 'ರಾಷ್ಟ್ರರಕ್ಷಣೆ', 'ದೇಶ ಉಳಿದರೆ ನಮ್ಮುಳಿವು' ಎಂಬೀ ಕವನಗಳೂ ಕೂಡಾ ಇದೇ ಆಶಯವನ್ನು ವ್ಯಕ್ತಪಡಿಸುತ್ತವೆ.[೬೦]

ಸ್ವಾತಂತ್ರ್ಯೋತ್ತರ ಕವಿತೆಗಳಲ್ಲಿ ಗುರುತಿಸಬಹುದಾದ ಬಹುಮುಖ್ಯವಾದ ಇನ್ನೊಂದು ಅಂಶವೆಂದರೆ ಗಾಂಧೀವಾದಿ, ತಿಲಕ್‌ವಾದೀ ರಾಷ್ಟ್ರೀಯತೆಯ ಪ್ರಭಾವ. ದೇಶಕ್ಕೆ ಆಪತ್ತು ಬರುವ, ಸಂದರ್ಭದಲ್ಲಿ; ಅದನ್ನು ರಕ್ಷಿಸಲು ದೇಶದ ಜನತೆ ಅನುಸರಿಸುವ ಮಾರ್ಗವನ್ನು ಕುರಿತ ಅಭಿವ್ಯಕ್ತಿಯಲ್ಲಿ ಈ ಮೊದಲು ಸೂಚಿಸಿದ ಗಾಂಧೀ, ತಿಲಕ್ ವಾದದ ಪ್ರಭಾವವನ್ನು ಈ ರೀತಿಯಾಗಿ ಗುರುತಿಸಬಹುದು. ಪರಕೀಯರಿಂದಾಗುವ ದಬ್ಬಾಳಿಕೆಯಿಂದ ತಮ್ಮನ್ನು ರಕ್ಷಿಸಲು, ಅಗತ್ಯವಿದ್ದಲ್ಲಿ ಹೋರಾಟಕ್ಕಿಳಿಯಲೂ ಅಥವಾ ಗಾಂಧೀ, ಬುದ್ಧರ ಅಹಿಂಸಾಮಾರ್ಗವನ್ನು ಅನುಸರಿಸುವ ಶಾಂತಿಪ್ರಿಯರೂ ತಾವಾಗಬಲ್ಲೆವು ಎಂಬ ರಾಷ್ಟ್ರೀಯತೆ ಅಭಿಮಾನ ಪೂರ್ವಕವಾಗಿ ಇಲ್ಲಿ ವ್ಯಕ್ತಗೊಳ್ಳುತ್ತದೆ.

ಬುದ್ಧ-ಗಾಂಧಿಯ ದೇಶದವರು ನೀತಿಪ್ರಿಯರು,
ನಾವಹಿಂಸಾವಾದಿಗಳು ಶಾಂತರು
ಜಗಳ ಗಂಟಿಗಳೆದ್ದು ನಮ್ಮನ್ನು ಕೆಣಕಿದರೆ
ಆಗುವೆವು ನಾವೆಲ್ಲ ನರಸಿಂಹರು[೬೧]

ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಅನ್ಯಾಕ್ರಮಣದ ವಿರುದ್ಧ ದನಿಯೆತ್ತುವ ಸಂದರ್ಭದಲ್ಲಿ ಮಾರ್ಗಗಳು ಭಿನ್ನವಾದರೂ (ಅಹಿಂಸಾ/ಹಿಂಸಾ) ಅಂತಿಮವಾದ ಗುರಿ ದೇಶದ/ರಾಷ್ಟ್ರದ ಅಸ್ಮಿತೆಯನ್ನು ಕಾಯ್ದುಕೊಳ್ಳುವುದು ಅಥವಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ಸಂದರ್ಭದಲ್ಲಿ ಅದನ್ನು

ಪ್ರತಿಭಟಿಸುವುದು. ಆ ಮೂಲಕ ತಾವೆಲ್ಲ ಒಂದು ಎಂಬ ಐಕ್ಯದ ಪ್ರತಿಷ್ಠಾಪಿಸುವಿಕೆ ಕಂಡುಬರುತ್ತದೆ. 'ಜೈ ಜವಾನ್ ಜೈ ಕಿಸಾನ್'[೬೨] ಕವಿತೆಯಲ್ಲಿಯೂ ಏಕರೂಪವನ್ನು ತಾಳಿರುವುದು ಗಮನಾರ್ಹ ಸಂಗತಿ.

ಹಲವು ಮತ, ಭಾಷೆಗಳಿದ್ದರೂ, ಅವೆಲ್ಲಾ ಕೇವಲ ಭೌತಿಕ ಭೇದಗಳು. ಆ ಭೇದಗಳಿದ್ದರೂ, ಅವೆಲ್ಲವನ್ನೂ ಬಿಟ್ಟು ಒಂದಾಗಿ, ರಕ್ಷಣೆಯನ್ನು ಮಾಡಲು ಉತ್ಸುಕತೆಯನ್ನು ತೋರುವ ಕವಿತೆಗಳು

ಹಿಂದೂ ಮುಸಲ್ಮಾನ ಕ್ರೈಸ್ತರೊಂದೆಲ್ಲ
ನುಡಿಯಗಡಿ ನಮಗಿಲ್ಲ ಮಾತ್ಸರ್ಯವಿಲ್ಲ
ಎಲ್ಲ ರಾಜ್ಯವ ಬಳಸಿ ಹರಿಯುತಿಹೆವೆಲ್ಲ
ನೀವು ಬಿತ್ತುವ ಬತ್ತರಾಗಿ ಜೋಳಗಳ
ಮಾಡುವೆವು ಮುತ್ತು-ಮಾಣಿಕ್ಯ ರಾಶಿಗಳ
ಬನ್ನಿ ಮಕ್ಕಳೆ ಬನ್ನಿ ಒಂದಾಗಿ ಬನ್ನಿ[೬೩]

'ನಾಡು' ಅಥವಾ 'ರಾಷ್ಟ್ರ' ಕಟ್ಟುವ ಕಾರ್ಯದಲ್ಲಿ ಪರಸ್ಪರ ದ್ವೇಷ ವೈಷಮ್ಯಗಳಿದ್ದಾಗ ಅಲ್ಲಿ ಬಿರುಕು ಉಂಟಾಗಬಹುದು. ಆದ್ದರಿಂದ ಮನುಷ್ಯ ಮನುಷ್ಯರ ನಡುವಿನ ಸಂಬಂಧದ ಕೊಂಡಿ ಕಳಚದೇ ಇರಲು ಒಗ್ಗಟ್ಟು ಎನ್ನುವುದು ಪ್ರಮುಖ ಕವಚವಾಗಿರಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸುವ ಕವಿತೆ ಸ್ವಾತಂತ್ರ್ಯೋತ್ತರ ಕಾಲದಲ್ಲೂ ಐಕ್ಯ ಗಾನವನ್ನು ಒಮ್ಮನಸ್ಸಿನಿಂದ ಹಾಡಬೇಕೆಂಬ ಪ್ರೋತ್ಸಾಹವನ್ನು ನೀಡುವುದರೊಂದಿಗೆ, ಅದನ್ನು ಉಳಿಸಬೇಕೆಂಬ ನಿವೇದನೆಯನ್ನೂ ಮಾಡುತ್ತದೆ. ಮಾತ್ರವಲ್ಲ ವೀರತ್ವದಿಂದಲೂ, ಸಹಬಾಳ್ವೆಯಿಂದ, ತೇಜಸ್ಸಿನಿಂದ ಕೂಡಿರುವ ಭವ್ಯ ಭಾರತವನ್ನು ಕಟ್ಟಲು

ಒಂದಾಗಿ ಕೂಡುವೆವು
ಒಂದಾಗಿ ಊಡುವೆವು
ಒಂದಾಗಿ ಸಾಹಸವ
ಮಾಡುವೆವು ನೀಡುವೆವು[೬೪]

ಸ್ವಾತಂತ್ರ್ಯವನ್ನು ಗಳಿಸಲು ಪ್ರಭುತ್ವವನ್ನು ನಿಯಂತ್ರಿಸಲು ಮುನ್ನುಗ್ಗುವೆವು ಎಂಬ ದೃಢ ನಿರ್ಧಾರವನ್ನು ಅಭಿವ್ಯಕ್ತಿಸುತ್ತದೆ. ಸ್ವಾತಂತ್ರ್ಯೋತ್ತರದಲ್ಲೂ ದಮನಕಾರೀ ಪ್ರವೃತ್ತಿಗಳನ್ನು ವಿರೋಧಿಸಿ ತಮ್ಮತನವನ್ನು ಉಳಿಸುವ ದೇಶದೊಳಗಿನ ಸ್ವಾತಂತ್ರ್ಯಕ್ಕಾಗಿ, ಏಕತೆಗಾಗಿ ಕವಿತೆಗಳು ಪ್ರತಿಕ್ರಿಯಿಸಿರುವುದು ಗಮನಾರ್ಹ. ಭಾರತದ ಏಕತೆಯ ಶಕ್ತಿಯು ರಾಷ್ಟ್ರವನ್ನು ಉಳಿಸುವುದಕ್ಕೆ

ಬೇಕಾದ ಅಸ್ತ್ರವಾಗಿ ಮುಂದೆ ನಿಲ್ಲಬೇಕು. ಪಡೆದ ಸ್ವಾತಂತ್ರ್ಯವನ್ನು ಉಳಿಸಲು ಮುಂದಾಗಿ ಎಂಬ ಕಹಳೆಯ ಕೂಗು ಎಲ್ಲರಲ್ಲಿಯೂ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿತು.

ರಾಷ್ಟ್ರ ಉಳಿದಾಗ ಉಳಿವು
ರಾಷ್ಟ್ರ ಅಳಿದಾಗ ಅಳಿವು
ಎಂಬಂಥ ಧೀರ ನಿಲುವು
ತಾಳಿರೈ ಭಾರತದ ಕಲಿಗಳೇ - ಎದ್ದೇಳಿ ಏಳಿ॥[೬೨]

ಎಂಬ ದೃಢ ನಿರ್ಧಾರವನ್ನು ವ್ಯಕ್ತಪಡಿಸುತ್ತದೆ. ಸ್ವಾತಂತ್ರ್ಯೋತ್ತರ ದಕ್ಷಿಣ ಕನ್ನಡ ಕವಿತೆಗಳ ರೀತಿಯೂ ಕೂಡಾ ಪ್ರತಿಭಟನಾತ್ಮಕವಾಗಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತು ವಿರೋಧವಾಗಿ ಸೆಟೆದೆದ್ದು ಸ್ವಾತಂತ್ರ್ಯ ಗಳಿಸುವ ಹಂಬಲವಿದ್ದರೆ; ಸ್ವಾತಂತ್ರ್ಯೋತ್ತರದಲ್ಲಿ ದೇಶದೊಳಗಿನ ಆಂತರಿಕ ಸ್ವಾತಂತ್ರ್ಯವನ್ನು ಗಳಿಸುವ ಕಾಳಜಿಯಾಗಿ ಕವಿತೆಗಳ ಪ್ರತಿಕ್ರಿಯೆ ಮೂಡಿಬಂದಿವೆ. ಮನುಷ್ಯ ಸಂಬಂಧಗಳ ಬೆಸುಗೆಯು ಕಳಚಿದಾಗ ಅಸ್ಥಿರತೆ ಏರ್ಪಟ್ಟು ಪ್ರತಿಬಂಧವೇರ್ಪಡುತ್ತದೆ. ಅದರಿಂದ ಮುಕ್ತಿ ಪಡೆಯಲು ಆ ಬೆಸುಗೆಯು ದೃಢವಾಗಿರಬೇಕು. ಕನ್ನಡಿಗರಾದ ನಾವೆಲ್ಲ ಆ ದೃಢತೆಗೆ ಒಮ್ಮನದಿಂದ ಬಾಳಬೇಕು ಎಂಬ ಐಕ್ಯ ಸಂದೇಶದೊಂದಿಗೆ ತಮ್ಮ ಪ್ರತಿಕ್ರಿಯೆಯನ್ನು ಕವಿತೆಗಳು ವ್ಯಕ್ತಪಡಿಸುತ್ತವೆ.

೪.೮. ರಾಜಕೀಯ ಪ್ರತಿನಿಧೀಕರಣ ಹಾಗೂ ಆರ್ಥಿಕ ಸಬಲೀಕರಣ

ಸ್ವಾತಂತ್ರ್ಯೋತ್ತರ ಘಟ್ಟದಲ್ಲಿ ಸಮಾಜದಲ್ಲಿ ಆಗಿರುವ ಬದಲಾವಣೆಗಳು ರಾಜಕೀಯದ ಭಿನ್ನ ಆಯಾಮಗಳನ್ನು ತೆರೆದಿಡುತ್ತವೆ. ವಸಾಹತುಗಳ ಅಧೀನದಿಂದ ಸ್ವತಂತ್ರರಾದರೂ, ದೇಶದೊಳಗೇ ಅತಂತ್ರವಾಗಿರಬೇಕಾದ ಸ್ಥಿತಿಯು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ರಾಜಕೀಯದ ವಿಚಿತ್ರ ಮುಖವಾಡಗಳನ್ನು ಗುರುತಿಸುವುದರ ಮೂಲಕ ಸಾಮಾಜಿಕ ವ್ಯವಸ್ಥೆಯಲ್ಲಿ ಆಗಿರುವ ಪರಿಣಾಮಗಳನ್ನು ಗುರುತಿಸುವಲ್ಲಿ ದಕ್ಷಿಣ ಕನ್ನಡದ ಕವಿತೆಗಳು ಸಫಲವಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಶಾಂತಿ, ಏಕತೆ, ಭ್ರಾತೃತ್ವವನ್ನು ಕುಟ್ಟಿ ಕೆಡಹಲು ಬರುವ ರಾಜಕೀಯ ವೃದ್ಧರು, ಹದಿನೆಂಟು ಹರೆಯದ ಬಂಟರಂತೆ ಮುನ್ನುಗ್ಗುವ ದೃಶ್ಯವನ್ನು ಅಭಿವ್ಯಕ್ತಿಸುವ ಕವಿತೆಯು ರಾಜಕೀಯದ, ರಾಜಕಾರಣದ ಅಸ್ಥಿರತೆಯನ್ನು ಅಭಿವ್ಯಕ್ತಿಸುತ್ತದೆ.

ಎಡವು ಅಲ್ಲ; ಬಲವು ಅಲ್ಲ
ಗಾಂಧಿ ಅಲ್ಲ; ಮಾರ್ಕ್ಸ್ ಅಲ್ಲ

ಅಹಿಂಸೆಯಲ್ಲ; ಹಿಂಸೆಯಲ್ಲ
ಇಹವಿಲ್ಲದ ಪರವೊಲ್ಲದ
ಅನುಕೂಲ ಸಿಂಧು ರಚಿಸುತಿರುವ ಅವರ್ಣ್ಯ ಭೂಪರು[೬೬]

ಇತ್ತೀಚಿನ ದಿನಗಳಲ್ಲಿ ಸಂದರ್ಭಕ್ಕೆ ತಕ್ಕ ಬದಲಾಗುತ್ತಿರುವ ರಾಜಕೀಯ ವ್ಯವಸ್ಥೆಯ ಕುರಿತ ವಿಡಂಬನೆಯನ್ನು ಈ ಕವನವು ಮಾಡುತ್ತದೆ. ಭಾಷಿಕ, ಪ್ರಾದೇಶಿಕ, ಸಾಂಸ್ಕೃತಿಕ, ಸಾಮಾಜಿಕವಾಗಿ ತನ್ನ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನವು ರಾಷ್ಟ್ರೀಯತೆಯ ಹಿಂದಿರುವಂತೆ; ರಾಜಕೀಯವಾಗಿಯೂ ತಾನು, ತನ್ನದು ಎಂಬುದನ್ನು ಅದು ಸ್ಥಾಪಿಸುತ್ತಿರುತ್ತದೆ. ಈ ಸ್ಥಾಪಿಸುವಿಕೆ ಸಂದರ್ಭದಲ್ಲಿ ಸುತ್ತಲಿನ ರಾಜಕೀಯ ವ್ಯವಸ್ಥೆಯಲ್ಲಿ ಆಗುತ್ತಿರುವ ಪರಿವರ್ತನೆಗಳತ್ತ ತನ್ನ ನೋಟವನ್ನು ಕವಿತೆ ಬೀರುತ್ತಲೇ ಇರುತ್ತದೆ. ಈ ಸಂದರ್ಭದಲ್ಲಿ ರಾಜಕೀಯವು ಗಳಿಗೆಗೊಂದು ಬಣ್ಣ ತಳೆಯುವ ಗೋಸುಂಬೆಯಂತೆ ಕಾಣಿಸುತ್ತದೆ. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸನ್ನಿವೇಶವು ಭೀತಿಯಿಂದ ಉಸಿರು ಬಿಗಿಹಿಡಿದು ಬದುಕಬೇಕಾದ ವಾಸ್ತವತೆಯನ್ನು ಕವಿತೆ ಅಭಿವ್ಯಕ್ತಿಸುತ್ತದೆ. ''ಗೋಸುಂಬೆ ರಾಜಕೀಯವು ಮನುಷ್ಯತ್ವವನ್ನು, ಮಾನವನ ಪ್ರಾಮಾಣಿಕ ಕಾಳಜಿಯನ್ನು ವ್ಯಕ್ತಿತ್ವವನ್ನು ಹೇಗೆ ನಾಶಮಾಡಬಲ್ಲುದು''[೬೭] ಎಂಬುದನ್ನು ಕವಿತೆ ಚರ್ಚಿಸುತ್ತದೆ ಹಾಗೂ ವಿಡಂಬಿಸುತ್ತದೆ.

ದೇಶಕ್ಕೆ ಈಗಿರುವ ದಾಸ್ಯದ ಸಂಕೋಲೆ ಎಂದರೆ; ವಾನರನಂತೆ, ಒಂದೆಡೆಯಿಂದ ಇನ್ನೊಂದೆಡೆಗೆ ಲಾಗಹಾಕುವ ರಾಜಕೀಯ ನಾಯಕರದ್ದು. ತಮ್ಮ ಕಾರ್ಯಸಾಧನೆಯವರೆಗೆ ಜೊತೆಯಲ್ಲಿದ್ದು ವಾಸ್ತವವನ್ನು ಮರೆಯುವ ರಾಜಕೀಯದ ವಿಡಂಬನೆ ಕವಿತೆಗಳಲ್ಲಿ ಮೂಡಿ ಬಂದಿರುವುದು ರಾಷ್ಟ್ರೀಯತೆಯ ಕುರುಹೇ ಆಗಿದೆ.[೬೮] 'ದೆಹಲಿಯಲ್ಲಿ'[೬೯] ಕವನವು ಕೂಡಾ ಇದೇ ಆಶಯವನ್ನು ವ್ಯಕ್ತಪಡಿಸುತ್ತದೆ.

ದೇಶವಿಭಜನೆಯ ಬಳಿಕ ಭಾರತ ಎದುರಿಸಬೇಕಾಗಿ ಬಂದ ರಾಜಕೀಯ ಬಿಕ್ಕಟ್ಟು ಎಂದರೆ ಗಡಿಪ್ರದೇಶಗಳಲ್ಲಿ ನೆರೆಯ ರಾಜ್ಯಗಳ ಆಕ್ರಮಣ. ಸ್ನೇಹಿತನಂತೆ ಜೊತೆ ಸೇರಿ ಬೆನ್ನ ಹಿಂದಿನಿಂದ ಚೂರಿಹಾಕಿದ ಚೀನಾ, ಪಾಕಿಸ್ಥಾನಗಳನ್ನು ಕುರಿತು ಉಗ್ರವಾದ ಆಕ್ರೋಶ ವ್ಯಕ್ತವಾಗುವ ಕವಿತೆಯಲ್ಲಿ ತಮ್ಮ ದೇಶವನ್ನು ಉಳಿಸಲು ಪ್ರಯತ್ನಿಸುವ ಅತಿಯಾದ ಹಂಬಲ ವ್ಯಕ್ತವಾಗುತ್ತದೆ. ಭಾರತವನ್ನು ಬಿಟ್ಟು ತೊಲಗಬೇಕು ಎನ್ನುವಲ್ಲಿ ಯಾವುದೇ ರೀತಿಯ ಔದಾರ್ಯದಿಂದ ವರ್ತಿಸದೆ; ಅದು ಅನಿವಾರ್ಯವೆಂಬುದನ್ನು ಕವಿತೆ ಎಚ್ಚರಿಸುತ್ತದೆ.

ನಮ್ಮ ನೆಲವನು ಬಿಟ್ಟು ತೊಲಗಿರಿ

ಚೀನ ದೇಶದ ದೈತ್ಯರೇ
ಕ್ರೂರ ಕಪಟದ ಸೂತ್ರಧಾರರೆ
ಬಿಟ್ಟು ನಡೆಯಿರಿ ಧೂರ್ತರೆ[೨೦]

ಎಂದು ಚೀನಾವನ್ನು ಎಚ್ಚರಿಸುತ್ತಾ ಭಾರತದ ರಾಜಕೀಯದಲ್ಲಿ ಅನ್ಯಾಡಳಿತದ ಪ್ರವೇಶವನ್ನು ಪರೋಕ್ಷವಾಗಿ ವಿರೋಧಿಸುತ್ತಾ ,

ಭಾರತಭಾಗ ಜಮ್ಮುಕಾಶ್ಮೀರ
ನಿನಗೇತಕೆ ಅದರ ವಿಚಾರ?
ಕಾಶ್ಮೀರ ನುಂಗುವ ನಿನ್ನ ದುರಾಶೆ
ಅಳಿಯುತ ಬರಲಿದೆ ಕಡುನಿರಾಶೆ
ಗರ್ವವ ಬಿಡು ವಿವೇಕ ತಾಳು, ಓ - ಪಾಕಿಸ್ಥಾನ
ಗರ್ವದಿ ನಡೆದರೆ ಬರುವುದು ಕಷ್ಟದ ಅವಸಾನ[೨೧]

ಪಾಕಿಸ್ಥಾನದ ನಿರಂಕುಶಾಧಿಕಾರಕ್ಕೆ ಧಿಕ್ಕಾರ ಹೇಳುವ ಕವಿತೆ, ಭಾರತದ ಆಡಳಿತದಲ್ಲಿ ಅದರ ಮೋಸದ ಒಳಪ್ರವೇಶಿಸುವಿಕೆಯನ್ನು ವಿರೋಧಿಸುತ್ತದೆ. ''ದುಷ್ಟ ಪಾಕಿಸ್ಥಾನಿ ರಕ್ತಬೀಜಾಸುರರು ಮುನ್ನುಗ್ಗಿ ಮೇಲೇರಿ ಬರುತಿರುವರು. ಅವರ ಸೊಕ್ಕನು ಮುಕ್ಕಿ ಹುಟ್ಟಡಗಿಸಿಡಲೆಮ್ಮ ಧೀರ ಸೈನಿಕ ಶಕ್ತಿ ರಕ್ತೇಶ್ವರಿ''[೨೨] ಎಂಬಲ್ಲಿ ಈ ಮೊದಲು ಪರಕೀಯಾಡಳಿತದಿಂದ ಅನುಭವಿಸಿದ ನೋವನ್ನು ಮರೆಯದ ಜನತೆ; ಮುಂದೊಮ್ಮೆ ಆ ಅನುಭವ ಮರುಕಳಿಸಿದರೆ ತಾವು ಎದೆಗುಂದುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾ, ಆತ್ಮವಿಶ್ವಾಸವನ್ನೂ, ಧೈರ್ಯವನ್ನೂ ಅಭಿವ್ಯಕ್ತಿಸುತ್ತದೆ. ಆ ಮೂಲಕ ರಾಷ್ಟ್ರಾಭಿಮಾನದ ಔನತ್ಯಕ್ಕೇರುತ್ತದೆ.

ದೇಶದೊಳಗಿನ ರಾಜಕೀಯ ವರ್ತನೆಯ ನಿರೂಪಣೆಯನ್ನು ಬದಿಗೆ ಸರಿಸದ ಕವಿತೆ ಭೂಮಿಯ ನೈಸರ್ಗಿಕ ಪ್ರಕ್ರಿಯೆಯ ಮೂಲಕ ಸಂಭವಿಸುವ ಗ್ರಹಣದ ರೂಪಕದೊಂದಿಗೆ ವಿಡಂಬಿಸುವ ಪ್ರಯತ್ನ ಮಾಡುತ್ತದೆ.[೨೩] ಈ ರೀತಿಯ ರಾಜಕೀಯ ಪ್ರಕ್ರಿಯೆಗೆ ತಮ್ಮ ವಾದವನ್ನು ಶಕ್ತಗೊಳಿಸುವುದಲ್ಲದೆ; ತಮ್ಮನ್ನು ಆರ್ಥಿಕವಾಗಿ ಸುದೃಢರನ್ನಾಗಿ ಮಾಡುವುದು; ಆ ಮೂಲಕ ರಾಷ್ಟ್ರವನ್ನು ಸಮರ್ಥವಾಗಿ ಕಟ್ಟಿ ಮುನ್ನಡೆಸುವುದಕ್ಕೆ ದಕ್ಷಿಣ ಕನ್ನಡದ ಕವಿತೆಗಳು ಪ್ರೇರಣೆಯನ್ನು ನೀಡುತ್ತವೆ.

ನಮ್ಮದೇ ಹೊಲ ಉತ್ತೆವು
ನಿಮ್ಮ ನೊಗ ಹೊತ್ತೆವು ದುಡಿದೆವು ಹಸಿರು

ಪಾಣೆಯ ಕೊಟ್ಟು ಮಣಿದೆವು
ನಡುಬಗ್ಗಿ ದಣಿದೆವು
ಕೊನೆಗೊಮ್ಮೆ ಸಟಕ್ಕನೆ ನಿಮಿರಿ
ಒಜ್ಜೆಗಳ ಕೊಡವಿದೆವು[೭೪] - ಎಂದು ಹೇಳುತ್ತಲೇ ತಮ್ಮನ್ನು ಸಿದ್ಧಪಡಿಸುತ್ತಲೇ "ನಮ್ಮದೇ ನೆಲದಲ್ಲಿ ಬೆವರಿಳಿಸಿ ದುಡಿಯುವೆವು" ಎಂಬ ಸೊಲ್ಲಿನೊಂದಿಗೆ ಕೊನೆಗೊಂಡು ಸ್ವಾತಂತ್ರ್ಯೋತ್ತರ ಕಾಲದ ಆರ್ಥಿಕ ಪರಿವರ್ತನೆಯತ್ತ ಸೂಕ್ಷ್ಮ ದೃಷ್ಟಿಯನ್ನು ಹರಿಸುತ್ತದೆ. ದೇಶದ ಬೆನ್ನೆಲುಬಾದ ರೈತರು ಅಸಮಾನತೆಯಿಂದ ಕೊರಗುತ್ತಿದ್ದಾರೆ. ಅವರ ಉದ್ಧಾರವಾದಾಗ ಮಾತ್ರ ದೇಶೋದ್ಧಾರವೂ ಸಾಧ್ಯ ಎಂಬ ವಿಶಾಲ ದೃಷ್ಟಿಕೋನವನ್ನು ದಕ್ಷಿಣ ಕನ್ನಡದ ಸ್ವಾತಂತ್ರ್ಯೋತ್ತರ ಕವಿತೆಗಳಲ್ಲಿ ಕಾಣಬಹುದು.

ಎಂದಾಗುವುದೋ ರಾಷ್ಟ್ರೋತ್ಕ್ರಾಂತಿ
ಎಂದಿಗೆ ಬರುವುದೊ ಸಮತಾ ಶಾಂತಿ
ಅಂದೇ ನಮ್ಮೀ ನಾಡಿಗೆ ಬೆಳಕು
ಬಂದೇ ಬರುವುದು ಹೊಸ ಥಳಕು
ಅಷ್ಟರವರೆಗೆ ಸುತ್ತಲು ಮುತ್ತಲು
ಸುತ್ತಿದೆ ಮುತ್ತಿದೆ ಬರಿ ಕಗ್ಗತ್ತಲು[೭೫]

ಸ್ವ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ನಾವು ಸುದೃಢರಾಗಬೇಕು. ಪರಕೀಯಾಡಳಿತದ ವಿರುದ್ಧ ಬಾಹ್ಯವಾಗಿ ಬಲಾಢ್ಯವಾಗುವಂತೆ; ನಮ್ಮ ಅಂತರ್ ಮಾನಸದಲ್ಲೂ ಆ ದೃಢತೆ ಪುಟಿಯಬೇಕು. ಹಾಗಿದ್ದಾಗ ಮಾತ್ರ ಆಂತರಿಕ ಹಾಗೂ ಬಾಹ್ಯಶಕ್ತಿಗಳ ಆಕ್ರಮಣದಿಂದ ನಾವು ಉಳಿಯಲು ಸಾಧ್ಯ.

"ಏನಾದರೂ ಮಾಡುತಿರು ತಮ್ಮ; ಸುಮ್ಮನೆ ಕೂತು
ನೆಲಕೆ ನೀ ಬರಿ ಭಾರವಾಗಬೇಡವೊ; ನೆಲದ
ಭಾರ ಕಳೆಯಲು ಹೀಗೆ ಮಾಡು ನೀ ಸಾರಿ ಸಹಜ"[೭೬]

ದೇಶದ ಸ್ವಾತಂತ್ರ್ಯಕ್ಕಾಗಿ ಪರಕೀಯಾಡಳಿತದ ವಿರುದ್ಧ ಚಳುವಳಿ, ಹೋರಾಟ, ವಿರೋಧವನ್ನು ವ್ಯಕ್ತಪಡಿಸುತ್ತಲೇ ಇರಬೇಕಾಗುತ್ತದೆ. ಆದರೆ ವ್ಯಕ್ತಿಯ ಅಂತರಂಗದೊಳಗೊಳಗೇ ಕುದಿದು ನಡೆಸುವ ದಂಗೆ, ಆಂತರಿಕವಾಗಿ ತನ್ನನ್ನು ಸುದೃಡಪಡಿಸುವ ಅಸ್ಮಿತೆಯನ್ನು ಸ್ಥಾಪಿಸುವ ಹಂಬಲವನ್ನು ಸೂಚಿಸುತ್ತದೆ. 'ಸ್ವಾತಂತ್ರ್ಯಕ್ಕಾಗಿ ಹೋರಾಡು, ಇಲ್ಲವೇ ಮಡಿ' ಎಂಬ ಸ್ವಾತಂತ್ರ್ಯ ಪೂರ್ವದ ಆಶಯವನ್ನು ವ್ಯಕ್ತಪಡಿಸುತ್ತಾ ಪೌರುಷವನ್ನು ತೋರಲಾಗದಿದ್ದರೆ ಮಡಿ ಎಂಬ ಅಂಶವನ್ನು

ಕವಿತೆ ನೇರವಾಗಿ ಬಿಂಬಿಸುತ್ತದೆ. ದೇಶದಲ್ಲೆಲ್ಲೂ ಆಕ್ರಮಿಸಿರುವ ಆಧುನಿಕತೆಯ ಭೀತಿಯನ್ನು ವ್ಯಕ್ತಪಡಿಸುತ್ತಾ ಆ ಭೀತಿಯೊಂದಿಗೇ ಅದನ್ನು ಎದುರುಗೊಳ್ಳಬೇಕಾದ ಅಂಶವನ್ನು ಪ್ರತಿಪಾದಿಸುತ್ತವೆ. ಇದು ಒಂದು ರೀತಿಯಲ್ಲಿ; ಅನುಸಂಧಾನ ಪ್ರಕ್ರಿಯೆ. (ವಿವರಣೆ ೨ನೇ ಅಧ್ಯಾಯ). ಈ ಅನುಸಂಧಾನದ ಪ್ರಕ್ರಿಯೆಯೊಂದಿಗೆ ದಕ್ಷಿಣ ಕನ್ನಡದ ಜನತೆ ಸ್ವಾತಂತ್ರ್ಯಗಳಿಸುವುದಕ್ಕೆ ಮಾಡಿದ ಪ್ರಯತ್ನದ ಹಿನ್ನೆಲೆ, ಅವರ ಅಭಿರುಚಿ, ಮಹಿಳಾ ಸಬಲೀಕರಣ ಇವೇ ಮುಂತಾದ ಅಂಶಗಳ ವಿಶಿಷ್ಟ ಮನೋಭಾವವನ್ನು ಅಭಿವ್ಯಕ್ತಿಸುತ್ತವೆ. ಸ್ವಾತಂತ್ರ್ಯೋತ್ತರ ಕಾಲಘಟ್ಟವು ಒಂದರ್ಥದಲ್ಲಿ ದಕ್ಷಿಣ ಕನ್ನಡದ ಕವಿಗಳಿಗೆ ತಮ್ಮ ಕವಿತೆಗಳ ಮೂಲಕ ಹೊಸ ಎಚ್ಚರವನ್ನು ಪ್ರತಿಪಾದಿಸಲು ವಿಶಾಲವಾದ ವೇದಿಕೆಯಾಗಿ ಕಂಡುಬರುತ್ತದೆ. ಸಮಾಜದ ಸ್ವಾಭಿಮುಖತೆಗೆ, ಮನುಷ್ಯನ ಸ್ವಾಭಿಮಾನಕ್ಕೆ, ಅರಿವನ್ನು ವಿಸ್ತರಿಸಿಕೊಂಡು ಬದುಕಬೇಕಾದ ಮನೋಭಾವಕ್ಕೆ, ಪ್ರೇರಣೆಯನ್ನು ನೀಡುತ್ತಲೆ ರಾಷ್ಟ್ರ, ದೇಶ, ನಾಡು, ನುಡಿಗಳ ಕುರಿತ ಕಾಳಜಿಯನ್ನು ಪ್ರಕಟಿಸುವ ಆವೇಶವನ್ನು ಗಮನಿಸಬಹುದಾಗಿದೆ. ಇವು ರಾಷ್ಟ್ರೀಯತೆಯನ್ನು ತನ್ನೆಲ್ಲ ಅಂತರ್‌ದ್ರವ್ಯಗಳ ಮೂಲಕ ಅಭಿವ್ಯಕ್ತಿಸುವುದರ ಜೊತೆಗೆ ಐಕ್ಯತೆಯ ಸೂತ್ರವನ್ನು ಕೂಡಾ ಬಿಗಿಯಾಗಿ ಕಟ್ಟಿಕೊಳ್ಳುವಂತೆ ಪ್ರೇರೇಪಿಸುತ್ತವೆ.

ಕೊನೆ ಟಿಪ್ಪಣಿಗಳು

೧. ದಕ್ಷಿಣ ಕನ್ನಡದ ಕಾವ್ಯದ ವಿಭಿನ್ನ ನೆಲೆಗಳು, ಪುಟ ೨೪೧

೨. ಕಡೆಂಗೋಡ್ಲು ಶಂಕರಭಟ್ಟ; ಮಂಗಲಗೀತ, ಕಡೆಂಗೋಡ್ಲು ಕಾವ್ಯ, ಪುಟ ೧೮೯

೩. ಕೃಷ್ಣ ಭಟ್ಟ ಸೇಡಿಯಾಪು; ಜಯಭಾರತ ಪುತ್ರ, ಚಂದ್ರಖಂಡ ಮತ್ತು ಸಣ್ಣ ಕಾವ್ಯಗಳು, ಪುಟ ೨೮

೪. ಶಂಕರನಾರಾಯಣ ನಾವಡ ಅಮ್ಮೆಂಬಳ; 'ಐಕ್ಯ ಸಂದೇಶ', ಪಡಿದನಿ, ಪುಟ ೩.೭

೫. ಪಾಂಡೇಶ್ವರ ಜಿ.ಆರ್.; (ನೋಡಿ ಅನುಬಂಧ - II) (೧)

೬. ದಕ್ಷಿಣ ಕನ್ನಡದ ಭಾಗವಾಗಿದ್ದ ಕಾಸರಗೋಡು ಕೇರಳ ರಾಜ್ಯದ ಭಾಗವಾದಾಗ ಅದನ್ನು ಪ್ರತಿಭಟಿಸುವ ಬೆಂಕಿಬಿದ್ದಿದೆ ಮನೆಗೆ ಕವನದಲ್ಲಿ 'ಕನ್ನಡದ ಗಡಿ ಕಾಯೆ, ಗುಡಿಕಾಯೆ; ನುಡಿಕಾಯೆ, ಕಾಯಲಾರೆವೆ ಸಾಯೆ' ಎಂಬ ಕವನವನ್ನು ಗಮನಿಸಬೇಕು. ಗಡಿ ವಿವಾದದ ಸಂದರ್ಭದಲ್ಲಿ ರಾಷ್ಟ್ರೀಯತೆಯ ಮಗದೊಂದು ಮುಖ ಪ್ರಕಟಗೊಳ್ಳುತ್ತದೆ.

೭. ಪಾಂಡೇಶ್ವರ ಜಿ.ಆರ್.; 'ಸಹ್ಯಾದ್ರಿಯ ಕರೆ', ಸುಪಂಥ, ಪುಟ ೭೧

೮. ವೇಣುಗೋಪಾಲ ಕಾಸರಗೋಡು; ಕಾಸರಗೋಡು ಕವಿತೆಗಳು, ಪುಟ ೧೮೨

೯. ಸುಬ್ರಾಯ ಚೊಕ್ಕಾಡಿಯವರ ಗಂಗೋತ್ರಿಯ ಹಕ್ಕಿಗಳು; 'ಬಾಲಕುಣಿಸುವ ಹಕ್ಕಿಗೆ' ಕವನಗಳು ಮೇಲ್ನೋಟಕ್ಕೆ ಹಕ್ಕಿಯ ನೈಸರ್ಗಿಕ ವರ್ಣನೆಯಾದರೂ; ಸೂಕ್ಷ್ಮವಾಗಿ ನೆಲದ ಸತ್ವದೊಂದಿಗೆ ಅದನ್ನು ಮೀರಿದ ಆಗಸದ ಬದುಕಿನತ್ತ ತನ್ನನ್ನು ಕೊಂಡೊಯ್ಯುವಂತೆ ಮಾಡುವ ನಿವೇದನೆಗಳು ಒಂದು ರೀತಿಯಾಗಿ ಸ್ವಾತಂತ್ರ್ಯದ ಪ್ರತೀಕವಾಗುತ್ತದೆ.

೧೦. ಸುಬ್ರಾಯ ಚೊಕ್ಕಾಡಿ: ಧ್ಯಾನಸ್ಥ, ಮೊನ್ನೆ ಸಿಕ್ಕವರು, ಪುಟ ೧೧

೧೧. ಗೋಪಾಲಕೃಷ್ಣ ಅಡಿಗ; ಓ ನನ್ನ ಜನವೇ, ಅಡಿಗರ ಸಮಗ್ರ ಕಾವ್ಯ, ಪುಟ ೨೦೩

೧೨. ವೇಣುಗೋಪಾಲ ಕಾಸರಗೋಡು, ಅದೇ, ಪುಟ ೧೫೮

೧೩. ಜವರೇಗೌಡ (ಸಂ): ಕನ್ನಡ ಚಿಂತನೆ, ಪುಟ ೧೦೫

೧೪. ಅದೇ " " ಪುಟ ೧೦೯

೧೫. ಕೃಷ್ಣಭಟ್ಟ ಸೇಡಿಯಾಪು: 'ಜಯಭಾರತ ಪುತ್ರ', ಚಂದ್ರಖಂಡ ಮತ್ತು ಕೆಲವು ಸಣ್ಣಕಾವ್ಯಗಳು ಪುಟ ೨೮

೧೬. ಗೋಪಾಲಕೃಷ್ಣ ಅಡಿಗ; ನಡೆದು ಬಂದ ದಾರಿ, ಸಮಗ್ರ ಕಾವ್ಯ, ಪುಟ ೨೩೦

೧೭. ಶಂಕರನಾರಾಯಣ ನಾವಡ ಅಮ್ಮೆಂಬಳ; 'ಕನ್ನಡಂ ಕನ್ನಡಂ ಕರ್ನಾಟಕಂ' ಪಡಿದನಿ, ಪುಟ ೭೦

೧೮. ಕಯ್ಯಾರ ಕಿಂಞಣ್ಣ ರೈ; 'ಬೆಂಕಿ ಬಿದ್ದಿದೆ ಮನೆಗೆ', ಶತಮಾನದ ಗಾನ, ಪುಟ ೨೪೩

೧೯. ಗೋಪಾಲಕೃಷ್ಣ ಅಡಿಗ; 'ನಡೆದು ಬಂದ ದಾರಿ' ಸಮಗ್ರ ಕಾವ್ಯ, ಪುಟ ೨೩೧

೨೦. ಶಂಕರನಾರಾಯಣ ನಾವಡ ಅಮ್ಮೆಂಬಳ; ಪಡಿದನಿ, ಪುಟ ೭೩

೨೧. ಪಾಂಡೇಶ್ವರ ಜಿ.ಆರ್.; ಸುಪಂಥ, ಪುಟ ೩೮

೨೨. ಪಾಂಡೇಶ್ವರ ಜಿ.ಆರ್.; ಹೊಸಗನ್ನಡದ ಪಂಪ - ಅಮರಶ್ರೀ, ಸುಪಂಥ, ಪುಟ ೩೨

೨೩. ಕಯ್ಯಾರ ಕಿಂಞಣ್ಣ ರೈ; 'ಎನ್ನೆದೆ ತಂತಿಯ ದಿನದಿನ ಮಿಡಿವುದು', ಶತಮಾನದ ಗಾನ, ಪುಟ ೨೬೮

೨೪. ಸುಬ್ರಾಯ ಚೊಕ್ಕಾಡಿ; 'ರಿಲೇಕೋಲು' ಮೊನ್ನೆಸಿಕ್ಕವರು, ಪುಟ ೬೧

೨೫. ಪಾಂಡೇಶ್ವರ ಜಿ.ಆರ್.; 'ನಿಜಸ್ವರಾಜ್ಯ ಮುಟ್ಟು' ಸುಪಂಥ, ಪುಟ ೧೪

೨೬. ವೇಣುಗೋಪಾಲ ಕಾಸರಗೋಡು; 'ಯುಗಕೊಂದು-ಜಗಕೊಂದು-ಅಸುಂದರ ಕವಿತೆ', ಕಾಸರಗೋಡು ಕವಿತೆಗಳು, ಪುಟ ೭೧

೨೭. ಶಿವರಾಮ ಕಾರಂತ 'ನೀಳ್ಗವನಗಳು' ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ - ೫೨ ನೋಡಿ ಅನುಬಂಧ –II (೨)

೨೮. ಶ್ರೀಕೃಷ್ಣ ಚೆನ್ನಂಗೋಡು; ಕಳಕೊಂಡವರು, ಪುಟ ೩೦

೨೯. ವೇಣುಗೋಪಾಲ ಕಾಸರಗೋಡು; 'ಯುಗಕೊಂದು - ಜಗಕೊಂದು - ಅಸುಂದರ ಕವಿತೆ', ಕಾಸರಗೋಡು ಕವಿತೆಗಳು, ಪುಟ ೭೧

೩೦. ಗೋಪಾಲಕೃಷ್ಣ ಅಡಿಗರ 'ನಾನು ಹಿಂದೂ ಬ್ರಾಹ್ಮಣ', ಬತ್ತಲಾರದ ಗಂಗೆ ಕವನಗಳು ಕೂಡಾ ಇದೇ ಆಶಯವನ್ನು ವ್ಯಕ್ತಪಡಿಸುತ್ತವೆ.

೩೧. ಗೋಪಾಲಕೃಷ್ಣ ಅಡಿಗ 'ನಾನು ಹಿಂದೂ ಬ್ರಾಹ್ಮಣ', ಸಮಗ್ರ ಕಾವ್ಯ, ಪುಟ ೪೪೫

೩೨. ವೇಣುಗೋಪಾಲ ಕಾಸರಗೋಡು, 'ಕಪ್ಪು ಹಕ್ಕಿಯ ಹಾಡು' ಕಾಸರಗೋಡು ಕವಿತೆಗಳು ಪುಟ ೬೯

೩೩. ವೇಣುಗೋಪಾಲ ಕಾಸರಗೋಡು; ಬಯಲಾಟ, ಕಾಸರಗೋಡು ಕವಿತೆಗಳು, ಪುಟ ೭೫

೩೪. ಕೃಷ್ಣ ಭಟ್ಟ ಸೇಡಿಯಾಪು; ಚಂದ್ರಖಂಡ ಮತ್ತು ಸಣ್ಣ ಕಾವ್ಯಗಳು, ಪುಟ ೨೩

೩೫. ಸುಬ್ರಾಯ ಚೊಕ್ಕಾಡಿ; ಸೇಡಿಯಾಪು ಕೃಷ್ಣಭಟ್ಟರ ಕಾವ್ಯ, ಗಿರಡ್ಡಿ ಗೋವಿಂದರಾಜು (ಸಂ) ಕನ್ನಡ ನವೋದಯ ಕಾವ್ಯ ಮಂಗಳೂರು ಕೇಂದ್ರ, ಪುಟ ೪೦

೩೬. ಗೋಪಾಲಕೃಷ್ಣ ಅಡಿಗ ಎಂ.; ಅಜ್ಜನೆಟ್ಟಾಲ, ವರ್ಧಮಾನ, ಪುಟ ೩೨

೩೭. ವೇಣುಗೋಪಾಲ ಕಾಸರಗೋಡು; 'ಬಯಲಾಟ' ಕಾಸರಗೋಡು ಕವಿತೆಗಳು, ಪುಟ ೭೫

೩೮. ವೇಣುಗೋಪಾಲ ಕಾಸರಗೋಡು; 'ಬೊಗಸೆ ಮೀರಿದ ಬದುಕು', ಅದೇ, ಪುಟ ೭೯

೩೯. ಶಂಕರಭಟ್ಟ ಕಡೆಂಗೋಡ್ಲು; 'ಕಟ್ಟುವಿರ ಭಾರತವ' ಕಡೆಂಗೋಡ್ಲು ಶಂಕರಭಟ್ಟ ಸಮಗ್ರ ಕಾವ್ಯ ಸಂಪುಟ ೧೯೨

೪೦. ಪಾಂಡೇಶ್ವರ ಜಿ.ಆರ್.; ಬಾನುಲಿ ಕವನಗಳು, ಪುಟ ೮

೪೧. ಕಡೆಂಗೋಡ್ಲು ಶಂಕರಭಟ್ಟ; 'ಕಟ್ಟುವಿರ ಭಾರತವ' ಕಡೆಂಗೋಡ್ಲು ಸಮಗ್ರಕಾವ್ಯ, ಪುಟ ೧೯೩

೪೨. ಗೋಪಾಲಕೃಷ್ಣ ಅಡಿಗ ಎಂ.; 'ಇದನ್ನು ಬಯಸಿರಲಿಲ್ಲ', ಅಡಿಗರ ಸಮಗ್ರ ಕಾವ್ಯ ಪುಟ ೩೮೦ -೮೧

೪೩. ರಹಮತ್ ತರೀಕೆರೆ; ಕನ್ನಡ ಸಂಶೋಧನೆಯ ತಾತ್ತ್ವಿಕ ವಿಚಾರ ಪುಟ ೧೩೮

೪೪. ಶಂಕರನಾರಾಯಣ ನಾವಡ ಅಮ್ಮೆಂಬಳ; 'ವಿಶ್ವಾತ್ಮ', ಪಡಿದನಿ, ಪುಟ ೧೫

೪೫. ಶಂಕರನಾರಾಯಣ ನಾವಡ ಅಮ್ಮೆಂಬಳ; 'ಪೂರ್ಣದರ್ಶನ', ಪಡಿದನಿ ೧೭

೪೬. ಸತ್ಯನಾರಾಯಣ ಮಲ್ಲಿಪಟ್ಟಣ; ದಕ್ಷಿಣ ಕನ್ನಡದ ಕಾವ್ಯ ಮತ್ತು ಪ್ರಾದೇಶಿಕತೆ, ಪುಟ ೩೮

೪೭. ಗೋವಿಂದ ಪೈಯವರ ಖಂಡಕಾವ್ಯಗಳು

೪೮. ಶಂಕರಭಟ್ಟ ಕಡೆಂಗೋಡ್ಲು; 'ಹುತಾತ್ಮ', ಪತ್ರಪುಷ್ಪ ಕಡೆಂಗೋಡ್ಲು ಕಾವ್ಯ ೨೦೩

೪೯. ಶಂಕರಭಟ್ಟ ಕಡೆಂಗೋಡ್ಲು; ಅದೇ ಪುಟ ೨೦೨

೫೦. ಅನಂತಮೂರ್ತಿ ಯು.ಆರ್.; ನಮ್ಮ ರಾಷ್ಟ್ರೀಯತೆಯ ಸ್ವರೂಪ ಕುರಿತು, ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ ಪುಟ ೧೮೬

೫೧. ಕಡೆಂಗೋಡ್ಲು ಶಂಕರಭಟ್ಟ; 'ಪತ್ರಪುಷ್ಪ' ಕಡೆಂಗೋಡ್ಲು ಕಾವ್ಯ, ಪುಟ - ೨೧೫

೫೨. ಶಂಕರನಾರಾಯಣ ನಾವಡ ಪಡಿದನಿ ಪುಟ ೨೩, ೨೪, ೨೬, ನೋಡಿ ಅನುಬಂಧ -II (೩,೪,೫)

೫೩. ಪಾಂಡೇಶ್ವರ ಜಿ.ಆರ್.; 'ಸಹಜೀವನ' ಬಾನುಲಿ ಕವನಗಳು, ಪುಟ ೧೯

೫೪. ಅದೇ " "

೫೫. ಪಾಂಡೇಶ್ವರ ಜಿ.ಆರ್.; 'ನಮೋ ನಮೋ ಧರ್ಮಚಕ್ರ' ಅದೇ " " ಪುಟ ೨೯

೫೬. ಶಂಕರನಾರಾಯಣ ನಾವಡ ಅಮ್ಮೆಂಬಳ; 'ಐಕ್ಯಸಂದೇಶ' ಪಡಿದನಿ, ಪುಟ ೩೭

೫೭. ಅದೇ " " ಪುಟ ೪೧

೫೮. ಇದಿನಬ್ಬ ಬಿ.ಎಮ್.; 'ಜೈ ಜವಾನ್ ಜೈ ಕಿಸಾನ್', ವೀರಗೀತೆಗಳು ಮತ್ತು ಕಿಡಿಗಳು, ಪುಟ ೬

೫೯. ಇದಿನಬ್ಬ ಬಿ.ಎಮ್.; 'ಎದ್ದೇಳಿ ರಾಷ್ಟ್ರರಕ್ಷಣೆಗೆ' ಅದೇ, ಪುಟ ೧೧

೬೦. ಇದಿನಬ್ಬ ಬಿ.ಎಮ್.; ವೀರಗೀತೆಗಳು ಮತ್ತು ಕಿಡಿಗಳು, ಪುಟ ೧೦-೧೩; ಪುಟ ೨೩ ನೋಡಿ ಅನುಬಂಧ –II (೬, ೭)

೬೧. ಶಂಕರ ನಾರಾಯಣ ನಾವಡ ಅಮ್ಮೆಂಬಳ; 'ನಾವೆಲ್ಲ ನರಸಿಂಹರು' ಪಡಿದನಿ, ಪುಟ ೪೫

೬೨. ಇದಿನಬ್ಬ ಬಿ.ಎಮ್.; ವೀರಗೀತೆಗಳು ಮತ್ತು ಕಿಡಿಗಳು ಪುಟ ೭ ನೋಡಿ ಅನುಬಂಧ – II (೮)

೬೩. ಪಾಂಡೇಶ್ವರ ಜಿ.ಆರ್.; ಬನ್ನಿ ಬನ್ನಿ ಕೇಳಿ ಕೇಳಿ ಐಕ್ಯದಮರಗಾನ, ಬಾನುಲಿ ಕವನಗಳು, ಪುಟ ೧೪

೬೪. ಪಾಂಡೇಶ್ವರ ಜಿ.ಆರ್.; 'ಭಾವೈಕ್ಯ ದೇವರ ವರದಾನ', ಬಾನುಲಿ ಕವನಗಳು, ಪುಟ ೧೩

೬೫. ಇದಿನಬ್ಬ ಬಿ.ಎಮ್.; 'ರಾಷ್ಟ್ರರಕ್ಷಣೆ', ವೀರಗೀತೆಗಳು ಮತ್ತು ಕಿಡಿಗಳು, ಪುಟ ೧೭

೬೬. ಗೋಪಾಲಕೃಷ್ಣ ಅಡಿಗ ಎಂ.; 'ಬರುತ್ತಾರೆ', ವರ್ಧಮಾನ, ಪುಟ ೧

೬೭. ಸಂತೋಷ್ ಚೊಕ್ಕಾಡಿ; ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಪುಟ ೨೭೭

೬೮. ನೋಡಿ – ಗೋಪಾಲಕೃಷ್ಣ ಅಡಿಗರ 'ದಾಸ್ಯ ೧೯೭೮' ಕವನ, ಅಡಿಗರ ಸಮಗ್ರ ಕಾವ್ಯ, ಪುಟ ೮೧೮

೬೯. ಗೋಪಾಲಕೃಷ್ಣ ಅಡಿಗ; 'ಇದನ್ನು ಬಯಸಿರಲಿಲ್ಲ' ಅಡಿಗರ ಸಮಗ್ರಕಾವ್ಯ, ಪುಟ ೩೫೭

೭೦. ಇದಿನಬ್ಬ ಬಿ.ಎಮ್.; 'ಚೀನೀಯರೇ ತೊಲಗಿರಿ', ವೀರಗೀತೆಗಳು ಮತ್ತು ಕಿಡಿಗಳು, ಪುಟ ೨

೭೧. ಇದಿನಬ್ಬ ಬಿ.ಎಮ್., 'ಗರ್ವವ ಬಿಡು ಓ ಪಾಕಿಸ್ಥಾನ', ವೀರಗೀತೆಗಳು ಮತ್ತು ಕಿಡಿಗಳು, ಪುಟ ೧೮

೭೨. ಶಂಕರನಾರಾಯಣ ನಾವಡ; 'ನಾವೆಲ್ಲ ನರಸಿಂಹರು', ಪಡಿದನಿ, ಪುಟ ೪೪

೭೩. ಶ್ರೀಕೃಷ್ಣ ಚನ್ನಂಗೋಡು; 'ಸೂರ್ಯಗ್ರಹಣ', ಕಳಕೊಂಡವರು, ಪುಟ ೩೦

೭೪. ವೇಣುಗೋಪಾಲ ಕಾಸರಗೋಡು; 'ಪ್ರತಿಜ್ಞೆ', ಕಾಸರಗೋಡು ಕವಿತೆಗಳು, ಪುಟ ೫೧

೭೫. ಶಂಕರನಾರಾಯಣ ನಾವಡ; 'ರೈತರ ಹಾಡು', ಪಡಿದನಿ, ಪುಟ ೬೫

೭೬. ಗೋಪಾಲಕೃಷ್ಣ ಅಡಿಗ; 'ಏನಾದರೂ ಮಾಡುತಿರು ತಮ್ಮ', ಚಂಡೆಮದ್ದಳೆ; ಅಡಿಗರ ಸಮಗ್ರಕಾವ್ಯ ೨೭೬

ಅಧ್ಯಾಯ ೫

ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ದಕ್ಷಿಣಕನ್ನಡದ ಸಂಸ್ಕೃತಿಯ ಕ್ರೋಡೀಕರಣ

ಅಧ್ಯಾಯ ೫

ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ದಕ್ಷಿಣಕನ್ನಡದ ಸಂಸ್ಕೃತಿಯ ಕ್ರೋಢೀಕರಣ

೫.೧ ಸಂಸ್ಕೃತಿ ಚಿಂತನೆಯ ಗ್ರಹೀತಗಳು

'ಸಂಸ್ಕೃತಿ' ಎನ್ನುವ ಪರಿಕಲ್ಪನೆಯು ಬಹಳಷ್ಟು ವಿಸ್ತರಣೆಗೆ ಒಳಗಾದ ಪದ. ಅದನ್ನು ಶಬ್ದಾರ್ಥದ ಹಿನ್ನೆಲೆಯಲ್ಲಿ ಗಮನಿಸಿದಾಗ 'ಶುದ್ಧೀಕರಿಸು', 'ಬೆಳೆಸು', 'ಪವಿತ್ರೀಕರಿಸು' ಎಂಬ ಅರ್ಥಗಳ ಆಧಾರದಲ್ಲಿ ಚರ್ಚೆ ನಡೆದಿರುವುದು ಗಮನಾರ್ಹ. ಶಬ್ದಾರ್ಥಕ್ಕಿಂತ ಭಿನ್ನವಾಗಿ, ವ್ಯಾಖ್ಯಾನದ ಹಿನ್ನೆಲೆಯಲ್ಲಿ ಸಂಸ್ಕೃತಿಯನ್ನು ಒಂದು 'ಜೀವನವಿಧಾನ'ವಾಗಿ ಪರಿಕಲ್ಪಿಸಲಾಗಿದೆ. ''ಕನ್ನಡದ ಬೇರೆ ಬೇರೆ ಜ್ಞಾನಶಿಸ್ತುಗಳು 'ಸಂಸ್ಕೃತಿ' ಶಬ್ದವನ್ನು ಒಂದು ಪರಿಭಾಷೆ, ಪರಿಕಲ್ಪನೆಯನ್ನಾಗಿ ಮಾಡಿ ಬೇರೆ ಬೇರೆ ಅರ್ಥಗಳಲ್ಲಿ ಗುರುತಿಸುವುದನ್ನೂ; ಒಂದೇ ಶಿಸ್ತಿನ ಪ್ರತಿಯೊಬ್ಬರೂ ಬೇರೆ ಬೇರೆ ರೀತಿಯಲ್ಲಿ ಬಳಸುವುದು''[೧] 'ಸಂಸ್ಕೃತಿ' ಪದದ ಮತ್ತು ಅದು ಒಳಗೊಳ್ಳುವ ವ್ಯಾಪ್ತಿಯನ್ನು ತಿಳಿಯಪಡಿಸುತ್ತದೆ. ಆದುದರಿಂದ ಸಂಸ್ಕೃತಿ ಎನ್ನುವುದು ಬಹುರೂಪೀ ಅರ್ಥಗಳನ್ನೊಳಗೊಂಡು ಬಳಕೆಯಾಗುವ ಶಬ್ದವಾಗಿದೆ.

ನಾಡನ್ನು, ರಾಷ್ಟ್ರವನ್ನು ದೈವೀ ಸ್ವರೂಪಿಯಾಗಿ ಅಥವಾ ಮಾತೃ ಸ್ವರೂಪಿಯಾಗಿ ಪರಿಭಾವಿಸುವ ಉದಾರವಾದೀ ಚಿಂತನೆಯ ಕ್ರಮವು ಸಂಸ್ಕೃತಿಯ ಹೆಸರಿನಲ್ಲಿ ರಾಷ್ಟ್ರಭಕ್ತಿಯನ್ನು ವೈಭವೀಕರಿಸುವಂತೆ ಒತ್ತಾಯಿಸುತ್ತದೆ. ಈ ಆಶಯವು ಬಹಳ ಸಂದರ್ಭಗಳಲ್ಲಿ ಅತಿಯಾದ ಭಾವುಕತೆಗೆ ಎಡೆಮಾಡಿಕೊಡುವಂತಿದೆ. ಅಂಥ ಚಿಂತನೆಗಳ ಹೊರತಾಗಿಯೂ ಅಂದರೆ ನಾಡು ಮತ್ತು ನುಡಿಯನ್ನು ಮಾತೃ ರೂಪಿಯಾಗಿ, ದೈವೀ ಸ್ವರೂಪಿಯಾಗಿ ಪರಿಭಾವಿಸಿಕೊಳ್ಳದೆ ಸಹಜವೆಂಬಂತೆ ಭಾವಿಸಿಕೊಳ್ಳುವ ಸಂದರ್ಭದಲ್ಲಿಯೂ ವಾಸ್ತವಿಕವಾದ ತನ್ನತನದ ಸ್ವಯಂ ನಿಷ್ಠ ಮನೋಭಾವವು ಕಂಡುಬರುತ್ತದೆ. ಇಂಥ ಅಭಿವ್ಯಕ್ತಿಗಳು ಸಂಸ್ಕೃತಿಯನ್ನು ವಾಸ್ತವವಾಗಿ ಕಟ್ಟಿಕೊಳ್ಳುವ ನೆಲೆಗಟ್ಟಿನಿಂದಲೇ ರೂಪಿತವಾಗಿ ಪ್ರಕಟವಾಗುತ್ತವೆ. ಯಾಕೆಂದರೆ ಸಂಸ್ಕೃತಿಯನ್ನು ಪರಿಕಲ್ಪಿಸಿಕೊಳ್ಳುವ ಅಮೂರ್ತ

ಚಿಂತನೆಗಳು ಮೂರ್ತ ಸ್ವರೂಪವನ್ನು ಪಡೆದುಕೊಳ್ಳುವುದು ಮತ್ತು ಸಂಸ್ಕೃತಿಯ ಆಜ್ಞಾವರ್ತಿಗಳಾಗಿ ಮುನ್ನಡೆಯುವುದು ಒಂದು ರೀತಿಯಲ್ಲಿ ಇರುವಿಕೆಯ ಅರಿವಿನ ವಿಸ್ತರಣೆಯೇ ಆಗಿರುತ್ತದೆ. ದಕ್ಷಿಣ ಕನ್ನಡದ ಕಾವ್ಯಗಳು ಈ ಹಿನ್ನೆಲೆಯಲ್ಲಿ ಸಂಸ್ಕೃತಿಯ ಉದಾರವಾದೀ ನಿಲುವನ್ನು ಪ್ರಕಟಿಸುತ್ತ ರಾಷ್ಟ್ರೀಯತೆಯ ಎಚ್ಚರದ ಪ್ರತೀಕಗಳಾಗಿರುವಂತೆ ಕಂಡುಬರುತ್ತವೆ. ದಕ್ಷಿಣ ಕನ್ನಡದ ಸಂಸ್ಕೃತಿಯನ್ನು ಸನಾತನವಾದುದು ಎಂದು ನಂಬಿಕೊಂಡು ಪರಂಪರೆ ಮತ್ತು ಜನಜೀವನದ ಜೊತೆಗೆ ಅವಿನಾಭಾವವಾಗಿ ಗುರುತಿಸುತ್ತ ಮೌಲ್ಯ ನಿರ್ಧಾರ ಮಾಡಲಾಗುತ್ತದೆ. ಮಾತ್ರವಲ್ಲ ಆ ಮೂಲಕ ರಾಷ್ಟ್ರೀಯತೆಯ ಎಚ್ಚರವನ್ನು ಪ್ರಕಟಿಸಲಾಗುತ್ತದೆ. ಇದು ಈ ನಾಡಿನ ಜನತೆಯು ರೂಢಿಸಿಕೊಂಡಿರುವ ಭಿನ್ನ ಭಿನ್ನ ಹಿನ್ನೆಲೆಯ ಜೀವನಕ್ರಮ, ಆಚಾರ-ವಿಚಾರ, ಪದ್ಧತಿಗಳು, ಆಹಾರ ವಿಧಾನಗಳು, ಉಡುಗೆ ತೊಡುಗೆಗಳು ಹೀಗೆ ನಾನಾ ರೀತಿಗಳ ಮೂಲಕ ಪ್ರಕಟವಾಗುತ್ತವೆ. ಇಂಥ ಪ್ರಾದೇಶಿಕ ಸಂಸ್ಕೃತಿಗಳ ಅನನ್ಯತೆಯ ಕ್ರೋಡೀಕರಣವೇ ಕರ್ನಾಟಕದ ಮತ್ತು ವಿಸ್ತಾರಗೊಳ್ಳುವ ವ್ಯಾಪ್ತಿಯ ಹಿನ್ನೆಲೆಯಲ್ಲಿ ಸಮಗ್ರ ಭಾರತೀಯ ಸಂಸ್ಕೃತಿ ರೂಪಿತವಾಗುತ್ತದೆ. ಅನೇಕತೆಯಲ್ಲಿ ಏಕತೆಯನ್ನು ಈ ಮೂಲಕ ಸಾರಲಾಗುತ್ತದೆ. ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯ ಒಂದನ್ನು ಬಿಟ್ಟು ಇನ್ನೊಂದು ಇರಲಾರದ, ಪ್ರತ್ಯೇಕಿಸಿ ನೋಡಲೂ ಸಾಧ್ಯವಾಗದ ಸಂರಚನೆಗಳು. ಸಮಾಜದ ವ್ಯಾಖ್ಯಾನವನ್ನು ಪರಿಪೂರ್ಣ ಅಥವಾ ಸೋದಾರಣವಾಗಿ ನಿರೂಪಿಸಬೇಕಾದರೆ, ಜನಜೀವನ ಸಾಂಗವಾಗಿದೆ ಎಂದಾದರೆ ಈ ಮೂರು ಪರಿಕಲ್ಪನೆಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿಕೊಂಡೂ, ಅಭಿವ್ಯಕ್ತಿ ಸಾಧ್ಯತೆಯ ವಾಹಕವಾಗಿಯೂ ಇರಬೇಕಾಗುತ್ತದೆ. ಇವು ಪರಸ್ಪರ ಅನುಸರಿಸುತ್ತ, ಕೊಂಡಿ ಬೆಸೆಯುತ್ತ ಇರುವ ಕಾರಣದಿಂದಾಗಿಯೇ ನಿರ್ದಿಷ್ಟ ಚಿಂತನ ಲಹರಿ ಹುಟ್ಟಿಬರಲು ಸಾಧ್ಯವಾಗುತ್ತದೆ. ಪ್ರಾದೇಶಿಕವಾಗಿ ಭಿನ್ನತೆ ಇರುವುದಕ್ಕೆ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಜೊತೆಗೆ ಸಾಂಸ್ಕೃತಿಕ ಕಾರಣಗಳು ಇರುತ್ತವೆ. ಸಾಹಿತ್ಯವು ಇವೆಲ್ಲವುಗಳ ಅಭಿವ್ಯಕ್ತಿಯಾದುದರಿಂದ ಸಹಜವೆಂಬಂತೆ ಪ್ರತಿಬಿಂಬವನ್ನು ತೋರಿಸುತ್ತದೆ. ಒಳಹೊರಗನ್ನು ಶೋಧಿಸುವ ಮತ್ತು ದಾರಿ ತೋರಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಸಮಾಜವನ್ನು, ಜನಜೀವನವನ್ನು ಪ್ರಭಾವಿಸಬಲ್ಲ ಶಕ್ತಿಗಳು ಜನತೆಯನ್ನು ತನ್ನತ್ತ ಸೆಳೆದುಕೊಳ್ಳುವ ಅಥವಾ ಜನರು ಬೇರೆ ಬೇರೆ ಕಾರಣಗಳಿಂದಾಗಿ ತಮ್ಮ ಪರಂಪರೆಯನ್ನು ಸಡಿಲಿಸಿಕೊಳ್ಳಬಯಸುವ, ಪರಂಪರೆಯು ಪೋಷಿಸಿಕೊಂಡು ಬರುವಂಥ ಪಥದ ಕುರಿತು ನಂಬಿಕೆ ಕುಗ್ಗಿ ಹೋಗುವಂಥ, ಸ್ಥಾಪಿತ ಮೌಲ್ಯ ಎನ್ನುವುದು ಯಾವುದು ಇದೆಯೋ ಅದು ಕಾಲಗರ್ಭದ ತುರ್ತಿನ ಜೊತೆ ಸಂಧಾನ ಮಾಡಿಕೊಳ್ಳಲು ವಿಫಲವಾಗುವಂಥ ಸಂದರ್ಭಗಳು, ಪ್ರತಿಷ್ಠಿತ ವರ್ಗ ಸಮಾಜದ ಉತ್ಪನ್ನಗಳನ್ನು ತಾವು

ಅನುಭವಿಸುವಂಥ ಭರದಲ್ಲಿ ಉಂಟಾಗಬಹುದಾದಂಥ ಹಾನಿಯನ್ನು ಲೆಕ್ಕಿಸದೆ ಆಧುನಿಕತೆ ಎನ್ನುವುದು ಯಾವುದಿದೆಯೋ ಆಯಾಯ ಕಾಲಘಟ್ಟದಲ್ಲಿ ಸಮಾಜವನ್ನು ಪ್ರಭಾವಿಸುವಂಥದ್ದು ಅವನ್ನು ಅಪ್ಪಿಕೊಂಡು ಜನತೆ ತಮ್ಮ ಜಾಯಮಾನದ ಬದುಕಿನ ಲಯವನ್ನು ತ್ಯಜಿಸಲಾರಂಭಿಸಿರುವುದು ಕಂಡುಬರುತ್ತದೆ. ತಾವು ಬದುಕುವ ಸಮಾಜದಲ್ಲಿ ಯಾವುದನ್ನು ತಮ್ಮ ಮಿತಿಯಲ್ಲಿ ನಾಗರಿಕತೆ ಎಂದು ನಂಬಿ ಬದುಕುತ್ತಿದ್ದರೋ, ಅಲ್ಲಿಗೆ ಅದಕ್ಕಿಂತ ಭಿನ್ನವಾದ ಮತ್ತು ಹೊರಗಿನಿಂದ ಬಂದು ಪುಳಕಿತಗೊಳಿಸಿತೊ ಅವನ್ನು ಅನುಸರಣೆ ಮಾಡುವುದು ಮತ್ತು ಆ ತನಕ ಪಾಲಿಸಿಕೊಂಡು, ಪೋಷಿಸಿಕೊಂಡು ಬಂದಿದ್ದ ಪರಂಪರೆಯನ್ನು ಪರಿಷ್ಕಾರ ಮಾಡುವ, ಬದಲಿಸುವ, ಟೀಕಿಸುವ, ತ್ಯಜಿಸುವ ಹೀಗೆ ನಾನಾ ರೀತಿಗಳಲ್ಲಿ ಹೊಸತನ್ನು ಸ್ವೀಕರಿಸುವ ಜಾಯಮಾನವನ್ನು ರೂಢಿಸಿಕೊಂಡರು. ಬ್ರಿಟಿಷರು ಭಾರತಕ್ಕೆ ಬಂದು ವಸಾಹತುಗಳನ್ನು ಆರಂಭಿಸಿ ವ್ಯಾಪಾರ ವಹಿವಾಟುಗಳಿಗೆ ಕೇಂದ್ರವನ್ನು ಮಾಡಿಕೊಳ್ಳುತ್ತಲೇ ಭಾರತಕ್ಕೆ ಆಧುನಿಕತೆ ಕಾಲಿರಿಸಿತು. ಕ್ರಮೇಣ ಅಧಿಕಾರ, ಆಡಳಿತದತ್ತ ಬ್ರಿಟಿಷರು ಗಮನಹರಿಸಿದುದರಿಂದ ಭಾರತ ಪರಾಧೀನವಾಯಿತು. ಆಡಳಿತ ಮತ್ತು ಶಿಕ್ಷಣದ ಭಾಷೆಯಾಗಿ ಇಂಗ್ಲಿಷ್ ಬಳಕೆಯಾಯಿತು. ಇದರಿಂದಾಗಿ ಆ ತನಕ ಭಾರತದಲ್ಲಿದ್ದ ಬೇರೆ ಬೇರೆ ಪ್ರಾಂತ್ಯಗಳ ರಾಜಾಡಳಿತ ಅವಸಾನ ಹೊಂದಿತು. ಬ್ರಿಟಿಷ್ ಪ್ರಣೀತ ಇತಿಹಾಸ ಕಟ್ಟುವ ಮತ್ತು ಭಾರತದ ಬೇರೆ ಬೇರೆ ಪ್ರದೇಶ, ಪ್ರಾಂತ್ಯಗಳ ಭಿನ್ನತೆಗಳಿಗೆ ಒಂದು ಏಕರೂಪಿಯಾದ ಆಕಾರವನ್ನು ಆವಾಹಿಸುವ ಪ್ರಕ್ರಿಯೆಯೂ ಆರಂಭವಾಯಿತು. ಸಮಗ್ರ ಭಾರತವನ್ನು ನಿರ್ದೇಶಿಸುವ ಒಂದು ನಕ್ಷೆಯನ್ನು ಸಿದ್ಧಪಡಿಸಲಾಯಿತು. ಭಾರತದ ಸಮಗ್ರತೆಯನ್ನು ರೂಪಿಸಲು ಅನಿವಾರ್ಯವಾಗಿ ಪ್ರಾದೇಶಿಕ ಭಿನ್ನತೆಯಿಂದ ಕೂಡಿದ ಭಾಷೆ ಮತ್ತು ಸಂಸ್ಕೃತಿಯ ನೆಲೆಗಳಲ್ಲಿ ಭಾಷೆಯನ್ನು ಪ್ರಧಾನವಾಗಿಸಿಕೊಂಡು ಭಾಷಾವಾರು ಪ್ರಾಂತ್ಯ ರಚನೆಯ ಮೂಲಕ ಪ್ರಾಂತೀಯ ಭಾಷೆ ಮತ್ತು ಆ ಭಾಷಿಕ ಜನಾಂಗಗಳಿಗೆ ಮಹತ್ತ್ವವನ್ನು ನೀಡಲಾಯಿತು.

ಭಾರತದ ಶಿಕ್ಷಣ ಪದ್ಧತಿಯನ್ನು ಇಂಗ್ಲಿಷ್ ಶಿಕ್ಷಣ ಮಾದರಿಯ ಮೂಲಕ ಪುನರ್‌ರಚಿಸಿದಾಗ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಕ್ಕೆ ಲಭ್ಯವಾದ ಪ್ರಾಧಾನ್ಯದಿಂದಾಗಿ ಭಾರತದ ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ ಇಂಗ್ಲಿಷ್‌ನ ಭಾಷಿಕ ಮತ್ತು ಸಾಹಿತ್ಯಿಕ ಮಾದರಿಗಳಿಂದ, ಪ್ರಕಾರಗಳಿಂದ ಪ್ರೇರಣೆ ಪಡೆಯುವುದು ಅನಿವಾರ್ಯವಾಗಿದೆ. ಇಂಗ್ಲಿಷ್ ಕಾವ್ಯ ಜಗತ್ತು ನಿರ್ದೇಶಿಸಿದ ವಸ್ತು ವಿನ್ಯಾಸ, ಪ್ರಕೃತಿ, ಪರಿಸರ, ಸಂಸ್ಕೃತಿ, ಗತದ ಕುರಿತ ಚಿಂತನೆ ಮತ್ತು ಮರು ನಿರೂಪಣೆ, ಭಾಷೆ ಮುಂತಾದ ಸಂಗತಿಗಳು ಭಾರತದ ಬೇರೆ ಬೇರೆ ಪ್ರದೇಶದ ಭಾಷೆಗಳಿಗೆ ಒಂದು ವಿಭಿನ್ನವಾದ ಮಾದರಿ ಒದಗಿಸಿದೆ. ಆಧುನಿಕ ಕನ್ನಡ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳು ಇಂಗ್ಲಿಷ್ ಸಾಹಿತ್ಯದ

ಪ್ರೇರಣೆಯಿಂದಲೇ ರೂಪಿತವಾದುದರಿಂದ ಅಥವಾ ಕನ್ನಡದ ಬೇರೆ ಬೇರೆ ಸಾಹಿತ್ಯ ಪ್ರಕಾರಗಳಿಗೆ ಇಂಗ್ಲಿಷ್ ಸಾಹಿತ್ಯವೇ ಮಾದರಿ ಒದಗಿಸಿದುದರಿಂದ ಸಾಹಿತ್ಯಿಕ ವಸ್ತು ವಿವೇಚನೆಯ ಬಹುಮುಖೀ ಭಿನ್ನ ಸಾಧ್ಯತೆಗಳು ಕನ್ನಡದ ಕವಿಗಳಿಗೆ, ಸಾಹಿತಿಗಳಿಗೆ ಸಿಕ್ಕಿವೆ ಮತ್ತು ದಕ್ಕಿವೆ.

ಕನ್ನಡದ ವಿದ್ಯಾವಂತ ವರ್ಗ ಮತ್ತು ಸಾಹಿತಿಗಳ ವರ್ಗ ಅದರಲ್ಲೂ ಮುಖ್ಯವಾಗಿ ಕವಿಗಳು ಕಾವ್ಯದ ಮೂಲಕ ಸಂಸ್ಕೃತಿ ಮತ್ತು ಪರಂಪರೆಯ ಕುರಿತು ಜಾಗೃತಿ ಮೂಡಿಸಲು ತೊಡಗಿದ್ದಾರೆ. ಪಶ್ಚಿಮ ಪ್ರಣೀತ ಆಧುನಿಕತೆ ಮತ್ತು ಅದರ ಮುಂದುವರಿಕೆಯಾಗಿ ಹಂತಹಂತವಾದ ಭಾರತದ ಮೇಲೆ ಪ್ರಭಾವ ಬೀರುತ್ತಿರುವ ಹಾಗೂ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ನಿರ್ದೇಶಿಸುತ್ತಿರುವ ಶಕ್ತಿಗಳು ಆತ್ಯಂತಿಕವಾಗಿ ವ್ಯಾಪಾರೀ ಮನೋಭಾವವನ್ನು ಪ್ರಚೋದಿಸುವ ಲಕ್ಷಣವನ್ನೇ ಹೊಂದಿವೆ. ಇದರ ಮುಂದುವರಿಕೆಯಾಗಿಯೇ ಜಾಗತೀಕರಣದ ಪ್ರಕ್ರಿಯೆಯನ್ನು ಗಮನಿಸಬೇಕಾಗುತ್ತದೆ. ಜಾಗತೀಕರಣವೆನ್ನುವುದು ಇದ್ದಕ್ಕಿದ್ದ ಹಾಗೆ ಭಾರತದಲ್ಲಿ ಕಾಣಿಸಿಕೊಂಡ ಪಶ್ಚಿಮ ನಿರ್ದೇಶಿತ ಪ್ರಕ್ರಿಯೆಯಲ್ಲ. ಬ್ರಿಟಿಷರು ವ್ಯಾಪಾರದ ಕೇಂದ್ರಗಳಾಗಿ ವಸಾಹತುಗಳನ್ನು ನಿರ್ಮಾಣ ಮಾಡುವ ಮೂಲಕ ಹುಟ್ಟುಹಾಕಿದ ಪ್ರಕ್ರಿಯೆಯ ಬೆಳವಣಿಗೆಯ ಹಂತವಾಗಿ ನಾವು ವರ್ತಮಾನದ ತಂತ್ರಜ್ಞಾನ ಕೇಂದ್ರಿತ ಕಾಲಮಾನದಲ್ಲಿ ಜಾಗತೀಕರಣವನ್ನು ನಿರೂಪಿಸಬೇಕು. ಕನ್ನಡ ಭಾಷೆ ಮತ್ತು ಸಾಹಿತ್ಯ ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯದಿಂದ ಪ್ರೇರಣೆಯನ್ನು ಪಡೆದುಕೊಂಡು ಅಷ್ಟಕ್ಕೇ ಸೀಮಿತವಾಗದೆ ಸ್ವತಂತ್ರವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಕನ್ನಡದ ಜಾಯಮಾನದ, ಸಂಸ್ಕೃತಿ ಪರಿಪ್ರೇಕ್ಷ್ಯದಿಂದಲೇ ಚಿಂತನ ವಿಧಾನವನ್ನು ಸಾಧಿಸಿ ಕೊಂಡಿದೆ. ಕನ್ನಡ ಸಾಹಿತ್ಯಕ ಸೃಜನಶೀಲತೆಯು ಸಮಾಜ ಮತ್ತು ಸಂಸ್ಕೃತಿಯ ಅಂತರ್‌ಪ್ರಜ್ಞೆಯ ವಾಹಕವಾಗಿ ಸದಾ ತುಡಿದಿದೆ. ದಕ್ಷಿಣ ಕನ್ನಡದ ಕವಿತೆಗಳು ಈ ಹಿನ್ನೆಲೆಯಲ್ಲಿ ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದು, ಆ ಮೂಲಕವೇ ಸಂಸ್ಕೃತಿ ಚಿಂತನೆಯನ್ನು ನಿರೂಪಿಸಲು ಸಾಧ್ಯವಿದೆ. ಇದು ಸಮಾಜದ, ಸಂಸ್ಕೃತಿಯ ಒಟ್ಟಾಗಿ ಜನಜೀವನವನ್ನು ಕಟ್ಟುವ ಕೆಲಸಮಾಡುತ್ತದೆ. ಈ ಕಟ್ಟುವ ಕ್ರಿಯೆಯ ಪ್ರಧಾನ ಒಳಸುಳಿ ಇರುವುದೇ ರಾಷ್ಟ್ರೀಯತೆಯನ್ನು ಗುರುತಿಸುವ ಮತ್ತು ರಾಷ್ಟ್ರೀಯತೆಯನ್ನು ನಿರೂಪಿಸುವ ಚಿಂತನೆಯಲ್ಲಿ. ಹೀಗೆ ಪ್ರದೇಶ / ರಾಷ್ಟ್ರವೊಂದು ತನ್ನನ್ನು ಇತರರ ಪ್ರಭಾವದಿಂದ ದೂರ ಸರಿಸುವ ಅಥವಾ ಅದರೊಂದಿಗೇ ಅನುಸಂಧಾನದ ಪ್ರಕ್ರಿಯೆಯಲ್ಲಿ ತನ್ನತನವನ್ನು ಉಳಿಸುವ ಪ್ರಕ್ರಿಯೆಯನ್ನು ಹುಟ್ಟುಹಾಕುತ್ತದೆ. ಈ ನಿಟ್ಟಿನಲ್ಲಿ ದಕ್ಷಿಣಕನ್ನಡದ ಕವಿತೆಗಳಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟಗಳು ಹುಟ್ಟುಹಾಕಿರುವ ಸಂಸ್ಕೃತಿ ಚಿಂತನೆ ಯಾವ ರೀತಿಯದು? ಅದು ಗುರುತಿಸುವ ಸಂಸ್ಕೃತಿ ಚಿಂತನೆ ಕೇವಲ ಸಾಹಿತ್ಯಿಕ ಪ್ರಕ್ರಿಯೆ ಮಾತ್ರವೇ? ಅಥವಾ ಉಳಿದ

ಸಾಮಾಜಿಕ, ರಾಜಕೀಯ ಆಗುಹೋಗುಗಳ ಕಡೆಗೆ ಇಲ್ಲಿನ ಕವಿತೆಗಳು ಬೆಳಕು ಚೆಲ್ಲುತ್ತವೆಯೇ ಎಂಬುದು ಚರ್ಚಿಸಬೇಕಾದ ಅಂಶ.

೫.೨ ರಾಷ್ಟ್ರೀಯತೆಯ ನಿರ್ವಚನದ ಹಿನ್ನೆಲೆಯಲ್ಲಿ ಸಂಸ್ಕೃತಿಯ ಸಮೀಕರಣ

ದಕ್ಷಿಣಕನ್ನಡದ ಸಂಸ್ಕೃತಿಯನ್ನು ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಕ್ರೋಢೀಕರಿಸುವಾಗ ಕಂಡುಕೊಳ್ಳಬಹುದಾದ ಬಹುಮುಖ್ಯ ಅಂಶವೆಂದರೆ; ಅದು ತನ್ನನ್ನು ದೇಶವಾಚಕವಾಗಿಯೂ, ಭಾಷಾವಾಚಕವಾಗಿಯೂ ಗುರುತಿಸಿಕೊಳ್ಳುವ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ನೀಡುತ್ತದೆ. 'ರಾಷ್ಟ್ರ'ವೆಂಬುದು ಭೂಪ್ರದೇಶ, ಸರಕಾರ, ಸಂವಿಧಾನ, ಪರಮಾಧಿಕಾರಗಳನ್ನೊಳಗೊಂಡ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಗೊಂದಲ ಸೃಷ್ಟಿಯಾದಾಗ ರಾಷ್ಟ್ರೀಯತೆಯ ಪ್ರಕ್ರಿಯೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಇಂಥ ಸಂದರ್ಭಗಳಲ್ಲಿ ಭಿನ್ನರೂಪೀ ಗುಂಪೊಂದು ಭಿನ್ನತೆಯಲ್ಲೂ ಏಕರೂಪೀ ವ್ಯವಸ್ಥೆಗಾಗಿ ಹಾತೊರೆಯುತ್ತಿರುತ್ತದೆ. ಈ ಹಾತೊರೆಯುವಿಕೆ ಕೆಲವು ಸಂದರ್ಭಗಳಲ್ಲಿ ರಾಷ್ಟ್ರವನ್ನೂ (ಭಾರತ), ಪ್ರದೇಶವನ್ನೂ (ಕರ್ನಾಟಕ) ಏಕಮುಖವಾಗಿ ಕಾಣುವ; ಪ್ರದೇಶದ ಮೂಲಕ ರಾಷ್ಟ್ರವನ್ನು ಕಾಣುವ ಹಂಬಲ, ಆಶಾವಾದವನ್ನು ಪ್ರಕಟಪಡಿಸುತ್ತದೆ. ಆದರೆ ಅಂತಿಮವಾಗಿ ಅವೆರಡೂ ಒಂದೇ ತತ್ತ್ವದ ತಳಹದಿಯಲ್ಲಿ ಬೇರೂರುತ್ತವೆ. ಈ ರೀತಿಯ ಅನಿವಾರ್ಯತೆಯು ಭಾಷೆ (ನುಡಿ), ಪ್ರದೇಶ (ನಾಡು) ಕುರಿತ ಕಾಳಜಿಯ ಸಂದರ್ಭಗಳ ಸಹಜವಾಗಿಯೇ ಪ್ರಕಟಗೊಳ್ಳುತ್ತವೆ.

ಭೌಗೋಳಿಕತೆಗೆ ಸಂಬಂಧಿಸಿ, ದಕ್ಷಿಣಕನ್ನಡದ ಕವಿತೆಗಳಲ್ಲಿ ಕಂಡುಬರುವ ಮುಖ್ಯ ಆಶಯ ಈ ರೀತಿಯದು. ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಅನನ್ಯವಾಗಿ ಕಾಣುವ, ಆ ಮೂಲಕ ದೇಶ ಪಡೆಯಬೇಕಾದ ಅಸ್ತಿತ್ವವನ್ನು ವ್ಯಕ್ತಪಡಿಸುತ್ತದೆ ಮಾತ್ರವಲ್ಲ; 'ಭಾರತ' ಎಂಬ ಏಕಾಕಾರದ ವ್ಯವಸ್ಥೆಯಡಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಇತ್ಯಾದಿ ಭೇದ ಮರೆತ ಐಕ್ಯವನ್ನು ಪ್ರತಿಷ್ಠಾಪಿಸುತ್ತದೆ. ಈ ಪ್ರತಿಷ್ಠಾಪಿಸುವಿಕೆ ಸ್ವಾತಂತ್ರ್ಯಪೂರ್ವದಲ್ಲಿ ವಸಾಹತು ವಿರೋಧೀ ನೀತಿಯಾಗಿ ಮೈದಾಳುತ್ತದೆ. ಆದರೆ ಸ್ವಾತಂತ್ರ್ಯೋತ್ತರದ ಕವಿತೆಗಳಲ್ಲೂ ರಾಷ್ಟ್ರೀಯತೆಯು, ಸ್ವಾತಂತ್ರ್ಯಪೂರ್ವ ಕವಿತೆಗಳಂತೆಯೇ ಬಹುಮುಖೀ ವರ್ಣನೆಗಳೊಂದಿಗೆ ತನ್ನ ಅಸ್ತಿತ್ವವನ್ನು ಅಭಿವ್ಯಕ್ತಿಸಿದರೂ; ದೇಶದೊಳಗಿನ ರಾಜಕೀಯ ವೈಷಮ್ಯ, ಗಡಿವಿವಾದದ ಹೆಸರಿನಲ್ಲಿ ಪ್ರಕಟಗೊಳ್ಳುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಕಳೆದುಹೋಗುತ್ತಿರುವ ನಾಡಿಗಾಗಿ; ಎಲ್ಲರೂ ಒಂದಾಗಬೇಕೆಂಬ ಹಂಬಲ ಎದ್ದುಕಾಣುತ್ತದೆ.

'ತಾಯಿ', 'ಮಾತೆ' ಎಂದು 'ರಾಷ್ಟ್ರ'ವನ್ನು ಪರಿಕಲ್ಪಿಸುವುದು ಇಲ್ಲಿನ ಸಂಸ್ಕೃತಿಯಲ್ಲಿ ಸಹಜ

ಎನ್ನುವಂತೆ ಪ್ರಕಟವಾಗುತ್ತದೆ. ಎರಡೂ ಕಾಲಘಟ್ಟದ ಕವಿತೆಗಳಲ್ಲಿ ನಾಡನ್ನು ಕುರಿತ ಕಾಳಜಿಯಲ್ಲಿ ಅಲ್ಲಿನ ಭೌಗೋಳಿಕ ವರ್ಣನೆಯಲ್ಲಿ ನದಿ, ಸರೋವರ, ಬೆಳದಿಂಗಳು, ಪರ್ವತ, ಕಾಡು, ಬೆಟ್ಟ ಪಕ್ಷಿಸಂಕುಲ ಇತ್ಯಾದಿ ಪ್ರಾದೇಶಿಕ ವೈವಿಧ್ಯಗಳನ್ನೊಳಗೊಂಡ ನಾಡು 'ಮಾತೆ', 'ತಾಯಿ'ಯ ಕಲ್ಪನೆಯಾಗುವುದು ದಕ್ಷಿಣಕನ್ನಡದ ಸಂಸ್ಕೃತಿಯ ಛಾಯೆ. ಭಾರತೀಯ ಸಂಸ್ಕೃತಿಯಲ್ಲಿ ತಾಯಿಯನ್ನು ಪೂಜ್ಯಭಾವದಿಂದ ಹೇಗೆ ಕಾಣಲಾಗುತ್ತದೆಯೋ, ಅದೇ ರೀತಿ ರಾಷ್ಟ್ರವನ್ನು ಪೂಜ್ಯಭಾವದಿಂದ ಕಾಣುವ ಉದಾತ್ತ ಮನೋಭಾವ ವ್ಯಕ್ತವಾಗುತ್ತದೆ. ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಗುರುತಿಸಬಹುದಾದ ಮತ್ತೊಂದು ಅಂಶ; ಪ್ರಾಕೃತಿಕ ವೈವಿಧ್ಯಗಳನ್ನೊಳಗೊಂಡ ಈ ನೆಲದ ಸತ್ವ, ಅದರ ಮಹತ್ವವನ್ನು ಕವಿತೆಯ ಮೂಲಕ ಅಭಿವ್ಯಕ್ತಿಸುವುದು. ಭಾರತ ಮಾತೆ, ಕನ್ನಡ ತಾಯಿಯ ಕಲ್ಪನೆಗಳು ಮಾನವೀಯ ಸಂಬಂಧದ ಹಿನ್ನೆಲೆಯಲ್ಲಿ ಮೂಡಿಬರುತ್ತವೆ. ಭಾರತಮಾತೆಯ ಮುದ್ದುಗುವರಿ ಕನ್ನಡಮಾತೆ ಎಂಬ ತಾಯಿ ಮಗಳ ಕರುಳ ಸಂಬಂಧದಂತೆ; ಭರತಭೂಮಿಯ ವರಪುತ್ರನಾಗುವ ಕನ್ನಡಿಗನ ಹಂಬಲ ತಾಯಿ ಮಗನ ರಕ್ತ ಸಂಬಂಧದ ಸಂಸ್ಕೃತಿಯ ಬಹುಮುಖ್ಯವಾದ ಎಳೆಗಳನ್ನು ತೆರೆದು ತೋರಿಸುತ್ತವೆ.

ಹೀಗೆ ಉತ್ತರಭಾರತದಿಂದ, ದಕ್ಷಿಣಭಾರತದವರೆಗಿನ ಭಾರತದ ಪ್ರತಿಯೊಂದು ಅಂಗವೂ ಭಾರತಮಾತೆಯ ಭವ್ಯ, ಉಜ್ವಲ ಪರಂಪರೆಗಳಾಗಿ ಗುರುತಿಸಲ್ಪಟ್ಟು, ಸಂಸ್ಕೃತಿಯ ಚಹರೆಗಳನ್ನು ವ್ಯಕ್ತಗೊಳಿಸುವ ಉದಾರವಾದೀ ಚಿಂತನೆಯ ಪರಿ ದಕ್ಷಿಣಕನ್ನಡದ ಕವಿತೆಗಳಲ್ಲಿವೆ.

ಭಾಷಾಭಿಮಾನದ ಮೂಲಕ ನಾಡಿನ, ರಾಷ್ಟ್ರದ ಕಾಳಜಿಯನ್ನು ಅಭಿವ್ಯಕ್ತಿಸುವ ಸಂದರ್ಭದಲ್ಲಿ ತಾಯ್ನಾಡು, ಪ್ರದೇಶ, ದೇಶದ ಕುರಿತ ಚಿಂತನೆಗಳು ಅಭೇದ್ಯವಾಗಿ ಚಿತ್ರಿತವಾಗಿರುವುದನ್ನು ದಕ್ಷಿಣ ಕನ್ನಡದ ಸಂದರ್ಭದಲ್ಲಿ ಗುರುತಿಸಬಹುದು. ದೇಶದ ಹೆಸರನ್ನೆತ್ತಿ ಆಡುವ ಕನ್ನಡಾಭಿಮಾನವು ತನ್ನ ವಲಯದೊಳಗೆ 'ರಾಷ್ಟ್ರ'ವನ್ನು ವಿಸ್ತಾರವಾಗಿ 'ಏಕ'ವಾಗಿ ಕಾಣುವ ಚೌಕಟ್ಟನ್ನು ಹಾಕಿಕೊಳ್ಳುತ್ತದೆ. ಭಾಷೆಯ ಹೆಸರಿನಲ್ಲಿ ಗುರುತಿಸಿಕೊಳ್ಳುವ ಸಂದರ್ಭದಲ್ಲಿ ಭಾಷೆಗಾಗುತ್ತಿರುವ ಅವಮಾನ, ತಿರಸ್ಕಾರಗಳು ಅದರ ವ್ಯಾಪ್ತಿಯಲ್ಲಿ ಬರುತ್ತದೆ. ಗಡಿವಿವಾದದ ಹೆಸರಿನಲ್ಲಿ ನಡೆಯುವ ಭಾಷಾಕಲಹಗಳು, ರಾಷ್ಟ್ರವನ್ನು ಒಂದಾಗಿಸುವ ಸಂದರ್ಭದಲ್ಲಿ ಯಾವುದೇ ರೀತಿಯ ಒಪ್ಪಂದವನ್ನು ಮಾಡುವ ಅನಿವಾರ್ಯತೆಯನ್ನು ಪ್ರಕಟಪಡಿಸುವುದಿಲ್ಲ.

'ಸಂಸ್ಕೃತಿ' ಎನ್ನುವುದನ್ನು ಒಂದು 'ಜೀವನವಿಧಾನ' ಎಂಬ ಪರಿಕಲ್ಪನೆಯ ಚಿಂತನೆ ನಡೆಸಿದಾಗ, ಸಮಾಜದ ಗುಂಪೊಂದು ಬದುಕಬೇಕಾದ ರೀತಿನೀತಿಯನ್ನು ಅದು ಸ್ಪಷ್ಟಪಡಿಸುತ್ತದೆ. ಜೀವನ ನಡೆಸಲು ಬೇಕಾದ ಮೂಲಭೂತ ಅಂಶಗಳಾದ ಆಹಾರ, ಬಟ್ಟೆ - ವಸತಿ ಇವು ಮನುಷ್ಯನಿಗೆ

ಸಾಮಾಜಿಕ ವಲಯದಲ್ಲಿ ಸಾಮಾನ್ಯ ಮಟ್ಟದ ಜೀವನವನ್ನು ಕಲ್ಪಿಸಿಕೊಡುತ್ತದೆ. ಆದರೆ ಈ ಸಾಮಾನ್ಯ ವಲಯದಲ್ಲೂ ಜೀವಿಸಲಾಗದ ವ್ಯಕ್ತಿ / ಗುಂಪೊಂದು ವ್ಯಕ್ತಪಡಿಸುವ ವರ್ತನೆಗಳು ಭಿನ್ನವಾಗಿರುತ್ತವೆ. ಈ ಭಿನ್ನತೆಯು ಒಂದು ರೀತಿಯ ತಾರತಮ್ಯವನ್ನು ಸೃಷ್ಟಿಸುತ್ತದೆ. ಅದರ ಪರಿಣಾಮವಾಗಿ ವರ್ಣ ಸಂಘರ್ಷ, ವರ್ಗ ಸಂಘರ್ಷ, ಧರ್ಮಭೇದ, ಲಿಂಗಭೇದಗಳಂತಹ ಸಾಮಾಜಿಕ ಸಂಘರ್ಷಗಳು ತಲೆದೋರುತ್ತವೆ. ಇವಕ್ಕೆ ಮುಖ್ಯ ಕಾರಣ ಮೂಲಭೂತ ಸೌಕರ್ಯಗಳ ಕೊರತೆ. ಸ್ವಾತಂತ್ರ್ಯಪೂರ್ವದ ಸಾಮಾಜಿಕ ಸನ್ನಿವೇಶವು ವಸಾಹತು ಆಡಳಿತದ ಅಧೀನದಲ್ಲಿದ್ದುದರಿಂದ ಭಾರತೀಯರಿಗೆ ಸಹಜವಾಗಿಯೇ ಅನ್ಯಾವಲಂಬನೆ ಕಡ್ಡಾಯವಾಗಿತ್ತು. ಈ ಪರಿಸ್ಥಿತಿಯು ಭಾರತೀಯರಲ್ಲಿ ವಿಘಟನೆಯನ್ನು ತಂದಿತ್ತು. ದೇಶವು ಸ್ವಾವಲಂಬನೆಯನ್ನು ಗಳಿಸಲು, ದೇಶದ ಅಸ್ತಿತ್ವವನ್ನು ಏಕರೀತಿಯಿಂದ ಕಾಣಲು ಸರ್ವರೂ ಒಂದಾಗಬೇಕಾದ ಅನಿವಾರ್ಯತೆ ಇದ್ದುದರಿಂದ, ಇಲ್ಲಿನ ಜನರಲ್ಲಿ ಅಂತಹ ಭಾವನೆಗಳನ್ನು ಮೂಡಿಸುವ ಕಾರ್ಯವನ್ನು ದಕ್ಷಿಣ ಕನ್ನಡದ ಕವಿತೆಗಳು ಮಾಡಿದವು. 'ಕೂಡಿಬಾಳು' ಎಂಬುದು ಸಂಸ್ಕೃತಿಯ ಒಂದು ಧ್ಯೇಯವೇ ಆಗಿರುವುದರಿಂದ ದಕ್ಷಿಣ ಕನ್ನಡದ ಕವಿತೆಗಳು ಆ ತತ್ತ್ವದ ಅಡಿಯಲ್ಲಿ ಅದನ್ನು ಅಭಿವ್ಯಕ್ತಿಸಿದವು.

ಸ್ವಾತಂತ್ರ್ಯೋತ್ತರ ಸಮಾಜವು ವಸಾಹತು ಆಡಳಿತದಿಂದ ಮುಕ್ತಿಗೊಂಡರೂ ಅಲ್ಲಿನ ಸಮಾಜದ ಆಂತರಿಕ ಸ್ಥಿತಿಗತಿ ಮತ್ತಷ್ಟೂ ಭೀಕರವಾಗಿದ್ದಿತು. ಇಂಥ ಸಂದರ್ಭದಲ್ಲಿ ಬರಗಾಲ, ಜಾತಿ ಸಂಘರ್ಷ, ವರ್ಗ ಸಂಘರ್ಷದಂತಹ ತಿಕ್ಕಾಟದೊಂದಿಗೆ, ಭಯೋತ್ಪಾದನೆ, ವೇಶ್ಯಾವಾಟಿಕೆ, ಮಾದಕದ್ರವ್ಯ ಸೇವನೆಗಳಂತಹ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಿತು. ಈ ರೀತಿಯಲ್ಲಿ ವ್ಯಕ್ತಿಯ ಜೀವನ ವಿಧಾನವನ್ನು ಬದಲಿಸಿತು. ಅನ್ನಕ್ಕಾಗಿ ಬಾಲಕಾರ್ಮಿಕರ ಸೃಷ್ಟಿ, ಸ್ತ್ರೀಯರು, ಪುರುಷರು ಸಮಾನವಾಗಿ ಬದುಕುವುದಕ್ಕೆ ಹೆಣಗುವ ರೀತಿ ಒಂದು ವ್ಯವಸ್ಥೆಯನ್ನೇ ಬದಲಿಸುವ ಪ್ರಯತ್ನವನ್ನು ಮಾಡಿತು. ಆಧುನಿಕ ಸಂಸ್ಕೃತಿಯು ಮೂಲ ಪಾರಂಪರಿಕ ಸಂಸ್ಕೃತಿಯ ಮೇಲೆ ಬೀರಿದ ಪರಿಣಾಮ ಬಿಡಿಸಲಾಗದ ಸಾಮಾಜಿಕ ಸಮಸ್ಯೆಗಳಾಗಿ ರೂಪುತಳೆದವು. ಈ ಸಮಸ್ಯೆಗಳ ನಿವಾರಣೆಗಾಗಿ ವ್ಯಕ್ತಿಯು ತನ್ನ ಅಂತರ್‌ಮಾನಸವನ್ನು ಶುದ್ಧೀಕರಿಸುವುದರೊಂದಿಗೆ ಸಮಾಜವನ್ನು ನಿಜಸ್ಥಿತಿಗೆ ತರಬೇಕು ಎನ್ನುವ ಕಾಳಜಿ, ಸರ್ವರಲ್ಲಿ ತರಬೇಕು ಎನ್ನುವ ಮೂಲ ಉದ್ದೇಶ 'ತನ್ನ 'ಅಸ್ತಿತ್ವ', ಸ್ವಾತಂತ್ರ್ಯ' ಎಂಬ ರೀತಿಯಲ್ಲಿ ರಾಷ್ಟ್ರೀಯತೆಯನ್ನು ಪ್ರಸ್ತುತಪಡಿಸಿತು. ಸಂಸ್ಕೃತಿಯು ಒಂದು ಸಮಾಜದ 'ಜೀವನ ವಿಧಾನ'ವೇ ಆಗಿರುವುದರಿಂದ ಸಮಾಜದ ಸಮಸ್ಯೆಗಳು, ರಾಷ್ಟ್ರೀಯತೆಯ ಅಂಗವಾಗಿ ಮೈದಳೆಯಿತು.

ಪ್ರಾಚೀನತೆ ಮತ್ತು ನವೀನತೆಯ ಹೆಸರಿನಲ್ಲಿ 'ಸಂಸ್ಕೃತಿ' ಪಲ್ಲಟಗೊಂಡ ಬಗೆಯನ್ನು

ದಕ್ಷಿಣಕನ್ನಡದ ಕವಿತೆಗಳು 'ರಾಷ್ಟ್ರೀಯತೆ'ಯೊಂದಿಗೆ ಅಭಿವ್ಯಕ್ತಿಸುತ್ತವೆ. ಸ್ವಾತಂತ್ರ್ಯಪೂರ್ವದ ಕವಿತೆಗಳು ಚಿತ್ರಿಸುವ ಪ್ರಾಚೀನತೆ (ಪರಂಪರೆ) ಹಾಗೂ ಇತಿಹಾಸದ ವೈಭವೀಕರಣವು ಇಲ್ಲಿನ ಸಂಸ್ಕೃತಿಯ ಉದಾರವಾದೀ ನಿಲುವನ್ನು ವ್ಯಕ್ತಪಡಿಸುತ್ತದೆ. ಭಾಷಾಬೇಧ, ಧರ್ಮಭೇದ, ಲಿಂಗಭೇದವಿಲ್ಲದೆ ಎಲ್ಲರನ್ನೂ ಸ್ವೀಕರಿಸಿಕೊಂಡ ಮಹೋನ್ನತ ಪರಂಪರೆ ನಮಗಿದೆ. ಇದ್ದಕ್ಕಿದ್ದಂತೆಯೇ ಆ ಭವ್ಯತೆ, ಪರಂಪರೆಗಳು ನಾಶವಾದಾಗ, ಅದರೊಂದಿಗೆ ಬೆಳೆದುಬಂದ ಸಂಸ್ಕೃತಿ ಆಚರಣೆ, ನಂಬಿಕೆಗಳು ಕಣ್ಮರೆಯಾದಾಗ ಸಹಜವಾಗಿಯೇ ಅದರ ಮೇಲಿನ ಅಭಿಮಾನ, ಕಾಳಜಿ, ಒಲವು ಪ್ರಕಟಗೊಂಡವು. ಆ ಪ್ರಕಟಗೊಳ್ಳುವಿಕೆ ಸ್ವಾತಂತ್ರ್ಯಪೂರ್ವದಲ್ಲಿ ಉತ್ಕಟ ರಾಷ್ಟ್ರಾಭಿಮಾನದೊಂದಿಗೆ ವ್ಯಕ್ತವಾಯಿತು.

ಸ್ವಾತಂತ್ರ್ಯೋತ್ತರ ಸಮಾಜವು ಗತ ಪರಂಪರೆಯ ಬೆಳಕಿನೊಂದಿಗೆ ಆಧುನಿಕತೆಯ ಜಾಡನ್ನು ಹಿಡಿಯತೊಡಗಿತು. ನಗರೀಕರಣ, ಆಧುನೀಕರಣ, ಜಾಗತೀಕರಣದಂತಹ ಪ್ರಕ್ರಿಯೆಗಳು ಸಮಾಜವನ್ನು ಅಲ್ಲೋಲಕಲ್ಲೋಲಗೊಳಿಸಿದಾಗ ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯು ಜೀವನ ಪ್ರಗತಿಗೆ ಕಾರಣವಾದರೂ; ಇನ್ನೊಂದೆಡೆ ಸಂಸ್ಕೃತಿಯ ಪತನಕ್ಕೆ ಹೇತುವಾಗುತ್ತಿತ್ತು. ''ಜಾಗತೀಕರಣವು ದೇಶೀ ಸಂಸ್ಕೃತಿಗಳ ಪಾಲಿಗೆ ಕೇಡಿಗನಂತೆ ಬಂದಿರುವ ಹೊಸ ವಿಕಾರ. ಇದನ್ನು ಎದುರಿಸುವ ಉಪಾಯವೆಂದರೆ, ನಮ್ಮ ಸಂಪ್ರದಾಯದ ಗ್ರಾಮ ಜೀವನ, ಕುಲಕಸುಬು, ದೇಶೀ ಭಾಷೆ, ಸ್ಥಳೀಯ ಉಡುಗೆಗಳು, ಧರ್ಮದೇವರುಗಳು, ಹಬ್ಬ ಆಚರಣೆಗಳು ಇವಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವುದು ಎಂಬ ವಾದ''ವಿದೆ.[೨] ಜಾಗತೀಕರಣ ಪ್ರಕ್ರಿಯೆ, ಭಾವೈಕ್ಯ, ಅಸಮಾನತೆಗಳಂತಹ ಸಮಸ್ಯೆಗಳನ್ನು ಹುಟ್ಟುಹಾಕಿ, ಭಾಷಿಕ, ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕವಾಗಿ ಸಂಕ್ರಮಣಾವಸ್ಥೆಯನ್ನು ಸೃಷ್ಟಿಸುತ್ತದೆ. ಇಂತಹ ಗೊಂದಲ, ಸಮಸ್ಯಾತ್ಮಕ ವ್ಯವಸ್ಥೆಯಿಂದ ಮುಕ್ತವಾಗಲು ವ್ಯಕ್ತಿಯು ಆಂತರಿಕವಾಗಿ ಹಾತೊರೆದರೆ; ಸಮಾಜವು ಬಾಹ್ಯವಾಗಿ ಹಾತೊರೆಯುತ್ತದೆ. ಈ ಹಾತೊರೆಯುವಿಕೆಯು ಇಲ್ಲಿನ ಕವಿತೆಗಳಲ್ಲಿ ಭವ್ಯ, ಉತ್ಕಟ ರಾಷ್ಟ್ರಾಭಿಮಾನವನ್ನು ತುಂಬುವ ಪ್ರಯತ್ನ ಮಾಡುತ್ತದೆ. ಇದು ಪರಂಪರೆ ಮತ್ತು ಆಧುನಿಕತೆಯ ಮಧ್ಯೆ ತೊಳಲಾಡುವ ಸಮಾಜದ ಸ್ಥಿತಿಯಾಗಿರುವುದರಿಂದ ಅಂತಹ ವ್ಯವಸ್ಥೆಯನ್ನು ಬಿಟ್ಟು ಹೊಸ ವ್ಯವಸ್ಥೆಗಾಗಿ ಹಾತೊರೆಯುವ ಹಂಬಲ, ಆಕಾಂಕ್ಷೆಯು ಅಭಿವ್ಯಕ್ತಗೊಳ್ಳುತ್ತದೆ. ಪ್ರತಿಯೊಬ್ಬನ ಆಂತರ್ಯದಲ್ಲೂ ಇದನ್ನು ಮೂಡಿಸುವ ಸಲುವಾಗಿ ದಕ್ಷಿಣಕನ್ನಡದ ಕವಿತೆಗಳು ಅನನ್ಯವಾದ ರೀತಿಯಲ್ಲಿ ಪ್ರಸ್ತುತಪಡಿಸುತ್ತವೆ.

ಈಗಾಗಲೇ ಚರ್ಚಿಸಿದಂತೆ, ಭಾರತೀಯ ಜೀವನ ಪದ್ಧತಿಯು ರೂಢಿಸಿಕೊಂಡು ಬಂದಿರುವ ಒಡಂಬಡಿಕೆಯು ಒಂದು ಸಾಮಾಜಿಕ ಸ್ಥರವಿನ್ಯಾಸದ ಕಟ್ಟುಪಾಡುಗಳನ್ನು ಒಪ್ಪಿಕೊಂಡೂ ಸಹಜೀವನದಿಂದ ಬಾಳುವ ಸಂಸ್ಕೃತಿಯನ್ನು ಮುಂದಿಡುತ್ತದೆ. ಆದರೆ ಅಸಮಾನತೆಯಿಂದ ಕೂಡಿರುವ

ಅನಿಷ್ಟವನ್ನು ಹೊರತುಪಡಿಸಿ ಸರ್ವರ ಮನಸ್ಥಿತಿಯಲ್ಲೂ ಆ ರೀತಿಯ ಚಿಂತನೆ ಮೂಡಿದಾಗ ಮಾತ್ರ ಸಂಸ್ಕೃತಿಯನ್ನು ಮಾನವೀಯವಾಗಿ ಉಳಿಸಲು ಸಾಧ್ಯ. ಧರ್ಮಭೇದ, ಜಾತಿಭೇದ ಮೀರಿ ಚಿಂತಿಸುವ ಸಮಾಜ ಇದಕ್ಕಾಗಿ ನಿರ್ಮಾಣವಾಗಬೇಕು. ಸ್ವಾತಂತ್ರ್ಯಪೂರ್ವ ಸಮಾಜವು ವಸಾಹತು ಆಳ್ವಿಕೆಯ ಪ್ರಭಾವದಿಂದ ಧರ್ಮಭೇದಕ್ಕೆ ಎಡೆಕೊಟ್ಟಿತು. ಈ ಭೇದವು ವಸಾಹತು ಆಳ್ವಿಕೆಯನ್ನು ಭದ್ರವಾಗಿ ಬೇರೂರಿಸುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಪರಕೀಯ ಅಧೀನದಿಂದ ಮುಕ್ತಗೊಂಡು ತಮ್ಮದೇ ಆದ ಸ್ವಾವಲಂಬೀ ಜೀವನವನ್ನು ನಡೆಸಲು ಅಗತ್ಯವಾದ 'ಸ್ವಾತಂತ್ರ್ಯ'ವನ್ನು ಗಳಿಸುವುದು ಒಂದು ರೀತಿಯಲ್ಲಿ ಧರ್ಮವೇ ಆಗಿದೆ. ಈ ರೀತಿಯ ಜೀವನದಲ್ಲಿ ಪ್ರೀತಿ, ಸಹಕಾರ, ವಿಧೇಯತೆ, ವಿಶ್ವಾಸ, ಗೌರವ, ನಂಬಿಕೆಗಳಿದ್ದು ಕೂಡಿಬಾಳುವ ಮನಸ್ಥಿತಿಯನ್ನು ರೂಪಿಸುತ್ತದೆ. ವಸಾಹತು ಆಳ್ವಿಕೆ ಪ್ರಬಲಗೊಂಡಾಗ, ಈ ವ್ಯವಸ್ಥೆ ಶಿಥಿಲಗೊಳ್ಳುವ ಸಂದರ್ಭದಲ್ಲಿ ಜನರಲ್ಲಿ ಅದನ್ನು ಮೂಡಿಸುವ ಅನಿವಾರ್ಯತೆ ಇತ್ತು. ಈ ಅನಿವಾರ್ಯತೆಯೇ ಚಿಂತಕರ ತತ್ವಗಳಿಂದ ಪ್ರಭಾವಿತವಾದ, ಧಾರ್ಮಿಕ ಶ್ರದ್ಧೆಯೊಂದಿಗಿನ ರಾಷ್ಟ್ರೀಯಪ್ರಜ್ಞೆ. ಸ್ವಾತಂತ್ರ್ಯವನ್ನು ಗಳಿಸಬೇಕಾದ ಅನಿವಾರ್ಯತೆ ಅತೀ ಅಗತ್ಯವೆನಿಸಿದಾಗ ಸ್ವಧರ್ಮವನ್ನು ಪ್ರೀತಿಸುವ, ಅನ್ಯ ಧರ್ಮವನ್ನು ಗೌರವಿಸುವ ಧರ್ಮಚಿಂತನೆ ಜನರಲ್ಲಿ ಮೂಡಿಸಬೇಕಾಯಿತು.

ಸ್ವಾತಂತ್ರ್ಯೋತ್ತರ ಸಮಾಜದಲ್ಲಿ ಪಡೆದಂತಹ ಸ್ವಾತಂತ್ರ್ಯವನ್ನು ಉಳಿಸುವುದಕ್ಕಾಗಿ ಧರ್ಮದ ಜಾಗೃತಿ ಅನಿವಾರ್ಯವಾಯಿತು. ಭಾರತ ಸಂವಿಧಾನದ ಮೂಲರೂಪವಿರುವುದೇ ಧರ್ಮಾತೀತತೆಯಲ್ಲಿ. ಭಾರತ ರಾಷ್ಟ್ರೀಯತೆಯ ಗುರುತಿಸುವಿಕೆಯಲ್ಲಿ ಸನಾತನ ಧರ್ಮದ ಪ್ರತಿಕೃತಿ ಅಡಗಿರುವುದರಿಂದ ಭಾರತ ರಾಷ್ಟ್ರೀಯತೆ, ವೀರ್ಯವತ್ತಾಗಿ, ಆಧ್ಯಾತ್ಮಿಕ, ತತ್ವಚಿಂತನೆಗಳಡಿ ವ್ಯಕ್ತಗೊಳ್ಳುತ್ತದೆ. ಆಸೇತು ಹಿಮಾಚಲದಿಂದ ಕನ್ಯಾಕುಮಾರಿಯವರೆಗಿನ ಭಾರತದ ಭೌಗೋಳಿಕತೆಯು ಹಿಂದೂಸ್ಥಾನವೆಂದು ಪ್ರತಿಷ್ಠಾಪಿಸಿಕೊಳ್ಳುವುದು 'ಹಿಂದೂ' ಚಿಂತನೆಯನ್ನು ಹುಟ್ಟುಹಾಕುತ್ತಿದೆ. ಮಾತ್ರವಲ್ಲ; ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಅದೆಷ್ಟೋ ಭಿನ್ನ ಧರ್ಮೀಯ ವ್ಯಕ್ತಿಗಳನ್ನು ನಿವಾರಿಸುವಲ್ಲಿಂದ ತೊಡಗಿ; ಇತ್ತೀಚೆಗಿನ ಕೋಮುವಾದೀ ಪ್ರಕ್ರಿಯೆಯಾಗಿ ರೂಪು ತಾಳುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ; ನಮ್ಮನ್ನು ನಾವು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಗಿ, ನಮ್ಮತನವನ್ನು ಉಳಿಸಲು ಅತ್ಯುತ್ತಮ ಸಾಂಸ್ಕೃತಿಕ ನೆಲೆಗಟ್ಟು ಅತೀ ಅಗತ್ಯ. ಆ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಕೇವಲ ಹಿಂದೂ ಮಾತ್ರವಲ್ಲ; ಮುಸ್ಲಿಂ, ಕ್ರೈಸ್ತ, ಪಾರಸಿಗಳ ಅಭಿವ್ಯಕ್ತಿಗೂ ಪ್ರಾಶಸ್ತ್ಯ ದೊರೆಯಬೇಕು. ಏಕೆಂದರೆ ನಮ್ಮದು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ರಾಷ್ಟ್ರ. ಈ ವಿವಿಧತೆ ಅಂದರೆ ಧರ್ಮ, ಜಾತಿ, ಲಿಂಗ, ಭಾಷೆ, ಆಚಾರ ವಿಚಾರ - ಮುಂತಾದವುಗಳಲ್ಲಿ ಒಂದರ ಅಸ್ತಿತ್ವದ ಕೊಂಡಿ

ಕಳಚಿತೆಂದರೆ ಸಮಸ್ತ ಭಾರತದಲ್ಲೂ ಅಸಮತೋಲನೆ ಏರ್ಪಡಬಹುದು. ಇಂತಹ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ ಸಲುವಾಗಿ 'ಸಾಹಿತ್ಯ'ವು ತನ್ನಲ್ಲಿ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡು ವಿಶ್ವಮಾನವ ಸಂದೇಶವನ್ನು ಸಾರುವ ಪ್ರಯತ್ನ ಮಾಡಿತು. ಮಾನವನಲ್ಲಿ ಮಾತ್ರವಲ್ಲ ಪ್ರಾಣಿಗಳನ್ನು ಕೂಡಾ ಈ ರೀತಿ ಕರುಣೆಯ ದೃಷ್ಟಿಯಿಂದ ನೋಡಿತು. ಸ್ವಾತಂತ್ರ್ಯ ದೊರೆಯಲು ಕಾರಣಕರ್ತರಾದ ಮಹಾನ್ ವ್ಯಕ್ತಿಗಳ ಚಿಂತನೆ, ವಿಚಾರಧಾರೆ; ಅವರು ನಡೆದ ಸನ್ಮಾರ್ಗ, ಸರ್ವೋದಯದ ಕಲ್ಪನೆ - ಇವೆಲ್ಲವೂ ಭಾರತವನ್ನು ಒಂದು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹಿಡಿದಿಟ್ಟಿತು. ದೇಶದ ಅಸ್ತಿತ್ವ, ಏಳಿಗೆ, ಆರ್ಥಿಕ ಸುಧಾರಣೆ, ರಾಜಕೀಯ ಒಮ್ಮತ - ಈ ಎಲ್ಲವನ್ನೂ ತರುವ ಪ್ರಯತ್ನದ ಸಾಂಸ್ಕೃತಿಕ ಪ್ರಕ್ರಿಯೆಯಾಗಿ ಕವಿತೆಗಳು ತಮ್ಮ ಆಶಯವನ್ನು ಹೊರಗೆಡಹಿವೆ.

ರಾಷ್ಟ್ರೀಯತೆಯ ಅಭಿವ್ಯಕ್ತಿಯ ಬಹುಮುಖ್ಯ ಕಾಳಜಿ ದೇಶದ ಸ್ವಾತಂತ್ರ್ಯ ಗಳಿಸುವುದು. ಸಾಮ್ರಾಜ್ಯವಾದೀ ಆಕ್ರಮಣವು ಭಾರತೀಯ ಸಮಾಜದ ಪ್ರತಿವ್ಯವಸ್ಥೆಯ ಮೇಲೂ ತನ್ನ ಏಕಸ್ವಾಮ್ಯವನ್ನು ಪ್ರತಿಷ್ಠಾಪಿಸಿತು. ಇದರಿಂದ ಬೇಸತ್ತ ಭಾರತೀಯ ಮನಸ್ಸು ಸತ್ಯಾಗ್ರಹ, ಚಳವಳಿ, ಅಹಿಂಸೆ ಮುಂತಾದ ತಂತ್ರಗಳನ್ನು ಬಳಸಿ ನೇರವಾಗಿ ವಸಾಹತುವಿನ ಶಕ್ತಿಯನ್ನು ಹಿಮ್ಮೆಟ್ಟಿಸುವುದಕ್ಕೆ ಮಾತ್ರವಲ್ಲ; ಪ್ರತಿಯೊಬ್ಬ ಭಾರತೀಯನ ಆಂತರ್ಯದಲ್ಲಿ ಆ ಚಿಂತನೆಯನ್ನು ಮೂಡಿಸುವ ಪ್ರಯತ್ನ ಮಾಡಿತು. ವ್ಯಕ್ತಿಯ ಆಂತರ್ಯದಲ್ಲಿನ ಬದಲಾವಣೆ ಹಾಗೂ ಬಾಹ್ಯ ಪ್ರತಿಭಟನೆಯ ಮೂಲಕ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಂಸ್ಕೃತಿಯನ್ನೇ ತಮ್ಮ ಅಸ್ತ್ರ ಆಯುಧಗಳಾಗಿ ಇಲ್ಲಿನ ಕವಿತೆಗಳು ಬಳಸಿವೆ. ಸ್ವಾತಂತ್ರ್ಯದ ಗಳಿಕೆ ರಾಜಕೀಯ ಸ್ವಾತಂತ್ರ್ಯದ ಗುರಿಯಾಗಿರುವುದರಿಂದ ದಕ್ಷಿಣಕನ್ನಡದ ಕವಿತೆಗಳಿಗೆ ಭಾರತದ ಸ್ವಾತಂತ್ರ್ಯದ ಜೊತೆಗೆ ಅನ್ಯಾಕ್ರಮಣದಿಂದ ಕರ್ನಾಟಕ, ಕನ್ನಡವನ್ನು ರಕ್ಷಿಸುವ ಅನಿವಾರ್ಯವಿತ್ತು. ಭಾಷಾ ಮಹತ್ವವನ್ನು ಬಣ್ಣಿಸುವಾಗಲೂ; ನಾಡಿನ ಪರಂಪರೆಯ ಬಗ್ಗೆ ಹೆಮ್ಮೆಪಟ್ಟುಕೊಳ್ಳುವಾಗಲೂ, ಸಾಮಾಜಿಕ ಸಮಸ್ಯೆಗಳ ನಿವಾರಣೆಯಾಗಿ ಸಮಾನತೆ ಏರ್ಪಡಲು, ಧಾರ್ಮಿಕ ಸಮಾನತೆಯ ಅಭಿವ್ಯಕ್ತಿಯ ಸಂದರ್ಭದಲ್ಲೂ ಇಲ್ಲಿನ ಕವಿತೆಗಳು ಅದನ್ನು ತಮ್ಮ ಸಂಸ್ಕೃತಿಯ ಹಿನ್ನೆಲೆಯಿಂದಲೇ ಪ್ರಸ್ತುತಪಡಿಸಿದವು.

ನಮ್ಮ ಸಂಸ್ಕೃತಿಯ ದ್ಯೋತಕವಾಗಿ ಮೂಡಿಬಂದ ವೃತ್ತಿಗಳಲ್ಲಿ 'ಕೃಷಿ'ಗೆ ಅತ್ಯುನ್ನತ ಮಹತ್ವವಿದೆ. ಇಲ್ಲಿನ ಜನಜೀವನದ ಎಲ್ಲ ಮಜಲುಗಳಲ್ಲಿ ರೈತಸಂಸ್ಕೃತಿ ಎದ್ದುಕಾಣುತ್ತದೆ. ಆಹಾರೋತ್ಪಾದನೆಗಾಗಿ ಆತ ಬಳಸುವ ಕೃಷಿ ಸಲಕರಣೆಗಳು; ಅನ್ನ, ಆಹಾರ, ಬಟ್ಟೆ ಎಂಬೀ ಮೂಲ ಅವಶ್ಯಕತೆಗಳನ್ನು ಈಡೇರಿಸುವುದಕ್ಕಾಗಿ. ಆದ್ದರಿಂದ ಮೂಲಭೂತ ಸೌಕರ್ಯಗಳ ಈಡೇರಿಕೆಯಾಗಿ ಆ ಮೂಲಕ ಸ್ವಾವಲಂಬನೆಯನ್ನು ಪಡೆಯಲು ನಮ್ಮ ಸಂಸ್ಕೃತಿಯ ಮಹತ್ವವನ್ನು ಅರಿತು ಬಾಳಬೇಕು ಎನ್ನುವ

ಜೀವಪರ ಚಿಂತನೆ ದಕ್ಷಿಣ ಕನ್ನಡದ ಕವಿತೆಗಳಲ್ಲಿ ಪ್ರಕಟವಾಗುತ್ತವೆ. ''ಕೂಳಿಗಾಗಿ ಅನ್ಯರ ಮುಂದೆ ಕೈಚಾಚುವ ಪರಿಸ್ಥಿತಿಗಿಂತಲೂ ಸ್ವಂತ ಕೃಷಿ ಮಾಡಿ ಜೀವನ ನಡೆಸುವ' ಎಂಬ ಆಶಯಗಳುಳ್ಳ ದಕ್ಷಿಣಕನ್ನಡದ ಕವಿತೆಗಳಲ್ಲಿ ಆಂತರಿಕ ಸ್ವಾವಲಂಬನೆಯ ಮುಖ್ಯ ಅಸ್ತ್ರವಾಗಿ ಕೃಷಿ ಬಳಕೆಯಾಗಿದ್ದರೆ; ಸ್ವಾತಂತ್ರ್ಯ ಗಳಿಸಲೇಬೇಕೆಂಬ ಬಾಹ್ಯ ಅಸ್ತ್ರವಾಗಿ ಕೃಷಿ ಸಲಕರಣೆಗಳಾದ ನೊಗ, ನೇಗಿಲು, ಹಾರೆ, ಗುದ್ದಲಿ ಇವುಗಳೇ ಮುಖ್ಯಸ್ಥಾನವನ್ನು ಪಡೆದಿರುವುದನ್ನು ಗುರುತಿಸಬಹುದು. ''ಹಾರೆಗುದ್ದಲಿ ಕೊಡಲಿ ನೊಗ ನೇಗಿಲು ಎತ್ತುತಲಿ, ನೆಲದಿಂದ ಹೊರಟು ಬನ್ನಿ'' ಎಂದು ಹೇಳುವ ಇಲ್ಲಿನ ಕವಿತೆಗಳು ರೈತನ ಬೇಸಾಯ ಸಲಕರಣೆಗಳನ್ನು ಸ್ವಾತಂತ್ರ್ಯ ಗಳಿಸಬೇಕಾದ ಅಸ್ತ್ರಗಳಾಗಿ ಬಳಸುತ್ತವೆ.

ಸ್ವಾತಂತ್ರ್ಯ ಗಳಿಸಿದಾಗ ಮಾತ್ರವೇ ಇಲ್ಲಿನ ಭವ್ಯ ಸಂಸ್ಕೃತಿಯ ಉಳಿವು ಸಾಧ್ಯ ಎಂದು ಹೇಳುವ ಕವಿತೆಗಳು ಆಚರಣೆ, ಪಾಡ್ದನ, ಆಟಿಕಳೆಂಜ, ಭೂತಕೋಲ – ಇವು ನಮ್ಮ ಸಂಸ್ಕೃತಿಯ ಪವಿತ್ರ ದಾಖಲೆಗಳೆಂಬ ಅಂಶವನ್ನು ಒತ್ತಿ ಹೇಳುತ್ತಾ ಅದರ ಉಳಿಕೆಗಾಗಿ ಪ್ರಯತ್ನಪಟ್ಟಿರುವುದನ್ನು ಗುರುತಿಸಬಹುದು. ತುಳುನಾಡಿನ ಕೋಟೆ, ಅಳಿಯಕಟ್ಟು ವ್ಯವಸ್ಥೆ, ವೃಕ್ಷಪೂಜೆ, ಪುರಾಣಪ್ರಜ್ಞೆ, ಖಾದಿವಸ್ತ್ರ, ಗೋಹತ್ಯಾ ನಿಯಂತ್ರಣ, ದೀಪ – ಇವೇ ಮುಂತಾದ ಅಂಶಗಳನ್ನು ಕವಿತೆಗಳು 'ರಾಷ್ಟ್ರೀಯತೆ'ಯ ಭಾಗವಾಗಿ ಗುರುತಿಸಿಕೊಳ್ಳುತ್ತವೆ. ಆ ಮೂಲಕ ತನ್ನ ಪರಂಪರೆಯ ಗೌರವಪೂರ್ಣ ಸಂಗತಿಗಳನ್ನು ಆಂತರಿಕವಾಗಿ ಒಪ್ಪಿಕೊಳ್ಳುತ್ತಾ ವಸಾಹತು ವಿರುದ್ಧ ಪ್ರತಿಭಟನೆಯನ್ನು ಮಾಡುತ್ತದೆ.

ಪ್ರತಿಭಟನೆಯ ತೀವ್ರಗತಿಯ ಸಂದರ್ಭದಲ್ಲೂ ಇಲ್ಲಿನ ಸಂಸ್ಕೃತಿಯ ಚಿತ್ರಣ ಕವಿತೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ವಸಾಹತು ಆಡಳಿತವು ನಾಡಿನಾದ್ಯಂತ ಒಂದು ರೀತಿಯ ಜಡತ್ವ ಭಾವವನ್ನು ತುಂಬಿದಾಗ, ಅಂಥವರನ್ನು ಚೈತನ್ಯಪೂರ್ವಕ ಎಚ್ಚರಿಸುವುದಕ್ಕಾಗಿ ಸ್ವಾತಂತ್ರ್ಯದ 'ಕಹಳೆ' ಮೊಳಗುತ್ತದೆ. ''ಇಂದಿನಾವೇಶವಿದು, ಹಿಂದಿನಾಪರಿಯಲ್ಲ, ಒಡೆತನಕೆ ತಲೆಬಾಗಿ ಮುರುಟಲಿಹುದಲ್ಲ'' ಎಂಬ ಸಾಲಿನ, ಕಹಳೆ (ಕಡೆಂಗೋಡ್ಲು ಶಂಕರ ಭಟ್ಟ) ಕವನದಲ್ಲಿ ಸ್ವಾತಂತ್ರ್ಯ ಎಂಬ ಕಹಳೆ ಮೊಳಗಿದಾಗ ತಮ್ಮತನವನ್ನು ಉಳಿಸುವುದಕ್ಕಾಗಿ ಎಲ್ಲೆಲ್ಲೂ ನಡೆದ ಬದ್ಧತೆಯ ಕುರಿತು ಅಭಿವ್ಯಕ್ತಿಸುತ್ತದೆ. ಆ ಮೂಲಕ ವಿಶೇಷ ಸಂದರ್ಭಗಳಲ್ಲಿ ಬಳಕೆಯಾಗುವ ಸಂಸ್ಕೃತಿಯ ಪರಿಕರವೊಂದನ್ನು 'ರಾಷ್ಟ್ರ' ನಿರ್ಮಾಣದ ಪ್ರಕ್ರಿಯೆಯಲ್ಲಿ ರೂಪಕವಾಗಿ ಬಳಸಿರುವುದನ್ನು ಗಮನಿಸಬಹುದು. ಅದೇ ರೀತಿಯಲ್ಲಿ ಯಜ್ಞ, ಚಕ್ರ... ಎಂಬೀ ಪದಗಳ ಬಳಕೆಯು ಶತ್ರುವಿನ ಎದುರಾಳಿಯಾಗಿ ಬಳಕೆ ಮಾಡುವಂತಹ 'ರಾಷ್ಟ್ರೀಯ' ಅಸ್ತ್ರವಾಗಿ ಅಭಿವ್ಯಕ್ತಗೊಂಡಿವೆ.

ಸ್ವಾತಂತ್ರ್ಯೋತ್ತರ ಭಾರತದ ಸಂದರ್ಭದಲ್ಲಿ ಐಕ್ಯ ಸಂದೇಶವನ್ನು (ಸ್ವಾತಂತ್ರ್ಯದ ಕಾಳಜಿ)

ಸಾರುವ ಕವನಗಳೂ ಇಲ್ಲಿನ ಸಂಸ್ಕೃತಿಯನ್ನು ತಮ್ಮೊಡಲಲ್ಲಿ ಹುದುಗಿಸಿಕೊಂಡಿವೆ. 'ನಾವೆಲ್ಲ ಒಂದು' ಎಂಬುದನ್ನು ಸ್ಥಾಪಿಸುವುದಕ್ಕಾಗಿ ಬಳಸಿಕೊಂಡ ಬಹುತೇಕ ಉದಾಹರಣೆಗಳು ಸ್ವಾತಂತ್ರ್ಯಪೂರ್ವದ ಕವಿತೆಗಳು ಅಭಿವ್ಯಕ್ತಿಸಿದ ಆಶಯವನ್ನು ಬಿಂಬಿಸುತ್ತವೆ. ಸ್ವಾತಂತ್ರ್ಯ, ಸ್ವಾವಲಂಬನೆ, ಸ್ವಾಭಿಮಾನಗಳ ಸರ್ವಸುಖೀ ಸ್ವರ್ಗಕ್ಕೆ ಪುರಾಣದ ಅವತಾರೀ ಪುರುಷನ (ರಾಮ/ಕೃಷ್ಣ /ವಿಷ್ಣು) ಹೊಸತೊಂದು ಅವತಾರಕ್ಕಾಗಿ ಹಾತೊರೆಯುವ ಹಂಬಲವನ್ನು ಕವಿತೆ ಪ್ರಕಟಪಡಿಸುತ್ತದೆ. ಸಂಸ್ಕೃತಿಯು ಗತಕಾಲದ ಪರಂಪರೆಗಳನ್ನು ತನ್ನೊಡಲಲ್ಲಿರಿಸಿಕೊಂಡಿರುವುದರಿಂದ ಇತಿಹಾಸಪ್ರಜ್ಞೆಯು ಅದರೊಂದಿಗೆ ಬೆರೆತುಕೊಂಡಿರುತ್ತದೆ. ದೇಶಕ್ಕೆ ಸ್ವಾತಂತ್ರ್ಯ ದೊರೆಯಲು ಕಾರಣೀಭೂತರಾದ ಮಹಾನ್‌ಪುರುಷರ ತತ್ತ್ವ, ಆದರ್ಶಗಳ, ಅವರು ಹಿಡಿದ ಪಥವನ್ನು ನಮ್ಮ ಜೀವನವಿಧಾನದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಾ ಆಂತರಿಕವಾಗಿ ಛಿದ್ರಗೊಂಡ ಸ್ವಾತಂತ್ರ್ಯದ ಸಾರ್ಥಕತೆಯನ್ನು ಉಳಿಸಬೇಕೆನ್ನುತ್ತದೆ.

ರಾಷ್ಟ್ರವು 'ಭಿನ್ನತೆ'ಯಲ್ಲೂ 'ಏಕತೆ'ಯ ಅಸ್ತಿತ್ವವನ್ನು ತೆರೆದು ತೋರುವಾಗ, ಸ್ವಾತಂತ್ರ್ಯವನ್ನು ಅಭಿವ್ಯಕ್ತಿಸುವ ಸಂದರ್ಭದಲ್ಲಿ ಸಾಂಸ್ಕೃತಿಕ, ಸಾಮಾಜಿಕ, ಭಾಷಿಕ, ಪ್ರಾದೇಶಿಕ ತಾರತಮ್ಯಗಳೊಂದಿಗೆ ಗುರುತಿಸುವುದರೊಂದಿಗೆ ರಾಜಕೀಯ ಹಾಗೂ ಆರ್ಥಿಕ ತಾರತಮ್ಯಗಳ ಕಡೆಗೂ ತಮ್ಮ ನೋಟವನ್ನು ಬೀರುತ್ತದೆ. ಆಧುನಿಕ ಸಮಾಜವು ಪರಕೀಯಾಡಳಿತದಿಂದ ಮುಕ್ತಿಗೊಂಡರೂ ದೇಶೀ ಆಡಳಿತದ ತಾರತಮ್ಯಕ್ಕೆ ಗುರಿಯಾಗಿ ಛಿದ್ರೀಕರಣವಾಗುತ್ತಿದೆ. ಭಿನ್ನತೆಯಿಂದ ಒಂದಾಗುವಿಕೆಗೆ ಪಟ್ಟ ಪ್ರಯತ್ನದ ಫಲವು ಏಕತೆಯಿಂದ ಭಿನ್ನತೆಯ ಕಡೆಗೆ ಛಿದ್ರೀಕರಣಗೊಳಿಸುವ ಸನ್ನಿವೇಶವನ್ನು ಸೃಷ್ಟಿಸುತ್ತಿವೆ, ಸೃಷ್ಟಿಸಿವೆ. ಗಡಿರಾಜ್ಯ, ಗಡಿಪ್ರದೇಶಗಳ ದೃಷ್ಟಿ ನಮ್ಮ ರಾಷ್ಟ್ರದ ಮೇಲೆ ಸದಾ ಕೆಂಗಣ್ಣಾಗಿರುವುದರಿಂದ, ಅದರಿಂದ ರಕ್ಷಣೆ ಪಡೆಯಬೇಕೆಂಬ ಕೂಗು ಎಲ್ಲೆಲ್ಲೂ ಕೇಳಿಬರುತ್ತಿವೆ. ಅನ್ಯಗಡಿಯವರು ಮಾತ್ರವಲ್ಲ; ದೇಶದೊಳಗಿರುವ ರಾಜಕಾರಣಿಗಳೇ ದೇಶದ ಅಸ್ತಿತ್ವವನ್ನು ಕುಟ್ಟಿ ಕೆಡಹಲು ಕಾರಣರಾಗಿದ್ದಾರೆ. ಇದನ್ನು ಎದುರಿಸುವುದಕ್ಕೆ ಸಾಧ್ಯವಾಗದಿರುವುದು ದೇಶದಲ್ಲೆಲ್ಲೂ ವ್ಯಾಪಿಸಿರುವ ಬಡತನ, ಗ್ರಾಮೀಣ ಅಭಿವೃದ್ಧಿ ಕುಂಠಿತವಾಗಿರುವುದು. ಸ್ವದೇಶಿವಾದವನ್ನು ಅಭಿವೃದ್ಧಿಯ ಸಾಧನವಾಗಿ ನಿರೂಪಿಸಿದ, "ಗಾಂಧೀಜಿಯವರ ಚಿಂತನೆಯ ಪ್ರಮುಖ ಅಂಶ ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ಅಭಿವೃದ್ಧಿ. ಇದು ಉದ್ಯೋಗ, ಆದಾಯಸೃಷ್ಟಿಗೆ ಕಾರಣ. ಆಹಾರ ಪೂರೈಕೆಯಲ್ಲಿ ಸ್ವಯಂಸಾಧನೆಯನ್ನು ಪ್ರೋತ್ಸಾಹಿಸುವುದರೊಂದಿಗೆ ವ್ಯಕ್ತಿ, ಪ್ರದೇಶಗಳ ಮತ್ತು ವಲಯಗಳ ನಡುವಿನ ಅಂತರವನ್ನು ಗಣನೀಯವಾಗಿ ತಗ್ಗಿಸುತ್ತದೆ. ಶ್ರಮಸಾಂದ್ರ ತಂತ್ರಜ್ಞಾನಗಳ ಅಳವಡಿಕೆಯು ಗ್ರಾಮೀಣ ಹಾಗೂ ಗುಡಿ ಕೈಗಾರಿಕಾ ಪುನರುತ್ಥಾನಕ್ಕೆ ಪ್ರೋತ್ಸಾಹ ನೀಡಬಹುದು. ಆದರೆ ಜಾಗತೀಕರಣದ ಯುಗದಲ್ಲಿ

ಆಧುನಿಕ ತಂತ್ರಜ್ಞಾನದ ಬೃಹತ್ ಉದ್ಯಮಗಳು ಚಿಕ್ಕ ಪುಟ್ಟ ಕೈಗಾರಿಕೆಗಳನ್ನು ನಾಶಮಾಡಿವೆ. ಇದು ಗ್ರಾಮೀಣ ಜನತೆಯ ಸ್ವಾಭಿಮಾನದ ಮೇಲೆ ಎಸೆದ ಸವಾಲಿನಂತಾಗಿ; ಬೃಹತ್ ಉದ್ದಿಮೆಗಳೇ ತಮ್ಮ ಸ್ಥಾನವನ್ನು ಭದ್ರಪಡಿಸುತ್ತವೆ. ಹೀಗೆ ಉತ್ಪಾದನೆ ಮತ್ತು ಹಂಚಿಕೆಯಲ್ಲಿನ ಅಸಮಾನತೆಯಿಂದಾಗಿ ಜನರಲ್ಲಿ ಅತೃಪ್ತಿ, ಅಸಹನೆ, ಹೆಚ್ಚಾಗಿ ಭ್ರಷ್ಟಾಚಾರ, ದೌರ್ಜನ್ಯಗಳಿಗೆ ದಾರಿ ಮಾಡಿಕೊಡುತ್ತಿವೆ"[೩]. ಆದ್ದರಿಂದ ನಮ್ಮ ಸ್ವಾವಲಂಬನೆಗೆ ನೊಗ, ನೇಗಿಲು ಹೊತ್ತ ಕೃಷಿ ಉದ್ಯಮಕ್ಕೆ ಪ್ರಾಶಸ್ತ್ಯ ನೀಡುತ್ತಾ ದುಡಿಮೆಯ ಮಹತ್ವವನ್ನು ಸಂಸ್ಕೃತಿಯ ಮಹತ್ವವೆಂಬಂತೆ ಗುರುತಿಸುವ ಕವಿತೆಗಳನ್ನು ದಕ್ಷಿಣಕನ್ನಡದ ಸಂದರ್ಭದಲ್ಲಿ ಕಾಣಬಹುದು.

೫.೩ ಅಧ್ಯಯನದ ಫಲಶ್ರುತಿ

'ರಾಷ್ಟ್ರ' ಎಂಬ ಪದವನ್ನು ನಿರೂಪಿಸುತ್ತಲೇ ರಾಷ್ಟ್ರೀಯತೆಯ ಪರಿಕಲ್ಪನೆ ಸಂಕೀರ್ಣಗೊಳ್ಳುತ್ತಾ ಹೋಗುತ್ತದೆ. ಏಕೆಂದರೆ 'ರಾಷ್ಟ್ರೀಯತೆ' ಎಂಬುದು ಕೇವಲ ಒಂದು ದೃಷ್ಟಿಕೋನದಲ್ಲಿ ಮಾತ್ರ ನೋಡಲಾಗುವ ಪರಿಕಲ್ಪನೆ ಅಲ್ಲ. ಆದರೆ ಭಿನ್ನ ಪರಿಕಲ್ಪನೆಗಳ ಮೂಲಕ ಗ್ರಹಿಸಿಕೊಂಡರೂ ಅದು ಅಂತಿಮವಾಗಿ 'ಏಕ' ಪರಿಕಲ್ಪನೆಯಡಿ ಪ್ರತಿಷ್ಠಾಪಿಸಲ್ಪಡುತ್ತಾ ಅಂತಿಮವಾಗಿ ಭಿನ್ನವಾಗಿಯೇ ನಿಲ್ಲುತ್ತದೆ. ಯಾವುದಾದರೂ ಕೆಲವು ಅಂಶಗಳ ಪ್ರೋತ್ಸಾಹಿಸುವಿಕೆಯಿಂದ 'ರಾಷ್ಟ್ರೀಯತೆ' ಪ್ರಕಟಗೊಳ್ಳುತ್ತದೆ ಎಂದು ಚರ್ಚಿಸಲಾಗಿದೆ. ಆದರೆ ಅದೆಷ್ಟೋ ಶತಮಾನಗಳ ಹಿಂದೆ ಭಾರತವನ್ನು ಎಜಟಿಕ್, ಮಾಯಾ, ಇಂಕರೇ ಮುಂತಾದ ಜನಾಂಗದವರು ಆಕ್ರಮಿಸಿದ್ದು – ಆ ಸಂದರ್ಭದಲ್ಲಿ ಭಾರತ 'ರಾಷ್ಟ್ರೀಯತೆ' ಪ್ರಕಟಗೊಳ್ಳಲಿಲ್ಲವೇ? ಎಂಬುದು ವಿವಾದಾಸ್ಪದ.

'ರಾಷ್ಟ್ರೀಯತೆ'ಯು ಮುಖ್ಯವಾಗಿ ತನ್ನ ಸ್ವಾತಂತ್ರ್ಯವನ್ನು ಗಳಿಸಬೇಕಾದ ಹಿನ್ನೆಲೆಯಿಂದ, ತನ್ನ ಅಸ್ತಿತ್ವವನ್ನು ಪ್ರತಿಷ್ಠಾಪಿಸುವ ಉದ್ದೇಶದಿಂದ, ನಾಡನ್ನು ಒಂದಾಗಿಸುವ ಗುರಿಯನ್ನು ಇಟ್ಟುಕೊಂಡಿರುವುದು ಗಮನಾರ್ಹ. ಈ ಸಂದರ್ಭದಲ್ಲಿ ಅದು ವ್ಯಕ್ತಿಕೇಂದ್ರಿತವಾಗಿ ಸುಧಾರಣಾವಾದಿ ನಿಲುವನ್ನೂ, ಸಾಮೂಹಿಕ ನೆಲೆಯಲ್ಲಿ ತೀವ್ರಗಾಮೀ ಸ್ವರೂಪವನ್ನು ತಾಳುತ್ತದೆ. ಆದರೆ ಎರಡೂ ಮಾರ್ಗಗಳ ಆತ್ಯಂತಿಕ ಗುರಿ ಅಂತಿಮವಾಗಿ ಒಂದೇ ಆಗಿರುತ್ತದೆ. ಜಾತಿ, ಲಿಂಗ, ಧರ್ಮ, ಮತಭೇದಗಳ ನಿವಾರಣೆಯ ಸುಧಾರಣಾವಾದಿ ನಿಲುವು; ವಸಾಹತು ವಿರೋಧದ ತೀವ್ರಗಾಮೀ ಧೋರಣೆಯು 'ರಾಷ್ಟ್ರ'ವೊಂದು ತನ್ನನ್ನು ದೃಢವಾಗಿ ನೆಲೆಯೂರಿಸುವ ಪ್ರಯತ್ನ ಮಾಡುವುದನ್ನು ಇಲ್ಲಿನ ಕವಿತೆಗಳಲ್ಲಿ ಗುರುತಿಸಬಹುದು. ಸಾಮಾನ್ಯವಾಗಿ ಈ ದೃಷ್ಟಿಕೋನವು ಸಮಾಜದ ಬದಲಾವಣೆಯೊಂದಿಗೆ ಭಿನ್ನ ಸ್ವರೂಪವನ್ನು ತಾಳುತ್ತದೆ. ಪೂರ್ವೋಲ್ಲೇಖದಂತೆ

ತನ್ನೊಡಲಲ್ಲಿ ಸಂಸ್ಕೃತಿಯ ಪರಂಪರೆ, ಇತಿಹಾಸಗಳನ್ನು ಹುದುಗಿಸಿಕೊಂಡಿರುವ 'ರಾಷ್ಟ್ರೀಯತೆ' ಆಧುನಿಕತೆಯೊಂದಿಗೆ ಸಂಕೀರ್ಣಗೊಳ್ಳುತ್ತಾ ಹೋಗುತ್ತದೆ. ಆರಂಭದಲ್ಲಿದ್ದ ತನ್ನ ಭೌಗೋಳಿಕತೆ, ಭಾಷೆ, ಸಮಾಜ, ಪರಂಪರೆ, ರಾಜಕೀಯ ವಲಯಗಳಲ್ಲಿ ತನ್ನನ್ನು ಸ್ವೀಕರಿಸುವ ಉದ್ದೇಶಗಳನ್ನು ಸಡಿಲಗೊಳಿಸುತ್ತಾ ತನ್ನೊಳಗೇ ಭೇದವನ್ನು ಕಾಣುವ ಪ್ರಕ್ರಿಯೆ 'ರಾಷ್ಟ್ರೀಯತೆ'ಯನ್ನು ಸಮಸ್ಯಾತ್ಮಕವಾಗಿಸುತ್ತದೆ.

ರಾಷ್ಟ್ರೀಯತೆಯ ಪರಿಕಲ್ಪನೆ ವಿಸ್ತಾರವಾಗುವುದರೊಂದಿಗೆ, ವ್ಯಕ್ತಿಯಲ್ಲಿ ಅದು ಸಂಕುಚಿತಗೊಳ್ಳುತ್ತಾ ಹೋಗುತ್ತದೆ. ರಾಷ್ಟ್ರೀಯತೆಯನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಅನ್ಯ ಗಡಿಪ್ರದೇಶಗಳನ್ನು ತಮ್ಮವೆಂದು ಭಾವಿಸಿ ರಾಷ್ಟ್ರದ ಭಾಗವಾಗಿ ಗುರುತಿಸುವ ಪ್ರಕ್ರಿಯೆ, ಈಗ – ಪ್ರಸ್ತುತ ಗಡಿವಿವಾದಗಳ ಕಲಹದೊಂದಿಗೆ 'ತಾನು', 'ತನ್ನದು' ಎಂಬ ಸಂಕುಚಿತ ಮನೋಭಾವನೆ ಮಾತ್ರ ಉಳಿಯುತ್ತದೆ. ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರದಲ್ಲಿ ದಕ್ಷಿಣಕನ್ನಡದ ಕವಿತೆಗಳು ಗಡಿಪ್ರದೇಶವನ್ನು ಭಾರತೀಯತೆಯ ಅಂಗವಾಗಿ ಗುರುತಿಸಿದ್ದು, ಪ್ರಸ್ತುತ ಕಾಸರಗೋಡು, ದಕ್ಷಿಣಕನ್ನಡ ಎಂಬ ಪ್ರಾದೇಶಿಕ ಒಲುಮೆ ಅತಿಯಾಗಿ ಎದ್ದು ಕಾಣುತ್ತದೆ. ಪ್ರಾದೇಶಿಕವಾಗಿಯೂ ಮತ್ತೆ ಅದು ಹಿಂದಿನ ಜಾತಿ, ವರ್ಗ, ಧರ್ಮ, ಲಿಂಗ ಭೇದಗಳ ಕಡೆಗೆ ಹತ್ತಿರವಾದಂತೆ ಕಾಣುತ್ತದೆ. ಏಕೆಂದರೆ ಒಂದು ಪ್ರದೇಶದ ಜನರಿಗೆ ದೇಶಕ್ಕಾಗಿ 'ಒಂದಾಗಿ' ಬಾಳಲಾಗದ ಸ್ಥಿತಿ ಎದುರಾಗಿದೆ. 'ನಾಡು' ಎಂದಾಕ್ಷಣ 'ಭಾರತ' ಎಂದು ಗುರುತಿಸಿಕೊಳ್ಳಲಾಗದೆ ಕೇರಳ, ಆಂಧ್ರ, ಕರ್ನಾಟಕ ಎಂಬ ರಾಜ್ಯದ ಹೆಸರಿನಲ್ಲಿ ಅಥವಾ ಪ್ರಾದೇಶಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವುದು 'ರಾಷ್ಟ್ರೀಯತೆ'ಗೆ ವ್ಯತಿರಿಕ್ತವಾಗಿ ಪ್ರಕಟಗೊಳ್ಳುತ್ತದೆ.

ಇತ್ತೀಚೆಗೆ ಬೆಳವಣಿಗೆಯನ್ನು ಕಂಡ ಕೋಮುವಾದೀ ಚಿಂತನೆ ರಾಷ್ಟ್ರೀಯತೆಯ ಅಭಿವ್ಯಕ್ತಿಗೆ ಮತ್ತೊಂದು ದೊಡ್ಡ ಹೊಡೆತ. ಭಾರತವನ್ನು 'ಸಿಂಧೂ' ನಾಗರಿಕತೆಯ ಇತಿಹಾಸದೊಂದಿಗೆ ಕಲ್ಪಿಸಿಕೊಂಡ 'ಹಿಂದೂ' ರಾಷ್ಟ್ರದ ಕಲ್ಪನೆ ಪ್ರಸ್ತುತ ಧಾರ್ಮಿಕವಾಗಿ ತನ್ನನ್ನು ವಿಸ್ತರಿಸುವ ಪ್ರಕ್ರಿಯೆಗೆ ಎಡೆಮಾಡಿದೆ. 'ಹಿಂದೂ' ಎಂಬ ಪ್ರದೇಶವಾಚಿ ಈಗ ಧರ್ಮ / ಕೋಮುವಾದಿ ಪದವಾಗಿ ತನ್ನನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಅಲ್ಲಲ್ಲಿ ನಡೆಯುವ ಮೆರವಣಿಗೆ, ಸಮಾವೇಶಗಳು 'ರಾಷ್ಟ್ರ'ದ ಹೆಸರಿನಲ್ಲಿ ಭದ್ರಗೊಳ್ಳುತ್ತಿರುವುದು ಆ ಮೂಲಕ ರಾಷ್ಟ್ರೀಯತೆ ಹೆಚ್ಚು ಸಮಸ್ಯಾತ್ಮಕವಾಗುವುದು ಗಮನಾರ್ಹ. ಅದೇ ರೀತಿ ಶಿಕ್ಷಣ ಸಂಬಂಧೀ ವಿಚಾರಗಳು ಕೂಡಾ 'ರಾಷ್ಟ್ರೀಯತೆ' ಒಂದು ವಿಭಾಗದೆಡೆಗೆ ಮುಖ ಮಾಡಿ ಚಿಂತಿಸುವಂತೆ ಮಾಡುತ್ತಿವೆ.

ಹೀಗೆ 'ರಾಷ್ಟ್ರೀಯತೆ' ಎನ್ನುವುದು ಬಹುಮುಖವಾಗಿ ತನ್ನನ್ನು ಸ್ಥಾಪಿಸುವ ಪ್ರಯತ್ನವನ್ನು

ನಡೆಸುತ್ತಲೇ ಇರುತ್ತದೆ. ರಾಷ್ಟ್ರವೊಂದು ಒಲಿಂಪಿಕ್ಸ್ ಕ್ರೀಡೆಯಲ್ಲಿ ಗೆದ್ದಾಗ, ನೆರೆಯ ರಾಷ್ಟ್ರವನ್ನು ಸೋಲಿಸಿದಾಗ, ಭಾರತೀಯನೊಬ್ಬ ಅತ್ಯುನ್ನತ ಗೌರವವನ್ನು ಪಡೆದಾಗ ಆಂತರಿಕವಾಗಿಯೂ ಬಾಹ್ಯವಾಗಿ ಪ್ರಕಟಗೊಳ್ಳುವ ಹೆಮ್ಮೆಯ ಸಂತೋಷದ ಕ್ಷಣಗಳು ಯಾವ ನೆಲೆಯಲ್ಲಿ ಗುರುತಿಸಬೇಕು ಎಂಬುದು ಇನ್ನೂ ಸಮಸ್ಯಾತ್ಮಕ. ರಾಜ್ಯ, ಪ್ರದೇಶ ಎಂಬ ಭಿನ್ನತೆಯನ್ನು ಬಿಟ್ಟು ಜಾತಿ, ಮತ, ಧರ್ಮ, ಭೇದಗಳನ್ನು ಮರೆತು ಆಂತರಿಕ ಅಭಿಮಾನದಿಂದ ಒಪ್ಪಿಕೊಳ್ಳುವ ರೀತಿ ಒಂದು ರೀತಿಯಲ್ಲಿ ರಾಷ್ಟ್ರೀಯತೆಯೇ ಹೌದು. ಅಂತಿಮವಾಗಿ 'ರಾಷ್ಟ್ರ' ರಾಷ್ಟ್ರೀಯತೆಯನ್ನು ನಿರ್ದಿಷ್ಟವಾಗಿ ಒಂದೇ ನಿಗದಿತ ವ್ಯಾಖ್ಯಾನದಲ್ಲಿ ಬಿಗಿದಿಡುವುದು ಕಷ್ಟ ಏಕೆಂದರೆ ಅದು ಬದಲಾವಣೆಗೆ ಒಳಪಡುತ್ತಲೇ ಇರುತ್ತದೆ. ಆದ್ದರಿಂದ ರಾಷ್ಟ್ರೀಯತೆಯು ಸಂಕೀರ್ಣಾತ್ಮಕ, ಸಮಸ್ಯಾತ್ಮಕ, ಚಲನಶೀಲ, ಚಿಂತನಾಶೀಲವಾದುದು. ದಕ್ಷಿಣಕನ್ನಡದ ಕವಿತೆಗಳನ್ನು ಕುರಿತ ಈ ಅಧ್ಯಯನದಲ್ಲಿ 'ರಾಷ್ಟ್ರೀಯತೆ'ಯನ್ನು ಭಿನ್ನ ಅಂಶಗಳ ಮೂಲಕ ಒಂದು ಪರಿಕಲ್ಪನೆಯಾಗಿ ವ್ಯಾಖ್ಯಾನಿಸುವ ಪ್ರಯತ್ನವಿದೆ. ಸಾಹಿತ್ಯದ ಉಳಿದ ಪ್ರಕಾರಗಳಲ್ಲಿಯೂ ಈ ರೀತಿಯ ಅಧ್ಯಯನಕ್ಕೆ ಅವಕಾಶವಿದೆ; ಪ್ರಾದೇಶಿಕ ಉಪಭಾಷೆಗಳಲ್ಲಿ ವ್ಯಕ್ತಗೊಳ್ಳುವ ಭಾಷಿಕ, ನಾಡಾಭಿಮಾನಗಳ ನೆಲೆಯಲ್ಲೂ ಅಧ್ಯಯನವನ್ನು ವಿಸ್ತೃತಗೊಳಿಸಬಹುದು. ಆದರೆ ಈ ಅಧ್ಯಯನದ ವ್ಯಾಪ್ತಿಯ ಸೀಮಿತ ಚೌಕಟ್ಟಿನ ಅಡಿಯಲ್ಲಿ ದಕ್ಷಿಣ ಕನ್ನಡದ ಕವಿತೆಗಳನ್ನು ಮತ್ತು ಅವುಗಳ ಮೂಲಕ ಪ್ರಕಟವಾಗುವ ರಾಷ್ಟ್ರೀಯತೆಯ ಚಿಂತನೆಗೆ ಮಾತ್ರ ಪ್ರಾಮುಖ್ಯ ನೀಡಿರುವುದರಿಂದ ಇತರ ಸಾಹಿತ್ಯ ಪ್ರಕಾರಗಳು ಚರ್ಚಿಸುವ ಚಿಂತನಾ ವಿನ್ಯಾಸಗಳನ್ನು ಕ್ರೋಢೀಕರಿಸುವುದು ಅಧ್ಯಯನದ ಚೌಕಟ್ಟಿನ ಮಿತಿಯೊಳಗೆ ಅನಗತ್ಯವಾದುದರಿಂದ ಆ ಚರ್ಚೆಯನ್ನು ನಿರೂಪಿಸಲಿಲ್ಲ. ಸಾಹಿತ್ಯ ಪ್ರಕಾರಗಳಲ್ಲಿ ಕವಿತೆಗಳು ಹೆಚ್ಚು ಭಾವನಾತ್ಮಕ ಹಾಗೂ ಬೌದ್ಧಿಕ ನಿಲುವುಗಳಿಗೆ ಸದಾ ಪೂರಕವಾಗಿರುವುದರಿಂದ ಮತ್ತು ಜನತೆಯನ್ನು ಮುಟ್ಟುವ ಶಕ್ತಿ ಹೊಂದಿರುವುದರಿಂದ ಈ ಅಧ್ಯಯನಕ್ಕೆ ಕವಿತೆಗಳನ್ನು ಮಾತ್ರ ಆಕರವಾಗಿ ಬಳಸಿಕೊಳ್ಳಲಾಗಿದೆ. ಆ ಮೂಲಕ ಸೂಚಿತ ವಿಷಯಕ್ಕೆ ನ್ಯಾಯ ಒದಗಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಕೊನೆ ಟಿಪ್ಪಣಿಗಳು

೧. ರಹಮತ್ ತರೀಕೆರೆ; ಕನ್ನಡ ಸಂಶೋಧನೆ - ತಾತ್ವಿಕ ವಿಚಾರ, ಪುಟ ೭

೨. ರಹಮತ್ ತರೀಕೆರೆ; 'ಕನ್ನಡ ಸಂಶೋಧನೆ - ತಾತ್ವಿಕ ವಿಚಾರ, ಪುಟ ೧೪

೩. ಒಡೆಯರ್ ಹೆಗ್ಗಡೆಯವರ; ಜಾಗತೀಕರಣ ಮತ್ತು ಗಾಂಧೀಜಿಯವರ ಆರ್ಥಿಕ ಧಾರೆ, ಕೃತಿಗೆ ಪ್ರೊ. ಬಿ.ಕೆ. ತುಳಸಿಮಾಲ ಅವರು ಬರೆದ ಮುನ್ನುಡಿ.

ಅನುಬಂಧ I

೧. ಮಳೆಹನಿಯ ಬಿಡು ಹೂಗಳಲಿ ಮರ
ಗಳ ಹಸಿರು ಹಚ್ಚೆಯಲಿ ಕಡಲಿನ
ಬಿಳಿನೊರೆಗಳಂಚಿನಲಿ ಮಿರುಗುವ ಸೀರೆಯನು ತಳೆದ
ಹೊಳೆವ ಹೊಳೆಗಳ ಗಳದ ಸರದಲಿ
ಝುಳದ ಹಿಮಗಿರಿ ಮುಕುಟದಲಿ ಥಳ
ಥಳಿಪ ರಮಣಿಯೆ! ಜನ್ಮಧರಣಿಯೆ! ಭರತಭೂಮಿಯೆ!

(ಪಂಜೆಯವರ ಪದ್ಯಗಳು, ಪುಟ ೭೨)

೨. ಭಾರತವನುಳಿಯುತ್ತ ನನಗೆ ಜೀವನವೆತ್ತ?
ಭಾರತವೆ ನನ್ನುಸಿರು ಭಾರತವೆ ಮನೆಮಾನ್ಯ
ಭಾರತವೆ ಧನಧಾನ್ಯ, ಮನಮಾನ್ಯ
ಭಾರತವೆ ದೇವಾರೆನ್ನ ಸಂಸಾರ

(ಹೃದಯರಂಗ, ಪುಟ ೨)

೩. ನಮ್ಮವಳೀ ಭಾರತ ಜನನಿ

ಭೂಮಂಡಲದಿ ರಮಣೀಯ
ಈ ಭಾರತವೆಮ್ಮಯ ನಿಲಯಂ
ನಾವೀಕೆಯ ಮರಿದುಂಬಿಗಳು
ಈಕೆಯೆಮ್ಮ ಜೀವನನಳಿನಿ

(ಗೋವಿಂದ ಪೈ ಸಮಗ್ರ ಕವಿತೆಗಳು, ಗಿಳಿವಿಂಡು, ಪುಟ ೧೧)

೪. ಬೇಡೆನು ವಿಶಾಲ ಸಾಮ್ರಾಜ್ಯದೊಡೆತನವನ್ನು
ಬೇಡೆನ್ನೈ ಪುತ್ರಮಿತ್ರ ಕಳತ್ರ ಸುಖವ
ಬೇಡೆನಾ - ಜಗದಗಲ ಪಸರಿಸುವ ಜಸವನು
ಕರುಣಿಸೆರೆಯಾ ದೈನ್ಯರಹಿತ ಜೀವನವ

(ಶತಮಾನದ ಗಾನ)

೫. ಬೇಡೆಂ ಕೀರ್ತಿಯ ಬೇಡೆನಾಂ ಪ್ರಭುತೆಯನ್ನೈಶ್ವರ್ಯಮಾಯುಷ್ಯವಂ
ನಾ ನಾಕೌಕವ ಬೇಡೆ, ಮೋಕ್ಷವನೆ ಬೇಡೆಂ ಜನ್ಮ ಜನ್ಮಂಗಳೊಳ್
ಹಿಂದೂ ಧರ್ಮದೊಳೆನ್ನ ಭಾರತದೊಳೆನ್ನ ಪುಟ್ಟಿಸೈ, ಬೇಡೆವೆಂ
ಕಾಯೆಮ್ಮೊಳ್ ಜನನೀಸ್ತನಂಥತಯೆಂ! ಶ್ರೀಮಾತೃಭೂಮಿಶ್ವರಾ

(ಹೃದಯರಂಗ, ಪುಟ ೫೧)

೬. ಕನ್ನಡ ಕುಲವೊಂದೇ ಕುಲ
ತಾಯೊಬ್ಬಳೆ ನಮಗೆ
ಕನ್ನಡ ನುಡಿಯೊಂದೇ ನುಡಿ
ಕಾಯುವ ಕೈ ನಮಗೆ
ತನುಮನ ನಿರ್ಮಲವೆನಿಸುವ
ಲಿರಲಾತ್ಮ ಜ್ಯೋತಿ
ಮನೆಮನೆಯಲಿ ದೀಪಾವಳಿ
ಅದೆ ಭ್ರಾತೃಪ್ರೀತಿ
ಜಯ ಕನ್ನಡ ಮಾತೆ
ಭಾರತ ಸುಪ್ರೀತೆ

(ಚೆಂಗಲವೆ, ಪುಟ ೪೬)

೭. ಹೊಲೆಯನಾರೂರ ಹೊರಗಿರುವವನೆ ಗೆಳೆಯ?
ಜಾತಿಯಿಂದಲ್ಲ ಗುಣದಿಂದಹನು ಹೊಲೆಯ

ಶುದ್ಧ ತಾನೆಂದು ಪರರನು ಮುಟ್ಟದವ ಹೊಲೆಯ
ಹೊಲೆಯರೆಂದನ್ಯರನು ಕರೆವವನೆ ಹೊಲೆಯ
ತಾನು ಮೇಲೆಂದುಬ್ಬಿ ಹೀನೈಸುವವ ಹೊಲೆಯ
ಕೀಳುದೆಸೆಯವರನುದ್ಧರಿಸಿದವ ಹೊಲೆಯ

೮. ಕನ್ನಡಿಗರ ಭಾಗ್ಯನಿಧಿಯ
ಭರಿತದಲ್ಲಿ ಸೂರೆಗುಡಿವ
ಹುಮ್ಮಸದಲಿ ಯವನಸೇನೆ ವಡಬನಂತೆ ನುಗ್ಗಿತು
ನಮ್ಮ ದೇವ । ನಮ್ಮ ರಾಯ ।
ನಮ್ಮ ರಾಮರಾಯ । ಎಂದು
ನಮ್ಮ ನಗರ ತೆರೆಯ ತೆರದಿ ಮೊರೆದು ಚೆಲ್ಲಿ ಕೆಡೆಯಿತು

(ಸೇಡಿಯಾಪು ಕೃಷ್ಣ ಭಟ್ಟ, ಚಂದ್ರಖಂಡ ಮತ್ತು ಸಣ್ಣಕಾವ್ಯಗಳು, ಪುಟ ೧೩).

೯. ಭಾರತದ ನಾಡಿ ನಾಡಿಯ ಧಮನಿಧಮನಿಯಲಿ
ಸೇರುತಂಗಾಂಗಗಳ ರಕ್ತಕಣಗಳಲಿ
ಮೊರೆ ಮೊರೆದು ಭೋರ್ಗರೆದು ಬೇಗ ಬಳಿಸಾರ
ತೆರೆನೊರೆಯನುಕ್ಕಿಸುವ ಸಾಹಸವೆ ಬಾರ

('ಸಾಹಸ', ಕಟ್ಟುವೆವು ನಾವು, ಅಡಿಗ ಕಾವ್ಯ ಸಂಪುಟ, ಪುಟ ೮೬)

೧೦. ದಂಡಿಯಾತ್ರೆಗೆ ಹೊರಟಿಹನು ಮಹಾತ್ಮ
ಖಂಡಿಸಿ ಸರಕಾರದಾಜ್ಞೆಯನಮಮ
ಉಂಡು ಮಲಗಿ ನಿದ್ದೆಯಲಿ ಬಿದ್ದಿರದೆ
ತಂಡ ತಂಡಗಳಾಗಿ ಬನ್ನಿರಿ ಬರದೆ

(ಸ್ವರಾಜ್ಯ, ಪುಟ ೮೫)

ಅನುಬಂಧ II

೧. ನೋಡಿ ನೋಡಿ ಅವಳ ವಿಪುಲ ವಿಮಲ ವರ್ಣವೈಭವ
ತುಂಬಿ ತುಂಬಿ ತುಳುಕಿ ಹರಿವ ವಜ್ರವೀರ್ಯದನುಭವ
ಸಿಂಧು ಗಂಗಾ, ಯಮುನೆ ಗೋದಾವರಿ
ಕೃಷ್ಣೆ ನರ್ಮದೆ, ತುಂಗಭದ್ರೆ, ಕಾವೇರಿ
ನದಿರೂಪಗಳ ತಾಳಿ ಪರ್ವತಾಳಿಯ ಸೀಳಿ
ಜಲರಾಶಿಯಾಗಿ ಸಾಗಿ
ಧನಕನಕ ಧೇನು ಧಾನ್ಯಗಳ ಸಂಸ್ಕೃತಿಯಾಗಿ
ಸ್ನೇಹ - ಸಹಕಾರವಾಗಿ
ಒಂದೆ ನೆಲ ಒಂದೆ ಕುಲ ಒಂದೆ ಛಲದಿಂ ಬಾ
ಬೆಳಗುತಿಹೆವು
ಐಕ್ಯಗಾನವ ಹಾಡಿ ನಲಿಯುತಿಹೆವು

(ಬಾನುಲಿ ಕವನಗಳು, ಪುಟ ೧೪)

೨. ಸತ್ಯಸಂಧರ ನಾಡು, ಆಯ್ತು ಪಂಚಂ ಪಾಡು
ಕಳ್ಳಕಾಕರ ಜಾಡು ಎಲ್ಲೆಲ್ಲೂ ನೋಡು
ಸತ್ಯವನು ವಧಿಸುತಲಿ ಧರ್ಮವನು ಮುರಿಯುತಲಿ
ಮೆರೆದೆ ಮೆರೆಯುತ್ತಿಹರು ರಾಷ್ಟ್ರದಲ್ಲೆಲ್ಲ
ಬೇಕು ಜನಕಿನ್ನೇನು - ಹೋಕು ಹೊಕ್ಕಿಲ್ಲದಿಹ
ದಿಕ್ಕು ದೆಸೆಯಿಲ್ಲದಿಹ - ಸೊಕ್ಕು ಠಕ್ಕು
ಸ್ವರ್ಗವೆಂದರೆ ಅದುವೆ
ಪ್ರಜೆಯ ನಿತ್ಯದ ಮದುವೆ
ಜನನಿ ಜನುಮದ ನೆಲವು ಮಸಣವದುವೆ

೬. ಮಾನವ ವರ್ಗವೆ ನಮ್ಮ ಸಮಾಜ
ಮಾನವ ಹಿತವೇ ಹಿರಿಯ ಗುರಿ
ಗುರಿಯನು ಸಾಧಿಸಲಾಗಲೆ ಸುಖವಿದೆ
ಜನತೆಯ ದೇವನು ಒಲಿಯುವನು

೭. ಸಂಪತ್ತಿದಾನವೇ ತ್ಯಾಗಮಂತ್ರದ ಮೌನ
ಶ್ರಮದಾನವೆಂಬುದೇ ನಿಸ್ವಾರ್ಥತೆಯ ಕಿರಣ
ನಿನ್ನ ಬೋಧನಫಲವೆ ವೈಚಾರಿಕ ಕ್ರಾಂತಿ
ಇದರಿಂದ ಸಾಧ್ಯ ಪರಿಣಾಮ ಜೀವನ ಶಾಂತಿ

೮. ಆರ್ಷವಾಣಿಯ ಸನಾತನ ಧರ್ಮ ಹಿಂದೊಮ್ಮೆ
ನಾಸ್ತಿಕರ ಚಾರ್ವಾಕ ಪಾಖಂಡ ಪಂಡಿತರ
ಹಿಡಿತಕೊಳಕಾಗಿ ಮಾಂತ್ರಾಹಿ ಎಂದೆನುವಾಗ
ವೀರಶಂಕರ ಪರಿವ್ರಾಜಕಾಚಾರ್ಯವರ
ಅವತಾರವೆಸಗಿ, ಧರ್ಮಧ್ವಜವ ಮೇಲೆತ್ತಿ
ಆಧ್ಯಾತ್ಮದ್ವೈತ ಬ್ರಹ್ಮಜಯಗೈದಂತೆ
ಬಳಿಕ ದಶ ಶತಮಾನ ಕಳೆಯಲ್ಕೆ ಮತ್ತೊಮ್ಮೆ
ಮ್ಲೇಚ ಪಾದಾಘಾತದಿಂದ ನುಗ್ಗಾಗಿರುವ
ಭಾರತೀಯರ ಧರ್ಮ - ತತ್ವ - ಸಂಸ್ಕೃತಿಯನ್ನು
ವೀರ ಸನ್ಯಾಸಿ ನೆಲೆಗೊಳಿಸಿ ರಕ್ಷಿಸಿದ.

೯. ಈ ದೇಶ ನಮ್ಮದೆಂದು
ಈ ದೇಶ ಬೆಳೆಯಲೆಂದು
ಈ ದೇಶ ಉಳಿಯಲೆಂದು
ಎಲ್ಲವರು ಬರಬೇಕು ಒಂದಾಗಿ ಮುಂದಾಗಿ ಇಂದು
ಈ ದೇಶ ಮರೆದಾಗ ನಾವು

ಈ ರಾಷ್ಟ್ರ ಉಳಿದಾಗ ನಾವು
ತಣಿದೀತು ಕಾವು ನೋವು
ಎಲ್ಲವರು ಅದಕಾಗಿ ಎಚ್ಚರದಿ ಎದ್ದೇಳಿ ಮುಂದು

೭. ಕೊಡಿ ನಿಮ್ಮ ತ್ರಾಣ ಪ್ರಾಣ
ಉಳಿಸೋಣ ರಾಷ್ಟ್ರದಾ ಮಾನ
ಕಣ್ಣೀರು, ಬೆವರು ರಕುತ
ದೇಶಕ್ಕೆ ಮೀಸಲಿರಲಿ ಅನವರತ

೮. ಸತ್ಯ, ಅಹಿಂಸೆ, ನ್ಯಾಯಗಳ ಆರಾಧಕರು ನಾವು
ಅದಕಾಗಿ ಪಟ್ಟಿಹೆವು ಅತ್ಯಧಿಕ ಸಾವು, ನೋವು
ಗಾಂಧಿ ನೆಹರುಗಳ ಪಥದಲ್ಲಿ ನಡೆಯುವವರು ನಾವ
ನಿತ್ಯ ಆಕ್ರಮಣ, ದರ್ಪದಾ ಎದುರಾಳಿಗಳು ನಾವು

ಆಕರ ಸೂಚಿ

೧. ಅಮ್ಮೆಂಬಳ ಶಂಕರನಾರಾಯಣ ನಾವಡ; ಪಡಿದನಿ, ಸಾಹಿತ್ಯಾಂಜಲಿ ಪ್ರಕಾಶನ, ಕೋಟೆಕಾರು, ದಕ್ಷಿಣ ಕನ್ನಡ - ೧೯೭೨

೨. ಇದಿನಬ್ಬ ಬಿ.ಎಮ್; ವೀರಗೀತೆಗಳು ಮತ್ತು ಕಿಡಿಗಳು, ಸೌಹಾರ್ದ ಸಾಹಿತ್ಯ ಮಾಲೆ ಮಂಗಳೂರು - ೧೯೬೬

೩. ಕಯ್ಯಾರ ಕಿಂಞಣ್ಣ ರೈ; ಶತಮಾನದ ಗಾನ, ಕವಿತಾ ಕುಟೀರ ಪೆರಡಾಲ- ೧೯೮೬

೪. ಕುತ್ಯಾಳ ನಾಗಪ್ಪ ಗೌಡ; ಪರಸ್ಪರ, ಸ್ವಂತಿಕಾ ಪ್ರಕಾಶನ ಸುಳ್ಯ ದಕ್ಷಿಣ ಕನ್ನಡ- ೧೯೮೯

೫. ಗೋಪಾಲಕೃಷ್ಣ ಅಡಿಗ ಎಂ; ಅಡಿಗರ ಸಮಸ್ತ ಸಾಹಿತ್ಯ -೧, ಸಮಗ್ರ ಕಾವ್ಯ, ಐ.ಬಿ.ಎಚ್ ಪ್ರಕಾಶನ ಗಾಂಧಿನಗರ ಬೆಂಗಳೂರು

೬. ಗೋಪಾಲಕೃಷ್ಣ ಅಡಿಗ ಎಂ; ವರ್ಧಮಾನ, ಅಕ್ಷರ ಪ್ರಕಾಶನ, ಸಾಗರ - ೧೯೭೨

೭. ಗೋವಿಂದ ಪೈ ಎಂ.; ಹೃದಯರಂಗ, ಕಾವ್ಯಾಲಯ ಪ್ರಕಾಶನ, ಮೈಸೂರು - ೧೯೬೯

೮. ಗೋವಿಂದ ಪೈ ಎಂ.; ಗಿಳಿವಿಂಡು, ಬಾಲಸಾಹಿತ್ಯ ಮಂಡಲ ಲಿಮಿಟೆಡ್, ಕೋಡಿಯಾಲ್‌ಬೈಲ್ - ೧೯೩೦

೯. ಪಂಜೆ ರಾಮರಾಯ (ಸಂ); ಪಂಜೆಯವರ ಕೃತಿಗಳು, ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್ ಮುಂಬಯಿ - ೧೯೭೩

೧೦. ಪಾಂಡೇಶ್ವರ ಜಿ.ಆರ್.; ಚೆಂಗಲವೆ, ೧೯೪೦

೧೧. ಪಾಂಡೇಶ್ವರ ಜಿ.ಆರ್.; ಬಾನುಲಿ ಕವನಗಳು, ೧೯೭೬

೧೨. ಪಾಂಡೇಶ್ವರ ಜಿ.ಆರ್.; ಸುಪಂಥ, ೧೯೫೧

೧೩. ಮಾಲಿನಿ ಮಲ್ಯ ಬಿ. (ಸಂ); ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ - ಸಂಪುಟ -೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೦

೧೪. ರಾಧಾಕೃಷ್ಣ ಬೆಳ್ಳೂರು (ಸಂ) ಸ್ವರಾಜ್ಯ; (ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರ ಸಮಗ್ರ ಕೃತಿ ಸಂಪುಟ) ಬೇವಿಂಜೆ ಶ್ರೀಧರ ಕಕ್ಕಿಲ್ಲಾಯ ಸ್ಮಾರಕ ಟ್ರಸ್ಟ್ (ರಿ) ಕಾಸರಗೋಡು, ೧೯೯೯

೧೫. ರಾಮಚಂದ್ರ ಎಂ, ಪಾದೇಕಲ್ಲು ವಿಷ್ಣುಭಟ್, ಕೃಷ್ಣ ಭಟ್ ಎಚ್. (ಸಂ) ಕಡೆಂಗೋಡ್ಲು ಶಂಕರಭಟ್ಟ ಸಮಗ್ರ ಕಾವ್ಯ ಸಂಪುಟ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, ೨೦೦೩

೧೬. ವೇಣುಗೋಪಾಲ ಕಾಸರಗೋಡು; ಕಾಸರಗೋಡು ಕವಿತೆಗಳು (ಸಮಗ್ರ ಕಾವ್ಯ), ಕನ್ನಡ ಪ್ರಪಂಚ ಪ್ರಕಾಶನ ದರ್ಬೆ, ಪುತ್ತೂರು ದಕ್ಷಿಣ ಕನ್ನಡ - ೨೦೦೦

೧೭. ಶ್ರೀಕೃಷ್ಣ ಚೆನ್ನಂಗೋಡು; ಇಲ್ಲದೆ ಇದ್ದಾಗ, ಕನ್ನಡ ಸಂಘ, ವಿವೇಕಾನಂದ ಕಾಲೇಜು ಪುತ್ತೂರು ದಕ್ಷಿಣ ಕನ್ನಡ - ೧೯೮೬

೧೮. ಶ್ರೀಕೃಷ್ಣ ಚೆನ್ನಂಗೋಡು; ಕಳಕೊಡವರು, ಅಭಿರುಚಿ ಸಾಹಿತ್ಯಿಕ ಸಾಂಸ್ಕೃತಿಕ ವೇದಿಕೆ ಜೋಡುಮಾರ್ಗ ಬಂಟ್ವಾಳ - ದಕ್ಷಿಣ ಕನ್ನಡ - ೧೯೮೧

೧೯. ಸುಬ್ರಾಯ ಚೊಕ್ಕಾಡಿ; ಮೊನ್ನೆ ಸಿಕ್ಕವರು, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ - ೧೯೯೦

೨೦. ಸೇಡಿಯಾಪು ಕೃಷ್ಣ ಭಟ್ಟ ;ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು, ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ - ೧೯೬೯

ಗ್ರಂಥಸೂಚಿ

೧. ಅನಂತ ನಾರಾಯಣ ಎಸ್.; ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ; ಗಂಗಾತರಂಗ, ಸರಸ್ವತಿಪುರಂ, ಮೈಸೂರು - ೧೯೯೧

೨. ಅಡ್ಯನಡ್ಕ ಕೃಷ್ಣಭಟ್ (ಸಂ); ಸುದರ್ಶನ, ಡಾ। ತೋನ್ಸೆ ಮಾಧವ ಅನಂತ ಪೈ ಅಭಿನಂದನಾ ಗ್ರಂಥ ವಿಜಯಾ ಕಾಲೇಜು ಟ್ರಸ್ಟ್, ಮುಲ್ಕಿ, ದಕ್ಷಿಣ ಕನ್ನಡ - ೧೯೭೭

೩. ಒಡೆಯರ್ ಡಿ. ಹೆಗ್ಗಡೆ; ಜಾಗತೀಕರಣ ಮತ್ತು ಗಾಂಧೀಜಿಯವರ ಆರ್ಥಿಕ ವಿಚಾರಧಾರೆ ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ರಾಮಕೃಷ್ಣ ನಗರ, ಮೈಸೂರು - ೨೦೦೬

೪. ಕಕ್ಕಿಲ್ಲಾಯ ಬಿ.ವಿ.; ಅಮ್ಮೆಂಬಳ ಬಾಳಪ್ಪ ಕೆ. ರಾಜನ್, ಡಾ. ನಾ. ದಾಮೋದರ ಶೆಟ್ಟಿ ಡಾ. ಕೆ. ಚಿನ್ನಪ್ಪ ಗೌಡ (ಸಂ) ಸ್ವಾತಂತ್ರ್ಯದ ಸ್ವರ್ಣ ಹೆಜ್ಜೆ ದಕ್ಷಿಣ ಕನ್ನಡ; ಜಿಲ್ಲಾಡಳಿತ ದಕ್ಷಿಣ ಕನ್ನಡ ಜಿಲ್ಲೆ - ೧೯೯೮

೫. ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು (ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ) ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು - ೧೯೯೩

೬. ಕೀರ್ತಿನಾಥ ಕುರ್ತಕೋಟಿ; ಕನ್ನಡ ಸಾಹಿತ್ಯ ಸಂಗಾತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೧೯೯೫

೭. ಗಿರಡ್ಡಿ ಗೋವಿಂದರಾಜ; ಸಾಹಿತ್ಯ ಮತ್ತು ಪರಂಪರೆ, ಅಭಿಜಾತ ಗ್ರಂಥಮಾಲೆ, ಬೆಂಗಳೂರು - ೧೯೮೧

೮. ಗಿರಡ್ಡಿ ಗೋವಿಂದರಾಜ (ಸಂ); ಕನ್ನಡ ನವೋದಯ ಕಾವ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ.ಸಿ. ರಸ್ತೆ, ಬೆಂಗಳೂರು - ೨೦೦೧

೯. ಚಂದ್ರಕಲಾ ನಂದಾವರ; ಕಯ್ಯಾರರ ಕಾವ್ಯ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ - ೧೯೯೯

೧೦. ಚಂದ್ರಶೇಖರ್ ಎಸ್; ದಕ್ಷಿಣ ಭಾರತ - ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ (ಅನು : ಸಿ. ನಾಗಣ್ಣ) ಕನ್ನಡ ವಿಶ್ವವಿದ್ಯಾಲಯ ಹಂಪಿ - ೨೦೦೦

೧೧. ಜನಾರ್ಧನ ಭಟ್ ಬಿ.; ಕವಿರಾಜ ಹಂಸ ಸಾಂತ್ಯಾರು ವೆಂಕಟರಾಜ (ಪಿಹೆಚ್.ಡಿ. ಮಹಾಪ್ರಬಂಧ) ಸ್ವಂತ ಪ್ರಕಾಶನ ಅಕ್ಷರ, ದೇವಸ್ಥಾನ ರಸ್ತೆ, ಬೆಳ್ಮಣ್ಣು - ೨೦೦೬

೧೨. ಜನಾರ್ಧನ ಭಟ್.ಬಿ. (ಸಂ); ದಕ್ಷಿಣ ಕನ್ನಡದ ಶತಮಾನದ ಕಾವ್ಯ (೧೯೦೦ -೨೦೦೦); ಕಾಂತಾವರ ಕನ್ನಡ ಸಂಘ ಕಾಂತಾವರ, ಉಡುಪಿ ಜಿಲ್ಲೆ - ೨೦೦೧

೧೩. ಜವರೇ ಗೌಡ (ಸಂ); ಕನ್ನಡ ಚಿಂತನೆ, ಪ್ರಸಾರಾಂಗ - ಕನ್ನಡ ವಿಶ್ವವಿದ್ಯಾಲಯ ಹಂಪಿ - ೨೦೦೭

P T O

೧೪. ತಿರುಮಲೇಶ್ ಕೆ.ವಿ.; ಕಾವ್ಯಾಕರಣ (ಆಧುನಿಕ ಕನ್ನಡ ಕಾವ್ಯದ ಒಂದು ಪಾರ್ಶ್ವನೋಟ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೭

೧೫. ದಿನೇಶ್ ನಾಯ್ಕ; ರಾಷ್ಟ್ರೀಯವಾದದ ಚಿಂತನೆಯಲ್ಲಿ ಪ್ರಾದೇಶಿಕತೆಯ ನಿರೂಪಣೆ (ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ), ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ - ೨೦೦೬

೧೬. ನರಸಿಂಹ ಭಟ್ ಎ. (ಸಂ); ಬೇಕಲ ರಾಮನಾಯಕ ಸಾಹಿತ್ಯ ಸಂಪುಟ, ಬೇಕಲ ರಾಮ ನಾಯಕ ಜನ್ಮಶತಮಾನೋತ್ಸವ ಸಮಿತಿ, ಕಾಸರಗೋಡು - ೨೦೦೨

೧೭. ನವರತ್ನ ಎಸ್. ರಾಜಾರಾಂ; ಇತಿಹಾಸ, ಸಂಸ್ಕೃತಿ, ರಾಷ್ಟ್ರೀಯತೆ, ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು - ೨೦೦೧

೧೮. ನಾಗಭೂಷಣ ಸ್ವಾಮಿ ಓ.ಎಲ್.; ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ ೧೩೮, ಮೊದಲನೆಯ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು - ೧೯೯೮

೧೯. ನಾಗರಾಜ್ ಡಿ.ಆರ್.; ಶಕ್ತಿಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ ರಾಜ್ಯ- ೧೯೯೩

೨೦. ನಾಗರಾಜ್ ಡಿ.ಆರ್.; ಸಂಸ್ಕೃತಿ ಕಥನ, ಅಗ್ರಹಾರ ಕೃಷ್ಣಮೂರ್ತಿ (ಸಂ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೨

೨೧. ನಾರಾಯಣ ಕೆ.ವಿ.; ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ವಿಚಾರ ವೇದಿಕೆ, ಬೆಂಗಳೂರು -೧೯೯೭

೨೨. ಫತ್ತೇಸಿಂಗ್; ಭಾರತದ ರಾಷ್ಟ್ರೀಯತೆ, ನರಸಿಂಹ ಮೂರ್ತಿ ಎಂ.ಎಸ್. (ಸಂಗ್ರಹ), ರಾಷ್ಟ್ರೋತ್ಥಾನ ಸಾಹಿತ್ಯ - ೧೯೭೧

೨೩. ಬರಗೂರು ರಾಮಚಂದ್ರಪ್ಪ (ಸಂ); ಕನ್ನಡ ಸಾಹಿತ್ಯದಲ್ಲಿ ದೇಸೀಯತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು - ೧೯೯೪

೨೪. ಮಹಾಬಲೇಶ್ವರ ರಾವ್ (ಸಂ); ಕಡೆಗೋಲು ಸ್ಮೃತಿ ಸಂಪುಟ, ಸ್ವಾಗತ ಸಮಿತಿ, ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ -೨೦೦೭

೨೫. ಮುಕುಂದ ಪ್ರಭು (ಸಂ); ಪೊಲಿ ಕೆನರಾ -೨೦೦, ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು - ೨೦೦೨

೨೬. ರಹಮತ್ ತರೀಕೆರೆ; ಕನ್ನಡ ಸಂಶೋಧನೆ ತಾತ್ತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ -೨೦೦೭

೨೭. ರಹಮತ್ ತರೀಕೆರೆ (ಸಂ); ಕನ್ನಡ ಅಧ್ಯಯನ ಮಳೆಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ - ೨೦೦೨

೨೮. ರಾಜಾರಾಮ ಹೆಗಡೆ; ಗತ-ಕಥನ, ಆನಂದಕಂದ ಗ್ರಂಥಮಾಲೆ, ಮುಲ್ಲಾಡಿ ಹಳ್ಳಿ, ಚಿತ್ರದುರ್ಗ ಜಿಲ್ಲೆ - ೨೦೦೫

೨೯. ವರದರಾಜು ಪೈ; ದಕ್ಷಿಣ ಭಾರತದ ಗಾಂಧಿ ಮಹಾತ್ಯಾಗಿ ಕಾರ್ನಾಡು ಸದಾಶಿವರಾಯರು,

ಕಾರ್ನಾಡ್ ಸದಾಶಿವರಾವ್ ಸ್ಮಾರಕ ಸಮಿತಿ, ಕಾರ್ನಾಡು, ಮುಲ್ಕಿ

೩೦. ಶಂಬಾ ಜೋಶಿ, ಭಾಷೆ ಮತ್ತು ಸಂಸ್ಕೃತಿ, ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ - ೧೯೭೫

೩೧. ಶಿವರಾಮು ಪಡಿಕ್ಕಲ್; ನಾಡು-ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ - ೨೦೦೧

೩೨. ಶಿವಾನಂದ ಎಸ್; ವಿಮರ್ಶೆಯ ಸವಾಲುಗಳು, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ - ೧೯೯೧

೩೩. ಶಿವರುದ್ರಪ್ಪ ಜಿ.ಎಸ್. (ಸಂ); ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ - ೧೯೮೮

೩೪. ಶೇಷಗಿರಿ ರಾವ್ ಎಲ್.ಎಸ್; ಹೊಸಗನ್ನಡ ಸಾಹಿತ್ಯ; ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು - ೧೯೯೮

೩೫. ಶೇಷಾದ್ರಿ ಹೊ.ವೆ., ದೇಶ ವಿಭಜನೆಯ ದುರಂತ ಕಥೆ (ಅನುವಾದ ಕಾ. ಶ್ರೀ. ನಾಗರಾಜ), ಸಾಹಿತ್ಯ ಸಿಂಧೂ ಪ್ರಕಾಶನ, ಬೆಂಗಳೂರು - ೨೦೦೧

೩೬. ಶ್ರೀ ಕಂಠಶಾಸ್ತ್ರೀ ಎಸ್; ಭಾರತೀಯ ಸಂಸ್ಕೃತಿ, ಪುಟ್ಟಪ್ಪ ಕೆ.ವಿ. (ಸಂ), ಮೈಸೂರು ವಿಶ್ವವಿದ್ಯಾನಿಲಯ - ೧೯೫೪

೩೭. ಸತ್ಯನಾರಾಯಣ ಮಲ್ಲಿಪಟ್ಟಣ; ದಕ್ಷಿಣ ಕನ್ನಡದ ಕಾವ್ಯ ಮತ್ತು ಪ್ರಾದೇಶಿಕತೆ, ಪ್ರಸಾರಾಂಗ, ಮಂಗಳೂರು, ಮಂಗಳಗಂಗೋತ್ರಿ - ೧೯೯೯

೩೮. ಸನದಿ ಬಿ.ಎ.; ಸವಿತಾ ನಾಗಭೂಷಣ (ಸಂ) ಸುವರ್ಣ ಕಾವ್ಯ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೨೦೦೬

೩೯. ಸುಬ್ರಾಯ ಚೊಕ್ಕಾಡಿ; ಕೃತಿ ಶೋಧ, ಇಂಚರ ಪ್ರಕಾಶನ, ಬೆಂಗಳೂರು - ೨೦೦೦

೪೦. ಸಂತೋಷ ಚೊಕ್ಕಾಡಿ; ದಕ್ಷಿಣ ಕನ್ನಡದ ಕಾವ್ಯದ ವಿಭಿನ್ನ ನೆಲೆಗಳು (ಪಿಹೆಚ್.ಡಿ. ಮಹಾಪ್ರಬಂಧ), ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ - ೨೦೦೨

೪೧. ಹಳ್ಳಿಕೇರಿ ಎಫ್.ಟಿ; ರವೀಂದ್ರನಾಥ ಕೆ. (ಸಂ) ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೨

೪೨. ಹೊಸಮನೆ ವಿ.ಬಿ.; ರಾಷ್ಟ್ರಬಂಧು ಶಂಕರಭಟ್ಟರು, ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು - ೧೯೯೭